ಬುಧವಾರ, ಜೂನ್ 26, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 177 | ಪುಟ 16
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಮುಂದಿನ ದಿನಗಳಲ್ಲಿ ರೋಬೊಗಳು ಚುನಾವಣೆಯಲ್ಲೂ ಸ್ಪರ್ಧಿಸಲಿವೆಯಂತೆ



ಆಳ–ಅಗಲ
ಲೋಕಸಭೆಯ ಒಪ್ಪಿತ ಸಂಪ್ರದಾಯಕ್ಕಿಲ್ಲ ಮಣೆ
₹83 ಕೋಟಿಗೆ 'ಲೆಕ್ಕ' ನೀಡದ ಎಸ್‌ಟಿ ಇಲಾಖೆ 8
5ಜಿ ತರಂಗಾಂತರ ಹರಾಜು ಶುರು 12

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
78,053 ▲	23,721 ▲	₹73,950 (ಬೆಂಗಳೂರು)	₹91,000 (ಬೆಂಗಳೂರು) ▼	83.48 ▲

ಡಿ. 20ರಿಂದ ಮಂಡ್ಯದಲ್ಲಿ ಸಾಹಿತ್ಯ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯದಲ್ಲಿ ಡಿಸೆಂಬರ್ 20ರಿಂದ ಮೂರು ದಿನ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದೆ.

ಕನ್ನಡ ಸಾಹಿತ್ಯ ಪರಿಷತ್ತು, ಮಂಡ್ಯ ಜಿಲ್ಲಾಡಳಿತ, ಸಚಿವರು, ಶಾಸಕರೊಂದಿಗೆ ಸಾಹಿತ್ಯ ಸಮ್ಮೇಳನದ ಪೂರ್ವಭಾವಿ ಸಭೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಮಾಹಿತಿ ನೀಡಿದರು.

ಮೊದಲು ಜೂನ್ ತಿಂಗಳಲ್ಲಿ ಸಮ್ಮೇಳನ ಆಯೋಜಿಸಲು ತೀರ್ಮಾನಿಸಲಾಗಿತ್ತು. ಚುನಾವಣಾ ನೀತಿ ಸಂಹಿತೆಯ ಕಾರಣ ಮುಂದೂಡಲಾಗಿತ್ತು ಎಂದು ಹೇಳಿದರು.

ಸಾಹಿತ್ಯ ಸಮ್ಮೇಳನ ಅಧ್ಯಕ್ಷರ ಆಯ್ಕೆ ಬಾಕಿ ಇದೆ. ಜಿಲ್ಲಾಡಳಿತ ಮತ್ತು ಸಾಹಿತ್ಯ ಪರಿಷತ್ ಸಾಹಿತಿಗಳ ಪಟ್ಟಿ ಒದಗಿಸಿದ ನಂತರ ಚರ್ಚಿಸಿ ಅಂತಿಮಗೊಳಿಸಲಾಗುವುದು ಎಂದು ಹೇಳಿದರು.

1974ರಲ್ಲಿ ಮಂಡ್ಯದಲ್ಲಿ ನಡೆದಿದ್ದ 48ನೇ ಸಾಹಿತ್ಯ ಸಮ್ಮೇಳನ ಜಯದೇವಿ ತಾಯಿ ಲಿಗಾಡೆ ಅವರ ಅಧ್ಯಕ್ಷತೆಯಲ್ಲಿ, 1994ರಲ್ಲಿ 63ನೇ ಸಮ್ಮೇಳನ ಚದುರಂಗ ಅವರ ಅಧ್ಯಕ್ಷತೆಯಲ್ಲಿ ನಡೆದಿದ್ದವು.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಹಾಲು ಪ್ಯಾಕೆಟ್‌ಗೆ ₹2 ಹೆಚ್ಚಳ

ಇಂದಿನಿಂದಲೇ ಜಾರಿ • ಅರ್ಧ ಲೀಟರ್‌ಗೆ ₹2 ಹೆಚ್ಚಳ • ಅರ್ಧ ಲೀಟರ್‌ನ 2 ಪ್ಯಾಕೆಟ್‌ನಂತೆ 1 ಲೀಟರ್ ಖರೀದಿಸಿದರೆ ₹4 ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಹಾಲು ಉತ್ಪಾದಕರ ಮಹಾಮಂಡಳದ (ಕೆಎಂಎಫ್) ಉತ್ಪನ್ನವಾದ ನಂದಿನಿ ಹಾಲಿನ ಅರ್ಧ ಲೀಟರ್ ಪ್ಯಾಕೆಟ್ ಹಾಗೂ ಒಂದು ಲೀಟರ್ ಹಾಲಿನ ಪ್ಯಾಕೆಟ್ ದರವನ್ನು ತಲಾ ₹2ರಂತೆ ಹೆಚ್ಚಿಸಲಾಗಿದ್ದು, ಬುಧವಾರದಿಂದಲೇ ಪರಿಷ್ಕೃತ ದರಗಳು ಜಾರಿಯಾಗಲಿವೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕೆಎಂಎಫ್ ಅಧ್ಯಕ್ಷ ಭೀಮಾನಾಯ್ಕ್, 'ಅರ್ಧ ಲೀಟರ್ ಮತ್ತು ಒಂದು ಲೀಟರ್ ಹಾಲಿನ ಪ್ಯಾಕೆಟ್‌ಗಳಿಗೆ ಮಾತ್ರ ತಲಾ 50 ಎಂಎಲ್ ಹಾಲನ್ನು ಹೆಚ್ಚುವರಿಯಾಗಿ ಸೇರಿಸಿ, ಪ್ರತಿ ಪ್ಯಾಕೆಟ್‌ನ ದರವನ್ನು ₹2 ಹೆಚ್ಚಿಸಲಾಗಿದೆ. ಇನ್ನು ಮುಂದೆ ಗ್ರಾಹಕರಿಗೆ ಇಲ್ಲಿಯವರೆಗೆ ನೀಡಲಾಗುತ್ತಿದ್ದ ಅರ್ಧ ಲೀಟರ್ ಪ್ಯಾಕೆಟ್‌ನಲ್ಲಿ 550 ಎಂಎಲ್, ಒಂದು ಲೀಟರ್ ಪ್ಯಾಕೆಟ್‌ನಲ್ಲಿ 1050 ಎಂಎಲ್ ಹಾಲು ಲಭ್ಯವಾಗಲಿದೆ' ಎಂದು ತಿಳಿಸಿದರು.

'ದರ ಹೆಚ್ಚಳದಿಂದ ಅರ್ಧ ಲೀಟರ್ ಹಾಲಿನ ಪ್ಯಾಕೆಟ್ ದರ ₹24 ಹಾಗೂ ಒಂದು ಲೀಟರ್‌ನ ಪ್ಯಾಕೆಟ್ ದರ ₹44 ಆಗಲಿದೆ' ಎಂದು ಮಾಹಿತಿ ನೀಡಿದರು.

7ನೇ ಪುಟ ನೋಡಿ

'ಕಾಫಿ–ಟೀ ದರ ಹೆಚ್ಚಳವಿಲ್ಲ'

'ನಂದಿನಿ ಹಾಲಿನ ದರ ಹೆಚ್ಚಿಸುವುದರ ಜೊತೆಗೆ ಹೆಚ್ಚುವರಿಯಾಗಿ 50 ಎಂ.ಎಲ್ ಹಾಲು ನೀಡಲಾಗುತ್ತಿದೆ. ಇದರಿಂದ, ಹೋಟೆಲ್ ಉದ್ಯಮಕ್ಕೆ ಯಾವುದೇ ರೀತಿಯ ಸಮಸ್ಯೆ ಆಗುವುದಿಲ್ಲ. ಆದ್ದರಿಂದ, ನಾವು ಕಾಫಿ–ಟೀ ದರಗಳನ್ನು ಹೆಚ್ಚಳ ಮಾಡುವುದಿಲ್ಲ' ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ. ರಾವ್ 'ಪ್ರಜಾವಾಣಿ'ಗೆ ತಿಳಿಸಿದರು.

ಹಾಲಿನ ಮಾದರಿ	ಅರ್ಧ ಲೀಟರ್ ಹಳೆ ದರ	ಪರಿಷ್ಕೃತ ದರ	1 ಲೀಟರ್‌ನ ಹಳೆ ದರ	ಪರಿಷ್ಕೃತ ದರ
ಟೋನ್ಡ್ ಹಾಲು	22	24	42	44
ಹೋಮೋಜಿನೈಸ್ಡ್ ಟೋನ್ಡ್ ಹಾಲು	22	24	43	45
ಹೋಮೋಜಿನೈಸ್ಡ್ ಹಸುವಿನ ಹಾಲು	24	26	46	48
ಸ್ಪೆಷಲ್ ಹಾಲು	25	27	48	50
ಶುಭಂ ಹಾಲು	25	27	48	50
ಸಮೃದ್ಧಿ ಹಾಲು	26	28	51	53
ಹೋಮೋಜಿನೈಸ್ಡ್ ಶುಭಂ ಹಾಲು	25	27	49	51
ಸಂತೃಪ್ತಿ ಹಾಲು	28	30	55	57
ಶುಭಂ ಗೋಲ್ಡ್	26	28	49	51
ಡಬ್ಬಲ್ ಟೋನ್ಡ್ ಹಾಲು	21	23	41	43

ಹಾಲಿನ ದರ ಏರಿಸಿಲ್ಲ: ಸಿದ್ದರಾಮಯ್ಯ

ಕರ್ನಾಟಕ ಹಾಲು ಮಹಾಮಂಡಳ (ಕೆಎಂಎಫ್) ಹಾಲಿನ ಪ್ರತಿ ಪ್ಯಾಕೆಟ್‌ನಲ್ಲಿ ಹೆಚ್ಚುವರಿಯಾಗಿ ನೀಡುವ 50 ಮಿಲಿ ಲೀಟರ್ ಹಾಲಿನ ಬಾಬ್ತು ₹2 ದರ ನಿಗದಿಪಡಿಸಿದೆ. ಹಾಲಿನ ದರ ಏರಿಕೆ ಮಾಡಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, 'ಅರ್ಧ ಲೀಟರ್ ಮತ್ತು ಒಂದು ಲೀಟರ್ ಹಾಲಿನ ಪ್ಯಾಕೆಟ್‌ಗಳಲ್ಲಿ ತಲಾ 50 ಮಿ.ಲೀ ಹಾಲು ಹೆಚ್ಚುವರಿಯಾಗಿ ದೊರಕಲಿದೆ. ಅದಕ್ಕೆ ತಕ್ಕಂತೆ ತಲಾ ₹2 ದರ ವಿಧಿಸಲಾಗಿದೆ ಎಂದು ಹೇಳಿದರು.

7ನೇ ಪುಟ ನೋಡಿ

ಇಂದು ಚುನಾವಣೆ • ಓಂ ಬಿರ್ಲಾ ಆಯ್ಕೆ ಖಚಿತ

ಸ್ಪೀಕರ್ ಪಟ್ಟ: ಬಿಗಿ ಪಟ್ಟು

ಪ್ರಜಾವಾಣಿ ವಾರ್ತೆ

ಓಂ ಬಿರ್ಲಾ

ಕೋಡಿಕುನ್ನಿಲ್ ಸುರೇಶ್

ನವದೆಹಲಿ: ಸ್ಪೀಕರ್ ಮತ್ತು ಡೆಪ್ಯುಟಿ ಸ್ಪೀಕರ್ ಸ್ಥಾನಗಳ ವಿಷಯದಲ್ಲಿ ಆಡಳಿತಾರೂಢ ಎನ್‌ಡಿಎ ಮೈತ್ರಿಕೂಟ ಹಾಗೂ ವಿಪಕ್ಷ 'ಇಂಡಿಯಾ' ಮೈತ್ರಿಕೂಟ ಬಿಗಿ ಪಟ್ಟು ಹಿಡಿದಿದ್ದರಿಂದ ಸಂಧಾನ ಮುರಿದು ಬಿತ್ತು. ಸ್ಪೀಕರ್ ಸ್ಥಾನಕ್ಕೆ ಬುಧವಾರ ಬೆಳಿಗ್ಗೆ 11 ಗಂಟೆಗೆ ಚುನಾವಣೆ ನಡೆಯಲಿದೆ.

17ನೇ ಲೋಕಸಭೆಯ ಸ್ಪೀಕರ್ ಆಗಿದ್ದ ಓಂ ಬಿರ್ಲಾ ಅವರನ್ನೇ ಎನ್‌ಡಿಎ ಮೈತ್ರಿಕೂಟ ಕಣಕ್ಕಿಳಿಸಿದೆ. ಸದನದ ಹಿರಿಯ ಸದಸ್ಯ ಕೋಡಿಕುನ್ನಿಲ್ ಸುರೇಶ್ ಅವರನ್ನು 'ಇಂಡಿಯಾ' ಮೈತ್ರಿಕೂಟ ಹುರಿಯಾಳುವನ್ನಾಗಿ ಮಾಡಿದೆ. ಇಬ್ಬರೂ ಮಂಗಳವಾರ ನಾಮಪತ್ರ ಸಲ್ಲಿಸಿದರು.

8ನೇ ಪುಟ ನೋಡಿ

ವಿಪಕ್ಷ ನಾಯಕರಾಗಿ ರಾಹುಲ್ ಗಾಂಧಿ

ನವದೆಹಲಿ (ಪಿಟಿಐ): ಲೋಕಸಭೆಯ ವಿರೋಧ ಪಕ್ಷದ ನಾಯಕನ ಸ್ಥಾನವನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ವಹಿಸಿಕೊಳ್ಳಲಿದ್ದಾರೆ.

'ಇಂಡಿಯಾ' ಕೂಟದ ಸದನದ ನಾಯಕರ ಸಭೆಯಲ್ಲಿ ರಾಹುಲ್ ಅವರನ್ನು ಆಯ್ಕೆ ಮಾಡಲಾಯಿತು.

ಸದನದಲ್ಲಿ ಬಲಾಬಲ

271 ಗೆಲುವಿಗೆ ಬೇಕಿರುವ ಮತಗಳು



ಖರ್ಗೆ ಅವರಿಗೆ ರಾಜನಾಥ್ ಸಿಂಗ್ ಕರೆ ಮಾಡಿ ಸ್ಪೀಕರ್ ಅವಿರೋಧ ಆಯ್ಕೆಗೆ ಸಹಕಾರ ನೀಡುವಂತೆ ಮನವಿ ಮಾಡಿದರು. ಅವಿರೋಧ ಆಯ್ಕೆಗೆ ಸಹಮತವಿದೆ. ಆದರೆ, ಡೆಪ್ಯುಟಿ ಸ್ಪೀಕರ್ ಸ್ಥಾನವನ್ನು ವಿಪಕ್ಷಕ್ಕೆ ಬಿಟ್ಟುಕೊಡಬೇಕು ಎಂದು ನಾವು ಕೇಳಿಕೊಂಡೆವು. ಮತ್ತೆ ಕರೆ ಮಾಡುವುದಾಗಿ ರಾಜನಾಥ್ ಹೇಳಿದರು. ಅವರಿಂದ ಪುನಃ ಕರೆ ಬರಲಿಲ್ಲ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಮಂಗಳವಾರ ಬೆಳಿಗ್ಗೆ ಚರ್ಚಿಸಲು ರಾಜನಾಥ್ ಬಯಸಿದ್ದರು. ಆದರೆ, ಅವರಿಗೆ ಪುರುಸೊತ್ತು ಇರಲಿಲ್ಲ. ಡೆಪ್ಯುಟಿ ಸ್ಪೀಕರ್ ಸ್ಥಾನದ ಬಗ್ಗೆ ಕೆ.ಸಿ.ವೇಣುಗೋಪಾಲ್ ಷರತ್ತು ಹಾಕಿದರು. ಇದು ಅವರ ಹಳೆಯ ಮನಃಸ್ಥಿತಿ. ಇದನ್ನು ನಾವು ಖಂಡಿಸುತ್ತೇವೆ. ಸ್ಪೀಕರ್ ಯಾವುದೇ ಪಕ್ಷಕ್ಕೆ ಸೇರಿದವರಲ್ಲ. ಅವರು ಇಡೀ ಸದನಕ್ಕೆ ಸೇರಿದವರು

ಪೀಯೂಷ್ ಗೋಯಲ್, ಕೇಂದ್ರ ವಾಣಿಜ್ಯ ಸಚಿವ

6% ನೌಕರರ ವರ್ಗಾವಣೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಸಾಲಿನಲ್ಲಿ (2024–25) ರಾಜ್ಯ ಸರ್ಕಾರಿ ನೌಕರರ ಸಾರ್ವತ್ರಿಕ ವರ್ಗಾವಣೆಗೆ ಮಂಗಳವಾರದಿಂದ (ಜೂನ್ 25) ಜುಲೈ 9ರವರೆಗೆ ಅವಕಾಶ ಕಲ್ಪಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಎಲ್ಲ ವೃಂದಗಳಿಗೆ (ಗ್ರೂಪ್ ಎ, ಬಿ, ಸಿ, ಡಿ) ಅನ್ವಯವಾಗುವಂತೆ, ಒಂದು ಜ್ಯೇಷ್ಠತಾ ಘಟಕದಲ್ಲಿ ಕಾರ್ಯನಿರತ ವೃಂದ ಬಲದ ಶೇ 6ರನ್ನು ಮೀರದಂತೆ ವರ್ಗಾವಣೆ ಪ್ರಕ್ರಿಯೆ ನಡೆಸುವ ಅಧಿಕಾರವನ್ನು ಆಯಾ ಇಲಾಖೆಗಳ ಸಚಿವರಿಗೆ ನೀಡಲಾಗಿದೆ. ಅಸ್ತಿತ್ವದಲ್ಲಿರುವ ನಿಯಮಗಳ ಅನುಸಾರ ವರ್ಗಾವಣೆ ಪ್ರಕ್ರಿಯೆ ಏಪ್ರಿಲ್ ಮೊದಲ ವಾರ ಆರಂಭವಾಗಿ ಮೇ ಅಂತ್ಯದಲ್ಲಿ ಮುಕ್ತಾಯವಾಗಬೇಕು. ಈ ಬಾರಿ ಲೋಕಸಭೆಯ ಚುನಾವಣೆ ನೀತಿ ಸಂಹಿತೆ ಕಾರಣಕ್ಕೆ ವರ್ಗಾವಣೆ ಪ್ರಕ್ರಿಯೆ ವಿಳಂಬವಾಗಿದೆ.

ವರ್ಗಾವಣೆಗೆ ಒಂದು ಹುದ್ದೆಯಲ್ಲಿ ಪೂರ್ಣಗೊಳಿಸಬೇಕಾದ ಕನಿಷ್ಠ ಅವಧಿ

ವೃಂದ	ಸೇವಾವಧಿ (ವರ್ಷಗಳು)
ಗ್ರೂಪ್ 'ಎ', 'ಬಿ'	2
ಗ್ರೂಪ್ 'ಸಿ'	4
ಗ್ರೂಪ್ 'ಡಿ', 'ಬಿ'	7

ಒಂದೇ ಕೇಂದ್ರ ಸ್ಥಾನದಲ್ಲಿರುವ ಒಂದು ಕಚೇರಿಯಿಂದ ಇನ್ನೊಂದು ಕಚೇರಿಗೆ ಮಾಡುವ ಸ್ಥಳ ನಿಯುಕ್ತಿಯನ್ನು (ಚಲನವಲನ) ವರ್ಗಾವಣೆ ಎಂದು ಪರಿಗಣಿಸಲಾಗುವುದಿಲ್ಲ. ಸಚಿವಾಲಯದಲ್ಲಿ ಕರ್ತವ್ಯಕ್ಕೆ ಸೇರಿದ ನೌಕರನನ್ನು ಸಚಿವಾಲಯದ ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ಮಾಡುವ ಸ್ಥಳ ನಿಯುಕ್ತಿಗೂ ಇದು ಅನ್ವಯವಾಗಲಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

8ನೇ ಪುಟ ನೋಡಿ

ಒಳಪುಟಗಳಲ್ಲಿ

ಚಂದ್ರನ ಕಲ್ಲು, ದೂಳು ಹೊತ್ತು ತಂದ ನೌಕೆ 13
ಪ್ರಜ್ವಲ್, ಪ್ರೀತಂಗೌಡ ವಿರುದ್ಧ ಎಫ್‌ಐಆರ್ 8

'ಎಂಪಿಎಂ'ಗೆ ಕಾಡು: ಖಂಡ್ರೆ ಒತ್ತಡ

ಪ್ರಜಾವಾಣಿ ವಾರ್ತೆ

ನವದೆಹಲಿ: ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ ಜಿಲ್ಲೆಗಳ 20 ಸಾವಿರ ಹೆಕ್ಟೇರ್ ಅರಣ್ಯ ಪ್ರದೇಶವನ್ನು ಭದ್ರಾವತಿಯ ಎಂಪಿಎಂ ಕಾರ್ಖಾನೆಗೆ ಮತ್ತೆ 40 ವರ್ಷಗಳಿಗೆ ಲೀಸ್ ನೀಡುವುದಕ್ಕೆ ಕೇಂದ್ರ ಸರ್ಕಾರ ಅನುಮೋದನೆ ನೀಡಬೇಕು ಎಂದು ಒತ್ತಾಯಿಸಿ ಅರಣ್ಯ ಸಚಿವ ಈಶ್ವರ ಖಂಡ್ರೆ ಅವರು ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಅವರಿಗೆ ಮಂಗಳವಾರ ಮನವಿ ಸಲ್ಲಿಸಿದರು.

1980ರಲ್ಲಿ ಭದ್ರಾವತಿ ಎಂಪಿಎಂ ಕಾರ್ಖಾನೆಗೆ 40 ವರ್ಷಗಳ ಸೀಮಿತ ಅವಧಿಗೆ ಶಿವಮೊಗ್ಗ, ಚಿಕ್ಕಮಗಳೂರು, ಉತ್ತರ ಕನ್ನಡ ಜಿಲ್ಲೆಗಳಿಗೆ ಸೇರಿದ ಅರಣ್ಯ ಪ್ರದೇಶವನ್ನು ಲೀಸ್‌ಗೆ ನೀಡಲಾಗಿತ್ತು. 2020ರಲ್ಲಿ ಲೀಸ್ ಅವಧಿ ಮುಗಿದಿತ್ತು. ಮತ್ತೆ 40 ವರ್ಷಗಳಿಗೆ ಲೀಸ್ ನೀಡಲು ರಾಜ್ಯ ಸರ್ಕಾರ 2020ರಲ್ಲಿ ಒಪ್ಪಿಗೆ ನೀಡಿತ್ತು. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದ ಅನುಮೋದನೆ ಪಡೆದಿರಲಿಲ್ಲ. ಬಳಿಕ ಪ್ರಸ್ತಾವವನ್ನು ಕೇಂದ್ರಕ್ಕೆ ಕಳುಹಿಸಲಾಗಿತ್ತು. ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಉಲ್ಲಂಘನೆಯಾಗಿದೆ ಎಂದು ಕೇಂದ್ರ ಪರಿಸರ ಸಚಿವಾಲಯ ತರಕಾರು ಎತ್ತಿತ್ತು. ಕಾರ್ಖಾನೆ ಪರ ನಿಲುವು ತಳೆದ ಅರಣ್ಯ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಸೂಚಿಸಿತ್ತು. ಜತೆಗೆ, ಕಾರ್ಖಾನೆಯ ನಿರ್ವಹಣಾ ಯೋಜನೆಗೂ ಒಪ್ಪಿಗೆ ಕೊಟ್ಟಿರಲಿಲ್ಲ. ಬೀದರ್ ಸಂಸದ ಸಾಗರ್ ಖಂಡ್ರೆ ಜತೆಗೂಡಿ ಕೇಂದ್ರ ಸಚಿವರನ್ನು ಭೇಟಿ ಮಾಡಿದ ಈಶ್ವರ ಖಂಡ್ರೆ, 'ಕೇಂದ್ರವು ಆಕ್ಷೇಪ ಕೈಬಿಟ್ಟು ಈ ಪ್ರಸ್ತಾವಕ್ಕೆ ಅನುಮೋದನೆ ನೀಡಬೇಕು' ಎಂದು ಕೋರಿದರು. ಈ ಕಾರ್ಖಾನೆಯು 2015ರಲ್ಲೇ ಸ್ಥಗಿತಗೊಂಡಿದೆ.

7ನೇ ಪುಟ ನೋಡಿ



ದೆಹಲಿಯಲ್ಲಿ 88ನೇ ಸಾಹಿತ್ಯ ಸಮ್ಮೇಳನ

ಬೆಂಗಳೂರು: ನವದೆಹಲಿಯಲ್ಲಿ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಲು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿಣಿಯಲ್ಲಿ ತೀರ್ಮಾನಿಸಲಾಗಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ರಾಜ್ಯದ ಸಂಸದರು ಕನ್ನಡದಲ್ಲಿ ಪ್ರಮಾಣ ವಚನ ಸ್ವೀಕರಿಸಿರುವುದಕ್ಕೆ ಅಭಿನಂದಿಸಿರುವ ಅವರು, ಈ ಬಗ್ಗೆ ತಿಳಿಸಿದ್ದಾರೆ.

87ನೇ ಸಾಹಿತ್ಯ ಸಮ್ಮೇಳನ ಡಿ.20ರಿಂದ 22ರವರೆಗೆ ಮಂಡ್ಯದಲ್ಲಿ ನಡೆಯಲಿದೆ. ಪ್ರತಿ ಬಾರಿ ಸಾಹಿತ್ಯ ಸಮ್ಮೇಳನದ ಅವಧಿಯಲ್ಲಿ ಕಾರ್ಯಕಾರಿಣಿ ಸಭೆ ನಡೆಸಿ, ಮುಂದಿನ ಸಮ್ಮೇಳನದ ಆತಿಥ್ಯವನ್ನು ನಿರ್ಧರಿಸಲಾಗುತ್ತಿತ್ತು. ಆದರೆ, ಈ ಬಾರಿ ಈಗಾಗಲೇ ಮುಂದಿನ ಸಮ್ಮೇಳನ ವನ್ನು ದೆಹಲಿಯಲ್ಲಿ ನಡೆಸುವುದಾಗಿ ತಿಳಿಸಿ, ಸಮ್ಮೇಳನಕ್ಕೆ ರಾಜ್ಯದ ಸಂಸದರು ಸಂಪೂರ್ಣ ಸಹಕಾರ ನೀಡಬೇಕೆಂದು ಮನವಿ ಮಾಡಿದ್ದಾರೆ. 'ಸಂಸದರ ಕನ್ನಡ ಪ್ರೇಮ ಪ್ರಮಾಣ ವಚನ ಸ್ವೀಕಾರಕ್ಕೆ ಸೀಮಿತವಾಗದೆ, ಸಂಸದೀಯ ವ್ಯವಹಾರಕ್ಕೂ ಅನ್ವಯವಾಗಲಿ' ಎಂದು ಅವರು ಪ್ರತಿಪಾದಿಸಿದರು

ಒತ್ತಡ ಇರುವುದರಿಂದ ನಿಷೇಧ ಮಾಡಲಿಲ್ಲ: ಸಿ.ಎಂ ಸಲಹೆಗಾರ ಪಾಟೀಲ ಹೇಳಿಕೆ

'ಮದ್ಯ ನಿಷೇಧಕ್ಕೆ ಒಪ್ಪದ ಸಿ.ಎಂ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಹಾರ ರಾಜ್ಯದ ಮಾದರಿ, ರಾಜ್ಯದಲ್ಲಿಯೂ ಮದ್ಯ ನಿಷೇಧ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿಕೊಂಡಿದ್ದೆ. ಆದರೆ, ಗ್ಯಾರಂಟಿ ಯೋಜನೆಗಳಿಗೆ ಹಾಗೂ ವಿವಿಧ ಕಾರ್ಯಕ್ರಮಗಳಿಗೆ ಹಣ ಹೊಂದಿಸಬೇಕಾದ ಒತ್ತಡ ಇರುವುದರಿಂದ ಅವರಿಗೆ ಈ ಬಗ್ಗೆ ಕ್ರಮ ಕೈಗೊಳ್ಳಲು ಸಾಧ್ಯವಾಗಿಲ್ಲ' ಎಂದು ಮುಖ್ಯಮಂತ್ರಿಗಳ ಸಲಹೆಗಾರ ಬಿ.ಆರ್. ಪಾಟೀಲ ತಿಳಿಸಿದರು.

ಕನ್ನಡ ಜನಶಕ್ತಿ ಕೇಂದ್ರ ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಹೋರಾಟಗಾರ್ತಿ ಮೀನಾಕ್ಷಿ ಬಾಳಿ ಅವರಿಗೆ 2024ನೇ ಸಾಲಿನ 'ಯಶೋಧರಮ್ಮ ದಾಸಪ್ಪ ಪ್ರಶಸ್ತಿ' ಪ್ರದಾನ ಮಾಡಿ, ಮಾತನಾಡಿದರು. ಪ್ರಶಸ್ತಿಯು ₹15 ಸಾವಿರ ನಗದು ಒಳಗೊಂಡಿದೆ.

'ಚುನಾವಣೆ ಸಂದರ್ಭದಲ್ಲಿ ಹಳ್ಳಿಗಾಡು, ದಲಿತ ಓಣಿ, ತಾಂಡಾಗಳಿಗೆ ಹೋದಾಗ ಅಲ್ಲಿನ ಮಹಿಳೆಯರು 'ನಮಗೆ ನಿಮ್ಮ ಅಕ್ಕಿ-ಗೋಧಿ ಬೇಡ, ಮದ್ಯ ನಿಷೇಧ ಮಾಡಿದರೆ ಸಾಕು' ಅಂತ ಗೋಳಾಡಿದ್ದರು. ಆದ್ದರಿಂದ ಕರ್ನಾಟಕದಲ್ಲಿಯೂ ಮದ್ಯ ನಿಷೇಧ ಕಾನೂನು ಜಾರಿ ಮಾಡಬೇಕು ಎಂದು ಮುಖ್ಯಮಂತ್ರಿಗೆ ಮನವಿ ಮಾಡಿಕೊಂಡೆ. ಆದರೆ, 36 ಸಾವಿರ ಕೋಟಿ ರೂಪಾಯಿ ಆದಾಯ ಅಬಕಾರಿ ಇಲಾಖೆಯಿಂದ ಸರ್ಕಾರಕ್ಕೆ ಬರುತ್ತಿದೆ. ಇದರಿಂದಾಗಿ ಮದ್ಯ ನಿಷೇಧ ಮಾಡಿದಲ್ಲಿ ಇಷ್ಟು ಆದಾಯ ಹೊಂದಿಸುವುದು ಸುಲಭವಲ್ಲ. ಅದರಲ್ಲೂ ಯಾವುದೇ ಒಂದು ರಾಜ್ಯ ಮದ್ಯ ನಿಷೇಧ ಕಾನೂನು ಜಾರಿ ಮಾಡಿದಲ್ಲಿ ಅದರ ಅನುಷ್ಠಾನ ಕಷ್ಟಸಾಧ್ಯ. ಆದ್ದರಿಂದ ಕೇಂದ್ರ ಸರ್ಕಾರವೇ ದೇಶದ ಹಿತ ದೃಷ್ಟಿಯಿಂದ ಮದ್ಯ ನಿಷೇಧ ಮಾಡಬೇಕು' ಎಂದರು.

'ಇತ್ತೀಚೆಗೆ ಹೋರಾಟಗಾರರು ಸಿಗುತ್ತಿಲ್ಲ. ಮೌಲ್ಯಗಳು ಮಾಯವಾಗುತ್ತಿದ್ದು, ತತ್ವ ಸಿದ್ಧಾಂತಗಳನ್ನು ಮರೆಯುತ್ತಿದ್ದೇವೆ. ಅಧಿಕಾರ ಅಂತಸ್ತಿನ ಬೆನ್ನು ಹತ್ತಿದ್ದೇವೆ. ನಾಡು ಹಾಗೂ ದೇಶಕ್ಕಾಗಿ ಹೋರಾಡಿದವರನ್ನು ಮರೆಯುತ್ತಿದ್ದೇವೆ' ಎಂದು ಬೇಸರ ವ್ಯಕ್ತಪಡಿಸಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕದ ರಾಜ್ಯ ಮುಖ್ಯ ಆಯುಕ್ತ ಪಿ.ಜಿ.ಆರ್. ಸಿಂಧ್ಯ, 'ಅಬಕಾರಿಯಿಂದ ಬರುತ್ತಿರುವ ಆದಾಯವನ್ನು ಬೇರೆ ಬೇರೆ ಮೂಲಗಳಿಂದ ಸಂಗ್ರಹ ಮಾಡಬಹುದು. ಆದರೆ, ರಾಜ್ಯದಲ್ಲಿ ಮಾತ್ರ ನಿಷೇಧ ಮಾಡಿದರೆ ಅಕ್ರಮವಾಗಿ ಮದ್ಯ ರಾಜ್ಯಕ್ಕೆ ಬರುವ ಸಾಧ್ಯತೆಯಿದೆ. ಆದ್ದರಿಂದ ಕೇಂದ್ರ ಸರ್ಕಾರ ಈ ಬಗ್ಗೆ ನಿರ್ಧಾರ ಕೈಗೊಳ್ಳಬೇಕು' ಎಂದು ತಿಳಿಸಿದರು.

'ಬಹುತೇಕ ಪ್ರಶಸ್ತಿಗಳು ರಾಜಧಾನಿ ಕೇಂದ್ರೀತವಾಗಿವೆ. ಉತ್ತರ ಕರ್ನಾಟಕ ಭಾಗದ ಸಾಧಕರನ್ನು ಕಡೆಗಣಿಸಲಾಗುತ್ತಿದೆ. ಆ ಭಾಗಕ್ಕೆ ಕೇವಲ ಅನುದಾನ ನೀಡಿದರೆ ಕರ್ನಾಟಕದ ಏಕೀಕರಣವಾಗುವುದಿಲ್ಲ. ಇಲ್ಲಿಯವರಿಗೆ ಅಲ್ಲಿಯವರು, ಅಲ್ಲಿಯವರಿಗೆ ಇಲ್ಲಿಯವರು ಅಣ್ಣ ತಮ್ಮಂದಿರು ಎಂಬ ಭಾವ ಬರಬೇಕು. ಹಾಗಾಗಲು ರಾಜ್ಯದ ಎಲ್ಲ ಭಾಗದವರನ್ನು ಗುರುತಿಸಿ ಗೌರವಿಸಬೇಕು' ಎಂದರು.

ಕಾರ್ಯಕ್ರಮದಲ್ಲಿ ಮೀನಾಕ್ಷಿ ಬಾಳಿ ಅವರಿಗೆ 'ಯಶೋಧರಮ್ಮ ದಾಸಪ್ಪ ಸಮಾಜರತ್ನ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಬಿ.ಆರ್‌. ಪಾಟೀಲ, ಕನ್ನಡ ಜನಶಕ್ತಿ ಕೇಂದ್ರದ ಅಧ್ಯಕ್ಷ ಸಿ.ಕೆ. ರಾಮೇಗೌಡ, ಪಿ.ಜಿ.ಆರ್‌. ಸಿಂಧ್ಯ, ಪತ್ರಕರ್ತ ರಾಮಣ್ಣ ಎಚ್‌. ಕೋಡಿಹೊಸಹಳ್ಳಿ ಮತ್ತು ಜನಸಾಹಿತ್ಯ ಪೀಠದ ಅಧ್ಯಕ್ಷ ಬಸವರಾಜ ಗ. ಗಾರ್ಗಿ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

'ಭಾವರಾಮಾಯಣ' 29ಕ್ಕೆ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀ ಪ್ರಕಾಶನ ಮತ್ತು ಸಾವಣ್ಣ ಪ್ರಕಾಶನ ಜಂಟಿಯಾಗಿ ಇದೇ 29ರಂದು ಸಂಜೆ 5 ಗಂಟೆಗೆ ಹೊಸಕೆರೆಹಳ್ಳಿಯ ಪಿಇಎಸ್ ವಿಶ್ವವಿದ್ಯಾಲಯದಲ್ಲಿ ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತೀ ಸ್ವಾಮೀಜಿ (ಶ್ರೀಸಂಸ್ಥಾನ) ಅವರು ರಚಿಸಿದ 'ಭಾವರಾಮಾಯಣ ರಾಮಾವತರಣ' ಪುಸ್ತಕ ಬಿಡುಗಡೆ ಸಮಾರಂಭ ಹಮ್ಮಿಕೊಂಡಿದೆ.

ಮಂಗಳವಾರ ಇಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಹವ್ಯಕ ಮಹಾಮಂಡಲದ ಅಧ್ಯಕ್ಷ ಮೋಹನ ಭಾಸ್ಕರ ಹೆಗಡೆ, 'ಸುದೀರ್ಘ ಅಧ್ಯಯನ ಮತ್ತು ವಿದ್ವತ್ತಿನಿಂದ ರಾಘವೇಶ್ವರ ಭಾರತೀ ಸ್ವಾಮೀಜಿ ಈ ಕೃತಿಯನ್ನು ರಚಿಸಿದ್ದು, ವಾಲ್ಮೀಕಿ ರಾಮಾಯಣದ ಸಮಗ್ರ ಭಾವವನ್ನು ಸೆರೆ ಹಿಡಿದಿದ್ದಾರೆ. ರಾಮಾಯಣದ ಹೊಸ ಹೊಳಹುಗಳನ್ನು ಪರಿಚಯಿಸಿದ್ದಾರೆ. ಮೂಲ ಕೃತಿಗೆ ಧಕ್ಕೆಯಾಗದಂತೆ ಬರೆದಿದ್ದಾರೆ. ಕಳೆದ ಏಪ್ರಿಲ್‌ನಲ್ಲಿ ಸಾವಣ್ಣ ಪ್ರಕಾಶನ ಪ್ರಕಟಿಸಿದ ಈ ಕೃತಿ ಬಿಡುಗಡೆಗೆ ಮುನ್ನವೇ ಆರು ಮುದ್ರಣಗಳನ್ನು ಕಂಡಿದ್ದು, ಆರು ಸಾವಿರಕ್ಕೂ ಅಧಿಕ ಪ್ರತಿಗಳು ಮಾರಾಟವಾಗಿವೆ' ಎಂದು ಹೇಳಿದರು.



ರಾಘವೇಶ್ವರ ಭಾರತೀ ಸ್ವಾಮೀಜಿ

ಕೃತಿ ಬಿಡುಗಡೆ ಸಮಾರಂಭದಲ್ಲಿ ಮಂತ್ರಾಲಯದ ಸುಬುಧೇಂದ್ರ ತೀರ್ಥ ಸ್ವಾಮೀಜಿ ಅವರು ಹಾಗೂ ರಾಘವೇಶ್ವರ ಭಾರತೀ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಹಾಗೂ ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್.ದೊರೆಸ್ವಾಮಿ ಅವರು ಉಪಸ್ಥಿತರಿರುತ್ತಾರೆ. ನಾಡಿನ ವಿವಿಧ ಕ್ಷೇತ್ರಗಳ 108ಕ್ಕೂ ಹೆಚ್ಚು ಪ್ರಮುಖರು ಏಕಕಾಲದಲ್ಲಿ ಕೃತಿ ಬಿಡುಗಡೆ ಮಾಡುತ್ತಾರೆ. ರಾಜ್ಯದ ವಿವಿಧೆಡೆ ಇರುವ ಮಠದ ಹತ್ತು ಮಂಡಲದಲ್ಲಿಯೂ ಅದೇ ಸಮಯದಲ್ಲಿ ಕೃತಿ ಬಿಡುಗಡೆ ಮಾಡಲಾಗುತ್ತದೆ. ಸಮಾರಂಭದಲ್ಲಿ ರಾಘವೇಶ್ವರ ಭಾರತೀ ಸ್ವಾಮೀಜಿ ಅವರ ಜತೆಗೆ ಸಂವಾದವೂ ನಡೆಯಲಿದೆ' ಎಂದು ತಿಳಿಸಿದರು.

'ರಾಮಾಯಣದ ಮೂಲ ಭಾವ ಗ್ರಹಿಸಿ ಇದೇ ಮೊದಲ ಬಾರಿಗೆ ಕೃತಿಯನ್ನು ಹೊರತರಲಾಗಿದೆ. ವಿವಿಧ ಕಾಂಡಗಳ ಅನುಸಾರ ಸಂಪುಟ ರೂಪದಲ್ಲಿ ಕೃತಿ ಮುಂದಿನ ದಿನಗಳಲ್ಲಿ ಹೊರಬರಲಿದೆ. ರಾಘವೇಶ್ವರ ಭಾರತೀ ಸ್ವಾಮೀಜಿ ಅವರು 'ಜಗನ್ನಾಯಕನ ಜಾತಕ' ಎಂಬ ಕೃತಿಯನ್ನು ಸದ್ಯ ಬರೆಯುತ್ತಿದ್ದಾರೆ' ಎಂದು ಹೇಳಿದರು.

ಸಾವಣ್ಣ ಪ್ರಕಾಶನದ ಜಮೀಲ್ ಸಾವಣ್ಣ, 'ಬಿಡುಗಡೆಗೆ ಮುನ್ನವೇ ಕೃತಿಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ಆನ್‌ಲೈನ್ ವೇದಿಕೆಯಲ್ಲಿ ಮಾರಾಟವಾಗುತ್ತಿದೆ. ಈ ಕೃತಿಯಲ್ಲಿ ಸ್ವಾಮೀಜಿ ಸಾರಿರುವ ಮೌಲ್ಯಗಳು ಜಾತಿ, ಧರ್ಮದ ಎಲ್ಲೆಯನ್ನು ಮೀರಿದೆ. ಪುಸ್ತಕ ಬಿಡುಗಡೆ ಸಮಾರಂಭದ ದಿನ ಶೇ20ರಷ್ಟು ರಿಯಾಯಿತಿ ದರದಲ್ಲಿ ಕೃತಿಯ ಪ್ರತಿಗಳನ್ನು ಮಾರಾಟ ಮಾಡಲಾಗುತ್ತದೆ' ಎಂದು ಹೇಳಿದರು.

ಲೇಖಕ ಜಗದೀಶ್ ಶರ್ಮಾ ಸಂಪ, ಮಠದ ಮಾಧ್ಯಮ ಸಂಯೋಜಕ ಉದಯಶಂಕರ ಭಟ್ ಮಿತ್ತೂರು, ವಿತ್ತಾಧಿಕಾರಿ ಜೆ.ಎಲ್.ಗಣೇಶ್, ರಾಮಾಶ್ರಮ ಸೇವಾ ಸಮಿತಿ ಅಧ್ಯಕ್ಷ ರಮೇಶ್ ಹೆಗಡೆ ಉಪಸ್ಥಿತರಿದ್ದರು.

ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ಯಲ್ಲಾರ್ ಬಂಡೆ ವಿದ್ಯುತ್ ನಿರ್ವಹಣಾ ಕೇಂದ್ರದಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುವುದರಿಂದ ಜೂನ್ 27ರಂದು ಬೆಳಿಗ್ಗೆ 10.30ರಿಂದ ಸಂಜೆ 4 ಗಂಟೆಯವರೆಗೆ ವಿವಿಧ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ಎ.ಕೆ.ಆಶ್ರಮ ರಸ್ತೆ, ದೇವೇಗೌಡ ರಸ್ತೆ, ಆರ್.ಟಿ. ನಗರ 1ನೇ ಬ್ಲಾಕ್, ತಿಮ್ಮಯ್ಯ ಗಾರ್ಡನ್, ಮೋದಿ ಗಾರ್ಡನ್, ವೀರಣ್ಣಪಾಳ್ಯ, ಮರಿಯಣ್ಣ ಪಾಳ್ಯ, ಕಾಫೀ ಬೋರ್ಡ್ ಲೇಔಟ್ ಕೆಂಪಾಪುರ, ದಾಸರ ಹಳ್ಳಿ, ಮಾರುತಿ ಲೇಔಟ್, ಭುವನೇಶ್ವರಿ ನಗರ, ಬಿಇಎಲ್, ಥಣಿಸಂದ್ರ ಮುಖ್ಯ ರಸ್ತೆ, ಅಮರ ಜ್ಯೋತಿ ಲೇಔಟ್, ರಾಚೇನಹಳ್ಳಿ ಮುಖ್ಯರಸ್ತೆ, ರಾಯಲ್ ಎನ್‌ಕ್ಲೇವ್, ಶ್ರೀರಾಮ್‌ಪುರ ಗ್ರಾಮ, ವಿಎಚ್‌ಬಿಸಿಎಸ್ ಲೇಔಟ್, ಜೋಜಪ್ಪ ಲೇಔಟ್, ಗೋವಿಂದ ಪುರ, ಬೈರಪ್ಪ ಲೇಔಟ್ ಸುತ್ತಲಿನ ಪ್ರದೇಶಗಳು.

ಪ್ರಜಾವಾಣಿ
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ಗ್ರೀನ್ ವೆಹಿಕಲ್ ಎಕ್ಸ್‌ಪೊ 28ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಗ್ರೀನ್ ವೆಹಿಕಲ್ ಎಕ್ಸ್‌ಪೊದ 5ನೇ ಆವೃತ್ತಿಯು ಇದೇ 28ರಿಂದ 30ರವರೆಗೆ ತುಮಕೂರು ರಸ್ತೆಯಲ್ಲಿರುವ ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ನಡೆಯಲಿದೆ ಎಂದು ಮೀಡಿಯಾ ಮಾರ್ಕೆಟಿಂಗ್ ಸಂಸ್ಥೆಯ ನಿರ್ದೇಶಕ ಮಹಮ್ಮದ್ ಮುದಸ್ಸರ್ ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸ್ವಚ್ಛ ಮತ್ತು ಸುಸ್ಥಿರ ಸಂಚಾರವನ್ನು ಉತ್ತೇಜಿಸುವ ಉದ್ದೇಶದಿಂದ ಗ್ರೀನ್ ವೆಹಿಕಲ್ ಎಕ್ಸ್‌ಪೊವನ್ನು ಆಯೋಜಿಸಲಾಗುತ್ತಿದೆ. ಇವಿ, ಘಟಕಗಳು, ಬಿಡಿಭಾಗಗಳು, ತಂತ್ರಜ್ಞಾನ ಮತ್ತು ಸಂಬಂಧಪಟ್ಟ ಕೈಗಾರಿಕಾ ವಲಯವನ್ನು ಒಂದೇ ವೇದಿಕೆಗೆ ತರಲಾಗುತ್ತದೆ. ಎಲೆಕ್ಟ್ರಿಕಲ್ ವಾಹನಗಳ ಉತ್ಪಾದನೆ, ವಿತರಣೆ ಹಾಗೂ ಮಾರಾಟ ಮಾಡುವವರಿಗೆ ಈ ಎಕ್ಸ್‌ಪೊ ಉತ್ತಮ ವೇದಿಕೆ ಆಗಲಿದೆ' ಎಂದರು.

ಜೂನ್ 28ರಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಎಕ್ಸ್‌ಪೊ ಉದ್ಘಾಟನೆ ಮಾಡಲಿದ್ದಾರೆ.

GRT ಜ್ಯುವೆಲರ್ಸ್‌ನಿಂದ 'ಡೈಮಂಡ್ ಫೆಸ್ಟಿವಲ್'

ಬೆಂಗಳೂರು: ದಕ್ಷಿಣ ಭಾರತದ ಆಭರಣ ಮಾರುಕಟ್ಟೆಯಲ್ಲಿ ತಲೆಮಾರುಗಳ ನಂಬಿಕೆ ಗಳಿಸಿರುವ ಜಿಆರ್‌ಟಿ ಜ್ಯುವೆಲರ್ಸ್ ತನ್ನ ಎಲ್ಲ ಮಳಿಗೆಗಳಲ್ಲಿ ಬೆರಗುಗೊಳಿಸುವ 'ಡೈಮಂಡ್ ಫೆಸ್ಟಿವಲ್' ಅನಾವರಣಗೊಳಿಸಿದೆ.

ಸೊಗಸಾದ ವಿನ್ಯಾಸಗಳು ಮತ್ತು ಅಸಾಧಾರಣ ಮೌಲ್ಯದೊಂದಿಗೆ ಸಂತೋಷಕರ ಶಾಪಿಂಗ್ ಅನುಭವ ಪಡೆಯಲು ಹಬ್ಬವನ್ನು ಆಯೋಜಿಸಿರುವ ಜಿಆರ್‌ಟಿ ಜ್ಯುವೆಲರ್ಸ್, ಡೈಮಂಡ್ ಮತ್ತು ಅನ್‌ಕಟ್ ಡೈಮಂಡ್ ಮೌಲ್ಯದ ಮೇಲೆ ಶೇ.25 ರವರೆಗಿನ ಅತ್ಯಾಕರ್ಷಕ ಕೊಡುಗೆ ಪ್ರಕಟಿಸಿದೆ.

ಇದರ ಜತೆ ಗ್ರಾಹಕರು ಖರೀದಿಸುವ ವಜ್ರಾಭರಣಗಳ ಮೇಲೆ ವೇಸ್ಟೇಜ್ (VA) ಹಾಗೂ ಪ್ಲಾಟಿನಂ ಆಭರಣಗಳ ಶುಲ್ಕದ ಮೇಲೆ ಶೇ.30 ರಿಯಾಯಿತಿಯನ್ನೂ ಪಡೆಯಬಹುದಾಗಿದೆ. ಈ ವಿಶೇಷ ಕೊಡುಗೆ ಮಾರಾಟ ಒರಿಯಾನದ ಹಗುರ (ಲೈಟ್) ವಜ್ರದ ಆಭರಣಗಳಿಗೂ ಅನ್ವಯವಾಗಲಿದೆ.

ಜಿಆರ್‌ಟಿಯಲ್ಲಿರುವ ಎಲ್ಲ ವಜ್ರಾಭರಣಗಳಿಗೂ GRT ಡೈಮಂಡ್ ಅಶ್ಯೂರೆನ್ಸ್ ಲಭ್ಯವಾಗುತ್ತಿದ್ದು, ಪ್ರತಿ ಹಂತದಲ್ಲೂ ಪಾರದರ್ಶಕತೆ ಖಾತ್ರಿಪಡಿಸುತ್ತದೆ. ಪ್ರತಿ ವಜ್ರದ ಆಭರಣವು ಪ್ರಮಾಣೀಕೃತ ಗುಣಮಟ್ಟದ್ದಾಗಿದ್ದು, ನಿಖರ ತೂಕ ಮತ್ತು ಬೆಲೆ, ಜೀವನಪರ್ಯಂತ ನಿರ್ವಹಣೆ, ಕ್ಯಾರೆಟ್ ಭರವಸೆ, ಎಚ್‌ಯುಐಡಿ ಗುರುತು ಹಾಗೂ ಗ್ಯಾರಂಟಿ ಬೈಬ್ಯಾಕ್ ಸೌಲಭ್ಯವನ್ನು ಹೊಂದಿವೆ.

ಜಿಆರ್‌ಟಿ ಜ್ಯುವೆಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ಆನಂದ್ ಅನಂತಪದ್ಮನಾಭನ್ ಮಾತನಾಡಿ, ನಮ್ಮಲ್ಲಿರುವ ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಉದ್ಯಮದ ಅನುಭವದಿಂದ ಅತ್ಯುತ್ತಮ ಗುಣಮಟ್ಟದ ವಜ್ರಾಭರಣಗಳನ್ನು ನಿಖರತೆಯೊಂದಿಗೆ ಒದಗಿಸುತ್ತೇವೆ. ಅಲ್ಲದೆ, ಗ್ರಾಹಕರಿಗೆ ಪ್ರತಿ ಹಂತದ ಬಗ್ಗೆ ಮಾಹಿತಿ ನೀಡುವ ಮೂಲಕ ಅವರ ನಂಬಿಕೆ ಗಳಿಸಿದ್ದೇವೆ. ನಮ್ಮ ಸೋರ್ಸಿಂಗ್ ಪ್ರಕ್ರಿಯೆಯಿಂದ ಹಿಡಿದು ಅಂತಿಮ ಉತ್ಪನ್ನದವರೆಗೆ ವಜ್ರದ ಆಭರಣಗಳನ್ನು ನೈಜವಾಗಿ ಶುದ್ಧವಾಗಿಸುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಆರ್‌ಟಿ ಜ್ಯುವೆಲರ್ಸ್‌ನ ಮತ್ತೊಬ್ಬ ವ್ಯವಸ್ಥಾಪಕ ನಿರ್ದೇಶಕ ರಾಧಾಕೃಷ್ಣನ್ ಅವರು 'ವಜ್ರಗಳು ಜನರ ಹೃದಯದಲ್ಲಿ ವಿಶೇಷ ಸ್ಥಾನವನ್ನು ಹೊಂದಿವೆ. ಆಭರಣಗಳು ತಲೆಮಾರುಗಳ ಚರಾಸ್ತಿಯಾಗಿ ಪೀಳಿಗೆಯಿಂದ ಪೀಳಿಗೆಗೆ ವರ್ಗಾಯಿಸಲ್ಪಡುತ್ತವೆ. ಗ್ರಾಹಕರು ವಜ್ರಗಳ ಗುಣಮಟ್ಟದ ಬಗ್ಗೆ ನಂಬಿಕೆ ಹೊಂದುವುದನ್ನು ಖಚಿತಪಡಿಸಿಕೊಳ್ಳಲು ನಮ್ಮ ತಂಡ ಸ್ಫೂರ್ತಿಯಾಗಿದೆ. ಪಾರದರ್ಶಕತೆ ಕಾಯ್ದುಕೊಳ್ಳುವಲ್ಲಿ ನಾವು ಸಾಧ್ಯವಿರುವ ಎಲ್ಲ ಕೆಲಸವನ್ನೂ ಮಾಡುತ್ತೇವೆ' ಎಂದರು.

ಪ್ರಸ್ತುತಿ; ಪಿವಿ ಬ್ರ್ಯಾಂಡ್ ಸ್ಪಾಟ್

ಪುಸ್ತಕ ಬಹುಮಾನ ಕೃತಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿಯು ಪುಸ್ತಕ ಬಹುಮಾನಕ್ಕೆ ರಂಗಭೂಮಿಗೆ ಸಂಬಂಧಿಸಿದ ಪುಸ್ತಕಗಳನ್ನು ಆಹ್ವಾನಿಸಿದೆ.

2021, 2022 ಹಾಗೂ 2023ರಲ್ಲಿ ಪ್ರಕಟವಾದ ಪುಸ್ತಕಗಳನ್ನು ಈ ಬಹುಮಾನಕ್ಕೆ ಪರಿಗಣಿಸಲಾಗುತ್ತದೆ. ಪ್ರತಿ ವರ್ಷಕ್ಕೆ ಒಂದರಂತೆ ಪುಸ್ತಕವನ್ನು ಆಯ್ಕೆ ಮಾಡಿ, ತಲಾ ₹25 ಸಾವಿರ ನಗದು ಸಹಿತ ಬಹುಮಾನ ನೀಡಲಾಗುತ್ತದೆ. ರಂಗಭೂಮಿಯ ಬೆಳವಣಿಗೆ, ವೈವಿಧ್ಯತೆ ಹಾಗೂ ರಂಗಭೂಮಿಯ ಇತಿಹಾಸವನ್ನು ತಿಳಿಸುವಂತಹ ಕೃತಿಗಳನ್ನು ಕಳುಹಿಸಬಹುದಾಗಿದೆ.

2021ರ ಜ.1ರಿಂದ 2023ರ ಡಿ.31ರೊಳಗೆ ಪುಸ್ತಕ ಪ್ರಕಟವಾಗಿರಬೇಕು. ಅನುವಾದಿತ ಹಾಗೂ ಮರು ಮುದ್ರಣಗೊಂಡ ಕೃತಿಗಳಿಗೆ ಅವಕಾಶವಿಲ್ಲ. ಕೃತಿಯು ಕನಿಷ್ಠ 60 ಪುಟಗಳನ್ನು ಹೊಂದಿರಬೇಕು. ಪುಸ್ತಕ ಬಹುಮಾನಕ್ಕೆ ಲೇಖಕರು ಮಾತ್ರ ಅರ್ಹರಾಗಿರುತ್ತಾರೆ.

ಆಸಕ್ತರು ಪುಸ್ತಕದ ನಾಲ್ಕು ಪ್ರತಿಗಳನ್ನು ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ, ನೆಲಮಹಡಿ, ಚಾಲುಕ್ಯ ವಿಭಾಗ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು-02 ಈ ವಿಳಾಸಕ್ಕೆ ಜುಲೈ 20ರೊಳಗೆ ಕಳುಹಿಸಬೇಕು ಎಂದು ಅಕಾಡೆಮಿ ರಿಜಿಸ್ಟ್ರಾರ್ ಎನ್. ನಮ್ರತಾ ತಿಳಿಸಿದ್ದಾರೆ.

ಸಂಪರ್ಕಕ್ಕೆ: 080 22244176

ಭಾರತ ಸರ್ಕಾರದ ಪ್ರವಾಸೋದ್ಯಮ ಸಚಿವಾಲಯದಿಂದ 'ಅನುಭವಿ ಸೇವಾ ಪೂರೈಕೆದಾರ' ಮಾನ್ಯತೆ & ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ
ಅಡಿಗಾಸ್ ಯಾತ್ರಾ ® 30 Years in Tourism
ಸ್ಥಳ, ಸಮಯ, ಹಣಕ್ಕೆ ಅಧಿಕ ಮೌಲ್ಯ
9449478944
email: care@adigasyatra.com | website: www.adigasyatra.com
500ಕ್ಕೂ ಅಧಿಕ ವೈವಿಧ್ಯಮಯ ಪ್ರವಾಸಗಳು
ಎಲ್ಲಾ ವಿದೇಶ ಪ್ರವಾಸಗಳಿಗೆ ಮತ್ತು ಕಾಶ್ಮೀರ, ಹಿಮಾಚಲ, ಸಿಕ್ಕಿಂ, ನಾರ್ತ್ ಈಸ್ಟ್, ಉತ್ತರಾಖಂಡ್, ಚಾರ್‌ಧಾಮ್, ಅಮರನಾಥ, ಅಂಡಮಾನ್, ಗುಜರಾತ್, ರಾಜಸ್ಥಾನ, ಒಡಿಶಾ, ಕಾಶಿ-ಗಯಾ, ಉಜ್ಜಯಿನಿ-ಓಂಕಾರೇಶ್ವರ
ಗ್ರಾಹಕಾನುಕೂಲಿತ 3 ದಿನಗಳಿಂದ-ಗರಿಷ್ಠ 28 ದಿನಗಳವರೆಗಿನ ಪ್ರವಾಸಗಳು
EMI FACILITIES AVAILABLE | EASY PAY
GROUP, CUSTOMISED & HONEYMOON TOUR PACKAGES
ಗ್ರೂಪ್ ಪ್ರವಾಸಗಳು: ಶುದ್ಧ ಸಸ್ಯಹಾರಿ ಊಟೋಪಹಾರ, A/C ಬಸ್, A/C ರೂಮ್‌ನಲ್ಲಿ ವಸತಿ, ರೈಲು/ವಿಮಾನ ಪ್ರಯಾಣ, ಟೂರ್ ಮ್ಯಾನೇಜರ್ ಸೇವೆಯೊಂದಿಗೆ ಗ್ರೂಪ್ ಪ್ರವಾಸಗಳು

ಗುಜರಾತ್ ವಿಶೇಷ ಪ್ರವಾಸ — By Flight 9 Days/ By Train 12 Days
ಅಹಮದಾಬಾದ್, ಕೆವಡಿಯಾ-ಸರ್ದಾರ್ ವಲ್ಲಭಭಾಯ್ ಪ್ರತಿಮೆ, ಭಾವನಗರ, ನಿಷ್ಕಳಂಕ್ ಮಹದೇವ್, ಸೋಮನಾಥ್, ವೀರಾವಲ್, ಪೋರಬಂದರ್, ಬೆಟ್ ದ್ವಾರಕಾ, ನಾಗೇಶ್ವರ್, ದ್ವಾರಕ, ಮಾತೃಗಯಾ, ಮೊಢೇರಾ, ಪಟಾನ್.
Dep Dates: JUL 21, 29. AUG 7, 15, 23. SEP 8, 16, 25. OCT 6, 14, 23. NOV 3, 11, 20. DEC 1, 9, 18.

ರಾಜಸ್ಥಾನ್ ವಿಶೇಷ ಪ್ರವಾಸ — By Flight 10 Days/ By Train 14 Days
ಜೈಪುರ, ಪುಷ್ಕರ್, ಚಿತ್ತೋರಗಢ, ಉದಯಪುರ, ಕುಂಭಲ್ಗಡ್, ಜೋಧಪುರ್, ಜೈಸಲ್ಮೇರ್, ಸ್ಯಾಮ್ ಸ್ಯಾಂಡ್ ಡ್ಯೂನ್ಸ್, ಬಿಕಾನೇರ್, ಕರಣೀ ಮಾತಾ.
Dep Dates: SEP 5, 12, 19, 26. OCT 3, 10, 17, 24. NOV 7, 14, 21, 28. DEC 5, 12, 19.

ಮಧ್ಯಪ್ರದೇಶ ಪ್ರವಾಸ — By Flight 11 Days/ By Train 15 Days
ಗ್ವಾಲಿಯರ್, ಖಜುರಾಹೋ, ಜಬಲ್‌ಪುರ್, ಭೇದಘಾಟ್, ಪಾಚ್‌ಮಾಡಿ, ಭೋಪಾಲ್, ಸಾಂಚಿ, ಇಂದೋರ್, ಉಜ್ಜಯಿನಿ, ಮಹೇಶ್ವರ, ಓಂಕಾರೇಶ್ವರ.
Dep Dates: JUL 2, 9, 16. AUG 6, 13, 20 SEP 3, 10, 17, 24. OCT 1, 8, 15, 22, 29. NOV 5, 12, 19, 26. DEC 3, 10, 17.

ಚಾರ್‌ಧಾಮ ಯಾತ್ರಾ — By Flight 14 Days/ By Train 18 Days
ಹರಿದ್ವಾರ, ಯಮುನೋತ್ರಿ, ಉತ್ತರಕಾಶಿ, ಗಂಗೋತ್ರಿ, ರುದ್ರ ಪ್ರಯಾಗ, ಗುಪ್ತ ಕಾಶಿ, ಕೇದಾರನಾಥ, ಮಾನಾ, ಬದರಿನಾಥ್, ಋಷಿಕೇಶ
Dep Dates: JUL 3, 10, 24. AUG 14, 28. SEP 4, 11, 18, 25. OCT 2, 9, 16.

ಶಿಮ್ಲಾ-ಮನಾಲಿ-ವೈಷ್ಣೋದೇವಿ — By Flight 14 Days/ By Train 17 Days
ಕುರುಕ್ಷೇತ್ರ, ಚಂಡೀಗಢ, ಶಿಮ್ಲಾ, ಕುಲು, ಮನಾಲಿ, ಬೈಜನಾಥ, ಕಾಂಗ್ರಾ ವಜ್ರೇಶ್ವರಿ, ಚಾಮುಂಡಾ, ಜ್ವಾಲಾಮುಖಿ, ಕಟ್ರಾ, ವೈಷ್ಣೋದೇವಿ, ಅಮೃತಸರ್,
DEP DATES: Jul 8, 22. Aug 5, 19. Sep 2, 9, 23. Oct 7, 14, 21. Nov 11, 25. Dec 9.

ಕಾಶ್ಮೀರ-ವೈಷ್ಣೋದೇವಿ ಯಾತ್ರಾ — By Flight 8 Days/ By Train 14 Days
ಪಹಲ್ಗಾಮ್, ಸೋನಾಮಾರ್ಗ್, ಶ್ರೀನಗರ, ಗುಲ್ಮಾರ್ಗ್, ಕಟ್ರಾ, ವೈಷ್ಣೋದೇವಿ
DEP DATES: Jul 7, 16, 25. Aug 8, 16. 24. Sep 4, 12, 20. Oct 2, 10, 18. Nov 6, 14, 22. Dec 4, 12.

ನೇಪಾಳ-ಅಯೋಧ್ಯಾ-ಕಾಶಿ — By Flight 12 Days/ By Train 16 Days
ಪ್ರಯಾಗರಾಜ್, ಅಯೋಧ್ಯಾ, ಸುನೌಲಿ ಬಾರ್ಡರ್, ಮನೋಕಾಮನಾ, ಕಠ್ಮಂಡು, ಲುಂಬಿನಿ, ಗೋರಖಪುರ, ಗಯಾ, ಬೋಧಗಯಾ, ವಾರಣಾಸಿ, ಸಾರನಾಥ
DEP DATES: Aug 4, 16. Sep 8, 15, 20. Oct 13, 25. Nov 10, 22. Dec 8. 20

ಅಯೋಧ್ಯಾ-ಕಾಶಿ-ಗಯಾ — By Flight 9 Days/ By Train 13 Days
ನೈಮಿಶಾರಣ್ಯ, ಅಯೋಧ್ಯಾ, ಪ್ರಯಾಗರಾಜ್, ಚಿತ್ರಕೂಟ, ಬೋಧಗಯಾ, ಗಯಾ, ವಾರಣಾಸಿ, ಸಾರನಾಥ.
DEP DATES: Jul 3, 17. Aug 5, 14, 26. Sep 9, 18, 30. Oct 9, 21. Nov 4, 13, 25. Dec 2, 11, 23.

ಪೂರ್ವ & ಈಶಾನ್ಯ
ಪೂರ್ವ ಭಾರತ ಪ್ರವಾಸ — By Flight 6/13 Days & By Train 9/16 Days
ಭುವನೇಶ್ವರ, ಧವಳಗಿರಿ, ಸಾಕ್ಷಿಗೋಪಾಲ, ಜಗನ್ನಾಥ ಪುರಿ, ಚಿಲ್ಕಾ ಲೇಕ್, ಕೋಣಾರ್ಕ್, ದಕ್ಷಿಣೇಶ್ವರ, ಹೌರಾ, ಕಲ್ಕತ್ತಾ, ಸಿಲಿಗುರಿ, ಮಿರಿಕ್, ಡಾರ್ಜಿಲಿಂಗ್, ತ್ಸಾಂಗೋ ಸರೋವರ, ಗ್ಯಾಂಗ್‌ಟಕ್,
DEP DATES: 2024: Jul 3, 17. Aug 7, 14. Sep 4, 18. Oct 2, 16. Nov 6, 20, 27. Dec 4, 11
ಅಸ್ಸಾಂ-ಅರುಣಾಚಲ-ಮೇಘಾಲಯ — By Flight 13 Days & By Train 18 Days
ಗುವಾಹತಿ, ನೌಗಾವ್, ಮಹಾ ಮೃತ್ಯುಂಜಯ, ತೇಜ್‌ಪುರ್, ಬೊಮ್ಡಿಲಾ, ತವಾಂಗ್, ಸೆಲಾ ಪಾಸ್, ಕಾಜೀರಂಗ ನ್ಯಾಶನಲ್ ಪಾರ್ಕ್, ಚಿರಾಪುಂಜಿ, ಶಿಲ್ಲಾಂಗ್
DEP DATES: 2024: Oct 25. Nov 7, 20.

ನೇಪಾಳ
ನೇಪಾಳ-ಪಶುಪತಿನಾಥ-ಮುಕ್ತಿನಾಥ — By Flight 10 Days & By Train 13 Days
ಗೋರಖಪುರ, ಪೋಖರಾ, ಮುಕ್ತಿನಾಥ, ಜೋಮಸಮ್, ಮನೋಕಾಮನ, ಕಠ್ಮಂಡು, ಸುನೌಲಿ ಬಾರ್ಡರ್, ಲುಂಬಿನಿ.
DEP DATES: Jul 11, 25. Aug 1, 15, 22. Sep 5, 19. Oct 10, 17, 24
ನೇಪಾಳ-ಕಠ್ಮಂಡು-ಪೋಖರಾ — By Flight 10 Days & By Train 13 Days
ಗೋರಖಪುರ, ಪೋಖರಾ, ಮನೋಕಾಮನ, ಕಠ್ಮಂಡು, ಸುನೌಲಿ ಬಾರ್ಡರ್, ಲುಂಬಿನಿ.
DEP DATES: Jul 11, 25. Aug 1, 15, 22, Sep 5, 19. Oct 10, 17, 24

ಬಸವನಗುಡಿ ☎ 080-26616678 ✆ 7022259008
ಮಲ್ಲೇಶ್ವರಂ ☎ 080-23346678 ✆ 7022259003
ರಾಜರಾಜೇಶ್ವರಿ ನಗರ ☎ 080-26696678 ✆ 7483366378
ವಿಜಯನಗರ (ಬೆಂಗಳೂರು) ☎ 080-23356678 ✆ 9364104372
ಹುಬ್ಬಳ್ಳಿ ☎ 0836-2256678 ✆ 9364104366
ಹಾಸನ ☎ 08172-261888 ✆ 8884679122

ನಂದಿನಿ ಹಾಲಿನ ದರ ಈಗಲೂ ರಾಷ್ಟ್ರದಲ್ಲೇ ಅತ್ಯಂತ ಕಡಿಮೆ

ಇದೀಗ 500 ಮತ್ತು 1000 ಮಿಲಿ ಹಾಲಿನ ಪ್ಯಾಕೆಟ್‌ನಲ್ಲಿ **50 ಮಿಲಿ ಅಧಿಕ ಹಾಲು**

ಕಳೆದ ವರ್ಷಕ್ಕೆ ಹೋಲಿಕೆ ಮಾಡಿದಲ್ಲಿ ರಾಜ್ಯದಲ್ಲಿ ಈ ಬಾರಿ ಹಾಲಿನ ಉತ್ಪಾದನೆ ಶೇ.15ರಷ್ಟು ಹೆಚ್ಚಳವಾಗಿದ್ದು, ಪ್ರಸ್ತುತ ಪ್ರತಿದಿನ 1 ಕೋಟಿ ಲೀಟರ್ ಹಾಲು ಶೇಖರಣೆಯಾಗುವ ಹಂತ ತಲುಪಲಿದೆ.

ಹೆಚ್ಚುವರಿ ಹಾಲಿನ ಪರಿಣಾಮವಾಗಿ ಪ್ರತಿನಿತ್ಯ 250 ಮೆ.ಟನ್ ಹಾಲಿನ ಪುಡಿ ಉತ್ಪಾದನೆಯಾಗುತ್ತಿದ್ದು, ಇದನ್ನು ಕಡಿಮೆ ಮಾಡಿ, ದುಡಿಯುವ ಬಂಡವಾಳವನ್ನು ಒಕ್ಕೂಟಗಳಿಗೆ ಒದಗಿಸುವ ಸಲುವಾಗಿ ಹಾಗೂ ಸಕಾಲದಲ್ಲಿ ರೈತರಿಗೆ ಹಣ ಪಾವತಿ ಮಾಡಲು ಸಹಕಾರಿಯಾಗಲಿರುವ ಪ್ರಮುಖ ಅಂಶವನ್ನು ಹೊಂದಿರುತ್ತದೆ.

ರಾಜ್ಯದಲ್ಲಿ ಹೆಚ್ಚುವರಿಯಾಗಿ ಉತ್ಪಾದನೆಯಾಗುವ ಹಾಲನ್ನು ಯಾವುದೇ ಕಾರಣಕ್ಕೂ ರೈತರಿಂದ ನಿರಾಕರಿಸದೆ, ಖರೀದಿ ಮಾಡಬೇಕೆಂಬ ಸದುದ್ದೇಶದಿಂದ ಹಾಗೂ ಗ್ರಾಹಕರಿಗೆ ಹೊರೆಯಾಗದೆ ರೀತಿಯಲ್ಲಿ ತಲುಪಿಸುವ ಉದ್ದೇಶ ಹೊಂದಿದೆ.

ರೈತರಿಂದ ಹಾಲಿನ ಪೂರೈಕೆಯು ನಿರಂತರವಾಗಿ ಹೆಚ್ಚಾಗುತ್ತಿರುವುದರಿಂದ ನೇರವಾಗಿ ದರ ಏರಿಕೆ ಮಾಡದೇ ಅರ್ಧ ಲೀಟರ್ ಮತ್ತು ಒಂದು ಲೀಟರ್ ಹಾಲಿನ ಪ್ಯಾಕೆಟ್‌ಗೆ 50 ಮಿಲಿ ಪ್ರಮಾಣ ಹೆಚ್ಚಿಸಿ, ಹೆಚ್ಚುವರಿ ಹಾಲಿಗೆ ರೂ.2/– ರಂತೆ ಸೇರ್ಪಡಿಸಿ ದರ ನಿಗದಿಪಡಿಸಲಾಗಿದೆ.

ಗ್ರಾಹಕರು ಎಂದಿನಂತೆಯೇ ಸಹಕರಿಸಲು ಕೋರಿದೆ.

ದಿನಾಂಕ: 26.06.2024ರಿಂದ ಅನ್ವಯವಾಗುವ ಹಾಲಿನ ದರಗಳು

ನಂದಿನಿ ಹಾಲಿನ ಮಾದರಿಗಳು	550 ಮಿಲಿ ಪ್ಯಾಕೆಟ್ ದರ (ರೂ.)	1050 ಮಿಲಿ ಪ್ಯಾಕೆಟ್ ದರ (ರೂ.)
ಟೋನ್ಡ್ ಹಾಲು	24/-	44/-
ಹೋಮೋಜಿನೈಸ್ಡ್ ಟೋನ್ಡ್ ಹಾಲು	24/-	45/-
ಹೋಮೋಜಿನೈಸ್ಡ್ ಹಸುವಿನ ಹಾಲು	26/-	48/-
ಸ್ಪೆಷಲ್ ಹಾಲು	27/-	50/-
ಶುಭಂ ಹಾಲು	27/-	50/-
ಸಮೃದ್ಧಿ ಹಾಲು	28/-	53/-
ಹೋಮೋಜಿನೈಸ್ಡ್ ಶುಭಂ ಹಾಲು	27/-	51/-
ಸಂತೃಪ್ತಿ ಹಾಲು	30/-	57/-
ಶುಭಂ ಗೋಲ್ಡ್ ಹಾಲು	28/-	51/-
ಡಬಲ್ ಟೋನ್ಡ್ ಹಾಲು	23/-	43/-

ಹೊರರಾಜ್ಯಗಳ ಹಾಲಿನ ಮಾರಾಟ ದರಗಳಿಗೆ ಹೋಲಿಸಿದರೆ ನಂದಿನಿ ಹಾಲಿನ ಮಾರಾಟ ದರ ಈಗಲೂ ಅತ್ಯಂತ ಕಡಿಮೆ

(ರೂ. ಪ್ರತಿ ಲೀಟರ್‌ಗೆ)

ಕೇರಳ	52
ದೆಹಲಿ	54
ಗುಜರಾತ್	56
ಮಹಾರಾಷ್ಟ್ರ	56
ಆಂಧ್ರ ಪ್ರದೇಶ	58

ಕೆಎಂಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕೆಎಂಎಫ್ ಸಂಕೀರ್ಣ, ಡಾ. ಎಂ.ಹೆಚ್. ಮರೀಗೌಡ ರಸ್ತೆ, ಬೆಂಗಳೂರು–560029

ಸಾಟಿಯಿಲ್ಲದ ಸವಾರಿ, ಅತ್ಯಾಕರ್ಷಕ ಕೊಡುಗೆ.

Hero MotoCorp ನಿಂದ VIDA ಎಲೆಕ್ಟ್ರಿಕ್ ಸ್ಕೂಟರ್‌ನೊಂದಿಗೆ

₹40,000* ಮೌಲ್ಯದ ಕೊಡುಗೆಗಳನ್ನು ಆನಂದಿಸಿ.

- 2 ರಿಮೋವಬಲ್ ಬ್ಯಾಟರಿಗಳು
- 165 km** ಪ್ರಮಾಣೀಕೃತ ಶ್ರೇಣಿ
- 2500+ ಫಾಸ್ಟ್ ಚಾರ್ಜರ್
- ವ್ಯಾಪಕ ಸೇವಾ ಜಾಲ

Limited period offer. Call your nearest Hero dealership now.

Visit us in **BANGALORE:** Vittal Mallya Road — RT KRISHNA AUTOS, 7428411021 | Bommanahalli — VIDA HUB RT KRISHNA AUTO, 8762865999 | Banashankari — SAI MOTORS, 7428412219 | J P Nagar — SAI MOTORS, 9035024284 | Kanakapura Main Road — SAI MOTORS, 8904677394 | Yeshwanthpur — SAI BIKES, 7428411869 | Nagarabhavi — SAI BIKES PREMIA, 7428412128 | Banaswadi Ring Road — BHAGATH MOTORS, 7428408355 | K R Puram — BHAGATH MOTORS, 9900349199 | Electronic City — RT KRISHNA AUTOS, 9865262136 | Rajajinagar — MAX MOTORS, 7428409766 | Magadi Main Road — POORNA MOTORS, 7428409953 | Lal Bagh Main Road — PRAKASH MOTORS, 7428410886 | Magadi Road — RT KRISHNA AUTOS, 8762058999 | Bellary Road — BIMAL MOTORS, 7428408801 | Singsandra — RT KRISHNA AUTOS PREMIA, 7428411368 | **TUMKUR:** Sira Gate — SAI WHEELZ, 9289922986 | BH Road — SAI WHEELZ, 7676016623 | Kunigal — SAI WHEELZ, 9164972652 | Tiptur — SAI WHEELZ, 9164840456.

**Certified range by Govt. certified agency. Real-world range of 110 km. Certified and Real-world range may vary depending on riding style, road/vehicle conditions, and vehicle models.

ಗ್ರ್ಯಾಂಡ್ ವೆಡ್ಡಿಂಗ್ ಕಹಾನಿಗೆ ಸಾಕ್ಷಿಯಾಗಿರಿ ಇಲ್ಲಿ ಸ್ಕ್ಯಾನ್ ಮಾಡಿ

BHIMA Toll Free Helpline 1800-121-9076 (10:00 a.m. to 7:00 p.m.)

ಸ್ಥಳ ತಿಳಿಯಲು, ಸ್ಕ್ಯಾನ್ ಮಾಡಿ

ಬೆಂಗಳೂರು • ಉಡುಪಿ • ಹಾಸನ • ಮಂಗಳೂರು • ಶಿವಮೊಗ್ಗ
ವಿಜಯವಾಡ • ಚೆನ್ನೈ • ರಾಜಮಂಡ್ರಿ • ಹೊಸೂರು • ಬೆಳಗಾವಿ • ಹುಬ್ಬಳ್ಳಿ

BHIMA JEWELLERS
GOLD • DIAMONDS • SILVER • PLATINUM
SINCE 1925

ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ

‘ಡೆಂಗಿ: ಚಿಕಿತ್ಸೆಗೆ ಒತ್ತು ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಡೆಂಗಿ ಜ್ವರ ಪತ್ತೆ ಮತ್ತು ಚಿಕಿತ್ಸೆಯನ್ನು ಗಂಭೀರವಾಗಿ ಪರಿಗಣಿಸಬೇಕು’ ಎಂದು ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದರು.

ರಾಜ್ಯದಲ್ಲಿ ಡೆಂಗಿ ಜ್ವರ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮತ್ತು ಹಿರಿಯ ಅಧಿಕಾರಿಗಳ ಜೊತೆ ಮಂಗಳವಾರ ಸಭೆ ನಡೆಸಿದ ಮುಖ್ಯಮಂತ್ರಿ, ‘ಅಗತ್ಯ ಚಿಕಿತ್ಸೆ, ಚುಚ್ಚುಮದ್ದು ಸಂಗ್ರಹಿಸಬೇಕು’ ಎಂದು ನಿರ್ದೇಶನ ನೀಡಿದರು.

ರಾಜ್ಯದಲ್ಲಿ ಸೋಮವಾರದ ವರೆಗೆ (ಜೂನ್ 24) ಒಟ್ಟು 5,374 ಡೆಂಗಿ ಪ್ರಕರಣಗಳು ವರದಿಯಾಗಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 1,230 ಪ್ರಕರಣಗಳು ವರದಿಯಾಗಿವೆ. ಒಟ್ಟು ಐವರ ಸಾವು ಸಂಭವಿಸಿದೆ. ಡೆಂಗಿ ಪ್ರಕರಣಗಳಲ್ಲಿ ಮರಣ ಪ್ರಮಾಣ ಶೇ 0.5ನ್ನು ಮೀರಬಾರದು ಎಂದು ಕೇಂದ್ರ ಸರ್ಕಾರ ನಿಗದಿಪಡಿಸಿದೆ. ರಾಜ್ಯದಲ್ಲಿ ಮರಣ ಪ್ರಮಾಣ ಶೇ 0.09ರಷ್ಟಿದೆ. ಬೆಂಗಳೂರು, ಚಿಕ್ಕಮಗಳೂರು, ಮೈಸೂರು, ಹಾವೇರಿ, ಶಿವಮೊಗ್ಗ, ಚಿತ್ರದುರ್ಗ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ಕಾಣಿಸಿಕೊಂಡಿವೆ.

ಡೆಂಗಿ ಜ್ವರ ನಿಯಂತ್ರಣಕ್ಕೆ ಎಲ್ಲ ಕ್ರಮಗಳನ್ನು ಕೈಗೊಳ್ಳಬೇಕು. ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಸೌಲಭ್ಯಗಳು, ಔಷಧಿಗಳು ಲಭ್ಯತೆಯನ್ನು ಖಾತರಿಪಡಿಸಬೇಕು. ಆಶಾ ಕಾರ್ಯಕರ್ತೆಯರು, ನರ್ಸಿಂಗ್ ಹಾಗೂ ಎನ್‌ಎಸ್‌ಎಸ್ ವಿದ್ಯಾರ್ಥಿಗಳು, ಸ್ವಯಂ ಸೇವಕರ ನೆರವಿನೊಂದಿಗೆ ಮನೆ ಮನೆ ಸಮೀಕ್ಷೆ ನಡೆಸಿ ಅರಿವು ಮೂಡಿಸಬೇಕೆಂದು ಸಭೆಯಲ್ಲಿ ಸೂಚನೆ ನೀಡಲಾಗಿದೆ.

‘ಡೆಂಗಿ ಹರಡುವ ಮೂಲ ಪತ್ತೆ ಮತ್ತು ನಾಶಕ್ಕೆ ಪ್ರತಿ ಶುಕ್ರವಾರ ವಿಶೇಷ ಅಭಿಯಾನ ನಡೆಸಬೇಕು. ಬಿಬಿಎಂಪಿ, ನಗರಾಭಿವೃದ್ಧಿ ಮತ್ತು ಆರೋಗ್ಯ ಇಲಾಖೆಯವರು ಜಂಟಿಯಾಗಿ ಡೆಂಗಿ ಜ್ವರ ನಿಯಂತ್ರಣ ಕುರಿತು ಪ್ರತಿ ವಾರ ಪರಿಶೀಲನೆ ನಡೆಸಬೇಕು. ಸ್ವಚ್ಛತೆ ಹಾಗೂ ನೀರು ನಿಲ್ಲದಂತೆ ನಗರ ಸ್ಥಳೀಯ ಸಂಸ್ಥೆಗಳು ಕ್ರಮ ಕೈಗೊಳ್ಳಬೇಕು’ ಎಂದೂ ಮುಖ್ಯಮಂತ್ರಿ ಸೂಚನೆ ನೀಡಿದರು.

ಮುಖ್ಯಮಂತ್ರಿ ಜೊತೆಗಿನ ಸಭೆಗೂ ಮೊದಲು ತಮ್ಮ ಇಲಾಖೆಯ ಅಧಿಕಾರಿಗಳ ಜೊತೆ ಸಭೆ ಚರ್ಚೆ ನಡೆಸಿದ ದಿನೇಶ್ ಗುಂಡೂರಾವ್, ‘ತಪಾಸಣೆ ಹೆಚ್ಚಿಸಿ, ಡೆಂಗಿ ಪ್ರಕರಣಗಳನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡಬೇಕು. ಅಲ್ಲದೆ, ಸಾರ್ವಜನಿಕರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಬೇಕು’ ಎಂದು ಸೂಚನೆ ನೀಡಿದರು.

ಮುಖ್ಯಾಂಶಗಳು

- ರಾಜ್ಯದಲ್ಲಿ ಈವರೆಗೆ 5,374 ಪ್ರಕರಣ ಪತ್ತೆ, ಐದು ಮಂದಿ ಸಾವು
- ಬಿಬಿಎಂಪಿ ವ್ಯಾಪ್ತಿಯಲ್ಲಿ 1,230 ಪ್ರಕರಣಗಳು ವರದಿ
- ಡೆಂಗಿ ಹರಡುವ ಮೂಲ ಪತ್ತೆ ಮತ್ತು ನಾಶಕ್ಕೆ ಅಭಿಯಾನ ನಡೆಸುವಂತೆ ನಿರ್ದೇಶನ

‘ಅನುಗ್ರಹ’ ಪರಿಹಾರ ಹೆಚ್ಚಳ ಕುರಿತು ಪರಿಶೀಲನೆ- ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕುರಿಗಳು ಸತ್ತರೆ ಒಂದು ಕುರಿಗೆ ₹5 ಸಾವಿರ ಪರಿಹಾರ ನೀಡುವ ‘ಅನುಗ್ರಹ’ ಯೋಜನೆ ಜಾರಿಯಲ್ಲಿದ್ದು, ಈ ಮೊತ್ತವನ್ನು ಹೆಚ್ಚಿಸುವ ಬಗ್ಗೆ ಪರಿಶೀಲಿಸಲಾಗುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಅಲೆಮಾರಿ ಕುರಿಗಾಹಿ ಸಮುದಾಯಗಳ ಮುಖಂಡರ ಜೊತೆ ಸಭೆ ನಡೆಸಿ ಅವರು, ‘ಹಿಂದಿನ ಸರ್ಕಾರ ‘ಅನುಗ್ರಹ’ ಯೋಜನೆಯನ್ನು ಸ್ಥಗಿತಗೊಳಿಸಿತ್ತು. ಆ ಅವಧಿಯಲ್ಲಿ ಸತ್ತ ಕುರಿಗಳಿಗೆ ಪರಿಹಾರ ನೀಡುವ ಬಗ್ಗೆ ಎಲ್ಲ ಜಿಲ್ಲೆಗಳಿಂದ ವರದಿ ತರಿಸಲಾಗುವುದು’ ಎಂದರು.

‘ಅರಣ್ಯ ಪ್ರದೇಶದಲ್ಲಿ ಕುರಿಗಳನ್ನು ಮಾತ್ರ ಮೇಯಿಸಲು ಅವಕಾಶ ನೀಡುವ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಲಾಗುವುದು. ಕುರಿಗಾಹಿಗಳಿಗೆ ಗುರುತಿನ ಚೀಟಿ ನೀಡಲು ವ್ಯವಸ್ಥೆ ಮಾಡಲಾಗುವುದು. ಈ ಗುರುತಿನ ಚೀಟಿ ಆಧಾರದ ಮೇಲೆ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ನೀಡುವಂತೆ ಕ್ರಮ ಕೈಗೊಳ್ಳಲಾಗು ವುದು. ವಲಸೆ ಕುರಿಗಾರರ ಮತ್ತು ಅವರ ಸ್ವತ್ತುಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ರೂಪಿಸುವ ಬಗ್ಗೆ ಚಿಂತನೆ ನಡೆಸಲಾಗುವುದು’ ಎಂದರು.

‘1,300 ಪಶು ವೈದ್ಯರ ಹುದ್ದೆ ಖಾಲಿ ಇದ್ದು, ಪ್ರಸ್ತುತ 400 ವೈದ್ಯರನ್ನು ನೇಮಕ ಮಾಡಲಾಗುತ್ತಿದೆ. ಮುಂದಿನ ವರ್ಷ ಬಾಕಿ ವೈದ್ಯರ ನೇಮಕಾತಿ ಮಾಡಲಾಗುವುದು’ ಎಂದು ಮುಖ್ಯಮಂತ್ರಿ ತಿಳಿಸಿದರು.

ಪಶುಸಂಗೋಪನಾ ಸಚಿವ ವೆಂಕಟೇಶ್, ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದ ಅಧ್ಯಕ್ಷ ದೇವೇಂದ್ರಪ್ಪ ವರ್ತೂರು, ‘ಗ್ಯಾರಂಟಿ’ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್‌.ಎಂ. ರೇವಣ್ಣ, ಪಶು ಸಂಗೋಪನಾ ಇಲಾಖೆ ಕಾರ್ಯದರ್ಶಿ ಅಜಯ್ ನಾಗಭೂಷಣ್ ಇದ್ದರು.

ಕಾವೇರಿ ಮಲಿನ: ವರದಿ ನೀಡಲು ಡಿಸಿಎಂ ಸೂಚನೆ

ತ್ಯಾಜ್ಯ ನೀರು ಸೇರ್ಪಡೆ: ಸಿ.ಎಂಗೆ ದಿನೇಶ್ ಗೂಳಿಗೌಡ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ನದಿಗೆ ತ್ಯಾಜ್ಯ ನೀರು ಬಿಡುವ ದೂರಿನ ಬಗ್ಗೆ ಸ್ಥಳ ಪರಿಶೀಲಿಸಿ, ಅದನ್ನು ತಡೆಯಲು ಸ್ಥಳೀಯ ಪ್ರಾಧಿಕಾರಗಳು ಕೈಗೊಂಡ ಕ್ರಮಗಳ ಕುರಿತು ವರದಿ ನೀಡುವಂತೆ ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಜಲ ಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಸೂಚಿಸಿದ್ದಾರೆ.

ನದಿ ನೀರು ಮಲಿನಗೊಳ್ಳದಂತೆ ತಡೆಯಲು ಸೂಕ್ತ ಕ್ರಮ ಕೈಗೊಳ್ಳುವಂತೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಲಿಖಿತವಾಗಿ ಸೂಚಿಸಿದ್ದಾರೆ. ಸಂಬಂಧಿಸಿದ ಇಲಾಖೆಗಳ ಸಹಯೋಗದಲ್ಲಿ ಸಮಿತಿ ರಚಿಸಿ ಎರಡು ವಾರದಲ್ಲಿ ವರದಿ ಸಲ್ಲಿಸುವಂತೆ ಅರಣ್ಯ ಮತ್ತು ಪರಿಸರ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಅರಣ್ಯ ಸಚಿವರಾದ ಈಶ್ವರ ಖಂಡ್ರೆ ನಿರ್ದೇಶನ ನೀಡಿದ್ದಾರೆ.

ಶಿವಕುಮಾರ್

ಕಾವೇರಿ ನದಿಗೆ ತ್ಯಾಜ್ಯ ನೀರು ಸೇರ್ಪಡೆಯಾಗಿ ಕಲುಷಿತಗೊಳ್ಳುತ್ತಿದ್ದು, ಮಾಲಿನ್ಯ ತಡೆಗೆ ಕ್ರಮ ಕೈಗೊಳ್ಳಬೇಕೆಂದು ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಚಿವರಿಗೆ ಮನವಿ ಸಲ್ಲಿಸಿದ್ದರು.

ಕೈಗಾರಿಕೆ ತ್ಯಾಜ್ಯ, ಘನ ತ್ಯಾಜ್ಯ ಅಪಾಯದ ಪ್ರಮಾಣ ಮೀರಿ ನದಿ ನೀರಿಗೆ ಸೇರ್ಪಡೆ ಆಗುತ್ತಿರುವುದರಿಂದ ಅದರ ತಡೆಗೆ ಸರ್ಕಾರ ಕ್ರಮ ವಹಿಸಬೇಕು. ಅದಕ್ಕಾಗಿಯೇ ತಾಂತ್ರಿಕ ಪರಿಣಿತರ ತನಿಖಾ ತಂಡ ರಚಿಸಬೇಕು. ಆ ಮೂಲಕ, ಕೈಗಾರಿಕಾ ಪ್ರದೇಶ, ಒಳಚರಂಡಿ, ಹೋಟೆಲ್, ರೆಸಾರ್ಟ್ ಮತ್ತಿತರ ಪ್ರದೇಶಗಳಿಂದ ಮಲಿನ ನೀರು ಕಾವೇರಿ ನದಿ ಒಡಲು ಸೇರದಂತೆ ನಿಗಾ ವಹಿಸಬೇಕು ಎಂದು ಅವರು ಮನವಿ ಮಾಡಿದ್ದರು.

‘ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿ ಉಗಮಿಸುವ ಕಾವೇರಿ, ಹರಿಯುವ ಮಾರ್ಗದ ಕುಶಾಲ ನಗರ, ಹುಣಸೂರು, ಪಿರಿಯಾಪಟ್ಟಣ, ಕೆ.ಆರ್. ನಗರ, ಮೈಸೂರು, ಮಂಡ್ಯ, ಶ್ರೀರಂಗಪಟ್ಟಣ, ನಂಜನಗೂಡು, ಟಿ. ನರಸೀಪುರ, ಕೊಳ್ಳೇಗಾಲ ಮುಂತಾದ ಪ್ರಮುಖ ನಗರ-ಪಟ್ಟಣಗಳಲ್ಲಿ ಹಲವು ಕಾರ್ಖಾನೆಗಳು ತಲೆ ಎತ್ತಿವೆ. ಅವುಗಳ ತ್ಯಾಜ್ಯವನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸದೆ ನೇರವಾಗಿ ನದಿಗೆ ಹರಿಯಲು ಬಿಡುತ್ತಿರುವುದರಿಂದ ನದಿಯ ನೀರು ಕಲುಷಿತಗೊಂಡು ಮಲಿನಗೊಳ್ಳುತ್ತಿದೆ. ಕೈಗಾರಿಕಾ ಪ್ರದೇಶದಿಂದ ಶುದ್ಧೀಕರಿಸದ ತ್ಯಾಜ್ಯ ನೀರು ನದಿ ಸೇರುತ್ತಿದ್ದು, ರಾಸಾಯನಿಕ ಮಿಶ್ರಿತ ನೀರಿನಿಂದ ನೊರೆ ಸೃಷ್ಟಿಯಾಗಿ, ಜಲಚರಗಳಿಗೆ ಮಾರಣಾಂತಿಕವಾಗುತ್ತಿದೆ’ ಎಂದೂ ದಿನೇಶ್ ಗೂಳಿಗೌಡ ಅವರು ಮುಖ್ಯಮಂತ್ರಿ ಗಳಿಗೆ ಬರೆದಿದ್ದ ಮನವಿ ಪತ್ರದಲ್ಲಿ ಉಲ್ಲೇಖಿಸಿದ್ದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

LITTLE LILLYS Education Society Requires Graduate/ Post Graduate Teachers High School: Physics & Chemistry Head Mistress and Office Staff for Accounts Section Salary: 3.0 Lakhs to 4.0 Lakhs Contact: 9731558585/ 9535498177

SOUNDARYA GROUP OF INSTITUTIONS
Soundarya Nagar, Sidedahalli, Hesarghatta Road, Nagasandra Post, Bengaluru - 560073.

SOUNDARYA COLLEGE OF LAW
INVITES APPLICATIONS FOR HIRING PRINCIPAL
A renowned Institution committed to Academic Excellence, fostering innovation, and developing future leaders. we are seeking an experienced and visionary Principal to lead our College to new heights.
Qualifications : LLM with Ph.D
Experience : 7 - 10 years Teaching Experience, Administrative Experience preferred
Salary : As per UGC Norms

SOUNDARYA INSTITUTE OF MANAGEMENT AND SCIENCE
INVITES APPLICATIONS FOR MBA & MCA DEPARTMENT
MBA : Department of Management - Assistant & Associate Professors
Qualification : MBA with Ph.D
Experience : Minimum 5 years of teaching experience with strong research orientation and track record publications.
Salary : As per AICTE Norms
MCA : Department of Computer Applications - Assistant & Associate Professors
Qualification : MCA with Ph.D in Data Science & Computer Science or a closely related field having
Experience : 5 years of teaching experience with strong research orientation and track record publications.
Salary : As per AICTE Norms
CHAIRMAN
careers@soundaryainstitutions.in 9902850725 / 9902068883
www.soundaryainstitutions.in

RAJAJINAGAR PARENTS' EDUCATION SOCIETY
CA-2, 5TH BLOCK, RAJAJINAGAR, BANGALORE – 560010
PHONE : 8431479346 / 080-23353594
WALK-IN-INTERVIEW on 29.06.2024 at the above address for the following posts.
Timings : 11.00 a.m. to 1.00 p.m.

RPES JNANA SARASWATI PUBLIC SCHOOL (CBSE)
Resumes may be sent to rpes.cbse@gmail.com

Subject	Qualification
Social Science	BA, B.Ed / MA, B.Ed
Computer	B.Sc (Computer) / BCA
E V S	B.Sc, B.Ed
Nursery Teacher	Graduation with NTT/MTT

RPES JNANA VIKAS HIGH SCHOOL (State Board)

Subject	Qualification
Social Science	B.A. B.Ed with 5 yrs experience
English	B.A. B.Ed with 5 yrs experience

RPES GOLDEN RAY INTERNATIONAL PUBLIC SCHOOL (CBSE) GORINABELE, NELAMANGALA

Subject	Qualification
Nursery Teacher	Graduation with NTT/MTT

President, RPES, Rajajinagar, Bangalore

Engg/ Production Technical

WORLD DESIGN Protopolis (WDP) Bengaluru Program Office is Hiring ! The WDP is a prestigious global nomination of the city by the World Design Organization. Prototypes will be designed by WDP and implemented by BBMP over the next 5 years to address some of the key issues its citizen s face . WDP is hiring a full - time task force for an initial but extendable period of 1 year . For more details please visit.www.adi.org.in/wdp https://www.srishtimanipalinstitute.in/Jobs-WDP. html bengaluru@associationofdesignersofindia.org

ELECTRONICS- CAD Freshers/ Dropouts Resume to: jayaram.kondur@gmail .com

General

EMPLOYEE NEEDED! Business Development Office for property developer company No investment, age above 30 years experienced required. Earning Rs. 50,000/- per month Retired persons are eligible. Contact:- 9845334751.

Wanted

WANTED ACCOUNTANT, accounts assistant, having experience in GST / IT filing, also Restaurant store keeper posting in computer system Mail CV ksiassociate@gmail.com

ADITYA COLLEGE OF ENGINEERING & TECHNOLOGY
Kamakshipura, Yelahanka, Bengaluru 560089
www.acetedu.net
APPLICATIONS ARE INVITED
• Principal/ Professors/ Associate Professors/ Assistant Professors: In CSE, CSE(AI), CSE(AI&ML), ISE, DS, AI&ML, AI&DS, ECE, E&CS, Physics, Chemistry, Mathematics, Kannada and English.
• Lab Technicians/ Instructors: For the above-mentioned departments. Qualification and Experience as per VTU/AICTE Guidelines.
• PHYSICAL EDUCATION DIRECTOR • OFFICE ASST/CLERICAL • LAB ASSISTANTS • HR EXECUTIVE • LIBRARIAN • TRANSPORT MANAGER • DRIVERS
E mail: admin@acetedu.net
Apply within 7 days of the advertisement

Kristu Jayanti College Bengaluru AUTONOMOUS
APPLICATION INVITED FOR SIGN LANGUAGE INTERPRETER (Full time/ Part time)
Kristu Jayanti College Autonomous K.Narayanapura, Kothanur P.O. Bengaluru-560 077, Karnataka
Tel: 080-68737777
career@kristujayanti.com

St. Benedict's Academy Nursing College
Asirvanam, Anchepalya, Kengeri, Mysore Road, Bangalore-74
Requires Trained NURSING TUTORS M.Sc in Psychiatric and Paediatric
Call: 9886812398
Mail your resume to: jeromeosb@gmail.com

HOLY ANGEL'S High School, Hampinagar, Vijayanagar, Bengaluru-560104. Phone: 23404465/23202042 holyangels.highschoolrpclayout@gmail.com Requires Experienced Trained Teachers to handle English & Social-Studies for High School. Only English medium candidates need to apply.

Smt. Bylamma Educational & Charitable Trust (R)
HARWARD INTERNATIONAL SCHOOL
CBSE Affiliation No. 830335
Dasanapura, Tumkur Road, Bengaluru North 562162
STAFF REQUIREMENTS
PRINCIPAL - 10 years CBSE experience
PGT - Mathematics, Physics, English, Computer Science
TGT & PRT - All Subjects
Physical Education (Female), Primary Coordinator, Event & Marketing Manager, Computer DTP Operator & Office Executive.
Eligible candidates mail your application with updated Bio-data to : email: infoharwardints@gmail.com
Contact: 9880112833 / 9741337257

WANTED ENGLISH MEDIUM PUC passed girls with good English fluency to assist Primary teachers. Contact in Person (10.00 am- 3.00 pm on all working days) Secretary, Deccan Educational Society, No. 95 3rd Cross, Srirampuram Bengaluru- 560021 (Near Sampige Theatre Malleswaram)

WANTED ENGLISH MEDIUM TRAINED GRADUATES to teach English/ EVS for Primary and Maths/ Science for High School, Computer Science Graduates. Lady Graduates interested in teaching can also apply. Age limit not above 40 years, Salary with PF & ESI facilities. Contact in Person (10.00 a.m -3.00 p.m on all working days). Secretary, Deccan Educational Society, No. 95, 3rd cross, Srirampuram, Bengaluru- 560021 (Near Sampige Theatre, Malleswaram). Mob: 6362166176 b/w 10:00 am to 5:00 pm

"BENGALURU NGO (Brahmi.org) run- Anjana Vidya Kendra High-School" requires Graduate Teachers in Science Math English & Hindi, Primary/DEd Good salary with Lunch & accomodation. WhatsApp: 9945013193/ 6361243095, info@brahmi.org

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH DECCAN HERALD ಪ್ರಜಾವಾಣಿ
Classifieds More value, more impact
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
For more details contact:
+91 9731810277 | +91 9886213331
+91 9845114560 | +91 9900428036
+91 9901641752 | 080- 45557163/164
*Conditions apply

Domestic Helpers / Housekeeping

FEMALE HOUSEKEEPING Supervisor cum Staff required for Service Apartments on Infantry Road, undergraduate, aged 35 to 40 Y, handle maids, computer skills, fluent in spoken English, Kannada & Hindi, residing close to Infantry Road. Contact : +91 9845010210, Email: kanchanhomesblr@gmail.com

BRILLIANCE ENGLISH-SCHOOL Jayanagar 3rd-Block Bangalore-11 Required B.Ed Teachers For High School: Science Good Salary Offered Call:9480003004 9845178331

Accounts & Finance

ACCCOUNTS & Billing Exe. 3-4 Yrs Exp. Books Publishing co. Tally & Excel, hr@infobells.com

BUSINESS

Business Offers

Finance

NRI'S INVESTMENT And Finance Available On Low Interest Against Properties,Land &Building,Sites,Flats, Converted &Agriculture Lands Call:7204995189

PERSONAL

Change of Name

I, SUNITHA Devi Arun w/o. ArunKumar V. residing at No.30/5, 1st E Main Ramdas Road, L.N. Colony, Yeswanthapura, Bangalore North, Bangalore-560022 have changed my name from SUNITHA DEVI. P to SUNITHA DEVI ARUN vide affidavit dated 24/06/2024 before notary Renuka. C., Bangalore.

CHANGE OF NAME
I, GAYATRI ELUMALAI alias E GAYATRI, R/a No. 12B, Shree Nilayam, Cauvery Street, Anjaneyaswamy layout, Thindlu, Vidyaranyapura, Bangalore, Karnataka-560097, India, declare that both above names pertain to me only and henceforth I shall be known as GAYATRI ELUMALAI only vide affidavit dated 06-09-2022 before Notary Ambika.S, Bangalore.

EDUCATION CORNER ಕ್ಲಾಸಿಫೈಡ್ಸ್

MEDICON OVERSEAS
GOOD NEWS for MBBS aspirants...
Meet the DELEGATES from INTERNATIONAL SCHOOL OF MEDICINE - KYRGYZSTAN
Date : 28th & 29th June, 2024 | Time : 10:00 am to 5:00 pm | Venue : Medicon Overseas Office
Zhunuseva Vice Dean
Dr. Uzakova Gynaecology
Study MBBS @ ISM-Kyrgyzstan
Low Fee : ₹ 1.7 Lakh per Semister
Indian Curriculum + Indian Hospitals (Vedanta Hospitals)
+ NEXT Coaching (Indian Doctos) + Indian Food + Hostel.
Register Now 88860 99974 / 88845 45258
MEDICON OVERSEAS
Ground Floor, Akshay Complex, Dr. Rajkumar Road
Opp. Navarang Theatre, Rajajinagar, Bengaluru-560 010.

CHANGE OF NAME
I, No. 2788266L EX NK (TS) Navalagatti Gangappa, R/a No. 13, 1st Main, Subbanna Garden, Devaki Nandan Park, Vijayanagar, B'lore-40 have changed my Son's name from Vishwanath to VISHWANATH GANGAPPA NAVALGATTI and my daughter's Name from Vaishnavi to VAISHNAVI NAVALAGATTI vide affidavit dt: 19-06-2024 sworn before Notary B.V. Nagabhushana. B'lore.

CHANGE OF NAME
I, RAVIKUMARA, Residing at # 1/A, Eshwari Nilaya, 3rd Cross, 7th Main, Bhagegowda Layout, Raghuvanahalli, Bengaluru-560 062, have changed my name to RAVI KUMAR vide affidavit dated 25-06-2024 before notary Mohammed Hussain.K, Bengaluru.

CHANGE OF NAME
I, MANGAL W/o No. 2788266L EX NK (TS), Navalagatti Gangappa, R/a No. 13, 1st Main, Subanna Garden, Devaki Nandan Park, Vijayanagar, Bangalore-40 have changed my name to MANGAL NAVALAGATTI vide affidavit dt: 19-06-2024 sworn before Notary B.V. Nagabhushana, B'lore.

I SONIKA Goel D/O, Dinesh Kumar R/o #12 2nd Main 4th Cross Ashrama Road Aecs Layout Sanjaynagar Bangalore-94 have changed my name to Sonika Bharpilania.

Lost

DOCUMENT LOST
I, RAVIKUMAR, R/at. No.1/A, 3rd Cross, 7th Main, Bagegowda Layout, Bengaluru, have lost my Original Sale Deed 6 no's, Khatha No. 187, Sy.no.5, BBMP ward No. 198, Document No's -
1) JPN-1-01456-2020-21,
2) JPN-1-06819-2018-19,
3) 3521/2003-04,
4) 13361/2003-04,
5) 2620 / 2001-02,
6) 11873/2000-01
While in transit. Finders please contact: 9900799777

LOST OF DOCUMENT
I, Murali T S No.4-18, Kaverirajupuram, Chittoor, Andra pradesh- 517421 have Lost my Original Allotment Letter (Hanchike Pathra) for my BDA Property in the Name of Sannamma with BDA Reference No. (BDA/DS-3/150/6B/99-2000) and Site No.150 Located at Gnanabharathi BDA Layout (Valgerehalli- 1st BlocK) Lost above documents while travailing
Finder Please Contact: 9900343701

LOST MY ICSE (2016), ISC (2018), B.E. J.U. (2022) certificates and all marksheets inside a green file. Titir Adhikary. Please contact 8017949819, 9830280830

PUBLIC NOTICE

ಸಾರ್ವಜನಿಕ ಪ್ರಕಟಣೆ
ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರಾದ ಮೆ. ಹಂಟರ್ ಡೌಗ್ಲಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್., ಕಾರ್ಪೊರೇಟ್ ಕಚೇರಿ ವಿಳಾಸ ನಂ. 661 & 662, ಬಿಲ್ಡಿಂಗ್ ನಂ. 6, 6ನೇ ಮಹಡಿ, ಸಾಲಿಟೇರ್ ಕಾರ್ಪೊರೇಟ್ ಪಾರ್ಕ್, ಚಕಾಲಾ, ಅಂಧೇರಿ ಗೋರಖ್‌ಪುರ ಲಿಂಕ್ ರಸ್ತೆ, ಅಂಧೇರಿ (ಈಸ್ಟ್), ಮುಂಬೈ 400093 ಇವರು, “ಟರ್ನಿಲ್ಸ್ ಮರ್ಮೆಟ್ ಮಟೇರಿಯಲ್ಸ್” ಬ್ರಾಂಡ್‌ನ ಕಾನೂನುಬದ್ಧ ಮಾಲೀಕರಾಗಿರುತ್ತಾರೆ.
ನಮ್ಮ ಕಕ್ಷಿದಾರರ ಹೇಳಿಕೆಯ ಪ್ರಕಾರ, 15.09.2020 ರಿಂದ 14.09.2023 ರವರೆಗಿನ ಅವಧಿಗೆ ಮಾತ್ರ ತಮ್ಮ ಬ್ರಾಂಡ್ ಹೆಸರನ್ನು ಬಳಸಿಕೊಳ್ಳಲು ಮೆ. ಸನ್‌ರೈಸ್ ಬ್ರೈಂಡ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಪರವಾನಗಿ ನೀಡಿರುತ್ತಾರೆ.
ಮುಂದುವರಿದಂತೆ, ನಮ್ಮ ಕಕ್ಷಿದಾರರ ಪ್ರಕಾರ, ಮೆ. ಸನ್‌ರೈಸ್ ಬ್ರೈಂಡ್ಸ್ ಪ್ರೈವೇಟ್ ಲಿಮಿಟೆಡ್ ಜೊತೆಗಿನ ಸದರಿ ಒಪ್ಪಂದವು 14.09.2023 ರಂದು ಬರ್ಖಾಸ್ತುಗೊಂಡಿರುತ್ತದೆ ಮತ್ತು ಸದರಿ ದಿನಾಂಕದ ಬಳಿಕ ಮೆ. ಸನ್‌ರೈಸ್ ಬ್ರೈಂಡ್ಸ್ ಪ್ರೈವೇಟ್ ಲಿಮಿಟೆಡ್ ರವರು ನಮ್ಮ ಕಕ್ಷಿದಾರರ ಮೆ. ಹಂಟರ್ ಡೌಗ್ಲಸ್ ಇಂಡಿಯಾ ಪ್ರೈ. ಲಿ., ಎಂಬ ಬ್ರಾಂಡ್ ಹೆಸರನ್ನು ಬಳಸಿಕೊಳ್ಳಲು ಪರವಾನಗಿ ಹೊಂದಿರುವುದಿಲ್ಲ.
ಇದೀಗ, ಸದರಿ ಮೆ. ಸನ್‌ರೈಸ್ ಬ್ರೈಂಡ್ಸ್ ಪ್ರೈವೇಟ್ ಲಿಮಿಟೆಡ್‌ರವರು ಅದೇ ಸ್ಥಳದಲ್ಲಿ/ಆವರಣದಲ್ಲಿ ನಮ್ಮ ಕಕ್ಷಿದಾರರ ಬ್ರಾಂಡ್ ಮತ್ತು ಸ್ವತ್ತು ಆಗಿರುವ ಮೆ. ಹಂಟರ್ ಡೌಗ್ಲಸ್ ಇಂಡಿಯಾ ಪ್ರೈ. ಲಿ., ಎಂಬ ಬ್ರಾಂಡ್ ಹೆಸರನ್ನು ತಪ್ಪಾಗಿ, ಅನಧಿಕೃತವಾಗಿ ಮತ್ತು ಕಾನೂನುಬಾಹಿರವಾಗಿ ಬಳಸಿಕೊಳ್ಳುವುದನ್ನು ಮುಂದುವರಿಸಿದ್ದಾರೆ ಹಾಗೂ ಸಾರ್ವಜನಿಕರನ್ನು ದಿಕ್ಕು ತಪ್ಪಿಸುತ್ತಾದ್ದಾರೆ ಎಂಬುದು ಕೂಡ ನಮ್ಮ ಕಕ್ಷಿದಾರರಿಗೆ ತಿಳಿದುಬಂದಿರುತ್ತದೆ.
ಆದ್ದರಿಂದ, ಮೆ. ಡೌಗ್ಲಸ್ ಇಂಡಿಯಾ ಪ್ರೈ. ಲಿ., ರವರು ಸದರಿ ಮೆ. ಸನ್‌ರೈಸ್ ಬ್ರೈಂಡ್ಸ್ ಪ್ರೈವೇಟ್ ಲಿಮಿಟೆಡ್ ವಿರುದ್ಧ ಮತ್ತು “ಟರ್ನಿಲ್ಸ್ ಮರ್ಮೆಟ್ ಮಟೇರಿಯಲ್ಸ್” ಎಂಬ ಬ್ರಾಂಡ್ ಹೆಸರನ್ನು ಅನಧಿಕೃತವಾಗಿ ಬಳಸಿಕೊಳ್ಳುವುದರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಿದ್ದಾರೆ. ಸದರಿ ಮೆ. ಸನ್‌ರೈಸ್ ಬ್ರೈಂಡ್ಸ್ ಪ್ರೈವೇಟ್ ಲಿಮಿಟೆಡ್ ಜೊತೆಗೆ ನೋಂದಣಿ ಮಾಡಿಕೊಂಡಿರುವ ಅಥವಾ ವ್ಯವಹಾರ ಮಾಡುತ್ತಿರುವ ಯಾರೇ ಆಗಲಿ, ಅಂತಹವರು ಅವರೊಂದಿಗಿನ ವಹಿವಾಟನ್ನು ಮುಂದುವರಿಸುವುದು ಅವರವರ ಸ್ವಂತ ಜವಾಬ್ದಾರಿಯಾಗಿರುತ್ತದೆ, ಇದಕ್ಕೆ ಉಂಟಾಗುವ ಯಾವುದೇ ಖರ್ಚು ವೆಚ್ಚಗಳಿಗೆ, ಆಗು ಹೋಗುಗಳಿಗೆ ಮೆ. ಡೌಗ್ಲಸ್ ಇಂಡಿಯಾ ಪ್ರೈ. ಲಿ., ರವರು ಹೊಣೆಗಾರರಲ್ಲ.
ಮುಂದುವರಿದಂತೆ, “ಟರ್ನಿಲ್ಸ್ ಮರ್ಮೆಟ್ ಮಟೇರಿಯಲ್ಸ್” ಬ್ರಾಂಡ್ ಹೆಸರಿಗೆ ಸಂಬಂಧಿಸಿದಂತೆ ಯಾವುದೇ ಮತ್ತು/ಅಥವಾ ಎಲ್ಲಾ ನೋಂದಣಿಗಳು ಅಥವಾ ವ್ಯವಹಾರಗಳಲ್ಲಿ ಎದುರಾಗಬಹುದಾದ ಯಾವುದೇ ತಗಾದೆಗಳಿಗೆ/ತಾರತಮ್ಯಗಳಿಗೆ ನಮ್ಮ ಕಕ್ಷಿದಾರರ ಕಂಪನಿಯು ಹೊಣೆಯಾಗುವುದಿಲ್ಲ ಮತ್ತು/ಅಥವಾ ಅವುಗಳನ್ನು ಪರಿಗಣಿಸುವುದಿಲ್ಲ.
ಸತೀಶ್ ವಿ ಬೆಜಾಯ್, ವಕೀಲರು
ಮಾಲೀಕರು: ಮೆ. ಬೆಜಾಯ್ ಅಂಡ್ ಕೋ., ಬಾಂಬೆ ಹೈಕೋರ್ಟ್ ವಕೀಲರು ಮತ್ತು ನೋಟರಿ, ಕಚೇರಿ ನಂ. 102, 1ನೇ ಮಹಡಿ, ಬಿಲ್ಡಿಂಗ್ ನಂ. 28, ಹರ್ಷ ವಿಹಾರ, ಸೆಕ್ಟರ್ 1, ಶಾಂತಿನಗರ, ಮೀರಾ ರೋಡ್ ಈಸ್ಟ್, ಮುಂಬೈ–401107
sathishbejai@yahoo.co.in
ಮೊಬೈಲ್: 9820076213
ದಿನಾಂಕ: 09.05.2024

HEALTH SPECIAL

ZOR
ಮಲಮ್ ಮತ್ತು ಲೋಷನ್
ಶೀಘ್ರ ಪರಿಹಾರ
ಕಜ್ಜಿ
ತುರಿಕೆ
ಗಜಕರ್ಣ
ಮೊಡವೆಗಳು
ಶೀತ ಬಿರುಕುಗಳು
Representatives & Managers Required
For more Information Call / Whatsapp 8217312776

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Commerical

Jayanagar

JAYANAGAR 4TH T block 42x120 commercial East, West and South Road, old building 36,000/- Suraj Realtors: 9845232711

Sites

Banashankari

2400_SFT BDA_Site for Sale in Banashankari 6th Stage 4th`B`Block Bangalore Rs.1.92 Crore.`Contact: 9341226696. (Brokers_Excuse)

A-KHATA BBMP Approved Sites for sale in gated layout, Banashankari 6th Stage, Sompura nice road junction, Bangalore, call-9620943450/9008012726

DH Classifieds More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
www.dhclassifieds.com
BOOK NOW
For more details contact: 9901641752 9845114560
*Conditions apply

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ; ಇ–ಮೇಲ್ ಶೋಧ

ಹೊಸ ಸಿಮ್ ಖರೀದಿಸಿ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಲೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ನಟ ದರ್ಶನ್ ಸೇರಿ 17 ಆರೋಪಿಗಳು ಹಾಗೂ ಕೊಲೆಯಾದ ರೇಣುಕಸ್ವಾಮಿ ಹೆಸರಿನಲ್ಲಿ ಹೊಸ ಸಿಮ್ ಕಾರ್ಡ್ ಖರೀದಿಸಿರುವ ತನಿಖಾಧಿಕಾರಿಗಳು, ಪ್ರಕರಣದ ತನಿಖೆ ಚುರುಕುಗೊಳಿಸಿದ್ದಾರೆ.

ಆಯಾ ಕಂಪನಿಗಳ ಮೂಲಕ ಸಿಮ್‌ಗಳನ್ನು ಮರು ಚಾಲನೆ ಮಾಡಿಸಿರುವ ಪೊಲೀಸರು ಮಹತ್ವದ ಸಾಕ್ಷ್ಯ ಕಲೆಹಾಕಲು ಮುಂದಾಗಿದ್ದಾರೆ.

‘ಸಾಕ್ಷ್ಯ ನಾಶಪಡಿಸುವ ಉದ್ದೇಶದಿಂದ ಆರೋಪಿಗಳು, ರೇಣುಕಸ್ವಾಮಿ ಮೊಬೈಲ್ ಅನ್ನು ಸುಮನಹಳ್ಳಿಯ ರಾಜಕಾಲುವೆಗೆ ಎಸೆದಿದ್ದರು. ಅಲ್ಲದೇ ವೆಬ್‌ಆ್ಯಪ್ ಬಳಸಿ ಮೊಬೈಲ್‌ನಲ್ಲಿದ್ದ ದತ್ತಾಂಶವನ್ನು ಆರೋಪಿಗಳು ನಿಷ್ಕ್ರಿಯಗೊಳಿಸಿದ್ದರು. ಹೊಸ ಸಿಮ್‌ಕಾರ್ಡ್ ಖರೀದಿಸಿ ತನಿಖೆ ನಡೆಸುತ್ತಿರುವುದರಿಂದ ಆರೋಪಿಗಳು ಕೃತ್ಯ ಎಸಗಿದ ಬಳಿಕ ಯಾರಿಗೆಲ್ಲ ಕರೆ ಮಾಡಿದ್ದರು ಎಂಬುದು ಪತ್ತೆಯಾಗಲಿದೆ’ ಎಂದು ಪೊಲೀಸರು ಹೇಳಿದರು.

ಹಲವರಿಗೆ ಅಶ್ಲೀಲ ಸಂದೇಶ?: ರೇಣುಕಸ್ವಾಮಿ ಅವರು ಪವಿತ್ರಾಗೌಡ ಅವರಿಗೆ ಮಾತ್ರವಲ್ಲದೇ ಹಲವು ಕಿರುತೆರೆ ನಟಿಯರಿಗೂ ಅಶ್ಲೀಲ ಸಂದೇಶ ಕಳುಹಿಸಿದ್ದರು ಎಂದು ತನಿಖೆಯಿಂದ ಗೊತ್ತಾಗಿದೆ. ಕೆಲವರು ರೇಣುಕಸ್ವಾಮಿ ನಂಬರ್ ಅನ್ನು ಬ್ಲಾಕ್ ಮಾಡಿದ್ದರು ಎಂದು ಪೊಲೀಸರು ಹೇಳಿದರು. ‘ಕೊಲೆಯಾದ ವ್ಯಕ್ತಿಯ ಇ-ಮೇಲ್ ಶೋಧಿಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಅಭಿಮಾನಿಗಳ ಜಮಾವಣೆ: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಬಳಿಗೆ ಬರುತ್ತಿರುವ ದರ್ಶನ್ ಅಭಿಮಾನಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು ಸುತ್ತಮುತ್ತ ಭದ್ರತೆ ಹೆಚ್ಚಿಸಲಾಗಿದೆ.

ನ್ಯಾಯಾಂಗ ಬಂಧನದಲ್ಲಿರುವ ದರ್ಶನ್ ಅವರನ್ನು ನೋಡಲು ಬಂದವರನ್ನು ಕಾರಾಗೃಹಕ್ಕೆ ತೆರಳುವ ಮಾರ್ಗದ ಮಧ್ಯದ ಗೇಟ್‌ನಲ್ಲಿಯೇ ತಡೆದು ವಾಪಸ್ ಕಳುಹಿಸಲಾಗುತ್ತಿದೆ.

‘ದರ್ಶನ್ ಅವರನ್ನು ಮಾತನಾಡಿಸಬೇಕು ಎಂದು ಹಲವರು ಬರುತ್ತಿದ್ದಾರೆ. ಕೆಲವರು ದೂರದ ಊರುಗಳಿಂದಲೂ ಬರುತ್ತಿದ್ದಾರೆ. ಯಾರನ್ನೂ ಗೇಟ್‌ನಿಂದ ಮುಂದಕ್ಕೆ ಬಿಡುತ್ತಿಲ್ಲ. ಆರೋಪಿಗಳ ಹತ್ತಿರದ ಸಂಬಂಧಿಕರು ಹಾಗೂ ವಕೀಲರಿಗೆ ಗೇಟ್‌ನಿಂದ ಮುಂದಕ್ಕೆ ತೆರಳಲು ಅವಕಾಶ ನೀಡಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಜೈಲಿನಲ್ಲಿರುವ ಪವಿತ್ರಾಗೌಡ ಅವರನ್ನು ಮಂಗಳವಾರ ಕುಟುಂಬಸ್ಥರು ಭೇಟಿಯಾದರು. ಪುತ್ರಿ, ಸಹೋದರ ಹಾಗೂ ಪೋಷಕರು ಭೇಟಿಯಾಗಿ ಕೆಲ ಹೊತ್ತು ಚರ್ಚಿಸಿದರು.

ದೋಷಾರೋಪ ಪಟ್ಟಿ ಶೀಘ್ರ: ಕೊಲೆ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಪೊಲೀಸರು ಶೀಘ್ರದಲ್ಲೇ ದೋಷಾರೋಪ ಪಟ್ಟಿ ಸಲ್ಲಿಸಲು ಸಿದ್ಧತೆ ನಡೆಸಿದ್ದಾರೆ ಎಂದು ಗೊತ್ತಾಗಿದೆ.

‘ತನಿಖೆ ಬಹುತೇಕ ಪೂರ್ಣಗೊಂಡಿದ್ದು ಸಾಕ್ಷ್ಯಾಧಾರ ಕಲೆ ಹಾಕಲಾಗಿದೆ. ಎಫ್‌ಎಸ್‌ಎಲ್ ವರದಿ ಕೆಲವು ದಿನಗಳಲ್ಲಿ ಬರಲಿದೆ. ಆ ವರದಿ ಬಂದ ಬಳಿಕ ಆರೋಪ ಪಟ್ಟಿ ಸಲ್ಲಿಸುತ್ತೇವೆ’ ಎಂದು ಮೂಲಗಳು ಹೇಳಿವೆ.

ಬೆದರಿಕೆ: ದರ್ಶನ್ ಅಭಿಮಾನಿ ಬಂಧನ

ಚೇತನ್

ಬೆಂಗಳೂರು: ನಟ ದರ್ಶನ್ ಅಭಿಮಾನಿಗಳಿಗೆ ಸಾಮಾಜಿಕ ಮಾಧ್ಯಮದಲ್ಲಿ ಪ್ರಚೋದನೆ ನೀಡುತ್ತಿದ್ದ ಆರೋಪದ ಮೇಲೆ ಕಮಲಾನಗರದ ನಿವಾಸಿ ಚೇತನ್ ಎಂಬುವರನ್ನು ಬಸವೇಶ್ವರನಗರ ಠಾಣೆ ಪೊಲೀಸರು ಬಂಧಿಸಿ, ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.

‘ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪದ ಅಡಿ ನಟ ದರ್ಶನ್ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ. ಚೇತನ್ ಅವರ ಅಭಿಮಾನಿ. ದರ್ಶನ್ ಬಂಧನವಾದ ಮೇಲೆ ಸಾಮಾಜಿಕ ಮಾಧ್ಯಮಗಳಲ್ಲಿ ನಿರ್ಮಾಪಕ ಉಮಾಪತಿ ಸೇರಿ ಹಲವರಿಗೆ ಆರೋಪಿ ಬೆದರಿಕೆ ಹಾಕಿದ್ದರು. ಆರೋಪಿಯ ವಿರುದ್ಧ ಶಾಂತಿ ಭಂಗ ಹಾಗೂ ಬೆದರಿಕೆ ಪ್ರಕರಣ ದಾಖಲಿಸಲಾಗಿದೆ. ಆರೋಪಿಗೆ ಎಚ್ಚರಿಕೆ ನೀಡಿ ಮುಚ್ಚಳಿಕೆ ಬರೆಸಿಕೊಂಡು ಬಿಡುಗಡೆ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ದರ್ಶನ್ ಅವರ ಬಗ್ಗೆ ಇತ್ತೀಚೆಗೆ ಉಮಾಪತಿ ಅವರು ಮಾಧ್ಯಮಗಳಿಗೆ ಸಂದರ್ಶನ ನೀಡಿದ್ದರು. ಇದರಿಂದ ಆರೋಪಿ ಕೋಪಗೊಂಡಿದ್ದರು’ ಎಂದು ಪೊಲೀಸರು ಹೇಳಿದರು.

‘ಧರ್ಮದ ಅಮಲಿನಲ್ಲಿ ಗೌರಿ ಲಂಕೇಶ್ ಕೊಲೆ’

3 ಆರೋಪಿಗಳ ಜಾಮೀನು ಅರ್ಜಿಗಳಿಗೆ ಪ್ರಾಸಿಕ್ಯೂಷನ್ ಪ್ರಬಲ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಧರ್ಮದ ಅಮಲಿನಲ್ಲಿ ಅಂಧ ಭಕ್ತರಾಗಿ ಬುದ್ಧಿಜೀವಿಗಳನ್ನು ಕೊಲ್ಲುತ್ತಾ ಹೋದರೆ ಇದಕ್ಕೆ ಕೊನೆಯೇ ಇರುವುದಿಲ್ಲ’ ಎಂದು ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣದಲ್ಲಿ ಪ್ರಾಸಿಕ್ಯೂಷನ್ ಮೂವರು ಆರೋಪಿಗಳ ಜಾಮೀನು ಅರ್ಜಿಗಳಿಗೆ ಪ್ರಬಲ ವಿರೋಧ ವ್ಯಕ್ತಪಡಿಸಿದೆ.

ಪ್ರಕರಣದ ಐದನೇ ಆರೋಪಿ ಅಮಿತ್ ದಿಗ್ವೇಕರ್ ಅಲಿಯಾಸ್ ಅಮಿತ್ ಅಲಿಯಾಸ್ ಪ್ರದೀಪ್ ಮಹಾಜನ್, ಏಳನೇ ಆರೋಪಿ ಎಚ್.ಎಲ್.ಸುರೇಶ್ ಅಲಿಯಾಸ್ ಟೀಚರ್ ಮತ್ತು 17ನೇ ಆರೋಪಿ ಕೆ.ಟಿ. ನವೀನ್ ಕುಮಾರ್ ಅಲಿಯಾಸ್ ನವೀನ್ ಸಲ್ಲಿಸಿದ್ದ ಪ್ರತ್ಯೇಕ ಜಾಮೀನು ಅರ್ಜಿಗಳನ್ನು ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ಕಲಬುರಗಿ ಪೀಠದಲ್ಲಿ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರಾಸಿಕ್ಯೂಷನ್ ಪರ ವಾದ ಮಂಡಿಸಿದ ಅಶೋಕ್ ನಾಯಕ್, ‘ಈ ಪ್ರಕರಣದ 11ನೇ ಆರೋಪಿ ಮೋಹನ್ ನಾಯಕ್‌ಗೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿರುವುದನ್ನು ಪರಿಗಣಿಸಿ ನಮಗೂ ಜಾಮೀನು ಮಂಜೂರು ಮಾಡಬೇಕು’ ಎಂಬ ಹಾಲಿ ಅರ್ಜಿದಾರರ ವಾದವನ್ನು ಒಪ್ಪಲು ಆಗದು. ಗೌರಿ ಹತ್ಯೆ ಪ್ರಕರಣದಲ್ಲಿ ಸಾಕಷ್ಟು ಸಾಕ್ಷ್ಯಗಳಿವೆ’ ಎಂದರು.

‘ಇದೊಂದು ಹೀನಕೃತ್ಯ ಮತ್ತು ಇದರ ಹಿಂದೆ ಅಂತರರಾಜ್ಯ ಸಿಂಡಿಕೇಟ್ ಕೃತ್ಯವಿದೆ. ಆರೋಪಿಗಳು ಸಾಕಷ್ಟು ಸಮಯದಿಂದ ಜೈಲಿನಲ್ಲಿದ್ದಾರೆ ಎಂಬ ಅಂಶ ಜಾಮೀನು ನೀಡಿಕೆಗೆ ಮಾನದಂಡ ಆಗಬಾರದು’ ಎಂದು ಪ್ರತಿಪಾದಿಸಿದರು. ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ ಆದೇಶ ಕಾಯ್ದಿರಿಸಿದೆ.

ಅಪಘಾತ ಸ್ಕೂಟರ್ ಸವಾರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೈಗ್ರೌಂಡ್ಸ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಅಪಘಾತದಲ್ಲಿ ಸ್ಕೂಟರ್ ಸವಾರ ಬಿ.ಎಂ. ಮರಿಸ್ವಾಮಿ (53) ಮೃತಪಟ್ಟಿದ್ದಾರೆ.

‘ಸೋಮವಾರ ಬೆಳಿಗ್ಗೆ ಪಲ್ಲವಿ ಅವರು ಬಸವೇಶ್ವರ ಜಂಕ್ಷನ್ ಕಡೆಯಿಂದ ಹಳೇ ಹೈಗ್ರೌಂಡ್ಸ್ ಜಂಕ್ಷನ್‌ಗೆ ಕಡೆಗೆ ವೇಗವಾಗಿ ತಮ್ಮ ಸ್ಕೂಟರ್‌ನಲ್ಲಿ ತೆರಳುತ್ತಿದ್ದರು. ಅದೇ ವೇಳೆ ಪ್ರೆಸ್ಟೀಜ್ ಬಿಲ್ಡಿಂಗ್ ಗೇಟ್ ಮುಂಭಾಗ ಮರಿಸ್ವಾಮಿ ಅವರು ಸ್ಕೂಟರ್‌ನಲ್ಲಿ ಹೋಗುತ್ತಿದ್ದರು. ಆಗ ಎರಡು ಸ್ಕೂಟರ್ ನಡುವೆ ಅಪಘಾತ ಸಂಭವಿಸಿ ಮರಿಸ್ವಾಮಿ ಅವರು, ಕೆಳಕ್ಕೆ ಬಿದ್ದು ಗಂಭೀರವಾಗಿ ಗಾಯಗೊಂಡಿದ್ದರು. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಅವರು ಮೃತಪಟ್ಟರು’ ಎಂದು ಸಂಚಾರ ಪೊಲೀಸರು ಹೇಳಿದರು.

‘ಅಪಘಾತಕ್ಕೆ ಪಲ್ಲವಿ ಅವರೇ ಕಾರಣವೆಂದು ದೂರು ನೀಡಲಾಗಿದ್ದು, ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಸಂಚಾರ ಪೊಲೀಸರು ಹೇಳಿದರು.

ಬಿಬಿಎಂಪಿ ಕಚೇರಿ ಮುಂದೆ ಸ್ಥಳೀಯರ ಪ್ರತಿಭಟನೆ

‘ಕೆ.ಆರ್.ಪುರ ಮಾರುಕಟ್ಟೆ ಉಳಿಸಿ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ ಮಾರುಕಟ್ಟೆ ಮೈದಾನವನ್ನು ಉಳಿಸುವಂತೆ ಆಗ್ರಹಿಸಿ, ಸ್ಥಳೀಯರು ಇಲ್ಲಿನ ಬಿಬಿಎಂಪಿ ಕಚೇರಿ ಮುಂದೆ ಪ್ರತಿಭಟಿಸಿದರು

ಕೆ.ಆರ್.ಪುರ: ಕೆ.ಆರ್.ಪುರ ಮಾರುಕಟ್ಟೆ ಮೈದಾನ ಉಳಿಸುವಂತೆ ಆಗ್ರಹಿಸಿ ನಾಗರಿಕರು ರಾಷ್ಟ್ರೀಯ ಹೆದ್ದಾರಿ ಬಳಿ ಇರುವ ಬಿಬಿಎಂಪಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ನೇತೃತ್ವ ವಹಿಸಿ ಮಾತನಾಡಿದ ದೇವರಾಜ್, ‘ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಕೆ.ಆರ್.ಪುರ ಮಾರುಕಟ್ಟೆ ಅವ್ಯವಸ್ಥೆಗಳ ಆಗರವಾಗಿದ್ದು, ಸಮರ್ಪಕ ಮೂಲ ಸೌಕರ್ಯಗಳಿಲ್ಲದೆ ಸೊರಗಿದೆ. ಹಾಗೆಯೇ, ಮಾರುಕಟ್ಟೆ ಕೆಲವು ವ್ಯಕ್ತಿಗಳ ಹಿಡಿತದಲ್ಲಿದ್ದು ಸಂತೆ ಮೈದಾನದ ಜಾಗದಲ್ಲಿ ಅಕ್ರಮವಾಗಿ ಶೆಡ್‌ಗಳನ್ನು ನಿರ್ಮಿಸಿಕೊಂಡಿದ್ದಾರೆ’ ಎಂದು ದೂರಿದರು.

‘ಕೆಲವರು ತಮ್ಮ ಪ್ರಭಾವ ಬಳಸಿ ಬೇಕಾದವರಿಗೆ ಶೆಡ್‌ಗಳಲ್ಲಿ ವ್ಯಾಪಾರ ನಡೆಸಲು ಅವಕಾಶ ಕಲ್ಪಿಸಿದ್ದಾರೆ. ಉಳಿದಂತೆ ನೂರಾರು ವ್ಯಾಪಾರಿಗಳು ರಸ್ತೆ ಬದಿಯಲ್ಲಿ ವ್ಯಾಪಾರ ಮಾಡುವಂತಾಗಿದೆ. ಹೀಗಾಗಿ ಬೇರೆ ದಾರಿಯಿಲ್ಲದೆ ರಾಷ್ಟ್ರೀಯ ಹೆದ್ದಾರಿ ಬದಿಯ ಪಾದಚಾರಿ ಮಾರ್ಗ ಹಾಗೂ ಬಸ್‌ಸ್ಟ್ಯಾಂಡ್‌ಗಳನ್ನು ಅತಿಕ್ರಮಿಸಿ ವ್ಯಾಪಾರ ಮಾಡುತ್ತಿದ್ದಾರೆ. ಅಧಿಕಾರಿಗಳು ಮಾರುಕಟ್ಟೆಯಲ್ಲಿ ನಡೆಯುವ ಅಕ್ರಮ ತಡೆಯುವಲ್ಲಿ ಸಂಪೂರ್ಣ ವಿಫಲವಾಗಿದ್ದಾರೆ’ ಎಂದು ಆರೋಪಿಸಿದರು.

‘ಕೆಲವು ದಲ್ಲಾಳಿಗಳು ರಸ್ತೆ ಬದಿಯಲ್ಲಿ ವ್ಯಾಪಾರ ಮಾಡುವವರಿಂದ ಸುಂಕ ವಸೂಲಿ ಮಾಡುತ್ತಾ, ಅವರಿಗೆ ತೊಂದರೆ ನೀಡುತ್ತಿದ್ದಾರೆ’ ಎಂದು ಕನ್ನಡ ಕಹಳೆ ಉಪಾಧ್ಯಕ್ಷ ರುದ್ರೇಶ್ ದೂರಿದರು.

‘ಅಕ್ರಮ ಶೆಡ್‌ಗಳನ್ನು ತೆರವುಗೊಳಿಸಬೇಕು. ಸಂತೆ ನಡೆಸುವ ಸ್ಥಳದಲ್ಲಿ ಕನಿಷ್ಠ ಮೂಲ ಸೌಕರ್ಯಗಳನ್ನು ಒದಗಿಸಬೇಕು’ ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

‘ಒಂದು ತಿಂಗಳೊಳಗೆ ಮಂಡಳಿ ನಿಗಮಗಳಿಗೆ ನಿರ್ದೇಶಕರ ಆಯ್ಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಿಗಮ ಮಂಡಳಿಗಳಿಗೆ ನಿರ್ದೇಶಕರು ಮತ್ತು ಸದಸ್ಯರನ್ನು ಆಯ್ಕೆ ಮಾಡುವ ಜವಾಬ್ದಾರಿಯನ್ನು ಮುಖ್ಯಮಂತ್ರಿ ನೀಡಿದ್ದು, ಒಂದು ತಿಂಗಳ ಒಳಗಾಗಿ ಆಯ್ಕೆ ಮಾಡಿ, ಪಟ್ಟಿ ನೀಡುತ್ತೇನೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಎಂಟೂವರೆ ವರ್ಷ ಕೆಪಿಸಿಸಿ ಅಧ್ಯಕ್ಷನಾಗಿ ಚುನಾವಣೆಗಳಿಗೆ ಅಭ್ಯರ್ಥಿಗಳ ಆಯ್ಕೆ ಮತ್ತು ನಿಗಮ–ಮಂಡಳಿಗಳಿಗೆ ಅಧ್ಯಕ್ಷರನ್ನು ನೇಮಿಸಿದ ಅನುಭವವಿದೆ. ಆದ್ದರಿಂದ ಯಾವ ತೊಂದರೆಯೂ ಆಗುವುದಿಲ್ಲ’ ಎಂದರು.

ಬಿಜೆಪಿಯವರಿಗೆ ಕಾಳಜಿ ಇಲ್ಲ: ‘ತುರ್ತುಪರಿಸ್ಥಿತಿಗೆ 49 ವರ್ಷ ತುಂಬಿದ ಹಿನ್ನೆಲೆಯಲ್ಲಿ ಬಿಜೆಪಿಯವರು ನೀಡಿದ ಹೇಳಿಕೆಗಳ ಕುರಿತು ಪ್ರತಿಕ್ರಿಯಿಸಿದ ಅವರು, ‘ದೇಶ ಹಲವು ದೊಡ್ಡ ಸಮಸ್ಯೆಗಳನ್ನು ಎದುರಿಸುತ್ತಿದೆ. ಅದನ್ನು ಬಿಟ್ಟು 49 ವರ್ಷದ ಹಿಂದೆ ತುರ್ತುಪರಿಸ್ಥಿತಿ ಹೇರಿರುವುದನ್ನು ಮಾತನಾಡಲು ಹೊರಟಿರುವ ಬಿಜೆಪಿಯವರಿಗೆ ದೇಶದ ಅಭಿವೃದ್ಧಿ, ಭವಿಷ್ಯ, ಜನರ ಬಗ್ಗೆ ಕಾಳಜಿ ಇಲ್ಲದಿರುವುದನ್ನು ತೋರಿಸುತ್ತದೆ’ ಎಂದು ತಿರುಗೇಟು ನೀಡಿದರು.

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಗಳನ್ನು ತುಮಕೂರು ಜೈಲಿಗೆ ಸ್ಥಳಾಂತರದ ಕುರಿತು ಮಾತನಾಡಿದ ಅವರು, ‘ಎಲ್ಲರೂ ಒಂದೇ ಜೈಲಿನಲ್ಲಿ ಇರುವುದು ಸೂಕ್ತವಲ್ಲ ಎಂಬ ಕಾರಣದಿಂದ ಜೈಲು ಅಧಿಕಾರಿಗಳು ಮತ್ತು ಪೊಲೀಸರು ಈ ತೀರ್ಮಾನ ತೆಗೆದುಕೊಂಡಿದ್ದಾರೆ’ ಎಂದರು.

ಯುವತಿ ಪ್ರಬುದ್ಧಾ ಕೊಲೆ ಪ್ರಕರಣವನ್ನು ಸಿಐಡಿಗೆ ವಹಿಸಿರುವ ಕುರಿತು ಪ್ರತಿಕ್ರಿಯಿಸಿದ ಅವರು, ‘ಕೊಲೆಯಾದ ಯುವತಿಯ ಪಾಲಕರಿಗೆ ಈವರೆಗೆ ನಡೆದ ತನಿಖೆ ಸಮಾಧಾನ ತಂದಿಲ್ಲ. ಸಿಐಡಿಗೆ ವಹಿಸುವಂತೆ ಕೋರಿ ನನಗೂ ಮನವಿ ಮಾಡಿದ್ದರು. ಮುಖ್ಯಮಂತ್ರಿ ಜೊತೆ ಚರ್ಚಿಸಿ, ನಿರ್ಧಾರ ಮಾಡುವುದಾಗಿ ಭರವಸೆ ನೀಡಿದ್ದೆ. ಮುಖ್ಯಮಂತ್ರಿಯವರು ಪ್ರಕರಣವನ್ನು ಸಿಐಡಿಗೆ ವಹಿಸಿದ್ದಾರೆ’ ಎಂದರು.

ಸಂಚಾರ ನಿಯಮ ಉಲ್ಲಂಘನೆ 801 ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ವಿಭಾಗದ ಹಲವು ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಸಂಚಾರ ನಿಯಮ ಉಲ್ಲಂಘಿಸಿದ್ದ ಆರೋಪದ ಅಡಿ 801 ವಾಹನ ಚಾಲಕರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ದಂಡ ವಿಧಿಸಲಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

‘ಏಕಮುಖ ಸಂಚಾರಕ್ಕೆ ವಿರುದ್ಧ ದಿಕ್ಕಿನಲ್ಲಿ ವಾಹನ ಚಾಲನೆ, ಪಾದಚಾರಿ ಮಾರ್ಗದಲ್ಲಿ ವಾಹನ ನಿಲುಗಡೆ, ನಿಗದಿತವಲ್ಲದ ಸ್ಥಳಗಳಲ್ಲಿ ವಾಹನ ನಿಲುಗಡೆ ಮಾಡುತ್ತಿದ್ದ ಚಾಲಕರ ವಿರುದ್ಧ ಮಂಗಳವಾರ ವಿಶೇಷ ಕಾರ್ಯಾಚರಣೆ ನಡೆಸಿ ಪ್ರಕರಣ ದಾಖಲು ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಏಕಮುಖ ಸಂಚಾರಕ್ಕೆ ವಿರುದ್ಧ ದಿಕ್ಕಿನಲ್ಲಿ ವಾಹನ ಚಾಲನೆ ಮಾಡುವವರ ವಿರುದ್ಧ 332 ಪ್ರಕರಣಗಳು, ತಪ್ಪು ನಿಲುಗಡೆ ಮಾಡುವವರ ವಿರುದ್ಧ 128, ಪಾದಚಾರಿ ಮಾರ್ಗದಲ್ಲಿ 16 ಹಾಗೂ ಅಜಾಗರೂಕತೆ ಚಾಲನೆ ಮಾಡುವವರ ವಿರುದ್ಧ 7 ಹಾಗೂ ವ್ಹೀಲೆ ನಡೆಸುವವರ ವಿರುದ್ಧ 21 ಹಾಗೂ ಇತರೆ ಸಂಚಾರ ನಿಯಮ ಉಲ್ಲಂಘನೆ ಮಾಡುತ್ತಿದ್ದ ಚಾಲಕರ ವಿರುದ್ಧ 269 ಪ್ರಕರಣ ದಾಖಲು ಮಾಡಲಾಗಿದೆ’ ಎಂದು ಸಂಚಾರ ಪೊಲೀಸರು ಹೇಳಿದರು.

ತಮಿಳುನಾಡು ವಿರುದ್ಧ ಕರ್ನಾಟಕ ಆಕ್ರೋಶ

35 ಟಿಎಂಸಿ ಅಡಿ ನೀರು ಬಳಕೆ ಅಕ್ರಮ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರವು ಯಾವುದೇ ದೀರ್ಘಕಾಲಿಕ ಬೆಳೆಗಳಿಗೆ ಅನುಮತಿ ನೀಡದಿದ್ದರೂ ಮೆಟ್ಟೂರು, ಭವಾನಿ ಮತ್ತು ಅಮರಾವತಿ ಜಲಾಶಯಗಳಿಂದ ತಮಿಳುನಾಡು ಫೆಬ್ರುವರಿಯಿಂದ ಮೇ ಅಂತ್ಯದವರೆಗೆ 35 ಟಿಎಂಸಿ ಅಡಿ ನೀರು ಬಳಸಿಕೊಂಡಿದೆ ಎಂದು ಕರ್ನಾಟಕ ಆಕ್ರೋಶ ವ್ಯಕ್ತಪಡಿಸಿದೆ.

ನವದೆಹಲಿಯಲ್ಲಿ ಮಂಗಳವಾರ ನಡೆದ ಪ್ರಾಧಿಕಾರದ 31ನೇ ಸಭೆಯಲ್ಲಿ ತಮಿಳುನಾಡು ನಡೆಗೆ ಕರ್ನಾಟಕ ಆಕ್ಷೇಪ ವ್ಯಕ್ತಪಡಿಸಿತು.

ರಾಜ್ಯಗಳ ಜಲಾಶಯಗಳಲ್ಲಿ ಕುಡಿಯುವ ನೀರಿನ ಉದ್ದೇಶಕ್ಕಾಗಿ ಹಾಗೂ ಸಸ್ಯ ಮತ್ತು ಪ್ರಾಣಿ ಸಂಕುಲದ ಪೋಷಣೆಗಾಗಿ ನೀರನ್ನು ಸಂರಕ್ಷಿಸಬೇಕೆಂದು ಉಭಯ ಸರ್ಕಾರಗಳಿಗೆ ಪ್ರಾಧಿಕಾರ ನಿರ್ದೇಶನ ನೀಡಿತು. ಮುಂದಿನ ಸಭೆ ಜುಲೈ 26ರಂದು ನಡೆಯಲಿದೆ.

‘ಕರ್ನಾಟಕದ 4 ಜಲಾಶಯಗಳಿಗೆ ಜೂನ್ ತಿಂಗಳಲ್ಲಿ ಸಂಚಿತ ಒಳಹರಿವು 7.3 ಟಿಎಂಸಿ ಅಡಿ. ಆದರೆ, ಇದೇ ಅವಧಿಯಲ್ಲಿ 30 ವರ್ಷಗಳ ಸರಾಸರಿ ಒಳಹರಿವು 24 ಟಿಎಂಸಿ ಅಡಿ. ಪ್ರಸ್ತುತ ವರ್ಷದ ಒಳಹರಿವನ್ನು 30 ವರ್ಷಗಳ ಒಳಹರಿವಿನ ಸರಾಸರಿಗೆ ಹೋಲಿಸಿದರೆ ಶೇಕಡ 29.8ರಷ್ಟು ಕಡಿಮೆ ಇದೆ’ ಎಂದು ಕರ್ನಾಟಕದ ಅಧಿಕಾರಿಗಳು ಪ್ರಾಧಿಕಾರದ ಗಮನಕ್ಕೆ ತಂದರು.

‘ಕರ್ನಾಟಕದ ನಾಲ್ಕು ಜಲಾಶಯಗಳಲ್ಲಿ ಶೇ 70.1ರಷ್ಟು ಸಂಕಷ್ಟದ ಪರಿಸ್ಥಿತಿ ಇದೆ. ರಾಜ್ಯವು ಕುಡಿಯುವ ನೀರಿಗಾಗಿ ಆದ್ಯತೆ ನೀಡುತ್ತಿದೆ. ಕಾಲುವೆಗಳಿಗೆ ನೀರು ಬಿಡುತ್ತಿಲ್ಲ. ಆದರೆ, ತಮಿಳುನಾಡು ತನ್ನ ಜಲಾಶಯಗಳಿಂದ 3.97 ಟಿಎಂಸಿ ಅಡಿಯಷ್ಟು ನೀರನ್ನು ನದಿಗೆ ಬಿಡುಗಡೆ ಮಾಡುತ್ತಿದೆ’ ಎಂದು ದೂರಿದರು. ಜುಲೈ ಅಂತ್ಯದವರೆಗಿನ ಹೈಡ್ರಾಲಜಿಕಲ್ ಸನ್ನಿವೇಶ ಪರಿಗಣಿಸಿ, ಪರಿಸ್ಥಿತಿ ಗಮನಿಸಿ, ಮುಂದಿನ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಪ್ರಾಧಿಕಾರಕ್ಕೆ ಮನವಿ ಮಾಡಿದರು.

ರಾಜ್ಯದಲ್ಲಿನ ಮುಂಗಾರು ಮತ್ತು ನಾಲ್ಕು ಜಲಾಶಯಗಳ ಒಳಹರಿವನ್ನು ಪರಿಗಣಿಸಿ ನೀರು ಬಿಡುಗಡೆ ಮಾಡುವ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಅವರು ಸ್ಪಷ್ಟಪಡಿಸಿದರು.

ಸುಪ್ರೀಂ ಕೋರ್ಟ್ ಮಾರ್ಪಡಿಸಿದ ಆದೇಶದ ಪ್ರಕಾರ, ಜೂನ್ ತಿಂಗಳ ಬಾಕಿ 5.3 ಟಿಎಂಸಿ ಅಡಿ, ಜುಲೈ ತಿಂಗಳ 31.24 ಟಿಎಂಸಿ ಅಡಿ ನೀರನ್ನು ಬಿಡುಗಡೆ ಮಾಡಲು ಕರ್ನಾಟಕಕ್ಕೆ ನಿರ್ದೇಶನ ನೀಡಬೇಕು ಎಂದು ತಮಿಳುನಾಡು ಒತ್ತಾಯಿಸಿತು.

ಕರ್ನಾಟಕದಲ್ಲಿ ಹೂಡಿಕೆ ಮಾಡಲು ಜಪಾನ್ ಕಂಪನಿಗಳ ಉತ್ಸಾಹ

ಹೂಡಿಕೆಗೆ 150 ಕಂಪನಿಗಳ ಸಮ್ಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಪಾನಿನ 150ಕ್ಕೂ ಹೆಚ್ಚು ಕಂಪನಿಗಳು ರಾಜ್ಯದಲ್ಲಿ ಬಂಡವಾಳ ಹೂಡಿಕೆ ಮಾಡಲು ಸಮ್ಮತಿ ಸೂಚಿಸಿವೆ.

ಬೆಂಗಳೂರಿನಲ್ಲಿ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶಕ್ಕಾಗಿ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ನೇತೃತ್ವದ ಕರ್ನಾಟಕ ಸರ್ಕಾರದ ಉನ್ನತ ಮಟ್ಟದ ನಿಯೋಗ ಜಪಾನ್‌ನಲ್ಲಿ ಮಂಗಳವಾರ ಆಯೋಜಿಸಿದ್ದ ಸಭೆಯಲ್ಲಿ ಕೆಲ ಕಂಪನಿಗಳು ಹೂಡಿಕೆಯ ಒಪ್ಪಂದಕ್ಕೆ ಸಹಿ ಮಾಡಿದರೆ, ಕೆಲ ಕಂಪನಿಗಳು ಹೂಡಿಕೆಯ ಭರವಸೆ ನೀಡಿವೆ.

ಪರಿಸರ ಸಂರಕ್ಷಣೆ ಉಪಕರಣ ತಯಾರಿಸುವ ಬಹುರಾಷ್ಟ್ರೀಯ ಕಂಪನಿ ಡೈಕಿ ಆ್ಯಕ್ಸಿಸ್, ಕೈಗಾರಿಕಾ ಯಂತ್ರೋಪಕರಣ ತಯಾರಿಸುವ ಸುಮಿಟೊಮೊ ಹೆವಿ ಇಂಡಸ್ಟ್ರೀಸ್ (ಎಸ್‌ಎಚ್‌ಐ), ಸೆಮಿಕಂಡಕ್ಟರ್ ಪರಿಕರ ತಯಾರಿಸುವ ರೆನೆಸಾಸ್ ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಹಾಗೂ ಜಪಾನ್ ಸರ್ಕಾರದ ಸಣ್ಣ ಕೈಗಾರಿಕೆಗಳ ಸಂಘಟನೆ (ಎಸ್‌ಎಂಆರ್‌ಜೆ) ಮುಖ್ಯಸ್ಥರ ಜೊತೆ ಸಮಾಲೋಚನೆ ನಡೆಯಿತು. ಜಪಾನಿನ ಸಣ್ಣ ಹಾಗೂ ಮಧ್ಯಮ ಕೈಗಾರಿಕೆಗಳ ಸಹಯೋಗದಲ್ಲಿ ಕರ್ನಾಟಕದ ಎಸ್‌ಎಂಇಗಳ ಬೆಳವಣಿಗೆ ಉತ್ತೇಜಿಸಲು ನೆರವಾಗುವ ಒಪ್ಪಂದಕ್ಕೆ ಸಹಿ ಹಾಕಲಾಯಿತು.

ಜಪಾನಿನ ಟೋಕಿಯೊದಲ್ಲಿ ಮಂಗಳವಾರ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ರೆನೆಸಾಸ್ ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಮುಖ್ಯಸ್ಥ ಶೊಒಜಾಕಿ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್‌.ಸೆಲ್ವಕುಮಾರ್, ವಿಧಾನ ಪರಿಷತ್ ಸದಸ್ಯ ಮಂಜುನಾಥ ಭಂಡಾರಿ ಉಪಸ್ಥಿತರಿದ್ದರು.

₹100 ಕೋಟಿ ವೆಚ್ಚದಲ್ಲಿ ಕರ್ನಾಟಕದಲ್ಲಿ ತ್ಯಾಜ್ಯ ನೀರು ನಿರ್ವಹಣಾ ಉಪಕರಣಗಳ ತಯಾರಿಕಾ ಘಟಕ ಸ್ಥಾಪಿಸುವ ಒಪ್ಪಂದಕ್ಕೆ ಡೈಕಿ ಆ್ಯಕ್ಸಿಸ್ ನಿರ್ದೇಶಕ ರಿಯೊ ರಿಯೊಟಾ ವಾಜಾ ಸಹಿ ಹಾಕಿದರು.

‘ಸುಮಿಟೊಮೊ ಹೆವಿ ಇಂಡಸ್ಟ್ರೀಸ್ 2024ರ ಅಂತ್ಯದ ವೇಳೆಗೆ ಬೆಂಗಳೂರಿನಲ್ಲಿ ತನ್ನ ಪ್ರಧಾನ ಕಚೇರಿ ಆರಂಭಿಸಲಿದೆ. ಜಪಾನ್ ಸರ್ಕಾರದ ಎಸ್‌ಎಂಆರ್‌ಜೆ ಸಂಸ್ಥೆ ವಾಹನ ಬಿಡಿಭಾಗ, ಎಲೆಕ್ಟ್ರಾನಿಕ್ಸ್, ವೈಮಾಂತರಿಕ್ಷ ಹಾಗೂ ರಕ್ಷಣೆ, ಆಹಾರ ಸಂಸ್ಕರಣೆ, ಭಾರಿ ಯಂತ್ರೋಪಕರಣ ತಯಾರಿಕೆ ಕ್ಷೇತ್ರಗಳಲ್ಲಿ ತಮ್ಮ ವಹಿವಾಟು ವಿಸ್ತರಿಸಲು ರಾಜ್ಯ ಸರ್ಕಾರ ಸಿದ್ಧವಿದೆ. ಜಪಾನ್ ಮತ್ತು ಭಾರತದ ಎಸ್‌ಎಂಇ ಮುಖ್ಯಸ್ಥರ ಸಭೆಯನ್ನು ಆಗಸ್ಟ್‌ನಲ್ಲಿ ನಡೆಸಲು ಸಭೆಯಲ್ಲಿ ನಿರ್ಧರಿಸಲಾಗಿದೆ’ ಎಂದು ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ರಾಜ್ಯ ಸರ್ಕಾರದ ಪ್ರತಿಕ್ರಿಯೆ ಕೇಳಿದ ಹೈಕೋರ್ಟ್

ಕೆಎಟಿ ಸದಸ್ಯರ ಭರ್ತಿಗೆ ಮನವಿ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಗೆ (ಕೆಎಟಿ) ಸದಸ್ಯರನ್ನು ನೇಮಿಸಲು ನಿರ್ದೇಶಿಸಬೇಕು’ ಎಂದು ಕೋರಿ ಸಲ್ಲಿಸಲಾಗಿರುವ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ನಗರದ ವಕೀಲರಾದ ನರಸಿಂಹರಾಜು, ಎಸ್.ರಾಜು ಮತ್ತು ಎಸ್.ತ್ಯಾಗರಾಜ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಹಾಜರಾಗಿದ್ದ ಹಿರಿಯ ವಕೀಲ ಅಶೋಕ ಹಾರನಹಳ್ಳಿ ಅವರ ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಗಳಾದ ಕೇಂದ್ರ ಸರ್ಕಾರದ ಸಿಬ್ಬಂದಿ ಮತ್ತು ತರಬೇತಿ ಸಚಿವಾಲಯದ ಕಾರ್ಯದರ್ಶಿ, ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮತ್ತು ಕೆಎಟಿ ರಿಜಿಸ್ಟ್ರಾರ್ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ವಿಚಾರಣೆಯನ್ನು ಜುಲೈ 9ಕ್ಕೆ ಮುಂದೂಡಲಾಗಿದೆ.

ಅರ್ಜಿಯಲ್ಲಿ ಏನಿದೆ?

‘ಸರ್ಕಾರಿ ನೌಕರರ ಸೇವಾ ತಗಾದೆಗಳಿಗೆ ಸಂಬಂಧಿಸಿದ ವ್ಯಾಜ್ಯಗಳನ್ನು ಕೆಎಟಿ ವಿಚಾರಣೆ ನಡೆಸುತ್ತದೆ. ಬೆಂಗಳೂರಿನಲ್ಲಿ ಪ್ರಧಾನ ಪೀಠ, ಕಲಬುರಗಿ ಹಾಗೂ ಬೆಳಗಾವಿಯಲ್ಲಿ ಪ್ರಾದೇಶಿಕ ಪೀಠಗಳಿವೆ. ಬೆಂಗಳೂರು ಪ್ರಧಾನ ಪೀಠದಲ್ಲಿ ಸದಸ್ಯರಿಲ್ಲದೆ ಪ್ರಕರಣದ ವಿಚಾರಣೆಗೆ ತೊಂದರೆ ಉಂಟಾಗಿದೆ. ಆದ್ದರಿಂದ, ಖಾಲಿಯಿರುವ ಸದಸ್ಯರ ಹುದ್ದೆಗಳನ್ನು ಭರ್ತಿ ಮಾಡಬೇಕು. ಹಾಲಿ ಸದಸ್ಯರ ಸೇವಾವಧಿ ಮುಗಿಯುವ ಆರು ತಿಂಗಳಿಗೆ ಮುಂಚಿತವಾಗಿಯೇ ಹೊಸ ಸದಸ್ಯರ ನೇಮಕಾತಿ ಪ್ರಕ್ರಿಯೆಯ ಮೇಲ್ವಿಚಾರಣೆಗೆ ವಿಶೇಷ ಸಮಿತಿ ರಚಿಸಬೇಕು. ಹೊಸ ಸದಸ್ಯರ ನೇಮಕವಾಗುವ ತನಕ ನ್ಯಾಯಾಂಗ ಸದಸ್ಯ ಟಿ.ನಾರಾಯಣ ಅವರನ್ನು ಸೇವೆಯಲ್ಲಿ ಮುಂದುವರಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಸ್ಯಾಪ್‌ಲ್ಯಾಬ್‌ನಿಂದ ₹22 ಕೋಟಿ ಆಸ್ತಿ ತೆರಿಗೆ ಪಾವತಿ

ಬೆಂಗಳೂರು: ಮಹದೇವಪುರ ವಲಯ ವ್ಯಾಪ್ತಿಯ ಸ್ಯಾಪ್ ಲ್ಯಾಬ್ ಇಂಡಿಯಾ ಸಂಸ್ಥೆಯಿಂದ ‘ಒಂದು ಬಾರಿ ಪರಿಹಾರ ಯೋಜನೆ’ಯಲ್ಲಿ (ಒಟಿಎಸ್) ₹22 ಕೋಟಿ ಆಸ್ತಿ ತೆರಿಗೆ ಪಾವತಿಸಿದೆ.

ಗರುಡಾಚಾರ್ ಪಾಳ್ಯ ವಾರ್ಡ್ ವ್ಯಾಪ್ತಿಯ ಕೈಗಾರಿಕಾ ಪ್ರದೇಶದಲ್ಲಿರುವ ಸ್ಯಾಪ್ ಲ್ಯಾಬ್ 2008-09 ರಿಂದ 2023-24ರವರೆಗೆ ತಪ್ಪಾಗಿ ವರ್ಗ ಮತ್ತು ಕಡಿಮೆ ದರದಡಿಯಲ್ಲಿ ಆಸ್ತಿ ತೆರಿಗೆ ಪಾವತಿಸಿದ್ದರು. ಒಟಿಎಸ್ ಯೋಜನೆಯಲ್ಲಿ ಸಂಸ್ಥೆಗೆ ತಿಳಿವಳಿಕೆ ಪತ್ರ ನೀಡಲಾಗಿತ್ತು. ಅದರಂತೆ ತೆರಿಗೆ ಪಾವತಿಸಿದ್ದಾರೆ ಎಂದು ವಲಯ ಜಂಟಿ ಆಯುಕ್ತೆ ದಾಕ್ಷಾಯಿಣಿ ತಿಳಿಸಿದ್ದಾರೆ.

ನಗರದಲ್ಲಿ ಇಂದು

ರಾಷ್ಟ್ರೀಯ ವಿದ್ಯುತ್ ಸುರಕ್ಷತಾ ಸಪ್ತಾಹ–2024ರ ಉದ್ಘಾಟನೆ, ಕಾಲ್ನಡಿಗೆ ಜಾಥಾಗೆ ಚಾಲನೆ: ಕೆ.ಜೆ. ಜಾರ್ಜ್, ಉಪಸ್ಥಿತಿ: ಪಿ.ಸಿ. ಮೋಹನ್, ಗೌರವ್ ಗುಪ್ತ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಇಂಧನ ಇಲಾಖೆ, ಸ್ಥಳ: ವಿಧಾನಸೌಧದ ಮೆಟ್ಟಿಲುಗಳಿಂದ ಕೆ.ಆರ್. ವೃತ್ತದವರೆಗೆ, ಬೆಳಿಗ್ಗೆ 8

ಹಸಿರು ಹಬ್ಬ: ಅತಿಥಿಗಳು: ಸಂತೋಷ್ ಲಾಡ್, ಜಮೀರ್ ಅಹಮದ್ ಖಾನ್, ಪ್ರಸಾದ್ ಅಬ್ಬಯ್ಯ, ತುಷಾರ್ ಗಿರಿನಾಥ್, ಎಚ್.ಎನ್. ಗೋಪಾಲಕೃಷ್ಣ, ಸಂತೋಷ್ ಹಿಪ್ಪರಗಿ, ಸೌಮ್ಯ ರಾಮಲಿಂಗಾರೆಡ್ಡಿ, ಬಾಬು ಮ್ಯಾಥ್ಯೂ, ಆಯೋಜನೆ: ಹಸಿರು ದಳ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 11

ನೃತ್ಯ ಪ್ರದರ್ಶನ: ಪ್ರಸ್ತುತಿ: ನಿತ್ಯಶ್ರೀ ಜಿ.ಎನ್., ಉಪಸ್ಥಿತಿ: ಎಸ್. ಹೇಮಲತಾ, ಮಿನಲ್ ಪ್ರಭು, ಎಸ್.ಎನ್. ಸುಶೀಲಾ, ಕೃಪಾ ಫಡ್ಕೆ, ಆರ್.ವಿ. ರಾಘವೇಂದ್ರ, ಆಯೋಜನೆ: ಶ್ರೀನಿತ್ಯ ಭಾರತಿ ಟ್ರಸ್ಟ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 6

‘ಸಿಜಿಕೆ ಒಂದು ಮಾಂತ್ರಿಕ ಕ್ರಿಯೆ’ ನಾಟಕೋತ್ಸವ: ಅತಿಥಿಗಳು: ನರೇಂದ್ರಬಾಬು ಆರ್., ಕೂಡ್ಲೂರು ವೆಂಕಟಪ್ಪ, ಕೆ. ಜಯಣ್ಣ, ಎನ್.ಎಸ್. ರಾಜು, ‘ಕರ್ಣ ಭಾರ’ ನಾಟಕ ಪ್ರದರ್ಶನ: ರಚನೆ: ಭಾಸ, ಅನುವಾದ: ಎಲ್. ಗುಂಡಪ್ಪ, ಸಂಗೀತ: ಹನುಮಂತ ನೀನಾಸಂ, ನಿರ್ದೇಶನ: ಗಿರೀಶ್ ಮೇಲುಕೋಟೆ, ಆಯೋಜನೆ: ಕರ್ನಾಟಕ ಬೀದಿನಾಟಕ ಅಕಾಡೆಮಿ, ಸ್ಥಳ: ಕುವೆಂಪು ಕಲಾಕ್ಷೇತ್ರ, ಬಿಇಎಲ್ ಕಾರ್ಖಾನೆ ಆವರಣ, ಜಾಲಹಳ್ಳಿ, ಸಂಜೆ 6

ನಾಟಕ ಪ್ರದರ್ಶನ: ಉದ್ಘಾಟನೆ: ಗಿರಿಜಾ ಲೋಕೇಶ್, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಅತಿಥಿಗಳು: ಪಾಪಣ್ಣ, ಚಂದ್ರು, ಕೃಷ್ಣಮೂರ್ತಿ ಕವಾತರ್, ಕಲಾವತಿ ಆರ್., ‘ಗೂಡು’ ನಾಟಕ ಪ್ರದರ್ಶನ: ನಿರ್ದೇಶನ: ತಿಪಟೂರು ಜಿ.ಎಚ್. ತಿಮ್ಮೆಗೌಡ, ಸಂಗೀತ: ಶ್ಯಾಮಸುಂದರ್ ಡಿ.ಸಿ., ಆಯೋಜನೆ: ಸಮೃದ್ಧಿ ಕಲಾ ಕುಟೀರ ಟ್ರಸ್ಟ್, ಸ್ಥಳ: ಕೇಶವ ಕಲ್ಪ, ಮಲ್ಲೇಶ್ವರ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.

ಬಿಬಿಎಂಪಿ ವಿಭಜನೆ: ನೀವೇನನ್ನುತ್ತೀರಿ?

ವಿಭಜನೆ ಬಿಟ್ಟು ಚುನಾವಣೆ ನಡೆಸಿ

ಬಿಬಿಎಂಪಿ ಚುನಾವಣೆ ನಡೆಸಿ ಎಂದರೆ ಬೆಂಗಳೂರನ್ನು ಭಾಗ ಮಾಡುತ್ತೇವೆ ಎಂದು ಹೊರಟಿರುವುದು ಅತ್ಯಂತ ಶೋಚನೀಯ ಸಂಗತಿ. ದಯಮಾಡಿ ಇಂತಹ ವಿಚಾರಗಳನ್ನು ತೆಗೆದುಹಾಕಿ ನಾಡಪ್ರಭು ಕೆಂಪೇಗೌಡರು ಕಟ್ಟಿದ ಬೆಂಗಳೂರು ಒಂದೇ ಎಂದು ತಿಳಿದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಚುನಾವಣೆ ನಡೆಸಲು ಇನ್ನಾದರೂ ಮುಂದಾಗಬೇಕು.

ಎಸ್‌.ಟಿ. ದಾಸಪ್ಪ, ರಾಮಕೃಷ್ಣ ಹೆಗಡೆನಗರ

ಬಿಬಿಎಂಪಿ ವಿಭಜನೆ ಖಂಡನೀಯ

ಬಿಬಿಎಂಪಿಯಲ್ಲಿ ಈಗಿರುವ ವಾರ್ಡ್‌ಗಳಲ್ಲಿ ಸರಿಯಾಗಿ ಕೆಲಸಗಳು ಆಗುತ್ತಿಲ್ಲ. ಕುಂದು ಕೊರತೆಗಳ ಬಗ್ಗೆ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಿಲ್ಲ. ದೂರು ನೀಡಿದರೂ ಕಣ್ಣು ಮುಚ್ಚಿಕೊಂಡು ಹೋಗುತ್ತಾರೆ. ಏನೇ ಕೆಲಸ ಮಾಡಲು ಕೇಳಿದರೂ, ಅಧಿಕಾರಿಗಳು ಸರ್ಕಾರದಲ್ಲಿ ಹಣ ಇಲ್ಲ ಎನ್ನುತ್ತಾರೆ. ಇನ್ನು ವಿಭಜನೆಗೆ ಒಂದಷ್ಟು ಹಣ ವೆಚ್ಚವಾಗಲಿದೆ. ವಿಭಜನೆ ಖಂಡನೀಯ.

ವೈ. ಮುನಿಯಪ್ಪ, ಕೂಡ್ಲು

ಬೆಂಗಳೂರಿಗೆ ವಿಭಜನೆಯ ಅವಶ್ಯ ಇದೆ

ಕಾಂಗ್ರೆಸ್‌ನ ಚಿತ್ತ ಬಿಬಿಎಂಪಿ ವಿಭಜನೆಯತ್ತ. ಇದು ಉತ್ತಮ ನಿರ್ಧಾರವಾಗಬಹುದು. ಸಾಗರದಂತ ಬೆಂಗಳೂರಿಗೆ ವಿಭಜನೆಯ ಅವಶ್ಯ ಇದೆ. ಅಧಿಕಾರಿಗಳಿಗೆ ಕೆಲಸದ ಹೊರೆ ಕಡಿಮೆ ಆಗಲಿದೆ ಮತ್ತು ನಿಗದಿತ ಸಮಯದಲ್ಲಿ ಕೆಲಸಗಳು ಅಂದುಕೊಂಡಂತೆ ಮಾಡಬಹುದು. ಅಧಿಕಾರಿಗಳು ಒಳ್ಳೆಯ ಆಡಳಿತ ಮಾಡಿದರೆ ಒಂದು ವಾರ್ಡ್ ಇನ್ನೊಂದು ವಾರ್ಡ್‌ಗೆ ಮಾದರಿ ಆಗಬಹುದು. ಆದರೆ, ವಿಭಜನೆಯ ಹಿಂದಿರುವ ಬುದ್ಧಿವಂತ ರಾಜಕಾರಣಿಯ ‘ರಾಜಕೀಯ ಯೋಚನೆ’ ಅರ್ಥವಾಗುವುದು ವಿಭಜನೆ ಆದ ನಂತರವೇ.

ಉದಯ್ ಬಿ ಸಿ, ರಾಜಾಜಿನಗರ

ವಿಭಜನೆ ಮಾರಕವಾಗದಿರಲಿ

ಇಂದಿನ ಡಿಜಿಟಲ್ ಯುಗದಲ್ಲಿ ಆಡಳಿತಾತ್ಮಕ ಕಾರ್ಯ ಭಾರವೆಂದಿಗೂ ಬಿಬಿಎಂಪಿಗೆ ಹೊರೆಯಾಗಲಾರದು. ದಕ್ಷ, ಪ್ರಾಮಾಣಿಕ ಅಧಿಕಾರಿಗಳ ಉಸ್ತುವಾರಿಯಲ್ಲಿ ಸಕಾಲಕ್ಕೆ ಚುನಾವಣಾ ಪ್ರಕ್ರಿಯೆಗಳು ನಡೆಯಬೇಕು. ತನ್ನ ವ್ಯಾಪ್ತಿಯ ನೇಮಕಾತಿಗಳಿಗೆ ಚಾಲನೆ ನೀಡಿ ತನ್ನದೇ ಆದ ಅಸ್ತಿತ್ವ, ಅಸ್ಮಿತೆ ಹೊಂದಿರುವ ಬೆಂಗಳೂರು ಜನತೆಗೆ ಮೂಲಸೌಕರ್ಯ ನೀಡಬೇಕು. ತ್ಯಾಜ್ಯ ವಿಲೇವಾರಿಯಂತಹ ಕೆಲವು ಸೇವೆಗಳಲ್ಲಿ ವ್ಯತ್ಯಯ ತೋರಿದೆಯೇ ಹೊರತು ಸಂಪೂರ್ಣ ಸೇವಾ ರಹಿತವಾಗಿಲ್ಲ. ಸುಂದರ, ಸಮಗ್ರ ಬೆಂಗಳೂರು ಕಲ್ಪನೆಗೆ ವಿಭಜನೆ ಮಾರಕವಾಗದಿರಲಿ.

ಬಿ. ಎಂ. ಪ್ರಮೀಳ, ಕಲ್ಯಾಣ ನಗರ

ಪಾಲಿಕೆ ಸದಸ್ಯರಿಂದ ಉತ್ತಮ ಆಡಳಿತ

ರಾಜಕೀಯ ದುರುದ್ದೇಶದಿಂದ ಬಿಬಿಎಂಪಿಯನ್ನು ಆಗಾಗ ವಿಭಜಿಸುವ ಕೂಗು ಕೇಳಿಬರುತ್ತಿದೆ. ಬೆಂಗಳೂರನ್ನು ಒಡೆದು ಮೂರು–ನಾಲ್ಕು ಭಾಗ ಮಾಡುವುದರಿಂದ ಬೆಂಗಳೂರು ಅಭಿವೃದ್ಧಿ ಆಗುವುದಿಲ್ಲ. ಯಾವುದೇ ಕಾರಣಕ್ಕೂ ಬೆಂಗಳೂರನ್ನು ತುಂಡುತುಂಡಾಗಿ ವಿಭಜನೆ ಮಾಡುವುದು ಸರಿಯಲ್ಲ. ಮೊದಲು ಬಿಬಿಎಂಪಿಗೆ ಚುನಾವಣೆ ನಡೆಸಿ. ಚುನಾಯಿತ ಪಾಲಿಕೆ ಸದಸ್ಯರ ಉತ್ತಮ ಆಡಳಿತದಿಂದ ಬೆಂಗಳೂರು ಅಭಿವೃದ್ಧಿ ಸಾಧ್ಯ.

ಎಂ.ಚಂದ್ರಶೇಖರ್, ಹನುಮಂತನಗರ

ವಿಭಜನೆಗಿಂತ ಅಭಿವೃದ್ಧಿ ಯೋಜನೆ ಬೇಕು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಬೆಂಗಳೂರಿನ ಜೀವನಾಡಿಯಾಗಿದ್ದು, ಅಭಿವೃದ್ಧಿಯಲ್ಲಿ ಮುಂದೆ ಸಾಗುವುದು ಅಷ್ಟೇ ಮುಖ್ಯವಾಗಿದೆ. ಅದರಲ್ಲೂ ನಗರ ಅಭಿವೃದ್ಧಿಗಾಗಿ ಆಡಳಿತ ನಿಷ್ಪಕ್ಷಪಾತ ನಿಷ್ಠೆ, ಭ್ರಷ್ಟಾಚಾರ ಮುಕ್ತವಾಗಿ ಕಾರ್ಯ-ನಿರ್ವಹಿಸಿದರೆ ಉತ್ತಮವಾದ ಅಭಿವೃದ್ಧಿ ಮಾಡಬಹುದು. ಜನರಿಗೆ ಮತ್ತು ಅದರಲ್ಲೂ ಬಡವರಿಗೆ ಹೆಚ್ಚಿನ ಆದ್ಯತೆಯನ್ನು ಮೀಸಲಿಟ್ಟು ಅಭಿವೃದ್ಧಿಯಲ್ಲಿ ಉತ್ಕೃಷ್ಟತೆಯನ್ನು ಕಾಣುವುದು ಸಾಧ್ಯ. ಬಿಬಿಎಂಪಿಯಲ್ಲಿ ವಿಭಜನೆ ಬದಲು ಅಭಿವೃದ್ಧಿಗಾಗಿ ಯೋಜನೆ ಬೇಕಿದೆ.

ಸಿದ್ದೇಶ್, ಕೋರಮಂಗಲ

ಚುನಾವಣೆ ನಡೆಸದಿರುವುದು ನಾಚಿಕೆಗೇಡು

ಆಡಳಿತಾರೂಢ ಸರ್ಕಾರಗಳು ತಮ್ಮ ಪ್ರಭುತ್ವವೇ ಇರಲಿ ಎನ್ನುವ ಉದ್ದೇಶದಿಂದ ಬಿಬಿಎಂಪಿಗೆ ಚುನಾವಣೆ ನಡೆಸದಿರುವುದು ನಾಚಿಕೆಗೇಡು. 80 ವಾರ್ಡ್‌ಗಳ 5 ವಿಭಾಗಗಳಾಗಿ ವಿಭಜಿಸುವ ಪ್ರಸ್ತಾವನೆ ಇಟ್ಟಿರುವುದೂ ಈಗಿನ ಸರ್ಕಾರಕ್ಕೆ ಸದ್ಯದಲ್ಲಿ ಚುನಾವಣೆ ನಡೆಸುವ ಇಚ್ಛಾಶಕ್ತಿ ಇಲ್ಲವೆಂಬುದನ್ನು ಸ್ಪಷ್ಟಪಡಿಸುತ್ತದೆ. 400 ಕಾರ್ಪೊರೇಟರ್‌ಗಳಾದರೆ ಮಂತ್ರಿಗಳಂತೆ, ಶಾಸಕರಂತೆ ಬಹುಮಟ್ಟಿನ ಬಿಬಿಎಂಪಿ ಸದಸ್ಯರೂ ಜನಸೇವೆಯಲ್ಲಿ ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿ ಆಸಕ್ತಿಯಿಲ್ಲದ ಬಿಳಿಯಾನೆಗಳಾಗುತ್ತಾರೆ.

ಬೈರಮಂಗಲ ರಾಮೇಗೌಡ, ಪುಷ್ಪಗಿರಿನಗರ, ಹೊಸಕೆರೆಹಳ್ಳಿ

ಭ್ರಷ್ಟಾಚಾರವಿಲ್ಲದ ಆಡಳಿತ ಬೇಕು

ಆಡಳಿತಕ್ಕೆ ಅನುಕೂಲವಾಗುವಂತೆ ಬಿಬಿಎಂಪಿಯನ್ನು ಐದು ಪಾಲಿಕೆಯನ್ನಾಗಿ ಮಾಡಿಕೊಳ್ಳುವ ಯೋಜನೆ ಸರಿಯಾಗಿದೆ. ಇದರಿಂದ ಬೆಂಗಳೂರು ನಗರ ಮತ್ತು ಸುತ್ತಲೂ ನಗರಕ್ಕೆ ಹೊಂದಿಕೊಂಡಂತಿರುವ ಗ್ರಾಮ ಪಂಚಾಯತಿ ವ್ಯಾಪ್ತಿಗಳು ಹೆಚ್ಚು ಶಕ್ತಿ ಪಡೆಯುತ್ತವೆ. ಅಲ್ಲಿನ ನಾಗರಿಕರ ಮೂಲಸೌಕರ್ಯಗಳೂ ವೃದ್ಧಿಯಾಗುತ್ತವೆ. ಚಿಕ್ಕ ಚೊಕ್ಕ ಭ್ರಷ್ಟಾಚಾರ ರಹಿತ ಆಡಳಿತ ಮಾಡಬಹುದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಯೇ ಪ್ರಭುತ್ವದ ಭೂಷಣ. ಆದಷ್ಟು ಬೇಗನೆ ಬಿಬಿಎಂಪಿ ಚುನಾವಣೆ ನಡೆಯಲಿ.

ತಾ.ಸಿ.ತಿಮ್ಮಯ್ಯ, ಮಲ್ಲತ್ತಹಳ್ಳಿ

ಅಧಿಕಾರಿಗಳನ್ನು ದಂಡಿಸಬಹುದು

ವಲಸಿಗರಿಂದ ಬೆಂಗಳೂರು ಬೆಳೆದಿರುವುದರಿಂದ ವಿಭಜನೆ ಮಾಡಲೇಬೇಕಾಗುತ್ತದೆ. ಸಾರ್ವಜನಿಕರಿಗೆ ಮತ್ತು ಅಧಿಕಾರಿಗಳಿಗೆ ಈಗಿನ ಪರಿಸ್ಥಿತಿಯಲ್ಲಿ ಸರಿಯಾದ ಸಂಪರ್ಕ ಇಲ್ಲ. ವಿಭಜನೆಯಾದಲ್ಲಿ ಸಂಬಂಧಪಟ್ಟ ವಾರ್ಡ್‌ನ ಜನಪ್ರತಿನಿಧಿ ಮತ್ತು ಅಧಿಕಾರಿಗಳನ್ನು ಸ್ಥಳೀಯ ನಿವಾಸಿಗಳು ನೇರವಾಗಿ ದಂಡಿಸಬಹುದು. ಮೂಲ ಸೌಕರ್ಯಗಳು ಮನೆ ಬಾಗಿಲಿಗೆ ಮುಟ್ಟಬೇಕಾದರೆ ಮೂರು ಅಥವಾ ನಾಲ್ಕು ಮೇಯರ್ ಆಗಲೇಬೇಕಾಗುತ್ತದೆ

ಎಸ್. ಕುಮಾರ್ ಪದ್ಮಶಾಲಿ, ಕಾಟನ್ ಪೇಟೆ

ಬೆಂಗಳೂರಿನಲ್ಲಿ ಕನ್ನಡಿಗರು ಉಳಿಯಲಿ

ಬಿಬಿಎಂಪಿಯನ್ನು ಐದು ಪಾಲಿಕೆಗಳನ್ನಾಗಿ ವಿಭಜಿಸಿ, 400 ವಾರ್ಡ್‌ಗಳನ್ನಾಗಿ ಮಾಡಿದರೆ ಇದು ಪುರಸಭೆ, ಗ್ರಾಮ ಪಂಚಾಯಿತಿಯಂತಾಗುತ್ತದೆ. ಹೆಚ್ಚಿನ ಆದಾಯವಿರುವ ಪಾಲಿಕೆ ಅಭಿವೃದ್ಧಿಯಾದರೆ ಇನ್ನೊಂದು ಆದಾಯದಲ್ಲಿ ಕಡಿಮೆ ಆಗಿ ಕುಸಿಯುತ್ತದೆ. ಆಗ ಮೇಲು, ಕೀಳು ಎಂಬ ತಾರತಮ್ಯ ಉದ್ಭವಿಸುವ ಸಂಭವವೇ ಹೆಚ್ಚು. ದೆಹಲಿಯಲ್ಲಿ ಪಾಲಿಕೆ ವಿಭಜನೆ ಹೀನಾಯವಾಗಿ ವಿಫಲವಾಗಿದ್ದು ಇದಕ್ಕೊಂದು ಜ್ವಲಂತ ನಿದರ್ಶನ. ಇನ್ನು ಐದು ಪಾಲಿಕೆಗಳಾದರೆ ಅಲ್ಲಿ ಭಾಷಾವಾರು ಸಂಘರ್ಷಗಳಾಗುವ ಆತಂಕವೇ ಹೆಚ್ಚು. ಈ ವಿಭಜನೆ ಮಾರಕವಾಗುವ ಬದಲು ಈಗಿರುವ ವ್ಯವಸ್ಥೆಯೇ ಮುಂದುವರಿಯಲಿ. ಬೆಂಗಳೂರಿನಲ್ಲಿ ಕನ್ನಡಿಗರು ಉಳಿಯಲಿ.

ವೈ.ಬಿ.ಎಚ್. ಜಯದೇವ್, ಟಿ. ದಾಸರಹಳ್ಳಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ

'ಮೂರು ಲಕ್ಷ ನೀರಿನ ಮಾದರಿ ಸಂಗ್ರಹ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೆಲವೆಡೆ ಕಲುಷಿತ ನೀರು ಸೇವಿಸಿ ಜನರು ಅಸ್ವಸ್ಥರಾಗಿರುವ ಕಾರಣದಿಂದ ಕಳೆದ ವಾರ ರಾಜ್ಯಾದ್ಯಂತ ಮೂರು ಲಕ್ಷ ನೀರಿನ ಮಾದರಿಗಳನ್ನು ಪರೀಕ್ಷೆಗಾಗಿ ಸಂಗ್ರಹಿಸಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಇಲಾಖೆಯ ಹಿರಿಯ ಅಧಿಕಾರಿಗಳ ಜತೆ ಮಂಗಳವಾರ ಸಭೆ ನಡೆಸಿದ ಸಚಿವರು, ಕುಡಿಯುವ ನೀರು ಕಲುಷಿತಗೊಂಡಿರುವ ಪ್ರಕರಣಗಳ ಬಗ್ಗೆ ಮಾಹಿತಿ ಪಡೆದರು. ಆ ಬಳಿಕ ಪತ್ರಿಕಾ ಹೇಳಿಕೆ ನೀಡಿರುವ ಅವರು, 'ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಕಿರಿಯ ಎಂಜಿನಿಯರ್‌ಗಳು ಜೂನ್ 14ರಿಂದ 21ರವರೆಗೆ 3,000 ಗ್ರಾಮಗಳಲ್ಲಿ

ಪ್ರಿಯಾಂಕ್ ಖರ್ಗೆ

ನೀರಿನ ಮಾದರಿಗಳನ್ನು ಸಂಗ್ರಹಿಸಿ, ಪರೀಕ್ಷೆಗೆ ಕಳುಹಿಸಿದ್ದಾರೆ' ಎಂದು ಮಾಹಿತಿ ನೀಡಿದ್ದಾರೆ.

ಕುಡಿಯುವ ನೀರು ಕಲುಷಿತಗೊಳ್ಳದಂತೆ ನಿಗಾ ವಹಿಸುವಂತೆ ಅಧಿಕಾರಿಗಳಿಗೆ ಎಚ್ಚರಿಕೆ ನೀಡಲಾಗಿದೆ.

ಕೋಲಾರ ಜಿಲ್ಲೆಯ ಮುಳಬಾಗಿಲು ಬಳಿಯ ಮುಷ್ಟೂರಿನಲ್ಲಿ ಹಾಗೂ ಬೆಳಗಾವಿ ಜಿಲ್ಲೆಯ ಗೋಕಾಕ ಬಳಿಯ ಕನಸಗೇರಿ ಗ್ರಾಮಗಳಲ್ಲಿ ಕುಡಿಯುವ ನೀರು ಕಲುಷಿತಗೊಂಡು ಸಮಸ್ಯೆಯಾಗಿತ್ತು. ಈ ಗ್ರಾಮಗಳಲ್ಲಿ ಪರ್ಯಾಯ ಮೂಲಗಳಿಂದ ನೀರು ಪೂರೈಕೆಗೆ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಪಿಡಿಒ ಅಮಾನತು, ಎಇಇ, ಇಒಗೆ ನೋಟಿಸ್

ಮುಳಬಾಗಿಲು (ಕೋಲಾರ): ತಾಲ್ಲೂಕಿನ ಮುಷ್ಟೂರು ಗ್ರಾಮದಲ್ಲಿ ಕಲುಷಿತ ನೀರು ಕುಡಿದು ವ್ಯಕ್ತಿಯೊಬ್ಬರು ಮೃತಪಟ್ಟು, ಆರು ಮಂದಿ ಅಸ್ವಸ್ಥಗೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಊರುಕುಂಟೆ ಮಿಟ್ಟೂರು ಗ್ರಾಮ ಪಂಚಾಯಿತಿ ಪಿಡಿಒ ಪದ್ಮಾ ಅವರನ್ನು ಮಂಗಳವಾರ ಅಮಾನತುಗೊಳಿಸಲಾಗಿದೆ.

ಮುಳಬಾಗಿಲು ಗ್ರಾಮೀಣ ನೀರು ಸರಬರಾಜು ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ರಾಜೇಶ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಸರ್ವೇಶ್ ಅವರಿಗೆ ಶೋಕಾಸ್ ನೋಟಿಸ್ ನೀಡಲಾಗಿದೆ.

ಈ ನಡುವೆ ಗ್ರಾಮದ ಚರಂಡಿಗಳಲ್ಲಿ ಅಳವಡಿಸಿದ್ದ ಕುಡಿಯುವ ನೀರಿನ ಪೈಪ್‌ಲೈನ್ ನಿಷ್ಕ್ರಿಯಗೊಳಿಸಿ, ಬೇರೆ ಕಡೆ ಹೊಸ ಪೈಪ್‌ಲೈನ್ ಅಳವಡಿಸುವ ಕೆಲಸ ನಡೆಯುತ್ತಿದೆ.

ಪಂಚಾಯಿತಿ ಸಿಬ್ಬಂದಿ ಗ್ರಾಮದ ಎಲ್ಲ ಚರಂಡಿ, ಓವರ್ ಹೆಡ್ ಟ್ಯಾಂಕ್ ಸ್ವಚ್ಛಗೊಳಿಸಿದರು. ಬೀದಿ ಹಾಗೂ ಗ್ರಾಮದಲ್ಲಿ ನೀರು ನಿಲ್ಲುವ ಸ್ಥಳಗಳನ್ನು ಸ್ವಚ್ಛ ಮಾಡಿದರು.

ಗ್ರಾಮೀಣಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಮತ್ತು ಗ್ರಾಮೀಣ ನೀರು ಸರಬರಾಜು ಇಲಾಖೆ ಆಯುಕ್ತ ಕೆ.ನಾಗೇಂದ್ರಪ್ರಸಾದ್ ಸಭೆಯಲ್ಲಿದ್ದರು.

ಬೇಡಿಕೆ ಈಡೇರಿಸಲು ಸಚಿವರಿಗೆ ಪಾಲಿಕೆ ನೌಕರರ ಸಂಘದ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ 10 ಮಹಾನಗರ ಪಾಲಿಕೆಗಳ ನೌಕರರ ಬೇಡಿಕೆಗಳನ್ನು ಈಡೇರಿಸುವಂತೆ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರಿಗೆ ಕರ್ನಾಟಕ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘದ ವತಿಯಿಂದ ಮನವಿ ಸಲ್ಲಿಸಿದೆ.

'ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು ತಿದ್ದುಪಡಿ ಮತ್ತು 10 ಮಹಾನಗರ ಪಾಲಿಕೆ ಅಧಿಕಾರಿ/ನೌಕರರಿಗೂ ಸಹ ಕೆ.ಜಿ.ಐ.ಡಿ. ಮತ್ತು ಜಿ.ಪಿ.ಎಫ್ ಸೌಲಭ್ಯವನ್ನು ಜಾರಿ ಮಾಡಬೇಕು. ಎರವಲು ಸೇವೆ ಮೇಲೆ ಬಂದಿರುವ ಅಧಿಕಾರಿ ಮತ್ತು ನೌಕರರನ್ನು ಮಾತೃ ಇಲಾಖೆಗೆ ಹಿಂತಿರುಗಿಸಿ ಖಾಲಿ ಇರುವ ಎಲ್ಲ ವೃಂದದ ಮುಂಬಡ್ತಿಗಳನ್ನು ನೀಡಬೇಕು' ಎಂದು ಕೋರಿದರು.

'ಈ ಬೇಡಿಕೆಗಳ ಈಡೇರಿಕೆಗೆ ಹಲವು ಮನವಿಪತ್ರಗಳನ್ನು ಸಲ್ಲಿಸಲಾಗಿದೆ. ಈವರೆಗೂ ಕ್ರಮ ಕೈಗೊಂಡಿಲ್ಲ. ಹೀಗಾಗಿ, ಸಂಘದ ಪದಾಧಿಕಾರಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆ ನಡೆಸಬೇಕು. ನೌಕರರ ಸಂಘದ ಕುಂದುಕೊರತೆಯನ್ನು ಬಗೆಹರಿಸಬೇಕು ಎಂದು ಸಚಿವರಲ್ಲಿ ಮನವಿ ಮಾಡಿಕೊಳ್ಳಲಾಗಿದೆ' ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ತಿಳಿಸಿದರು.

'ಬೈರತಿ ಸುರೇಶ್ ಅವರು ಸಂಘದ ಬೇಡಿಕೆ ಹಾಗೂ ಮನವಿ ಈಡೇರಿಸಲು ಸ್ಪಂದಿಸಿದ್ದು, ಮುಂದಿನ ವಾರ ರಾಜ್ಯದ ಹತ್ತೂ ಮಹಾನಗರ ಪಾಲಿಕೆಯ ಉನ್ನತ ಅಧಿಕಾರಿಗಳು, ನಗರಾಭಿವೃದ್ಧಿ ಇಲಾಖೆಯ ಮುಖ್ಯಸ್ಥರು ಹಾಗೂ ಪದಾಧಿಕಾರಿಗಳ ಸಭೆ ನಡೆಸಲಾಗುತ್ತದೆ ಎಂಬ ಭರವಸೆ ನೀಡಿದರು' ಎಂದು ಮಾಹಿತಿ ನೀಡಿದರು.

ರಾಜ್ಯದ ಹತ್ತು ಮಹಾನಗರ ಪಾಲಿಕೆಯ ನೌಕರರ ಬೇಡಿಕೆಗಳನ್ನು ಈಡೇರಿಸುವಂತೆ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರಿಗೆ ರಾಜ್ಯ ಮಹಾನಗರ ಪಾಲಿಕೆ ನೌಕರರ ಸಂಘದ ಪದಾಧಿಕಾರಿಗಳು ಮಂಗಳವಾರ ಮನವಿ ಸಲ್ಲಿಸಿದರು

ಪರವಾನಗಿ ನವೀಕರಿಸದೆ ಕಾರ್ಯ ನಿರ್ವಹಿಸಿದ ಆರೋಪ ● ಏಕಸದಸ್ಯ ಪೀಠದ ಆದೇಶ

ಪವರ್ ಟಿ.ವಿ ಪ್ರಸಾರ ಸ್ಥಗಿತಕ್ಕೆ ಕೋರ್ಟ್ ಆದೇಶ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ಪರವಾನಗಿ ನವೀಕರಿಸದ ಆರೋಪ ಎದುರಿಸುತ್ತಿರುವ ಹಿನ್ನೆಲೆಯಲ್ಲಿ ಪವರ್ ಟಿ.ವಿ. ಕನ್ನಡ ಚಾನೆಲ್ ತನ್ನೆಲ್ಲಾ ಕಾರ್ಯಕ್ರಮಗಳ ಪ್ರಸರಣವನ್ನು ತಕ್ಷಣದಿಂದಲೇ ಸ್ಥಗಿತಗೊಳಿಸಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಜೆಡಿಎಸ್‌ನ ವಿಧಾನ ಪರಿಷತ್ ಮಾಜಿ ಸದಸ್ಯ ಎಚ್.ಎಂ.ರಮೇಶ್ ಗೌಡ, ಅವರ ಪತ್ನಿ ಡಾ.ಎ.ರಮ್ಯಾ ರಮೇಶ್ ಹಾಗೂ ಐಪಿಎಸ್ ಅಧಿಕಾರಿ ಬಿ.ಆರ್. ರವಿಕಾಂತೇಗೌಡ ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಸ್. ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಾಜರಾಗಿ ವಾದ ಮಂಡಿಸಿದ ಹೈಕೋರ್ಟ್‌ನ ಹಿರಿಯ ವಕೀಲರಾದ ಪ್ರಭುಲಿಂಗ ಕೆ.ನಾವದಗಿ, ಸಂದೇಶ್ ಜೆ.ಚೌಟ ಹಾಗೂ ಡಿ.ಆರ್.ರವಿಶಂಕರ್, 'ಪ್ರತಿವಾದಿ ರಾಕೇಶ್ ಶೆಟ್ಟಿ, ಅರ್ಜಿದಾರರ ವಿರುದ್ಧ ಮಾನಹಾನಿಕರ ಸುದ್ದಿಗಳನ್ನು ಬಿತ್ತರಿಸುತ್ತಿದ್ದಾರೆ. ವಾಸ್ತವದಲ್ಲಿ ಇವರು ತಮ್ಮ ಚಾನೆಲ್ ಅನ್ನು ಕಾನೂನುಬಾಹಿರವಾಗಿ ನಡೆಸುತ್ತಿದ್ದಾರೆ. 2021ರಿಂದಲೂ ಚಾನೆಲ್‌ನ ಪರವಾನಗಿ ನವೀಕರಿಸಿಲ್ಲ' ಎಂಬ ಅಂಶಗಳನ್ನು ವಿಸ್ತೃತವಾಗಿ ನ್ಯಾಯಪೀಠದ ಗಮನಕ್ಕೆ ತಂದರು.

ಸುದೀರ್ಘ ವಾದ ಆಲಿಸಿದ ನ್ಯಾಯಪೀಠ, 'ಪ್ರತಿವಾದಿ ರಾಕೇಶ್ ಶೆಟ್ಟಿ, ಕೇಬಲ್ ಟೆಲಿವಿಷನ್ ನೆಟ್‌ವರ್ಕ್‌ಗಳ (ನಿಯಂತ್ರಣ) ಕಾಯ್ದೆ–1995ರ ಆದೇಶವನ್ನು ಉಲ್ಲಂಘಿಸಿರುವ ಕಾರಣ ತಕ್ಷಣದಿಂದಲೇ ತಮ್ಮ ಚಾನೆಲ್‌ನಲ್ಲಿ ಸುದ್ದಿಗಳೂ ಸೇರಿದಂತೆ ಯಾವುದೇ ಕಾರ್ಯಕ್ರಮಗಳನ್ನು ಜುಲೈ 8ರವರೆಗೆ ಪ್ರಸಾರ ಮಾಡಬಾರದು' ಎಂದು ಪ್ರಕರಣದ ಪ್ರತಿವಾದಿಯಾದ ಮೆಸರ್ಸ್ ಪವರ್ ಸ್ಮಾರ್ಟ್ ಮೀಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿಯ ಪ್ರತಿನಿಧಿಯಾಗಿರುವ ಹೆಚ್ಚುವರಿ ನಿರ್ದೇಶಕ ರಾಕೇಶ್ ಸಂಜೀವ ಶೆಟ್ಟಿ ಅಲಿಯಾಸ್ ರಾಕೇಶ್ ಶೆಟ್ಟಿಗೆ ನಿರ್ದೇಶಿಸಿ ವಿಚಾರಣೆ ಮುಂದೂಡಿದೆ.

ಚುನಾವಣಾ ಘರ್ಷಣೆ ಪ್ರಕರಣ: ಆರೋಪಿಗೆ ಜಾಮೀನು

ಬೆಂಗಳೂರು: ಲೋಕಸಭಾ ಚುನಾವಣೆಯ ಪ್ರಚಾರದ ಸಮಯದಲ್ಲಿ ಬಿಜೆಪಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ನಡುವೆ ನಡೆದಿದ್ದ ಚಕಮಕಿಗೆ ಸಂಬಂಧಿಸಿದ ಪ್ರಕರಣವೊಂದರ ಆರೋಪಿಗೆ ಹೈಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಈ ಕುರಿತಂತೆ ಪ್ರಕರಣದ ಆರೋಪಿಯಾದ ಉತ್ತರ ಬೆಂಗಳೂರಿನ ಎ.ನಾರಾಯಣಪುರದ ವಿ.ಸುರೇಶ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಜಿ.ಉಮಾ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ಸಿ.ಎಚ್.ಹನುಮಂತರಾಯ, 'ರಾಜಕೀಯ ದ್ವೇಷದಿಂದ ಈ ಪ್ರಕರಣವನ್ನು ದಾಖಲಿಸಲಾಗಿದೆ. ಅರ್ಜಿದಾರರು ಫಿರ್ಯಾದುದಾರರ ಮೇಲೆ ಲಾಂಗ್‌ನಿಂದ ಹಲ್ಲೆ ನಡೆಸಲಾಗಿದೆ ಎಂದು ದೂರಲಾಗಿದೆ. ಆದರೆ, ಆರೋಪಿಯನ್ನು ಬಂಧಿಸಿದ ಪೊಲೀಸರು ಯಾವುದೇ ಲಾಂಗ್ ವಶಪಡಿಸಿಕೊಂಡಿರುವುದಿಲ್ಲ. ದೂರುದಾರರಿಗೆ ಆಗಿರುವ ಗಾಯವು ಸಾಧಾರಣ ಗಾಯ ಎಂಬುದಾಗಿ ವೈದ್ಯರು ಅಭಿಪ್ರಾಯ ನೀಡಿರುತ್ತಾರೆ. ಆದ್ದರಿಂದ, ಅರ್ಜಿದಾರರಿಗೆ ಜಾಮೀನು ಮಂಜೂರು ಮಾಡಬೇಕು' ಎಂದು ಕೋರಿದರು.

ಈ ವಾದಾಂಶವನ್ನು ಮಾನ್ಯ ಮಾಡಿದ ನ್ಯಾಯಪೀಠ, ಅರ್ಜಿದಾರರಿಗೆ ಷರತ್ತು ಬದ್ಧ ಜಾಮೀನು ನೀಡಿ ಆದೇಶಿಸಿತು. ಸುರೇಶ್ ಅವರಿಗೆ ಸೆಷನ್ಸ್ ಕೋರ್ಟ್ ಜಾಮೀನು ತಿರಸ್ಕರಿಸಿತ್ತು.

ಪ್ರಕರಣವೇನು?: ಲೋಕಸಭಾ ಚುನಾವಣಾ ಪ್ರಚಾರದ ಸಮಯದಲ್ಲಿ 2024ರ ಏಪ್ರಿಲ್ 24ರಂದು ಬಿಜೆಪಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ನಡುವೆ ನಡೆದ ಘಟನೆಯೊಂದಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಪಕ್ಷದ ಬೆಂಗಳೂರು ಪೂರ್ವ ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿ ಉಮಾಶಂಕರ್, ಬಿಜೆಪಿಯ ಮಾಜಿ ಕಾರ್ಪೊರೇಟರ್ ಆದ ಸುರೇಶ್ ಹಾಗೂ ಇತರೆ 10 ಜನರ ವಿರುದ್ಧ ದೂರು ದಾಖಲಾಗಿತ್ತು. ಮಹಾದೇವಪುರ ಠಾಣೆ ಪೊಲೀಸರು ಭಾರತೀಯ ದಂಡ ಸಂಹಿತೆ–1860ರ (ಐಪಿಸಿ) ಕಲಂ 307ರ ಅಡಿಯಲ್ಲಿ ಕೊಲೆ ಯತ್ನದ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿದ್ದರು.

ಹಿತಚಿಂತನ ಟ್ರಸ್ಟ್‌ನಿಂದ ವಿನೂತನ ಕ್ರಮ

ಔಷಧ ಕ್ರೋಡೀಕರಣಕ್ಕೆ ಡಬ್ಬಿ!

ಪ್ರಜಾವಾಣಿ ವಾರ್ತೆ

'ಕರುಣೆಯ ಗೋಡೆ'ಗೆ ಹೊಂದಿಕೊಂಡಂತೆ ಜೋಡಿಸಿರುವ 'ಔಷಧ ಕ್ರೋಡೀಕರಣ' ಡಬ್ಬಿ

ನೆಲಮಂಗಲ: 'ಕರುಣೆಯ ಗೋಡೆ'ಯ ಮೂಲಕ ವಿಭಿನ್ನ ಸಮಾಜ ಸೇವೆ ಪ್ರಾರಂಭಿಸಿದ್ದ ಹಿತಚಿಂತನ ಚಾರಿಟಬಲ್ ಟ್ರಸ್ಟ್, ಅದರ ಮುಂದುವರಿದ ಭಾಗವಾಗಿ 'ಔಷಧ ಕ್ರೋಡೀಕರಣ'ದ ಡಬ್ಬಿಯನ್ನು ಪ್ರಾರಂಭಿಸಿದೆ.

ಸಾರ್ವಜನಿಕರು ಬಳಸಿ ಉಳಿದ ಔಷಧಗಳನ್ನು ಈ ಡಬ್ಬಿಯಲ್ಲಿ ಹಾಕಬಹುದು. ಹೀಗೆ ಸಂಗ್ರಹವಾದ ಔಷಧಗಳನ್ನು ಪರಿಷ್ಕರಿಸಿ ವೈದ್ಯರ ಸಲಹೆ ಮೇರೆಗೆ ಅನಾಥಾಶ್ರಮ, ವೃದ್ಧಾಶ್ರಮ, ಸರ್ಕಾರಿ ಆಸ್ಪತ್ರೆ, ಶಾಲೆಗಳಲ್ಲಿ ವಿತರಿಸಲಾಗುತ್ತಿದೆ.

ಪಟ್ಟಣದಬಿನ್ನಮಂಗಲಬಸ್‌ನಿಲ್ದಾಣದಲ್ಲಿರುವ ಟ್ರಸ್ಟ್‌ನ 'ಕರುಣೆ ಗೋಡೆ'ಗೆ ಹೊಂದಿಕೊಂಡಿರುವಂತೆ ಅಂಚೆ ಪೆಟ್ಟಿಗೆ ರೀತಿಯಲ್ಲಿ 'ಔಷಧೀಯ ಕ್ರೋಡೀಕರಣ'ದ ಡಬ್ಬಿಯನ್ನು ಇಡಲಾಗಿದೆ. ಔಷಧಗಳು ದುರ್ಬಳಕೆಯಾಗ ಬಾರದೆಂಬ ಕಾರಣಕ್ಕೆ, ಆ ಡಬ್ಬಿಗೆ ಬೀಗ ಹಾಕಲಾಗಿದೆ.

'ಪ್ರತಿ ದಿನ ನಮ್ಮ ವಿಸಿಎನ್‌ಆರ್ ಆಸ್ಪತ್ರೆಯ ಸಿಬ್ಬಂದಿ ಡಬ್ಬಿಯಿಂದ ಔಷಧಗಳನ್ನು ಸಂಗ್ರಹಿಸುತ್ತಾರೆ. ಸಂಗ್ರಹವಾದ ಔಷಧಗಳನ್ನು ಪರಿಷ್ಕರಿಸಿ, ವೈದ್ಯರ ಸಲಹೆ ಮೇರೆಗೆ ಅಗತ್ಯವಿರುವವರಿಗೆ ವಿತರಿಸಲಾಗುವುದು' ಎಂದು ಟ್ರಸ್ಟ್‌ನ ಅಧ್ಯಕ್ಷ ವಿ. ರಾಮಸ್ವಾಮಿ ತಿಳಿಸಿದರು.

ಔಷಧಗಳ ಹೆಸರು ಹಾಗೂ ಔಷಧದ ಬಳಕೆಯ ಅವಧಿ (Expiry Date) ಕಾಣುವಂತಹ ಔಷಧಗಳನ್ನು 'ಔಷಧ ಕ್ರೋಡೀಕರಣ' ಡಬ್ಬಿಯಲ್ಲಿ ಹಾಕಬಹುದು.

ವಿ.ರಾಮಸ್ವಾಮಿ

'ಔಷಧಗಳಷ್ಟೇ ಅಲ್ಲದೆ ಅಂಗವಿಕಲರು ಬಳಸುವ ಸಾಧನಗಳು, ಬೆನ್ನು, ಕೈ, ಕುತ್ತಿಗೆಗೆ ಹಾಕಿಕೊಳ್ಳುವ ಬೆಲ್ಟ್... ಇಂಥ ಯಾವುದೇ ಉಪಯೋಗ ಯೋಗ್ಯ ಸಾಮಗ್ರಿಗಳನ್ನು ಡಬ್ಬಿಯಲ್ಲಿ ಹಾಕಬಹುದು. ಡಬ್ಬಿಯಲ್ಲಿ ಹಾಕಲು ಸಾಧ್ಯವಿಲ್ಲದ್ದನ್ನು, ಅಲ್ಲೇ ಎದುರಿಗಿರುವ ನಮ್ಮ ಭದ್ರತಾ ಸಿಬ್ಬಂದಿಗೆ ಹಸ್ತಾಂತರಿಸಿದರೆ ಸಾಕು. ನಮ್ಮ ಈ ಪ್ರಯತ್ನದ ಯಶಸ್ವಿಗೆ ಸಹಕರಿಸಬೇಕು' ಎಂದು ಅವರು ಮನವಿ ಮಾಡಿದ್ದಾರೆ.

ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಇದೇ ಜಾಗದಲ್ಲಿ 'ಅಗತ್ಯವಿಲ್ಲದಿದ್ದರೆ ಇಲ್ಲಿ ಇಡಿ, ಅಗತ್ಯವಿದ್ದರೆ ತಗೆದುಕೊಳ್ಳಿ' ಎಂಬ ಧ್ಯೇಯ ವಾಕ್ಯದೊಂದಿಗೆ 'ಕರುಣೆಯ ಗೋಡೆ' ಎಂಬ ಕಪಾಟನ್ನು ಟ್ರಸ್ಟ್ ಸ್ಥಾಪಿಸಿದೆ. ಸಾರ್ವಜನಿಕರು ತಮಗೆ ಅಗತ್ಯವಿಲ್ಲದ ವಸ್ತುಗಳನ್ನು ಇಲ್ಲಿ ತಂದು ಇಡುತ್ತಿದ್ದಾರೆ. ಅಗತ್ಯವಿರುವವರು ಅವುಗಳನ್ನು ಬಳಸಿಕೊಳ್ಳುತ್ತಿದ್ದಾರೆ.

'ಕರುಣೆಯ ಗೋಡೆ'ಗೆ ಸಾರ್ವಜನಿಕರಿಂದ ದೊರೆತ ಉತ್ತಮ ಪ್ರತಿಕ್ರಿಯೆಯಿಂದ ಪ್ರೇರಿತರಾದ ರಾಮಸ್ವಾಮಿ, 'ಔಷಧ ಕ್ರೋಡೀಕರಣ' ಡಬ್ಬಿ ಸ್ಥಾಪನೆಗೆ ಮುಂದಾದರು.

ಹೈದರಾಬಾದ್: ತನಿಖೆಯಿಂದ ಪತ್ತೆ– ಜಾರಿ ನಿರ್ದೇಶನಾಲಯ ಹೇಳಿಕೆ

ದತ್ತಿ ಹಣ ಆಸ್ತಿಗಳ ಸೃಷ್ಟಿಗೆ ಬಳಕೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ನಗರ ಮೂಲದ ಒಎಂ ಗ್ರೂಪ್ ಆಫ್ ಚಾರಿಟೀಸ್ ಇಂಡಿಯಾ ದತ್ತಿ ಕಾರ್ಯಗಳಿಗಾಗಿ ಸಂಗ್ರಹಿಸಿದ ನಿಧಿಯನ್ನು ಆಸ್ತಿಗಳ ಸೃಷ್ಟಿಗಾಗಿ ವಿನಿಯೋಗಿಸಿರುವುದು ತನಿಖೆಯಿಂದ ತಿಳಿದುಬಂದಿದೆ ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಹೇಳಿದೆ.

ಸಂಸ್ಥೆ ವಿರುದ್ಧ ಕೇಳಿ ಬಂದಿದ್ದ ಹಣ ಅಕ್ರಮ ವರ್ಗಾವಣೆ ಆರೋಪಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯ ಅಧಿಕಾರಿಗಳು ಹೈದರಾಬಾದ್ ಮತ್ತು ಸುತ್ತಮುತ್ತ 11 ಸ್ಥಳಗಳಲ್ಲಿ ಇತ್ತೀಚೆಗೆ ಶೋಧ ಕೈಗೊಂಡಿದ್ದರು.

ಸಂಸ್ಥೆ ವಿರುದ್ಧ ತೆಲಂಗಾಣದ ಸಿಐಡಿ ದಾಖಲಿಸಿದ್ದ ಎಫ್‌ಐಆರ್ ಆಧಾರದ ಮೇಲೆ ಇ.ಡಿ ತನಿಖೆ ನಡೆಸುತ್ತಿದೆ.

ಸಂಸ್ಥೆಯಲ್ಲಿ ಮುಖ್ಯ ಹಣಕಾಸು ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದ ಗೊರ್ವಿಪಾಗಾ ಆಲ್ಬರ್ಟ್ ಲಾಯೆಲ್ ಎಂಬುವವರು ಸಂಸ್ಥೆಯ ಮುಖ್ಯಸ್ಥ ಜೋಸೆಫ್ ಡಿಸೋಜಾ ಎಂಬುವವರ ವಿರುದ್ಧ ಅವ್ಯವಹಾರದ ಆರೋಪ ಮಾಡಿದ್ದರು. 2016ರಲ್ಲಿ ಲಾಯೆಲ್ ಅವರು ನೀಡಿದ್ದ ದೂರಿನ ಆಧಾರದಲ್ಲಿ ಸಿಐಡಿ ಕಳೆದ ವರ್ಷ ಆಗಸ್ಟ್‌ನಲ್ಲಿ ಪ್ರಕರಣ ದಾಖಲಿಸಿಕೊಂಡಿತ್ತು.

ಸಂಸ್ಥೆಯು ಗುಡ್ ಶೆಫರ್ಡ್ ಸ್ಕೂಲ್ಸ್ ಹೆಸರಿನಲ್ಲಿ 100ಕ್ಕೂ ಅಧಿಕ ಶಾಲೆಗಳನ್ನು ನಡೆಸುತ್ತಿದೆ. ಈ ಶಾಲೆಗಳಲ್ಲಿ ಕಲಿಯುತ್ತಿರುವ ಪರಿಶಿಷ್ಟ ಮತ್ತು ತುಳಿತಕ್ಕೆ ಒಳಗಾದ ಮಕ್ಕಳಿಗೆ ಉಚಿತ ಶಿಕ್ಷಣ ಮತ್ತು ಊಟ ನೀಡುವ ಹೆಸರಿನಲ್ಲಿ ಸಂಸ್ಥೆಯು ವಿದೇಶಿ ದಾನಿಗಳಿಂದ ₹300 ಕೋಟಿಯಷ್ಟು ಹಣವನ್ನು ಸಂಗ್ರಹಿಸಿತ್ತು. ಆದರೆ, ಈ ಹಣವನ್ನು ಅಕ್ರಮ ಉದ್ದೇಶಗಳಿಗೆ ಮತ್ತು ಆಸ್ತಿಗಳನ್ನು ಸೃಜಿಸಲು ಬಳಸಿಕೊಳ್ಳಲಾಗಿತ್ತು ಎಂಬ ಆರೋಪಕ್ಕೆ ಸಂಬಂಧಿಸಿ ಎಫ್‌ಐಆರ್ ದಾಖಲಿಸಲಾಗಿದೆ.

'ಆಪರೇಷನ್ ಮೊಬಿಲೈಜೇಷನ್ ಅಂಡ್ ದಲಿತ್ ಫ್ರೀಡಂ ನೆಟ್‌ವರ್ಕ್' ಎಂಬ ಸಂಘಟನೆ ಮೂಲಕ ಒಎಮ್ ಗ್ರೂಪ್ ವಿವಿಧ ದೇಶಗಳಲ್ಲಿ ಹಣ ಸಂಗ್ರಹಿಸಿದೆ. ಅಮೆರಿಕ, ಕೆನಡಾ, ಬ್ರಿಟನ್, ಆಸ್ಟ್ರೇಲಿಯಾ, ಅರ್ಜೆಂಟಿನಾ, ಡೆನ್ಮಾರ್ಕ್, ಜರ್ಮನಿ, ಫಿನ್‌ಲೆಂಡ್, ಐರ್ಲೆಂಡ್, ಮಲೇಷ್ಯಾ, ನಾರ್ವೆ, ಬ್ರೆಜಿಲ್, ಜೆಕ್ ಗಣರಾಜ್ಯ, ಫ್ರಾನ್ಸ್, ರೊಮೇನಿಯಾ, ಸಿಂಗಪುರ, ಸ್ವೀಡನ್ ಹಾಗೂ ಸ್ವಿಜರ್ಲೆಂಡ್ ದೇಶಗಳಲ್ಲಿ ಈ ಸಂಘಟನೆಯ ಶಾಖೆಗಳಿಗೆ ಎಂದು ಇ.ಡಿ ಹೇಳಿದೆ.

ಒಎಮ್ ಗ್ರೂಪ್ ಆಫ್ ಚಾರಿಟೀಸ್ ಇಂಡಿಯಾ ಸಂಸ್ಥೆಯನ್ನು 1960ರಲ್ಲಿ ಮಿಶನರೀಸ್ ಆಫ್ ಒಎಮ್ ಇಂಟರ್‌ನ್ಯಾಷನಲ್ ಸ್ಥಾಪಿಸಿತ್ತು. 110 ದೇಶಗಳಲ್ಲಿ ಸಂಸ್ಥೆಯು ಕಾರ್ಯಾಚರಣೆ ಮಾಡುತ್ತಿದೆ. ತೆಲಂಗಾಣದ ಜೀಡಿಮೆಟ್ಲದಲ್ಲಿ ಒಎಮ್ ಇಂಡಿಯಾದ ಕಚೇರಿಗಳು, ತರಬೇತಿ ಕೇಂದ್ರಗಳು ಹಾಗೂ ಇತರ ಸೌಲಭ್ಯಗಳಿವೆ.

ಕೆಲ ವರ್ಷಗಳ ಹಿಂದೆ, ಸಂಸ್ಥೆಯ ಭಾರತದಲ್ಲಿನ ಶಾಖೆಯು ಮಾತೃಸಂಸ್ಥೆಯೊಂದಿಗೆ ಸಂಬಂಧ ಕಡಿದುಕೊಂಡಿತ್ತಲ್ಲದೇ, ಸ್ವತಂತ್ರವಾಗಿ ಕಾರ್ಯ ನಿರ್ವಹಣೆ ಮಾಡುತ್ತಿದೆ.

ಇ.ಡಿ ಉಲ್ಲೇಖಿಸಿರುವ ಅಂಶಗಳು

- ಒ.ಎಮ್ ಗ್ರೂಪ್ ಆಫ್ ಚಾರಿಟೀಸ್ ತಾನು ಸಂಗ್ರಹಿಸಿದ ಹಣವನ್ನು ಅನ್ಯ ಉದ್ದೇಶಗಳಿಗೆ ಬಳಸಿಕೊಂಡಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ
- ತೆಲಂಗಾಣ, ಗೋವಾ, ಕೇರಳ, ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿರುವ ಸಂಸ್ಥೆಯ ಪ್ರಮುಖ ಪದಾಧಿಕಾರಿಗಳ ಸ್ಥಿರಾಸ್ತಿಗಳಿಗೆ ಸಂಬಂಧಿಸಿ ಸಂಶಯಾಸ್ಪದ ಹಣಕಾಸು ವ್ಯವಹಾರ ನಡೆದಿರುವುದು ಕಂಡುಬಂದಿದೆ
- ಸಂಸ್ಥೆಯ ಬಹುತೇಕ ಅಂಗಸಂಸ್ಥೆಗಳ ಎಫ್‌ಸಿಆರ್‌ಎ ನೋಂದಣಿಯನ್ನು ನವೀಕರಿಸಿಲ್ಲ. ಇದನ್ನು ಮುಚ್ಚಿ ಹಾಕುವುದಕ್ಕಾಗಿ 'ಒ.ಎಮ್ ಬುಕ್ಸ್ ಫೌಂಡೇಷನ್' ಹೆಸರಿನಡಿ ನೋಂದಾಯಿತ ಸಂಸ್ಥೆಯಿಂದ ವಿದೇಶಿ ದೇಣಿಗೆ ಸಂಗ್ರಹಿಸಿ, ಅದನ್ನು ಅಂಗಸಂಸ್ಥೆಗಳಿಗೆ ಸಾಲದ ಹೆಸರಿನಲ್ಲಿ ನೀಡಲಾಗಿದೆ
- ಆಪರೇಷನ್ ಮೊಬಿಲೈಜೇಷನ್ ಗ್ರೂಪ್‌ನ ಪದಾಧಿಕಾರಿಗಳನ್ನು ಗೋವಾದಲ್ಲಿ ಸ್ಥಾಪಿಸಿರುವ 'ಶೆಲ್' ಕಂಪನಿಗಳ ಕನ್ಸಲ್ಟಂಟ್‌ಗಳು ಎಂಬುದಾಗಿ ತೋರಿಸಿ, ಅವರಿಗೆ ವೇತನ ನೀಡಲಾಗಿದೆ
- ಶಿಕ್ಷಣ ಹಕ್ಕು ಕಾಯ್ದೆಯಡಿಯೂ ಸಂಸ್ಥೆ ಸರ್ಕಾರದಿಂದ ಹಣ ಪಡೆದಿದೆ. ಆದರೆ, ಈ ಬಗ್ಗೆ ಸರಿಯಾದ ದಾಖಲೆಗಳನ್ನು ನಿರ್ವಹಿಸಿಲ್ಲ.

'ಚುನಾವಣೆ ಗೆಲ್ಲಿಸಿಕೊಂಡು ಬರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಪಮುಖ್ಯಮಂತ್ರಿ ಹುದ್ದೆ ಕೇಳುವವರು ಉಪ ಚುನಾವಣೆಯಲ್ಲಿ ಪಕ್ಷ ಗೆಲ್ಲಿಸಿಕೊಂಡು ಬರಲಿ' ಎಂದು ಮಾಗಡಿ ಕ್ಷೇತ್ರದ ಕಾಂಗ್ರೆಸ್ ಶಾಸಕ ಎಚ್.ಸಿ. ಬಾಲಕೃಷ್ಣ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಮೂರು ಉಪಚುನಾವಣೆಗಳಲ್ಲಿ ಗೆಲ್ಲಲು ತಯಾರಿ ನಡೆದಿದೆ. ಸಚಿವರಿಗೆ ಜವಾಬ್ದಾರಿ ನೀಡಲಾಗಿದೆ. ಉಪಮುಖ್ಯಮಂತ್ರಿ ಹುದ್ದೆ ಕೇಳುತ್ತಿರುವವರಿಗೆ ಜವಾಬ್ದಾರಿ ಕೊಟ್ಟು ನೋಡಬೇಕು' ಎಂದರು.

'ಎಐಟಿಪಿ ವಾಹನಗಳಿಗೆ ಅಡ್ಡಿ ಸಲ್ಲ'

ನವದೆಹಲಿ (ಪಿಟಿಐ): ಅಖಿಲ ಭಾರತ ಪ್ರವಾಸಿ ಪರವಾನಗಿ (ಎಐಟಿಪಿ) ಹೊಂದಿರುವ ವಾಹನಗಳಿಗೆ ರಾಜ್ಯದ ಮೂಲಕ ಹಾದುಹೋಗಲು ಯಾವುದೇ ಅಡ್ಡಿ ಉಂಟುಮಾಡುವಂತಿಲ್ಲ ಎಂದು ತಮಿಳುನಾಡು ಸರ್ಕಾರಕ್ಕೆ, ಸುಪ್ರೀಂ ಕೋರ್ಟ್ ಮಂಗಳವಾರ ಸೂಚನೆ ನೀಡಿದೆ. ಕೆ.ಆರ್. ಸುರೇಶ್ ಕುಮಾರ್ ಮತ್ತು ಇತರರು ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಿದ ವಿಭಾಗೀಯ ಪೀಠವು, ಈ ಸೂಚನೆ ನೀಡಿದೆ.

ಚಿತ್ರಾವಳಿ

ಬೆಂಗಳೂರಿನ ಕಲಾಸಿಪಾಳ್ಯದ ಲಾಲ್‌ಬಾಗ್ ಫೋರ್ಟ್ ರಸ್ತೆಯಲ್ಲಿ ಬಿಬಿಎಂಪಿ ಸಿಬ್ಬಂದಿ ಮಂಗಳವಾರ ರಸ್ತೆಗುಂಡಿ ಮುಚ್ಚಿದರು. – ಪ್ರಜಾವಾಣಿ ಚಿತ್ರ.

ಮಳೆ ಗಾಳಿಯಿಂದಾಗಿ ಯಶವಂತಪುರದ ಸಿ.ವಿ ರಾಮನ್ ರಸ್ತೆಯ ಪಾದಚಾರಿ ಮಾರ್ಗದ ಮೇಲೆ ಬಿದ್ದಿರುವ ಮರಗಳ ತುಂಡುಗಳನ್ನು ತೆರವುಗೊಳಿಸದ ಕಾರಣ, ಪಾದಚಾರಿಗಳಿಗೆ ಓಡಾಡಲು ತೊಂದರೆ ಉಂಟಾಗುತ್ತಿದೆ

ಪ್ರಜಾವಾಣಿ ಚಿತ್ರ/ರಂಜು ಪಿ

'ಇಂದಿರಾ ಅವಧಿಯಲ್ಲಿ ಋಣಾತ್ಮಕ ಬೆಳವಣಿಗೆ'

ಪ್ರಜಾವಾಣಿ ವಾರ್ತೆ

ಕೆ. ಅಣ್ಣಾಮಲೈ

ಬೆಂಗಳೂರು: 'ಇಂದಿರಾ ಗಾಂಧಿ ಅವರು ಪ್ರಧಾನಿ ಆಗಿದ್ದ ಅವಧಿಯಲ್ಲಿ ದೇಶವು ಋಣಾತ್ಮಕ ಬೆಳವಣಿಗೆಯನ್ನು ಕಂಡಿತು. ಅದರ ಪರಿಣಾಮವಾಗಿಯೇ ತುರ್ತು ಪರಿಸ್ಥಿತಿಯೂ ಹೇರಿಕೆಯಾಗಿತ್ತು' ಎಂದು ಬಿಜೆಪಿ ತಮಿಳುನಾಡು ರಾಜ್ಯ ಘಟಕದ ಅಧ್ಯಕ್ಷ ಕೆ. ಅಣ್ಣಾಮಲೈ ಹೇಳಿದರು.

ಸಿಟಿಜನ್ಸ್ ಫಾರ್ ಸೋಶಿಯಲ್ ಜಸ್ಟೀಸ್ ಸಂಘಟನೆ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ 'ತುರ್ತು ಪರಿಸ್ಥಿತಿ ಸಂವಿಧಾನಕ್ಕೆ ಮಾಡಿದ ಅಪಚಾರ' ಕುರಿತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ತುರ್ತು ಪರಿಸ್ಥಿತಿ ಬಗ್ಗೆ ಕಾಂಗ್ರೆಸ್ಸಿಗರು ಮತ್ತು ಎಡಪಂಥೀಯರು ಯಾವಾಗಲೂ ಧನಾತ್ಮಕ ಚಿತ್ರಣವನ್ನೇ ನೀಡುತ್ತಾ ಬಂದಿದ್ದಾರೆ. ತುರ್ತು ಪರಿಸ್ಥಿತಿ ಸೃಷ್ಟಿಸಿದ ಕರಾಳ ಪರಿಣಾಮಗಳ ಕುರಿತು ಇನ್ನಷ್ಟು ಅಧ್ಯಯನ ನಡೆಯಬೇಕಿದೆ' ಎಂದರು.

21 ತಿಂಗಳ ಕಾಲ ದೇಶದಲ್ಲಿ ತುರ್ತು ಪರಿಸ್ಥಿತಿ ಇತ್ತು. ಆದರೆ, ಆಗ ಬಂಧಿತರಾಗಿ ಜೈಲಿನಲ್ಲಿದ್ದವರಿಗೆ ಆ ಪರಿಸ್ಥಿತಿ 21 ವರ್ಷದವರೆಗೂ ಇರಬಹುದೆ? ಅಥವಾ 50 ವರ್ಷಗಳವರೆಗೂ ಮುಂದುವರಿಯಬಹುದೆ ಎಂಬುದೇ ಗೊತ್ತಿರಲಿಲ್ಲ. ತುರ್ತು ಪರಿಸ್ಥಿತಿ ಜಾರಿಯಾದ ದಿನವನ್ನು ಕರಾಳ ದಿನವೆಂದು ಆಚರಿಸಿದರೆ ಸಾಲದು. ಮುಂದೆ ಇಂತಹ ಸ್ಥಿತಿ ಎದುರಾಗದಂತೆ ತಡೆಯುವ ನಿಟ್ಟಿನಲ್ಲಿ ಜನಜಾಗೃತಿ ಮೂಡಿಸುವ ಕೆಲಸ ಆಗಬೇಕು ಎಂದು ಹೇಳಿದರು.

ಪತ್ರಕರ್ತ ರವೀಂದ್ರ ರೇಷ್ಮೆ, ತುರ್ತು ಪರಿಸ್ಥಿತಿ ವಿರೋಧಿ ಹೋರಾಟದಲ್ಲಿ ಭಾಗಿಯಾಗಿದ್ದ ಗಾಯತ್ರಿ ಚ.ಸು. ಹನುಮಂತರಾವ್, ಬಿಜೆಪಿ ಮುಖಂಡ ಫಟಾಫಟ್ ಶ್ರೀನಿವಾಸ್ ಅವರು ಉಪಸ್ಥಿತರಿದ್ದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560020.

ಸಂಖ್ಯೆ: ಬೆಂಅಪ್ರಾ/ನಯೋಸ/CLU-290/23–24/632/2024–25 ದಿನಾಂಕ: 25–06–2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–ಎ ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ ಭೂಉಪಯೋಗ ವಲಯದಿಂದ ವಾಣಿಜ್ಯ ಉಪಯೋಗಕ್ಕೆ** ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	BIAAPA ಮಹಾಯೋಜನೆ 2021 ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
ಶ್ರೀ ಕೆ.ವೈ. ಪಾಪಣ್ಣ ಮತ್ತು ಇತರರು, ಗೋಪಾಲಪುರ ಗ್ರಾಮ, ಬಾಗಲೂರು ಅಂಚೆ, ಜಾಲ ಹೋಬಳಿ, ಯಲಹಂಕ ತಾಲ್ಲೂಕು.	ಯಲಹಂಕ	ಜಾಲ	ಬಾಗಲೂರು	197/6 ಮತ್ತು 197/8	ಒಟ್ಟು 0ಎ – 23.08ಗುಂ	ವ್ಯವಸಾಯ	ವಾಣಿಜ್ಯ

ಷರಾ: ಈ ಜಮೀನಿನಲ್ಲಿ ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕಾಗಿ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಸದರಿ ಜಮೀನಿನಲ್ಲಿ ವಾಣಿಜ್ಯ ಚಟುವಟಿಕೆಗಳು ಬರುತ್ತವೆ, ವಾಣಿಜ್ಯ ಯೋಜನೆಗಳನ್ನು ಅಭಿವೃದ್ಧಿ ಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ಅಂಗಡಿಗಳು ಬಾಡಿಗೆಗೆ ದೊರಕುವುದಲ್ಲದೆ ಉದ್ಯೋಗವಕಾಶಗಳು ಸೃಷ್ಟಿಯಾಗುತ್ತವೆ, ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ, ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿಗೆ ಹೊಂದುತ್ತದೆ, ವಾಣಿಜ್ಯ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆಯಾಗಿ ಅಭಿವೃದ್ಧಿಯಾಗುವುದರಿಂದ ಸರ್ಕಾರದ ಬೊಕ್ಕಸಕ್ಕೆ ತೆರಿಗೆ ರೂಪದಲ್ಲಿ ಸಾಕಷ್ಟು ಆದಾಯ ಬರುತ್ತದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಾಣಿಜ್ಯ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ನೈಋತ್ಯ ರೈಲ್ವೆ G2G

ಟೆಂಡರ್ ಸೂಚನೆ ಸಂ. 13/SBC/24
ದಿನಾಂಕ: 14.06.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	ಹಿರಿಯ ವಿಭಾಗೀಯ ಇಂಜಿನಿಯರ್/ಪಶ್ಚಿಮ/ಕೆಎಸ್‌ಆರ್ ಬೆಂಗಳೂರು ವಿಭಾಗ: ಉಪ ಕಾಮಗಾರಿ–I: ಕೆಎಸ್‌ಆರ್ ಬೆಂಗಳೂರು: ದಿವ್ಯಾಂಗ್ ವ್ಯಕ್ತಿಗಳಿಗಾಗಿ ಕೆಎಸ್‌ಆರ್ ಬೆಂಗಳೂರು ನಿಲ್ದಾಣದ ಎಲ್ಲಾ ಪ್ಲಾಟ್‌ಫಾರ್ಮ್‌ಗಳಿಗೆ ಪರಿಚಲನೆ ಪ್ರದೇಶದಿಂದ ಸ್ಪರ್ಶ ಟೈಲ್ಸ್‌ಗಳನ್ನು ಪ್ರಸ್ತಾಪಿಸಿದಂತೆ ಒದಗಿಸುವುದು ಮತ್ತು ಕೆಎಸ್‌ಆರ್ ಬೆಂಗಳೂರು ನಿಲ್ದಾಣಗಳಲ್ಲಿ ಪಿಎಫ್–2 ಮತ್ತು 3, ಪಿಎಫ್–4 (ಮೈಸೂರು ಎಂಡ್), ಪಿಎಫ್–5 ಮತ್ತು 6 (ಮೈಸೂರು ಅಂತ್ಯ), ಪಿಎಫ್–7 ಮತ್ತು 8 (ಯಶವಂತಪುರ ಎಂಡ್) ಮತ್ತು ಪರಿಚಲನೆ ಪ್ರದೇಶದಲ್ಲಿ ಪ್ಲಾಟ್‌ಫಾರ್ಮ್ ಮೇಲ್ಮೈಗಳಿಗೆ ಸುಧಾರಣೆಗಳು. ಉಪ ಕಾಮಗಾರಿ–II: ಕೆಎಸ್‌ಆರ್ ಬೆಂಗಳೂರು: ಕೆಎಸ್‌ಆರ್ ಬೆಂಗಳೂರು ನಿಲ್ದಾಣದಲ್ಲಿ ದಿವ್ಯಾಂಗಜನ ಶೌಚಾಲಯಗಳು ಸೇರಿದಂತೆ ಪಾವತಿಸಿ ಬಳಸುವ ಶೌಚಾಲಯಗಳ ನವೀಕರಣ ಮತ್ತು ಬುಕಿಂಗ್ ಕಚೇರಿಯ ನವೀಕರಣ (3ನೇ ಪ್ರವೇಶ). ಉಪ ಕಾಮಗಾರಿ–III: ಸಹಾಯಕ ವಿಭಾಗೀಯ ಇಂಜಿನಿಯರ್/ಮಂಡ್ಯ ಉಪವಿಭಾಗ: ಪ್ರಸ್ತಾವಿತ ದಿವ್ಯಾಂಗಜನರ ಸೌಲಭ್ಯಗಳು, ಶೌಚಾಲಯಗಳು, ಕುಡಿಯುವ ನೀರಿನ ಬೂತ್‌ಗಳು, ರೇಲಿಂಗ್, ಜಾರದಂತಹ ಕಾಲುದಾರಿಗಳು, ಇಳಿಜಾರುಗಳು, ಪಾರ್ಕಿಂಗ್, ಪ್ಲಾಟ್‌ಫಾರ್ಮ್‌ನ ಅಂಚುಗಳ ಕೆತ್ತನೆ, ಮೇ ಐ ಹೆಲ್ಪ್ ಯು ಬೂತ್, ಬ್ರೈಲ್ ಚಿಹ್ನೆಗಳು, ಕಡಿಮೆ ಎತ್ತರದ ಟಿಕೆಟ್ ಮತ್ತು ವಿಚಾರಣೆ ಕೌಂಟರ್‌ಗಳು ಇತ್ಯಾದಿ ಮತ್ತು ಪಾವತಿಸಿ ಬಳಸುವ ಶೌಚಾಲಯಗಳು / ಮೂತ್ರಾಲಯಗಳು, ಟ್ರಾಲಿ ಮಾರ್ಗ, ಸಿಂಕ್‌ಗಳು ಮತ್ತು ಬೆಂಚುಗಳಂತಹ ಪ್ರಯಾಣಿಕರ ಸೌಲಭ್ಯಗಳನ್ನು ಒದಗಿಸುವುದು. ನಿರ್ವಹಣೆ ಅವಧಿಯು 6 ತಿಂಗಳುಗಳು.	ರೂ. 4,57,11,083/-
2	ಬೆಂಗಳೂರು–ಮೈಸೂರು ವಿಭಾಗ: ಉಪ ಕಾಮಗಾರಿ–I: ಸಹಾಯಕ ವಿಭಾಗೀಯ ಇಂಜಿನಿಯರ್/ಮಂಡ್ಯ ಉಪವಿಭಾಗದಲ್ಲಿ ಹಿರಿಯ ಸೆಕ್ಷನ್ ಇಂಜಿನಿಯರ್/ಪಿ.ವೇ/ ಮಂಡ್ಯ ವಿಭಾಗದಲ್ಲಿ ಚಿಕ್ಕ ಸೇತುವೆಗಳಿಗೆ (26 ಸಂಖ್ಯೆಗಳು) ಸುಧಾರಣೆಗಳು. (ಸೇತುವೆ ಸಂಖ್ಯೆ 553, 555, 558, 559, 562, 564, 576, 577, 579, 590, 591, 592, 606, 607, 612, 615, 616, 618, 633, 634, 646, 655, 657, 659, 665, 674). ಉಪ ಕಾಮಗಾರಿ–II: ಕೆಎಸ್‌ಆರ್ ಬೆಂಗಳೂರು – ಮೈಸೂರು ವಿಭಾಗ: ಸಹಾಯಕ ವಿಭಾಗೀಯ ಇಂಜಿನಿಯರ್ / ಮಂಡ್ಯ ಉಪ ವಿಭಾಗದಲ್ಲಿ ಕಿಮೀ 65/900–66/000 ನಲ್ಲಿ ಎಲ್‌ಸಿ ಸಂಖ್ಯೆ 54 ರ ಬದಲಾಗಿ ನೀರು ಲಾಗಿಂಗ್ ಆರ್‌ಯುಬಿ ಸಂಖ್ಯೆ 611A ನಲ್ಲಿ ಒಳಚರಂಡಿ ವ್ಯವಸ್ಥೆಗಳನ್ನು ಒದಗಿಸುವುದು (ಸಂಯೋಜಿತ ಕೆಲಸ). ನಿರ್ವಹಣೆ ಅವಧಿಯು 6 ತಿಂಗಳು ಅಥವಾ ಒಂದು ಮಾನ್ಸೂನ್ ಅವಧಿ ಯಾವುದು ನಂತರವಾದುವುದೋ ಅದು.	ರೂ. 3,15,11,441/-
3	ಬೆಂಗಳೂರು – ಮೈಸೂರು ವಿಭಾಗ: ಉಪ ಕಾಮಗಾರಿ–I: ಅಪ್ ಮತ್ತು ಡೌನ್ ಲೈನ್‌ನಲ್ಲಿ 46/400 ರಿಂದ 99/000 ವರೆಗಿನ ಪ್ರತ್ಯೇಕ ಸ್ಥಳದಲ್ಲಿ ಪ್ರಮಾಣಿತ ಅಗಲವನ್ನು ಒದಗಿಸುವ ಮೂಲಕ ಬ್ಯಾಂಕ್ ಅನ್ನು ಬಲಪಡಿಸುವುದು. ಉಪ ಕಾಮಗಾರಿ–II: ಟಿಡಬ್ಲ್ಯೂಎಸ್ ಮತ್ತು ವೆಲ್ಡೆಬಲ್ ಸಿಎಂಎಸ್ ಕ್ರಾಸಿಂಗ್‌ಗಳೊಂದಿಗೆ ಅಸ್ತಿತ್ವದಲ್ಲಿರುವ 12 ಇನ್ 1 ಕರ್ವಡ್ ಸ್ವಿಚ್‌ನ ಟಿಟಿಆರ್ – ಮಂಡ್ಯ ಮತ್ತು ಹನಕೆರೆ ಅಂಗಳದಲ್ಲಿ 8 ಸಂಖ್ಯೆಗಳು. ಉಪ ಕಾಮಗಾರಿ–III: ಕೆಎಸ್‌ಆರ್ ಬೆಂಗಳೂರು–ಮೈಸೂರು ವಿಭಾಗ: ಸಹಾಯಕ ವಿಭಾಗೀಯ ಇಂಜಿನಿಯರ್/ಮಂಡ್ಯ ವಿಭಾಗದಲ್ಲಿ ಒಟ್ಟು 16 ಸಂಖ್ಯೆಗಳ ಪಿಎಸ್‌ಸಿ ಸುಧಾರಿತ ಎಸ್‌ಇಜೆ ಯೊಂದಿಗೆ ಹಳೆಯದಾದ ಎಸ್ ಇಜೆ ಅನ್ನು ಬದಲಿಸುವುದು – ಕಿಮೀ 72/300–100/900 ರಿಂದ 52 ಕೆ.ಜಿ. ನಿರ್ವಹಣೆ ಅವಧಿಯು 6 ತಿಂಗಳು ಅಥವಾ ಒಂದು ಮಾನ್ಸೂನ್ ಅವಧಿ ಯಾವುದು ನಂತರವಾಗುವುದೋ ಅದು . (ಸಂಯೋಜಿತ ಕೆಲಸ).	ರೂ. 1,06,91,375.00
4	ಕೆಎಸ್‌ಆರ್ ಬೆಂಗಳೂರು ಮತ್ತು ಬೆಂಗಳೂರು ಕಂಟೋನ್ಮೆಂಟ್: ಕೆಎಸ್‌ಆರ್ ಬೆಂಗಳೂರು ಮತ್ತು ಬೆಂಗಳೂರು ಕಂಟೋನ್ಮೆಂಟ್ ನಿಲ್ದಾಣಗಳಿಗೆ ಆರು ತಿಂಗಳ ಅವಧಿಗೆ ಸಹಾಯಕ ವಿಭಾಗೀಯ ಇಂಜಿನಿಯರ್ / ಜಿ / ಬೆಂಗಳೂರು ಉಪವಿಭಾಗದಲ್ಲಿರುವ ರೈಲ್ವೆ ನಿಲ್ದಾಣ ಮತ್ತು ಸಿಬ್ಬಂದಿ ವಸತಿಗೃಹಗಳಿಗೆ ಕುಡಿಯುವ ನೀರು ಸರಬರಾಜು.	ರೂ. 65,89,500.00
5	ಕೆಎಸ್‌ಆರ್ ಬೆಂಗಳೂರು – ಮೈಸೂರು ವಿಭಾಗ: ಉಪ ಕಾಮಗಾರಿ–I: ಚನ್ನಪಟ್ಟಣ ಯಾರ್ಡ್‌ನಲ್ಲಿ ಕಿಮಿ 55/200–300 ನಲ್ಲಿ ಸೇತುವೆ ಸಂಖ್ಯೆ 572 ಗೆ ಹೆಚ್ಚುವರಿ ತೆರಪಿನ ಮಾರ್ಗ – ಅಸ್ತಿತ್ವದಲ್ಲಿರುವ 1x2.40x1.2ಮೀ ಆರ್‌ಸಿಸಿ ಬಾಕ್ಸ್, ಸಹಾಯಕ ವಿಭಾಗೀಯ ಎಂಜಿನಿಯರ್ / ಮಂಡ್ಯ ಉಪ ವಿಭಾಗದಲ್ಲಿ ಲಾಂಚಿಂಗ್ ವಿಧಾನದ ಮೂಲಕ ಪ್ರಸ್ತಾಪಿತ – 1x3.0ಮೀ x 2.0ಮೀ (26.11ಮೀ ಬ್ಯಾರೆಲ್) ಆರ್‌ಸಿಸಿ ಬಾಕ್ಸ್. ಉಪ ಕಾಮಗಾರಿ–II: ಕೆಎಸ್‌ಆರ್ ಬೆಂಗಳೂರು – ಮೈಸೂರು ವಿಭಾಗದ ಸೇತುವೆಗಳ ಮಾರ್ಗಗಳ ಮೇಲೆ ಸೈನ್ ಬೋರ್ಡ್‌ಗಳನ್ನು ಹಾಕುವುದು (29 ಸಂಖ್ಯೆಗಳು) ಸೇತುವೆ ಸಂಖ್ಯೆ 448ಡೌನ್, 583ಡೌನ್, 610ಅಪ್, 627ಅಪ್ & ಡೌನ್ = 5 ಸೇತುವೆಗಳು. ನಿರ್ವಹಣೆ ಅವಧಿ 6 ತಿಂಗಳುಗಳು.	ರೂ. 1,63,37,832.00
6	ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್ (ಎಸ್‌ಎಂವಿಟಿ) – ಸರ್ ಎಂ ವಿಶ್ವೇಶ್ವರಯ್ಯ ಟರ್ಮಿನಲ್ ನಿಲ್ದಾಣದಲ್ಲಿ ಫಾಲ್ಸ್ ಸೀಲಿಂಗ್ ಅನ್ನು ಸರಿಪಡಿಸುವುದು ಮತ್ತು ಬಲಪಡಿಸುವುದು. ನಿರ್ವಹಣೆ ಅವಧಿ 12 ತಿಂಗಳುಗಳು.	ರೂ. 1,85,42,445/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 10–07–2024, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ಇಂಜಿನಿಯರ್ / ಕೋ–ಆರ್ಡ್ ಬೆಂಗಳೂರು

PUB/183/AAMO/PRB/SWR/2024-25

South Western Railway-SWR SWRRLY SWRRLY

ನಂ. 47/6/2023–ಆರ್&ಆರ್

ಭಾರತ ಸರ್ಕಾರ

ಇಂಧನ ಸಚಿವಾಲಯ

ಜ & ಕಾ ಕೇಂದ್ರಾಡಳಿತ ಪ್ರದೇಶ ಮತ್ತು ಲಡಾಖ್ ಕೇಂದ್ರಾಡಳಿತ ಪ್ರದೇಶ ಇಲ್ಲಿನ ಜೆಇಆರ್‌ಸಿ–ಸದಸ್ಯ ಹುದ್ದೆಗೆ ನೇಮಕಾತಿ

ವಿದ್ಯುತ್ ಕಾಯ್ದೆ, 2003ರ ನಿಯಮಗಳ ಅಡಿಯಲ್ಲಿನ ಒಂದು ಶಾಸನಬದ್ಧ ಅಂಗವಾಗಿರುವ ಜಂಟಿ ವಿದ್ಯುತ್ ನಿಯಂತ್ರಣ ಆಯೋಗದ (ಜೆಇಆರ್‌ಸಿ) ಜಮ್ಮು & ಕಾಶ್ಮೀರದ ಕೇಂದ್ರಾಡಳಿತ ಪ್ರದೇಶ ಮತ್ತು ಲಡಾಖ್‌ನ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸದಸ್ಯ ಹುದ್ದೆ ಭರ್ತಿ ಮಾಡಿಕೊಳ್ಳಲು ಉದ್ದೇಶಿಸಲಾಗಿದೆ. ಮೇಲ್ಕಂಡ ಹುದ್ದೆಯು 30.06.2024 ರಿಂದ ಖಾಲಿಯಾಗುತ್ತದೆ.

2. ವಿವರವಾದ ಖಾಲಿಹುದ್ದೆ ಸುತ್ತೋಲೆಯನ್ನು ಇಂಧನ ಸಚಿವಾಲಯದ ವೆಬ್‌ಸೈಟ್‌ನಲ್ಲಿ ಕಾಣಬಹುದು https://powermin.gov.in/sites/default/files/webform/notices/Vacancy_Circular_for_the_post_of_Mem ber_JERC_for_UT_of_J%26K_and_UT_of_Ladakh.pdf and that of DoPT i.e. www.dopt.gov.in.

3. ಖಾಲಿಹುದ್ದೆ ಸುತ್ತೋಲೆಯ ಅನುಬಂಧದಲ್ಲಿ ಅಡಕಗೊಳಿಸಲಾಗಿರುವ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಜಮ್ಮು & ಕಾಶ್ಮೀರದ ಕೇಂದ್ರಾಡಳಿತ ಪ್ರದೇಶ ಮತ್ತು ಲಡಾಖ್‌ನ ಕೇಂದ್ರಾಡಳಿತ ಪ್ರದೇಶಗಳಲ್ಲಿ ಸದಸ್ಯ ಹುದ್ದೆ ನೇಮಕಾತಿಗಾಗಿ ನಿಗದಿಪಡಿಸಲಾಗಿರುವ ಅಗತ್ಯ ವಿದ್ಯಾರ್ಹತೆ ಮತ್ತು ಅನುಭವ ಹೊಂದಿರುವ ಸೂಕ್ತ ವ್ಯಕ್ತಿಗಳು, ತಮ್ಮ ಅರ್ಜಿಗಳನ್ನು 3ನೇ ಜುಲೈ, 2024 ರೊಳಗೆ ಸಚಿವಾಲಯಕ್ಕೆ ತಲುಪುವಂತೆ ರವಾನಿಸಬೇಕು. ಸಂಪೂರ್ಣ ಭರ್ತಿ ಮಾಡಿದ ಅರ್ಜಿಗಳನ್ನು ಡೆಪ್ಯೂಟಿ ಸೆಕ್ರೆಟರಿ (ಆರ್&ಆರ್–2), ಇಂಧನ ಸಚಿವಾಲಯ, ನವದೆಹಲಿ–110001 ಇವರಿಗೆ ಸಂಬೋಧಿಸುವುದು. ಕಡ್ಡಾಯವಾಗಿ ಅರ್ಜಿಗಳನ್ನು debranjan.chattopadhyay@nic.in ಮತ್ತು pbs.dinker@gov.in ವಿಳಾಸಗಳಿಗೆ ಇಮೇಲ್ ಮಾಡತಕ್ಕದ್ದು.

(ಡಿ. ಚಟ್ಟೋಪಾಧ್ಯಾಯ)
ಭಾರತ ಸರ್ಕಾರದ ಡೆಪ್ಯೂಟಿ ಸೆಕ್ರೆಟರಿ
ಟೆಲಿಫ್ಯಾಕ್ಸ್: 011–23715250

CBC 34101/11/0002/2425

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ
ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ
ಭಾರತ ಸರ್ಕಾರ

ಲಾಭವಂಚಿತ ವ್ಯಕ್ತಿಗಳ ಜೀವನೋಪಾಯ ಮತ್ತು ಉದ್ಯಮಕ್ಕೆ ಬೆಂಬಲ (ಸ್ಮೈಲ್)

ಗರಿಮಾ ಗೃಹ ಸ್ಥಾಪನೆಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ

ಲಾಭವಂಚಿತ ವ್ಯಕ್ತಿಗಳ ಜೀವನೋಪಾಯ ಮತ್ತು ಉದ್ಯಮಕ್ಕೆ ಬೆಂಬಲ (ಸ್ಮೈಲ್) ಎಂಬ ಯೋಜನೆಯ 'ಮಂಗಳಮುಖಿಯರ ಕ್ಷೇಮಾಭಿವೃದ್ಧಿ ಮತ್ತು ಸಮಗ್ರ ಪುನರ್ವಸತಿಗಾಗಿ ಕೇಂದ್ರ ವಲಯ ಯೋಜನೆ' ಎಂಬ ಉಪ ಯೋಜನೆಯ ಅಡಿಯಲ್ಲಿ ಅಂಡಮಾನ್ ಮತ್ತು ನಿಕೋಬಾರ್, ಲಕ್ಷದ್ವೀಪ, ಜಮ್ಮು & ಕಾಶ್ಮೀರ, ಲಡಾಖ್, ಪುದುಚೆರಿ, ದಾದರ್ & ನಗರ್ ಹವೇಲಿ ಮತ್ತು ದಮನ್ & ದಿಯು, ಮಣಿಪುರ, ಮಿಜೋರಾಂ, ಮೇಘಾಲಯ, ತ್ರಿಪುರ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ, ಸಿಕ್ಕಿಂ, ಪಂಜಾಬ್, ಹರ್ಯಾಣ, ಹಿಮಾಚಲ ಪ್ರದೇಶ, ತೆಲಂಗಾಣ, ಗೋವಾ, ಚಂಡೀಗಢ್, ಉತ್ತರಾಖಂಡ್ ಮತ್ತು ಕೇರಳ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಾದ್ಯಂತ ಗರಿಮಾ ಗೃಹ ಸ್ಥಾಪನೆಗಾಗಿ ಆಸಕ್ತಿಯುಳ್ಳ ಮತ್ತು ಅರ್ಹ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1. **ಕೆಳಗಿನ ನಿಬಂಧನೆಗಳನ್ನು ಪೂರೈಸಬಲ್ಲ ಸಂಸ್ಥೆಗಳು ಗರಿಮಾ ಗೃಹ ಯೋಜನೆಗೆ ಅರ್ಜಿ ಸಲ್ಲಿಸಬಹುದು:**
   ಎ) ಸೊಸೈಟಿಗಳ ನೋಂದಣಿ ಕಾಯ್ದೆ (21/1860) ಅಡಿಯಲ್ಲಿ ಅಥವಾ ರಾಜ್ಯ ಸರ್ಕಾರಗಳ/ ಕೇಂದ್ರಾಡಳಿತ ಪ್ರದೇಶಗಳಲ್ಲಿರುವ ಯಾವುದೇ ಸಂಬಂಧಿತ ಕಾಯ್ದೆ ಅಡಿಯಲ್ಲಿ ಅಥವಾ ಸಾಕ್ಷರತೆ, ವೈಜ್ಞಾನಿಕ ಮತ್ತು ದತ್ತಿ ಸಂಘಗಳ ನೋಂದಣಿಗೆ ಸಂಬಂಧಿತ ರಾಜ್ಯದ ಯಾವುದೇ ಕಾನೂನಿನ ಅಡಿಯಲ್ಲಿನ ನೋಂದಾಯಿತ ಸೊಸೈಟಿ ಆಗಿರಬೇಕು.
   ಬಿ) ನೋಂದಾಯಿತ ಸಾರ್ವಜನಿಕ ಟ್ರಸ್ಟ್ ಆಗಿರಬೇಕು.
   ಸಿ) ಕಂಪನಿಗಳ ಕಾಯ್ದೆ, 1956ರ ಸೆಕ್ಷನ್ 25ರ ಅಡಿಯಲ್ಲಿ ಸ್ಥಾಪಿತ ಕಂಪನಿ ಆಗಿರಬೇಕು.
2. ಆಸಕ್ತಿಯುಳ್ಳ ಮತ್ತು ಅರ್ಹ ಸಿಬಿಒ/ಎನ್‌ಜಿಒ'ಗಳು, ಅಗತ್ಯ ದಾಖಲಾತಿಗಳ ಜೊತೆಗೆ ಇ–ಅನುದಾನ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಕೊಳ್ಳಬಹುದು (https://grants-msje.gov.in/ngo-login).
3. ಹಣಕಾಸು ವರ್ಷ 2024–25ನೇ ಸಾಲಿನ ಅರ್ಜಿಗಳ ಸ್ವೀಕೃತಿಗಾಗಿ 26.06.2024 ರಿಂದ 07.07.2024 ರವರೆಗೆ ಇ–ಅನುದಾನ ಪೋರ್ಟಲ್ ತೆರೆದಿರುತ್ತದೆ.
4. **ಹೆಚ್ಚಿನ ವಿವರಗಳಿಗಾಗಿ ಅಥವಾ ವಿಚಾರಣೆಗಾಗಿ ಸಂಪರ್ಕಿಸಿ:**

ದೂರವಾಣಿ: 011–23070386

ಇ–ಮೇಲ್: ankit.srivastava@nic.in/mayank.b@gov.in/lokesh.km91/gov.in

CBC 38101/11/0002/2425



ಮಂಗಳನ ಮೂಲೆ ತಟ್ಟುವ ರೀಚ್‌ಬಾಟ್

ಗುಡ್ಡೆಯ ಮೇಲೆ ನಿಂತು ಮಣ್ಣನ್ನು ಹೆಕ್ಕುತ್ತಿರುವ ರೀಚ್ ಬಾಟ್

ಕೊಳ್ಳೇಗಾಲ ಶರ್ಮ

ಮಂಗಳನ ಮೇಲೆ ಇರುವ ಮೂಲೆ ಮೂಲೆಗಳನ್ನೂ ಬೆದಕಿ ಪರೀಕ್ಷಿಸುವ ಸಾಮರ್ಥ್ಯವಿರುವ ರೋಬೋಟ್ ಸಿದ್ಧವಾಗುತ್ತಿದೆಯಂತೆ.

ಅಮೆರಿಕೆಯ ಸ್ಟಾನ್‌ಫರ್ಡ್ ವಿಶ್ವವಿದ್ಯಾಲಯದ ಜೈವಿಕ ಅಣಕು ತಂತ್ರಜ್ಞಾನ ಅಭಿವೃದ್ಧಿ ವಿಭಾಗದ ಮಾರ್ಕ್ ಕುಟ್ಕೋಸ್ಕಿ ಮತ್ತು ಸಂಗಡಿಗರು ಹೀಗೊಂದು ಪುಟ್ಟ ರೋಬೋಟ್ ಸಿದ್ಧಪಡಿಸಿ, ಅಮೆರಿಕದ ಮರುಭೂಮಿಗಳಲ್ಲಿ ಪರೀಕ್ಷಿಸಿದ್ದು ವರದಿಯಾಗಿದೆ.

ದಿನಕ್ಕೊಂದು ರೋಬೋಟ್‌ಗಳ ಕಥೆ ಪ್ರಕಟವಾಗುತ್ತಿರುವಾಗ ಇದರಲ್ಲಿ ಹೊಸತೇನು? ಅದರಲ್ಲಿಯೂ ಮಂಗಳನ ಮೇಲೆ ಈಗಾಗಲೇ ರೋಬೋಟ್ ಯಂತ್ರಗಳು ಹೋಗಿದ್ದಾಗಿದೆಯಲ್ಲ? ಇನ್ನೇನು ವಿಶೇಷ? ಇದೆ, ವಿಶೇಷವಿದೆ. 'ರೀಚ್‌ಬಾಟ್' ಎನ್ನುವ ಈ ರೋಬೋಟ್ ಇದುವರೆವಿಗೂ ಮಂಗಳ ಅಥವಾ ಬೇರೆ ಯಾವುದೇ ಗ್ರಹದ ಮೇಲೆ ಇಳಿದ ಶೋಧನೌಕೆಗಳಿಗಿಂತಲೂ ಭಿನ್ನವಾಗಿದೆ. ಅಷ್ಟೇ ಅಲ್ಲ, ಅತಿ ದುರ್ಗಮ ಎನ್ನುವ ಮೂಲೆಯಿಂದಲೂ ಮಣ್ಣಿನ ಮಾದರಿಯನ್ನು ಹೆಕ್ಕಿ ತರುವಂಥ ವಿನ್ಯಾಸವನ್ನು ಹೊಂದಿದೆ.

ದೂರದ ಗ್ರಹಗಳಿಗೆ ಶೋಧ ನೌಕೆಗಳನ್ನು ಕಳಿಸಿ, ಅಲ್ಲಿನ ಮಣ್ಣು, ಕಲ್ಲುಗಳನ್ನು ಪರೀಕ್ಷಿಸಬಹುದೆಂದು ಈಗಾಗಲೇ ಹಲವು ಯೋಜನೆಗಳು ಸಿದ್ಧಪಡಿಸಿವೆ. ಭಾರತದ ಚಂದ್ರಯಾನ–3 ಇದೇ ರೀತಿ 'ವಿಕ್ರಮ್' ಎನ್ನುವ ಶೋಧನೌಕೆಯನ್ನು ಚಂದ್ರನ ಮೇಲೆ ಇಳಿಸಿತ್ತು. ಅದರಿಂದ ಒಂದು ಪುಟ್ಟ ರೋವರು ಚಂದ್ರನ ನೆಲದ ಮೇಲಿಳಿದು ಅಲ್ಲಿನ ಮಣ್ಣನ್ನು ಪರೀಕ್ಷಿಸಿ, ನೆಲದ ಅಡಿಯಲ್ಲಿ ಹತ್ತು ಸೆಂಟಿಮೀಟರಿನ ಆಳದಲ್ಲಿ ಸಲ್ಫರ್ ಇದೆ ಎಂದು ತಿಳಿಸಿತ್ತು. ಚಂದ್ರನ ಮೇಲೆ ಮಾನವರು ಇಳಿದು ಅಲ್ಲಿಂದ ಮಣ್ಣನ್ನು ಹೊತ್ತು ತಂದು ಐವತ್ತು ವರ್ಷಗಳಾಗಿವೆ. ಈ ಮಧ್ಯೆ ಅಮೆರಿಕ ಮಂಗಳನ ಮೇಲೆ 'ಕ್ಯೂರಿಯಾಸಿಟಿ' ಎನ್ನುವ ರೋವರನ್ನೂ ಇಳಿಸಿತ್ತು.

ಕಳೆದ ವರ್ಷವಷ್ಟೆ ಮತ್ತೊಂದು ರೋಬೋಟ್ ನಡೆಸಿದ ಸಾಧನೆ ಸುದ್ದಿಯಾಗಿತ್ತು. 'ಬೆನ್ನು' ಎನ್ನುವ ಕ್ಷುದ್ರಗ್ರಹದಿಂದ ಶೋಧನೌಕೆಯೊಂದು ಮಣ್ಣನ್ನು ಹೊತ್ತು ಭೂಮಿಗೆ ತಂದಿತ್ತು. ಈ ಎಲ್ಲ ಪ್ರಯತ್ನಗಳೂ ಸಾಮಾನ್ಯರ ಊಹೆಗೆ ಮೀರಿದ ಪ್ರಯತ್ನಗಳಾದರೂ, ತಂತ್ರಜ್ಞಾನದ ಮಟ್ಟಿಗೆ ಇನ್ನೂ ಸವಾಲುಗಳಿದ್ದುವು. ಈ ತಂತ್ರಜ್ಞಾನಗಳು ಹೆಕ್ಕಿದ ಮಣ್ಣಿನ ಖನಿಜ ಸ್ವರೂಪವನ್ನು ತಿಳಿಸಬಹುದು. ಆದರೆ ಮಣ್ಣು ಬಿಸಿಲು ಬೀಳುವ ತೆರೆದ ಬಯಲಿನದ್ದಾದ್ದರಿಂದ ಅಲ್ಲಿ ಜೀವದ ಕುರುಹುಗಳು ಸಿಗುವ ಸಾಧ್ಯತೆಗಳು ಕಡಿಮೆ. ಏಕೆಂದರೆ ಮಂಗಳಗ್ರಹ ಭೂಮಿಯಂತಲ್ಲ.

ಮಂಗಳನ ಮೇಲೆ ಇರುವ ಗುಹೆಗಳು, ಬಿರುಕುಗಳು, ಕಂದರಗಳಲ್ಲಿ ನೀರಿನ ಪಸೆ ಇರಬಹುದು. ಅಲ್ಲಿ ಜೀವ ಬೆಳೆಯುತ್ತಿರಬಹುದು ಎನ್ನುವ ಊಹೆಗಳಿವೆ. ಇದು ನಿಜವೋ ಅಲ್ಲವೋ ತಿಳಿಯಬೇಕೆಂದರೆ ಅಂತಹ ಬಿರುಕು, ಗುಹೆ, ಕಂದರಗಳಿಂದಲೂ ಮಣ್ಣನ್ನು ಹೆಕ್ಕಬೇಕಾಗಬಹುದು. ಇದೇ ಸಮಸ್ಯೆ ಹಾಗೂ ಸವಾಲು. ಚಕ್ರದ ಮೇಲೆ ಉರುಳುವ ರೋಲರುಗಳು ಹೇಗೆ ಹೇಗೋ ಬಿದ್ದರೆ ಚಲಿಸದೇ ನಿಂತುಬಿಡಬಹುದು. ಚಂದ್ರಯಾನ–2 ಹೀಗೆಯೇ ವಿಫಲವಾಗಿತ್ತು.

ಹೇಗೇ ಚಲಿಸಿದರೂ, ತಪ್ಪದೆ ಕೆಲಸವನ್ನು ನಿರ್ವಹಿಸಬಲ್ಲ ರೋಬೋಟ್ ಬಹುಶಃ ಈ ಸವಾಲನ್ನು ಎದುರಿಸಲು ನೆರವಾಗಬಹುದು ಎನ್ನುವುದು ತಂತ್ರಜ್ಞರ ತರ್ಕ. ಅದಕ್ಕಾಗಿ ಪ್ರಪಂಚದ ವಿವಿಧೆಡೆಗಳಲ್ಲಿ ಪ್ರಯತ್ನಗಳು ನಡೆದಿವೆ. ಉರುಳುವ ರೋಬೋಟ್‌ಗಳು, ನೀರಿನಲ್ಲಿ ಮುಳುಗುವಂಥವು, ಜೇಡದ ರೀತಿ ಆರು ಕಾಲಿನ ಮೇಲೆ ನಡೆಯುವಂಥವು, ನಾಯಿಯಂತೆ ನಾಗಾಲಿಗಳನ್ನು ವಿಜ್ಞಾನಿಗಳು ಸಿದ್ಧಪಡಿಸುತ್ತಿದ್ದಾರೆ. ಕುಟ್ಕೋಸ್ಕಿಯವರ ತಂಡದ ಪ್ರಯತ್ನ ಈ ನಿಟ್ಟಿನಲ್ಲಿ ಇನ್ನೊಂದು.



ನಾಗಾಲಿ ರೋಬೋಟ್

ಕುಟ್ಕೋಸ್ಕಿಯವರ ತಂಡದ ರೀಚ್‌ಬಾಟ್ ವಿಶಿಷ್ಟವಾಗಿದೆ. ಇದು ಕಂದರದ ಗೋಡೆಗಳಿಗೆ ಆತುಕೊಂಡು ಇಳಿಯಬಲ್ಲುದು. ಗೋಡೆಗೆ ಆತುಕೊಂಡೇ, ಎದುರಿನಲ್ಲಿರುವ ಇನ್ನೊಂದು ಗೋಡೆಯನ್ನು ಹೆರೆದು ಮಣ್ಣನ್ನು ಹೆಕ್ಕಬಲ್ಲುದು. ಹೀಗೆ ಕೈಗೆಟುಕದ ಜಾಗಗಳನ್ನು ಮುಟ್ಟುವ ಸಾಮರ್ಥ್ಯ ಇರುವುದರಿಂದಲೇ ಇದನ್ನು 'ರೀಚ್ ರೋಬೋಟ್' ಎಂದು ಕರೆದಿದ್ದಾರೆ. ರೀಚ್ ರೋಬೋಟ್‌ನ ಮಾದರಿಯೊಂದನ್ನು ಇತ್ತೀಚೆಗೆ ಮಂಗಳನ ನೆಲದಂತೆಯೇ ಇರುವ ಅಮೆರಿಕೆಯ ಮೊಜಾವ್ ಮರುಭೂಮಿಯಲ್ಲಿ ಪರೀಕ್ಷಿಸಿದ್ದಾರೆ. ಇದರ ವರದಿಯನ್ನು 'ಸೈನ್ಸ್ ರೋಬೋಟಿಕ್ಸ್' ಪತ್ರಿಕೆ ವರದಿ ಮಾಡಿದೆ.

ರೀಚ್ ರೋಬೋಟ್ ಕೂಡ ನಾಲ್ಕು ಕಾಲಿನ ರೋಬೋಟ್. ಆದರೆ ಈ ಕಾಲುಗಳು ಎಲ್ಲವೂ ಒಂದೇ ಉದ್ದವಲ್ಲ. ಬೇಕಿದ್ದಾಗ ಹೆಚ್ಚು, ಇಲ್ಲವೇ ಕಡಿಮೆಯಾಗುವಂತೆ ಇವೆ. ಇವುಗಳಲ್ಲಿ ಮೂರು ಕಾಲುಗಳು ನಡೆಯುವುದಕ್ಕೂ, ಒಂದು ಕಾಲು ಮುಂಚಾಚಿ ಮಣ್ಣು ಹೆಕ್ಕುವುದಕ್ಕೂ ಇವೆ. ಆದರೆ ಇನ್ನೊಂದು ವಿಶೇಷವಿದೆ.

ಮೂರು ಕಾಲಿನಲ್ಲಿ ನೆಲದ ಮೇಲೆ ನಡೆಯುವಾಗ ಸ್ಥಿರವಾಗಿ ನಿಲ್ಲಬಹುದು. ಆದರೆ ಗೋಡೆಗೆ ಆತುಕೊಂಡಾಗ ಇದು ಕಷ್ಟ. ಜತೆಗೆ ನಡೆಯುವುದೂ ಕಷ್ಟ. ಇಡೀ ಭಾರವನ್ನು ಗೋಡೆಗೆ ಆತುಕೊಂಡಿರುವ ಕೈಗಳು ಹಿಡಿದುಕೊಳ್ಳಬೇಕು. ಅನಂತರವಷ್ಟೆ ಮೂರನೆಯ ಕಾಲು ಮುಂದೆ ಸಾಗಬೇಕು. ಆ ಮೂರನೆಯ ಕಾಲನ್ನು ಎತ್ತಿದಾಗ ಎರಡೂ ಕಾಲುಗಳಲ್ಲಿಯೇ ಭಾರವನ್ನು ಹೊರುವುದು ನಾಗಾಲಿಗಳಿಗೆ ಸುಲಭವಲ್ಲ. ನಾಯಿಗಳು ಎರಡೇ ಕಾಲಿನಲ್ಲಿ ಹೆಚ್ಚು ಹೊತ್ತು ನಿಲ್ಲಲಾರವೆನ್ನುವುದನ್ನು ಗಮನಿಸಿದ್ದೇವಲ್ಲ. ಈ ಸಾಮರ್ಥ್ಯವನ್ನು ರೀಚ್ ರೋಬೋಟಿಗೆ ಕೊಟ್ಟಿರುವುದೇ ಈ ಎಂಜಿನಿಯರ್‌ಗಳ ಸಾಧನೆ. ಕಾಲುಗಳ ತುದಿಯಲ್ಲಿ ಪಂಜಗಳಂತೆ ಸೂಜಿಗಳನ್ನಿಟ್ಟು, ಮುಂಚಾಚುವ ಕೈಯ ತುದಿಯಲ್ಲಿ ಹೊಲಿಗೆ ಸೂಜಿಗಳನ್ನು ಬೆರಳುಗಳಂತೆ ಕೂಡಿಸಿದ ಈ ರೀಚ್ ರೋಬೋಟ್, ದಿಣ್ಣೆ, ದಿಬ್ಬಗಳ ಮೇಲೆ ನಿಂತು ಆಚೆಗಿರುವ ಗೋಡೆಯಿಂದ ಮಣ್ಣನ್ನು ಹೆಕ್ಕಿದೆ. ನೆಲದೊಳಗಿನ ಬಿರುಕಿನೊಳಗೆ ಇಳಿದು ಮೇಲೆ ಹತ್ತಿದೆ. ಅದಕ್ಕಾಗಿ ಬೇಕಾದ ಲೆಕ್ಕಾಚಾರಗಳನ್ನು ಸ್ವತಃ ಅದೇ ಮಾಡಿಕೊಳ್ಳುವಂತೆ ವಿನ್ಯಾಸ ಮಾಡಿದ್ದಾರೆ.

ಚುನಾವಣೆಯ ಕಣಕ್ಕಿಳಿದ ಎಐ!

ಕೃಷ್ಣ ಭಟ್

ಇಷ್ಟು ದಿನ ಯಾರದೋ ತಾಳಕ್ಕೆ ತಕ್ಕಂತೆ ಕುಣಿದು, ಎದುರಾಳಿಯನ್ನು ಮಣಿಸುವುದಕ್ಕೋ, ತಂತ್ರಗಾರಿಕೆಯನ್ನು ಮಾಡುವುದಕ್ಕೋ ನೆರವಾಗುತ್ತಿದ್ದ 'ಎಐ' ಮತ್ತು 'ರೋಬೋಟ್'ಗಳು ಈಗ ಚುನಾವಣೆಯ ಕಣಕ್ಕೇ ನೇರವಾಗಿ ಇಳಿಯುತ್ತಿವೆ! ಇದೇನೂ ಊಹಿಸದ ಘಟನೆಯಲ್ಲ. ಏಕೆಂದರೆ, 'ಬ್ಲ್ಯಾಕ್ ಮಿರರ್' ಎಂಬ ಜನಪ್ರಿಯ ಸರಣಿಯಲ್ಲಿ ಇಂಥದ್ದೊಂದು ಸಾಧ್ಯತೆಯ ಬಗ್ಗೆ ಹೇಳಲಾಗಿತ್ತು. ಕೆಲವೇ ವರ್ಷಗಳ ಹಿಂದೆ ಒಟಿಟಿಯಲ್ಲಿ ಕಾಣಿಸಿಕೊಂಡಿದ್ದ ಆ ಊಹೆಗೆ ಈಗ ಜೀವ ಬಂದಿದೆ.

ಇತ್ತೀಚೆಗೆ ಇಂಥ ಎರಡು ಘಟನೆಗಳು ನಡೆದವು. ಕೆಲವು ದಿನಗಳ ಹಿಂದೆ ಅಮೆರಿಕದಲ್ಲಿ ಮೇಯರ್ ಚುನಾವಣೆ ಸಮಯದಲ್ಲಿ ನಡೆದ ಮೊದಲ ಘಟನೆಯಲ್ಲಿ ವ್ಯೋಮಿಂಗ್‌ನ ಚೆಯೆನ್ನೆಯಲ್ಲಿ ವಿಕ್ಟರ್ ಮಿಲ್ಲರ್ ಎಂಬ ಅಭ್ಯರ್ಥಿ ತನ್ನ ಪರವಾಗಿ ಎಐ ರೋಬೋಟ್ ಅನ್ನು ಸ್ಪರ್ಧೆಗೆ ಇಳಿಸುತ್ತೇನೆ ಎಂದಿದ್ದರು. ಆದರೆ, ಎಐ ರೋಬೋಟ್ ಅಧಿಕೃತ ಮತದಾರ ಅಲ್ಲದ್ದರಿಂದ ಅದಕ್ಕೆ ಸ್ಪರ್ಧಿಸಲು ಅವಕಾಶ ಇರುವುದಿಲ್ಲ ಎಂದು ಚುನಾವಣಾ ಅಧಿಕಾರಿಗಳು ಅವಕಾಶವನ್ನು ನಿರಾಕರಿಸಿದರು. ಇವರ 'ವಿಕ್' ಎಂಬ ಹೆಸರಿನ ಎಐ ರೋಬೋಟ್ ಬಗ್ಗೆ ಅಷ್ಟೇನೂ ಜನರು ತಲೆ ಕೆಡಿಸಿಕೊಂಡಿರಲಿಲ್ಲ. ಏಕೆಂದರೆ, ಅವರ ರೋಬೋಟ್‌ನಲ್ಲಿ ಹತ್ತಾರು ಸಮಸ್ಯೆಗಳಿದ್ದವು. ಅದಿನ್ನೂ ತನ್ನ ಹೆಸರನ್ನೂ ಸರಿಯಾಗಿ ಹೇಳಲು ಕಲಿತಿರಲಿಲ್ಲ.

ಆದರೆ, ಯುನೈಟೆಡ್ ಕಿಂಗ್ಡಮ್‌ನಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿರುವ ಒಂದು ಎಐ ಕಂಪನಿಯ ಸಿಇಒ ಸ್ಟೀವ್ ಎಂಡೆಕೋಟ್ ಅಲ್ಲಿನ ಸಂಸತ್ ಚುನಾವಣೆಗೆ ತನ್ನ 'ಸ್ಟೀವ್' ಎಂಬ ಹೆಸರಿನ ರೋಬೋಟ್ ಅನ್ನು ಅಭ್ಯರ್ಥಿಯಾಗಿ ನಿಲ್ಲಿಸಿದ್ದಾರೆ. ಈ ರೋಬೋಟ್ ತುಂಬಾ ಜಾಣ. ಅದಕ್ಕೊಂದು ವೆಬ್‌ಸೈಟ್ ಇದೆ. ಸ್ಟೀವ್ ಹೆಸರಿನ ರೋಬೋಟ್ ಬಳಿ ಯಾವ ವಿಷಯಗಳನ್ನೂ ನೀವು ಕೇಳಬಹುದು. ಅದು ಸರಿಯಾಗಿ ಅರ್ಥ ಮಾಡಿಕೊಂಡು ಉತ್ತರ ಹೇಳುತ್ತದೆ. ತುಂಬಾ ಕಷ್ಟದ ವಿಷಯವನ್ನೂ ಸುಲಭ ವಿಷಯವನ್ನೂ ಅರ್ಥ ಮಾಡಿಕೊಂಡು ಮಾತನಾಡುತ್ತದೆ. ಇದು ಸುಧಾರಿತ 'ಲ್ಯಾಂಗ್ವೇಜ್ ಮಾಡೆಲ್' ಮತ್ತು ಅಪಾರ ಡೇಟಾಬೇಸ್‌ಗಳನ್ನು ಆಧರಿಸಿ ತಯಾರಾಗಿದೆ. ಹೀಗಾಗಿ, ಬಹುತೇಕ ಎಲ್ಲ ವಿಷಯಗಳ ಬಗ್ಗೆಯೂ ಮಾತನಾಡುವ ಸಾಮರ್ಥ್ಯವನ್ನು ಹೊಂದಿದೆ. ಧ್ವನಿ ಮತ್ತು ಪಠ್ಯವಿಧಾನವೆರಡರಲ್ಲೂ ಪ್ರಶ್ನೆಗಳಿಗೆ ಉತ್ತರಿಸುತ್ತದೆ. ರಾಜಕಾರಣಿಯ ಹಾಗೆಯೇ ಕೆಲವು ನೇರ ಪ್ರಶ್ನೆಗಳಿಗೆ ಹಾರಿಕೆ ಉತ್ತರ ನೀಡುವುದೂ ಅದಕ್ಕೆ ಗೊತ್ತು!

ಈ ಸ್ಟೀವ್ ಎಐ ಬಗ್ಗೆ ಭಾರಿ ಚರ್ಚೆ ನಡೆಯುತ್ತಿದೆ. ಕಾನೂನಾತ್ಮಕವಾಗಿ ಇದೊಂದು ಸಮಸ್ಯೆಯೇನಲ್ಲ. ಏಕೆಂದರೆ, ಚುನಾವಣೆಗೆ ಸ್ಪರ್ಧಿಸುತ್ತಿರುವುದು ಅಧಿಕೃತವಾಗಿ ಸ್ಟೀವ್ ಎಂಬ ವ್ಯಕ್ತಿಯೇ ಆಗಿರುತ್ತಾರೆ. ರೋಬೋಟ್ ಎಂಬುದು ಅವರ ಪರ್ಸನಲ್ ಸೆಕ್ರೆಟರಿಯಾಗಿ ಕೆಲಸ ಮಾಡುತ್ತದೆಯಷ್ಟೇ! ಈಗಿನ ಎಲ್ಲ ದೇಶಗಳ ಕಾನೂನಿನ ಪ್ರಕಾರ, ಮತದಾರ ಅಲ್ಲದ ಒಬ್ಬ ವ್ಯಕ್ತಿ ಚುನಾವಣೆಗೆ ಸ್ಪರ್ಧಿಸುವಂತಿಲ್ಲ. ಎಐ ರೋಬೋಟ್ ಮತದಾರನಲ್ಲ. ಹೀಗಾಗಿ, ಈ ರೋಬೋಟ್‌ಗಳ ಹಿಂದೆ ಒಬ್ಬ ವ್ಯಕ್ತಿ ಇಲ್ಲದೇ ಇದ್ದರೆ, ಚುನಾವಣೆಗೆ ನಿಲ್ಲಲು ಸಾಧ್ಯವಿಲ್ಲ. ಒಂದು ವೇಳೆ ರೋಬೋಟ್ ಅನ್ನು ಮುಂದಿಟ್ಟುಕೊಂಡು ವ್ಯಕ್ತಿಯೊಬ್ಬ ಚುನಾವಣೆಗೆ ನಿಂತು ಗೆದ್ದು ಬಂದರೂ, ವ್ಯಕ್ತಿಯೇ ಗೆದ್ದು ಬಂದ ಹಾಗೆ!

ಈ ಅಭ್ಯರ್ಥಿ ಸ್ಟೀವ್ ಎಂಡೆಕೋಟ್ ಅವರ ಇ-ಅವತಾರದಿಂದ ಒಂದು ಅನುಕೂಲವಂತೂ ಇದೆ. ಚುನಾವಣೆಯಲ್ಲಿ ಗೆದ್ದು ಬಂದ ವ್ಯಕ್ತಿ ನಮ್ಮ ಕೈಗೆ ಸಿಗುವುದಿಲ್ಲ ಎಂಬ ಆರೋಪ ಕೇಳಿ ಬರಲು ಸಾಧ್ಯವೇ ಇಲ್ಲ. ಏಕೆಂದರೆ, ಅವನ ಪರವಾಗಿ ಅವನ ಸಹಾಯಕನಂತಿರುವ ಈ ಎಐ ರೋಬೋಟ್ ದಿನದ 24 ಗಂಟೆಯೂ ಕೈಗೆ ಸಿಗುತ್ತಾನೆ.

ಜನರು ತಮ್ಮ ಸಮಸ್ಯೆಗಳನ್ನು ಈ ರೋಬೋಟ್ ಬಳಿ ಹೇಳಿಕೊಳ್ಳಬಹುದು. ಪರಿಹಾರ ಸಿಗುತ್ತದೆಯೋ ಅಥವಾ ಇಲ್ಲವೋ, ಸಮಾಧಾನವಂತೂ ಸಿಗುತ್ತದೆ! ಇದು ಮತದಾರರು ಮತ್ತು ಸ್ಪರ್ಧಿಯ ಮಧ್ಯೆ ಒಂದು ನಿರಂತರ ಮಾತುಕತೆಗೆ ಅನುಕೂಲ ಮಾಡಿಕೊಡುತ್ತದೆ. ಆದರೆ, ಈ ಮಾಹಿತಿಯನ್ನು ಅದು ಜಾರಿಗೆ ತರುವುದಕ್ಕೆ ಎಂದು ತನ್ನ ಮಾಲೀಕನಿಗೆ ಕಳುಹಿಸುತ್ತದೆಯೇ ಎಂಬುದು ಇನ್ನೂ ಗೊತ್ತಿಲ್ಲ. ಒಂದು ವೇಳೆ ಸ್ಟೀವ್ ಗೆದ್ದು ಬಂದರೆ, ಇಂಥದ್ದನ್ನೆಲ್ಲ ಅಪ್ಡೇಟ್ ಮಾಡಬಹುದೇನೋ!

ಸದ್ಯ, ಇಂಥದ್ದೊಂದು ಪರಿಕಲ್ಪನೆ ಇನ್ನೂ ಆರಂಭಿಕ ಹಂತದಲ್ಲೇ ಇದೆ. ಈವರೆಗೆ ಚುನಾವಣೆಯ ಪ್ರಚಾರಕ್ಕೆ 'ಆರ್ಟಿಫಿಶಿಯಲ್ ಇಂಟಲಿಜೆನ್ಸ್' ಅನ್ನು ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಬಳಸಿಕೊಳ್ಳುತ್ತಿದ್ದರು. ಆದರೆ, ಈಗ ಒಂದು ಹೆಜ್ಜೆ ಮುಂದೆ ಹೋಗಿ ಒಂದು ಎಐ ಅನ್ನೇ ಮುಖ್ಯ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸುವ ನಿಟ್ಟಿನಲ್ಲಿ ಮೊದಲ ಹೆಜ್ಜೆ ಇಟ್ಟಿದ್ದಾರೆ.



ಚುನಾವಣೆ ಮುಗಿದ ನಂತರ, ಎಂದರೆ ಅಭ್ಯರ್ಥಿ ಗೆದ್ದ ಮೇಲೆ ಎಐ ಅನ್ನು ಬಳಸಿಕೊಳ್ಳುವ ವಿಷಯದಲ್ಲಿ ಗೆದ್ದ ವ್ಯಕ್ತಿ ಎಷ್ಟು ಚುರುಕಾಗಿದ್ದಾನೆ, ಕ್ಷೇತ್ರದ ಅಭಿವೃದ್ಧಿ ಕೆಲಸಗಳಿಗೆ, ಜನರ ಸಮಸ್ಯೆಗಳನ್ನು ಆಲಿಸಿ, ಅದಕ್ಕೆ ಪರಿಹಾರ ಕಂಡುಕೊಳ್ಳಲು ಎಐ ಅನ್ನು ಅಭ್ಯರ್ಥಿ ಎಷ್ಟು ಸಮರ್ಥವಾಗಿ ಬಳಸಿಕೊಳ್ಳುತ್ತಿದ್ದಾನೆ ಎಂಬುದು ಅತ್ಯಂತ ಮುಖ್ಯ ವಿಷಯವಂತೂ ಹೌದು. ಜನರಿಗೆ ಬೇಕಾದ್ದೂ, ಉಪಯೋಗವಾಗುವುದು ಕೂಡ ಇದೇ ವಿಷಯ. ಚುನಾವಣೆಗೂ ಮುನ್ನ, ಪ್ರಚಾರದಲ್ಲಿ ಈಗಾಗಲೇ ಎಐ ಬಳಕೆ ಬಹುತೇಕ ತಾರಕಕ್ಕೇರಿದೆ. ಎಲ್ಲ ರಾಜಕೀಯ ಪಕ್ಷಗಳೂ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಅನ್ನು ಬಳಕೆ ಮಾಡಿಕೊಂಡು ಪ್ರಚಾರದ ಅಭಿಯಾನಗಳನ್ನು ನಡೆಸುತ್ತವೆ. ಆದರೆ, ಒಮ್ಮೆ ಚುನಾವಣೆ ಪ್ರಚಾರ ಮುಗಿದಮೇಲೆ ಎಐ ಬಳಕೆ ನಿಂತುಹೋಗುತ್ತದೆ.

ಎಐ ಬಳಕೆ ಅಭ್ಯರ್ಥಿಯೊಬ್ಬನಿಗೆ ಅಥವಾ ಜನಪ್ರತಿನಿಧಿಯೊಬ್ಬನಿಗೆ ತಾನು ಯಾವ ನಿರ್ಧಾರವನ್ನು ತೆಗೆದುಕೊಳ್ಳಬೇಕು ಎಂಬುದಕ್ಕೆ ಸಹಾಯ ಮಾಡುವುದಂತೂ ಹೌದು. ಆದರೆ, ಸದ್ಯದ ಮಟ್ಟಿಗಂತೂ ಎಐ ಸ್ವತಂತ್ರವಾಗಿ ಜನರನ್ನು ಪ್ರತಿನಿಧಿಸುವುದು ಸಾಧ್ಯವಿಲ್ಲ. ಎಂದರೆ ಮಾನವಅಭ್ಯರ್ಥಿ ಇಲ್ಲದೇ ಸ್ವತಂತ್ರವಾಗಿ ಚುನಾವಣೆಗೆ ಸ್ಪರ್ಧಿಸಲು ಕಾನೂನು ಅನುಮತಿ ಯಾವ ದೇಶದಲ್ಲೂ ಇಲ್ಲ. ಆದರೆ, ಮುಂದಿನ ದಿನಗಳಲ್ಲಿ ಸ್ವತಂತ್ರವಾಗಿ, ಮನುಷ್ಯನ ಬೆಂಬಲ ಇಲ್ಲದೇ ಎಐ ಸ್ಪರ್ಧಿಸಲು ಅವಕಾಶ ಸಿಗುವುದಿಲ್ಲ ಎಂದೇನೂ ಹೇಳುವುದಕ್ಕೆ ಸಾಧ್ಯವಿಲ್ಲ!

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ವಿಜ್ಞಾನ

ಜೀವ ಕ್ರಿಯೆಗಳು

31) ಮನುಷ್ಯರ ವಿಸರ್ಜನಾಂಗವ್ಯೂಹದ ಬಗ್ಗೆ ಬರೆಯಿರಿ

ಉತ್ತರ:– (.....ಹಿಂದಿನ ಸಂಚಿಕೆಯಿಂದ)

ಮೂತ್ರಕೋಶಕ್ಕೆ ಸಂಪರ್ಕಿಸುವ ಮೂತ್ರನಾಳ ಎಂಬ ಉದ್ದನೆಯ ನಾಳವನ್ನು ಪ್ರವೇಶಿಸುತ್ತದೆ. ಹಿಗ್ಗಿದ ಮೂತ್ರಕೋಶದ ಒತ್ತಡವು ಮೂತ್ರವನ್ನು ಮೂತ್ರದ್ವಾರದ ಮೂಲಕ ಹೊರಹಾಕಲು ಪ್ರೇರೇಪಿಸುವವರೆಗೂ ಮೂತ್ರವು ಮೂತ್ರಕೋಶದಲ್ಲಿ ಸಂಗ್ರಹವಾಗುತ್ತದೆ. ಮೂತ್ರಕೋಶವು ಸ್ನಾಯುವಿನಿಂದಾದ ಅಂಗವಾಗಿರುವುದರಿಂದ ಇದು ನರವ್ಯೂಹದ ನಿಯಂತ್ರಣಕ್ಕೆ ಒಳಪಟ್ಟಿದೆ. ಇದರ ಪರಿಣಾಮವಾಗಿ ನಾವು ಮೂತ್ರವಿಸರ್ಜಿಸಬೇಕೆಂಬ ಪ್ರಚೋದನೆಯನ್ನು ಸಾಮಾನ್ಯವಾಗಿ ನಿಯಂತ್ರಿಸಬಹುದಾಗಿದೆ.

32) ನೆಫ್ರಾನ್ ರಚನೆಯ ಚಿತ್ರ ಬರೆದು ಭಾಗಗಳನ್ನು ಹೆಸರಿಸಿ

ಉತ್ತರ:–



****

ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣ

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ರಾಸಾಯನಿಕ ಕ್ರಿಯೆ ನಡೆದಿದೆ ಎನ್ನಲು ಈ ಕೆಳಗಿನ ಯಾವುದೆಲ್ಲವೂ ಸಹಾಯ ಮಾಡುತ್ತದೆ?

1) ಸ್ಥಿತಿ ಬದಲಾವಣೆ
2) ಬಣ್ಣದಲ್ಲಿ ಬದಲಾವಣೆ
3) ಅನಿಲದ ಬಿಡುಗಡೆ
4) ತಾಪದಲ್ಲಿ ಬದಲಾವಣೆ

ಮೇಲಿನ ಯಾವೆಲ್ಲವೂ ಸರಿಯಾಗಿದೆ?

ಉತ್ತರ ಸಂಕೇತಗಳು

ಎ) 1 ಮಾತ್ರ ಬಿ) 2 ಮತ್ತು 3 ಮಾತ್ರ
ಸಿ) 1 ಮತ್ತು 4 ಮಾತ್ರ ಡಿ) 1 ರಿಂದ 4ರ ತನಕ ಎಲ್ಲವೂ

ಉತ್ತರ:– (ಡಿ) 1 ರಿಂದ 4ರ ತನಕ ಎಲ್ಲವೂ

2) ಉತ್ಪನ್ನಗಳೊಂದಿಗೆ ಉಷ್ಣ ಬಿಡುಗಡೆಯಾಗುವ ಕ್ರಿಯೆಗಳನ್ನು ಏನೆಂದು ಕರೆಯುವರು?

ಎ) ಬಹಿರುಷ್ಣ ಕ್ರಿಯೆ ಬಿ) ಅಂತರುಷ್ಣ ಕ್ರಿಯೆ
ಸಿ) ಸ್ಥಾನಪಲ್ಲಟ ಕ್ರಿಯೆ ಡಿ) ಪ್ರಕ್ಷೇಪನ ಕ್ರಿಯೆ.

ಉತ್ತರ:– (ಎ) ಬಹಿರುಷ್ಣ ಕ್ರಿಯೆ

3) ಕ್ರಿಯೆಗಳಿಂದ ವಸ್ತುಗಳು ಆಕ್ಸಿಜನ್ ಕಳೆದುಕೊಳ್ಳುವುದು ಅಥವಾ ಹೈಡ್ರೋಜನ್ ಪಡೆದುಕೊಳ್ಳುವುದಕ್ಕೆ ಏನೆಂದು ಕರೆಯುವರು?

ಎ) ಉತ್ಕರ್ಷಣ ಬಿ) ಅಪಕರ್ಷಣ
ಸಿ) ದ್ವಿಸ್ಥಾನಪಲ್ಲಟ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:– (ಬಿ) ಅಪಕರ್ಷಣ

4) ಕಬ್ಬಿಣದ ಚೂರುಗಳಿಗೆ ಸಾರಯುಕ್ತ ಹೈಡ್ರೋಕ್ಲೋರಿಕ್ ಆಮ್ಲವನ್ನು ಸೇರಿಸಿದಾಗ ಏನಾಗುತ್ತದೆ? ಸರಿಯಾದ ಉತ್ತರವನ್ನು ಗುರುತು ಹಾಕಿ

ಎ) ಹೈಡ್ರೋಜನ್ ಅನಿಲ ಮತ್ತು ಕಬ್ಬಿಣದ ಕ್ಲೋರೈಡ್ ಉಂಟಾಗುತ್ತದೆ
ಬಿ) ಕ್ಲೋರಿನ್ ಅನಿಲ ಮತ್ತು ಕಬ್ಬಿನದ ಹೈಡ್ರಾಕ್ಸೈಡ್ ಉಂಟಾಗುತ್ತದೆ.
ಸಿ) ಯಾವುದೇ ಕ್ರಿಯೆ ನಡೆಯುವುದಿಲ್ಲ
ಡಿ) ಕಬ್ಬಿಣದ ಲವಣ ಮತ್ತು ನೀರು ಉಂಟಾಗುತ್ತವೆ

ಉತ್ತರ:– (ಎ) ಹೈಡ್ರೋಜನ್ ಅನಿಲ ಮತ್ತು ಕಬ್ಬಿಣದ ಕ್ಲೋರೈಡ್ ಉಂಟಾಗುತ್ತದೆ

5) ಕ್ಯಾಲ್ಸಿಯಂ ಕಾರ್ಬೋನೇಟ್ ಅನ್ನು ಕಾಯಿಸಿದಾಗ .... ಮತ್ತು ....ಆಗಿ ವಿಭಜನೆಗೊಳ್ಳುವುದು

ಎ) ಕ್ಯಾಲ್ಸಿಯಂ ಆಕ್ಸೈಡ್ ಮತ್ತು ಕಾರ್ಬನ್ ಡೈ ಆಕ್ಸೈಡ್
ಬಿ) ಕ್ಯಾಲ್ಸಿಯಂ ಕ್ಲೋರೈಡ್ ಮತ್ತು ಆಕ್ಸಿಜನ್
ಸಿ) ಮ್ಯಾಂಗನಿಸ್ ಆಕ್ಸೈಡ್ ಮತ್ತು ಕಾರ್ಬನ್ ಡೈ ಆಕ್ಸೈಡ್
ಡಿ) ಕಾರ್ಬನ್ ಮೊನಾಕ್ಸೈಡ್ ಮತ್ತು ಹೈಡ್ರೋಜನ್

ಉತ್ತರ:–(ಎ) ಕ್ಯಾಲ್ಸಿಯಂ ಆಕ್ಸೈಡ್ ಮತ್ತು ಕಾರ್ಬನ್ ಡೈ ಆಕ್ಸೈಡ್

6) ಕಬ್ಬಿಣವು ತಾಮ್ರದ ಸಲ್ಫೇಟ್‌ನಲ್ಲಿರುವ ತಾಮ್ರವನ್ನು ಸ್ಥಾನಪಲ್ಲಟಗೊಳಿಸಿ ಕಬ್ಬಿಣದ ಸಲ್ಫೇಟ್ ಆಗುವುದರಿಂದ ದ್ರಾವಣದ.................. ಆಗುವುದು

ಎ) ಅಳತೆ ಬದಲಾವಣೆ ಬಿ) ಕಿಣ್ವಗಳು ನಾಶವಾಗುವುದು
ಸಿ) ಬಣ್ಣ ಬದಲಾವಣೆ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:–(ಸಿ) ಬಣ್ಣ ಬದಲಾವಣೆ

7) $Fe_2o_2 + 2Al \longrightarrow Al_2 + 2 Fe$

ಮೇಲಿನ ಕ್ರಿಯೆಯು ಇದಕ್ಕೆ ಉದಾಹರಣೆಯಾಗಿದೆ.

ಎ) ಸಂಯೋಗ ಕ್ರಿಯೆ ಬಿ) ದ್ವಿ ಸ್ಥಾನಪಲ್ಲಟ ಕ್ರಿಯೆ
ಸಿ) ವಿಭಜನೆ ಕ್ರಿಯೆ ಡಿ) ಸ್ಥಾನಪಲ್ಲಟ ಕ್ರಿಯೆ

ಉತ್ತರ (ಡಿ) ಸ್ಥಾನಪಲ್ಲಟ ಕ್ರಿಯೆ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ರಾಸಾಯನಿಕ ಕ್ರಿಯೆ ಎಂದರೇನು?

ಉತ್ತರ:– ಒಂದು ವಸ್ತುವಿನ ರಾಸಾಯನಿಕ ಗುಣಗಳಲ್ಲಿ ಬದಲಾವಣೆ ಉಂಟು ಮಾಡುವ ಕ್ರಿಯೆಯನ್ನು ರಾಸಾಯನಿಕ ಕ್ರಿಯೆ ಎನ್ನುವರು.

2) ಕಬ್ಬಿಣದ ವಸ್ತುಗಳಿಗೆ ಬಣ್ಣವನ್ನು ಏಕೆ ಹಚ್ಚುತ್ತಾರೆ?

ಉತ್ತರ:– ತುಕ್ಕು ಹಿಡಿಯುವುದನ್ನು ತಡೆಗಟ್ಟಲು ಕಬ್ಬಿಣದ ವಸ್ತುಗಳಿಗೆ ಬಣ್ಣ ಚ್ಚುತ್ತಾರೆ.

3) ಪ್ರಕ್ಷೇಪನ ಕ್ರಿಯೆ ಎಂದರೇನು?

ಉತ್ತರ:– ರಾಸಾಯನಿಕ ಕ್ರಿಯೆಯಲ್ಲಿ ಜಲ ವಿಲೀನಗೊಳ್ಳದ ವಸ್ತು ಉಂಟಾಗುವುದನ್ನು ಪ್ರಕ್ಷೇಪನ ಕ್ರಿಯೆ ಎನ್ನುವರು

4) ಯಾವುದನ್ನು ಉತ್ಕರ್ಷಣ ಮತ್ತು ಅಪಕರ್ಷಣ ಕ್ರಿಯೆ ಎನ್ನುವರು?

(ಮುಂದುವರಿಯುವುದು....)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CHEMISTRY

Chapter -3
ELECTROCHEMISTRY

52. How will the pH of bring (aq. NaCl solution) be affected when it is electrolysed?

Ans:- The pH of aqueous NaCl solution (brine solution) is 7. Upon electrolysis, NaOH is formed as one of the products. Since it is a strong base, the pH of the solution will rise.

53. Unlike dry cell, the mercury cell has a constant cell potential throughout its useful life. Why?

Ans:- In the mercury cell, ions are not involved in the overall cell reaction. Therefore, it generates a constant cell potential of 1.35 V throughout. On the other hand, in a dry cell, ions participate in the overall cell reaction. As the concentration of the ions changes, the cell potential which is initially 1.25 V is also likely to change. It does not remain constant.

54. What advantage do the fuel cells have over primary and secondary batteries?

Ans:- Primary batteries contain a limited amount of reactants and are discharged when the reactants are consumed. Secondary batteries or cells can be recharged but the process takes a long time. Fuel cells work continuously as long the reactants (i.e. fuel) are supplied.

55. Articles of iron are generally coated with zinc. Explain.

Ans:- Iron gets easily rusted in the presence of moist air. Formation of rust ($Fe_2O_3.xH_2O$) is a redox reaction in which Fe is oxidized to Fe^{3+} ions. Since zinc is more reactive than iron (placed below iron in the activity series), it is oxidized to Zn^{2+} ions instead of iron when coated over the surface of iron. Thus, zinc takes part in the redox reaction while surface of iron remains intact.

56. Why is anode negatively charged in an electrochemical cell?

Ans:- Because electrons are released at this electrode.

57. Why is standard hydrogen electrode called reversible electrode?

Ans:- Because it can act both as anode as well as cathode in an electrochemical cell.

58. Corrosion of copper, silver and rusting of iron are very common. Both cause enormous damage. Rusting of iron in particular results in the loss of crores of rupees every year. Major accidents occur because of this.

(a) What is the chemical formula of rust?

(b) Why do silver articles become black when exposed to air for a long time?

(c) How is copper affected by corrosion?

(d) Suggest three ways to check rusting of iron so as to check national wastage of money?

Ans:- (a) The chemical formula of rust is –

$$Fe_2O_3.xH_2O$$

(b) Air contains in it traces of H_2S gas. It reacts with silver to form silver sulphide (Ag_2S). It is black and its coating gets deposited on silver articles.

(c) Corrosion of copper leads to the formation of basic copper carbonate which is green in colour.

$$2Cu + \underbrace{H_2O + CO_2 + O_2}_{\text{(Present in air)}} \rightarrow \underbrace{Cu(OH)_2\,CuCO_3}_{\text{Basic copper carbonate}}$$

(d) The rusting of iron can be checked of prevented by –

(i) coating the surface of the metal with some rust proof paints.

(ii) electroplating articles of iron with metals like nickel, chromium etc. which resist corrosion.

(iii) galvanizing or tinning the surface of iron with zinc or tin respectively.

59. Manu and his father went a shop to purchase a battery for their inverter. Shopkeeper showed them two types of batteries, one with lead plates and the other with cadmium plates. The battery with cadmium plates was more expensive than the lead battery. Manu's father wanted to purchase lead battery as it was cheaper.

After reading the above passage, answer the following questions:

(a) What would a student of chemistry, suggest to Manu's father?

(b) What are the values associated with the above decision?

Ans:- (a) A student of chemistry would suggest Manu's father to buy more expensive cadmium plate battery as compared to lead storage battery which is commonly used in inverters due to following reasons

i) Lead is a highly poisonous substance. The vapours of lead as well as of sulphuric acid which acts as the electrolyte are very harmful to the human body. They can lead to serious health problems.

ii) The vapors released from chemical reactions pollute the atmosphere.

(b) Less dependence of lead storage batteries and lead free petrol cause less pollution and keeps the environment healthy.

60. In the dry cell

(a) Which substance acts as anode and which as cathode?

(b) Which electrolyte is used in the cell?

(c) What is the cell potential of the cell?

(d) Why does the cell voltage not change during operation?

(Contd.....)

ಚಾಮರಾಜನಗರದಲ್ಲಿ ನಡೆದಿದ್ದ ಆಕ್ಸಿಜನ್ ದುರಂತ; ಸಂತ್ರಸ್ತರ ಗಾಯದ ಮೇಲೆ ಬರೆ

ವೇತನವೂ ಇಲ್ಲ; ನೌಕರಿಗೂ ಕುತ್ತು!

● ಬಾಲಚಂದ್ರ ಎಚ್.

ಚಾಮರಾಜನಗರ: 'ನುಡಿದಂತೆ ನಡೆದಿದ್ದೇವೆ ಎಂದು ಹೇಳಿಕೊಳ್ಳುವ ಸರ್ಕಾರ, ಕೊಟ್ಟ ಮಾತಿನಂತೆ ಸರ್ಕಾರಿ ಉದ್ಯೋಗ ಕೊಡಲಿ. ಇಲ್ಲವಾದರೆ, ಆತ್ಮಹತ್ಯೆಗೆ ಅನುಮತಿ ನೀಡಲಿ. ವೇತನವೂ ಇಲ್ಲದೆ, ಉದ್ಯೋಗ ಭದ್ರತೆಯೂ ಇಲ್ಲದೆ ಬದುಕುವುದಾದರೂ ಹೇಗೆ?'

–ಮೂರು ವರ್ಷಗಳ ಹಿಂದೆ ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ನಡೆದ ಆಕ್ಸಿಜನ್ ದುರಂತದಲ್ಲಿ ಮೃತಪಟ್ಟವರ ಕುಟುಂಬದ ಸದಸ್ಯರ ಪ್ರಶ್ನೆ ಇದು.

2021, ಮೇ 2ರಂದು ಮೃತಪಟ್ಟ 24 ಮಂದಿಯ ಕುಟುಂಬದ ಸದಸ್ಯರು ಇಂದಿಗೂ ಸೂಕ್ತ ಪರಿಹಾರಕ್ಕಾಗಿ, ನ್ಯಾಯಕ್ಕಾಗಿ, ಸರ್ಕಾರಿ ಉದ್ಯೋಗಕ್ಕಾಗಿ, ಸ್ವಾಭಿಮಾನದ ಬದುಕಿಗಾಗಿ ಹೋರಾಡುತ್ತಿದ್ದಾರೆ.

ಹುಸಿಯಾದ ಭರವಸೆ ?: 2022ರ ಸೆಪ್ಟೆಂಬರ್‌ನಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾರತ್ ಜೋಡೋ ಪಾದಯಾತ್ರೆಗಾಗಿ ಗುಂಡ್ಲುಪೇಟೆಗೆ ಬಂದಾಗ, ಸಂತ್ರಸ್ತರೊಂದಿಗೆ ಸಂವಾದ ನಡೆಸಿದ್ದರು. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಸರ್ಕಾರಿ ನೌಕರಿ ನೀಡುವ ಭರವಸೆ ನೀಡಿದ್ದರು.

ಚಾಮರಾಜನಗರ ಜಿಲ್ಲಾ ಆಸ್ಪತ್ರೆಯಲ್ಲಿ ಸಂಭವಿಸಿದ ಆಕ್ಸಿಜನ್ ದುರಂತದಲ್ಲಿ ಮೃತಪಟ್ಟವರ ಕುಟುಂಬದವರು

ಪತಿ ತೀರಿಹೋದ ಬಳಿಕ ತವರು ಮನೆಯಲ್ಲಿದ್ದೇನೆ. ಕಾಯಂ ನೌಕರಿ ಕೊಟ್ಟರೆ ನೆಮ್ಮದಿ
ಸವಿತಾ, ಸಂತ್ರಸ್ತೆ

ಮೂವರು ಹೆಣ್ಣುಮಕ್ಕಳಿದ್ದಾರೆ. ನೋಡಿಕೊಳ್ಳಲು ಯಾರೂ ಇಲ್ಲ. ಬದುಕನ್ನು ಕಿತ್ತುಕೊಳ್ಳಬೇಡಿ
ಸುಶೀಲಾ, ಸಂತ್ರಸ್ತೆ

ನಮಗೆ ಕೊಟ್ಟ ಮಾತಿನಂತೆ ಸರ್ಕಾರಿ ಉದ್ಯೋಗ ಕೊಟ್ಟು ಜೀವನಕ್ಕೊಂದು ದಾರಿ ತೋರಲಿ
ಜ್ಯೋತಿ, ಸಂತ್ರಸ್ತೆ

ಅದಾದ 8 ತಿಂಗಳಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು, ಉದ್ಯೋಗ, ಪರಿಹಾರದ ನಿರೀಕ್ಷೆಯಲ್ಲಿದ್ದ ಸಂತ್ರಸ್ತರಿಗೆ ಅಲ್ಪಾವಧಿಯಲ್ಲೇ ಭ್ರಮನಿರಸನವಾಗಿತ್ತು. ಸಂತ್ರಸ್ತರ ಹೋರಾಟ ತೀವ್ರಗೊಳ್ಳುತ್ತಲೇ ಕೆಲವರಿಗೆ ತಾತ್ಕಾಲಿಕ ಉದ್ಯೋಗ ನೀಡಲಾಗಿತ್ತು.

ಕೆಲವರು, 'ವಿದ್ಯಾರ್ಹತೆಗೆ ತಕ್ಕ ಉದ್ಯೋಗ ಬೇಕು' ಎಂದು ಗುತ್ತಿಗೆ ನೌಕರಿ ತಿರಸ್ಕರಿಸಿದ್ದರು. ಅನಿವಾರ್ಯತೆಗೆ ಸಿಲುಕಿದ್ದ 10ಕ್ಕೂ ಹೆಚ್ಚು ಮಂದಿ, ಇದೇ ಫೆಬ್ರುವರಿಯಿಂದ ಸರ್ಕಾರಿ ಕಚೇರಿಗಳಲ್ಲಿ 'ಡಿ' ದರ್ಜೆ ಹೊರಗುತ್ತಿಗೆ ನೌಕರರಾಗಿ ಸೇರಿಕೊಂಡರು.

ಆದರೆ, ಫೆಬ್ರುವರಿ ಹೊರುತುಪಡಿಸಿ ಉಳಿದ ತಿಂಗಳ ವೇತನ ಯಾರಿಗೂ ಸಿಕ್ಕಿಲ್ಲ. ಈಗ ಸಾಲ ಮಾಡಿ ಜೀವನ ನಿರ್ವಹಣೆ ಮಾಡುತ್ತಿದ್ದಾರೆ.

ಸಿಮ್ಸ್‌ಗೆ ವರ್ಗಾವಣೆ: ಇದರೊಂದಿಗೆ, ಗುಂಡ್ಲುಪೇಟೆ, ಕೊಳ್ಳೇಗಾಲ, ಹನೂರು ತಾಲ್ಲೂಕು ಕಚೇರಿ ಹಾಗೂ ಚಾಮರಾಜನಗರ ಜಿಲ್ಲಾಡಳಿತ ಕಚೇರಿಯಲ್ಲಿ ಕೆಲಸ ಮಾಡುತ್ತಿರುವವರಿಗೆ ಇದೀಗ ಸಿಮ್ಸ್‌ನಲ್ಲಿ (ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಬೋಧನಾ ಆಸ್ಪತ್ರೆ) ಕೆಲಸ ಮಾಡುವಂತೆ ಸೂಚನೆ ನೀಡಲಾಗಿದೆ.

'ಚಿಕ್ಕ ಮಕ್ಕಳು, ವಯಸ್ಸಾದ ಪೋಷಕರ ಜವಾಬ್ದಾರಿಯಿದೆ. ಏಕಾಏಕಿ ಸಿಮ್ಸ್‌ನಲ್ಲಿ ಕೆಲಸ ಮಾಡಿ ಎಂದರೆ ಹೇಗೆ? ಮಕ್ಕಳನ್ನು, ಅವಲಂಬಿತರನ್ನು ನೋಡಿಕೊಳ್ಳುವವರು ಯಾರು? ಎಂಬುದು ಸಂತ್ರಸ್ತರ ಪ್ರಶ್ನೆ.

'ಕಾಯಂ ನೌಕರಿ ಕೊಡುವವರೆಗೂ ಈಗಿನ ಸ್ಥಳದಲ್ಲೇ ಕರ್ತವ್ಯ ಮಾಡಲು ಅವಕಾಶ ಕೊಡಿ. ಸಿಮ್ಸ್‌ನಲ್ಲಿ ಮಾತ್ರ ಬೇಡ, ಮನೆಯವರನ್ನು ಕಳೆದುಕೊಂಡ ಆಸ್ಪತ್ರೆಯ ಪರಿಸರದಲ್ಲಿ ಕೆಲಸ ಮಾಡಲು ಮನಸ್ಸು ಒಪ್ಪುತ್ತಿಲ್ಲ' ಎನ್ನುತ್ತಾರೆ ಅವರು.

ಸಂತ್ರಸ್ತರಿಗೆ ಸಿಮ್ಸ್‌ನಲ್ಲಿ ಕೆಲಸ ನೀಡುವಂತೆ ಸರ್ಕಾರ ಆದೇಶಿಸಿದೆ. ಅವರಿಗೆ ಕಾಯಂ ನೌಕರಿ ನೀಡುವಂತೆ ಜಿಲ್ಲಾಡಳಿತ ಪ್ರಸ್ತಾವ ಸಲ್ಲಿಸಿದೆ. ಜುಲೈ 1ರಂದು ಸಭೆ ನಡೆಸಲಾಗುವುದು
ಶಿಲ್ಪಾ ನಾಗ್, ಜಿಲ್ಲಾಧಿಕಾರಿ

ದುರಂತದಲ್ಲಿ ಮೃತಪಟ್ಟವರ ಕುಟುಂಬದವರಿಗೆ ಕಾಯಂ ನೌಕರಿ ನೀಡುವವರೆಗೂ ಈಗಿನ ಸ್ಥಳದಲ್ಲೇ ಮುಂದುವರಿಸಬೇಕು
ಎಂ.ಮಹೇಶ್, ನಗರಸಭೆ ಸದಸ್ಯ

ಉದಯನಿಧಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸನಾತನ ಧರ್ಮ ಒಂದು ಸಾಂಕ್ರಾಮಿಕ ರೋಗವಾಗಿದ್ದು, ಅದನ್ನು ಬುಡಸಮೇತ ಕಿತ್ತು ಹಾಕಬೇಕು' ಎಂಬ ಹೇಳಿಕೆಯನ್ನು ಆಕ್ಷೇಪಿಸಿದ ಪ್ರಕರಣದ ಆರೋಪಿ, ತಮಿಳುನಾಡಿನ ಸಚಿವ ಉದಯನಿಧಿ ಸ್ಟಾಲಿನ್ ಅವರಿಗೆ ನಗರದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಷರತ್ತು ಬದ್ಧ ಜಾಮೀನು ನೀಡಿದೆ.

ಸಮನ್ಸ್ ಜಾರಿಯಾಗಿದ್ದರಿಂದ ಉದಯನಿಧಿ ಸ್ಟಾಲಿನ್ ಮಂಗಳವಾರ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ.ಎನ್. ಶಿವಕುಮಾರ್ ಮುಂದೆ ಖುದ್ದು ಹಾಜರಾದರು.

ಆರೋಪಿಯ ಹಾಜರಾತಿಯನ್ನು ದಾಖಲಿಸಿಕೊಂಡ ನ್ಯಾಯಾಧೀಶರು, ₹ 5 ಸಾವಿರ ನಗದು ಹಾಗೂ ₹ 50 ಸಾವಿರ ಮೊತ್ತದ ವೈಯಕ್ತಿಕ ಬಾಂಡ್ ಮೇರೆಗೆ ಜಾಮೀನು ನೀಡಿದರು. ವಿಚಾರಣೆಯನ್ನು ಆಗಸ್ಟ್ 8ಕ್ಕೆ ಮುಂದೂಡಲಾಗಿದೆ.

ಸಚಿವರ ಪರ ಹೈಕೋರ್ಟ್ ವಕೀಲ ಬಾಲಾಜಿ ಸಿಂಗ್, ಚೆನ್ನೈನ ವಿಲ್ಸನ್, ದೂರುದಾರರ ಪರ ಕರ್ನಾಟಕ ಹೈಕೋರ್ಟ್ ವಕೀಲ ಧರ್ಮಪಾಲ್ ಹಾಜರಿದ್ದರು. ಪ್ರಕರಣದ ಇತರ ಮೂವರು ಆರೋಪಿಗಳ ವಿರುದ್ಧದ ನ್ಯಾಯಿಕಪ್ರಕ್ರಿಯೆಗಳಿಗೆ ಹೈಕೋರ್ಟ್ ಈಗಾಗಲೇ ತಡೆ ನೀಡಿದೆ.

ಪ್ರಕರಣವೇನು?: 'ಚೆನ್ನೈನಲ್ಲಿ 2023ರ ಸೆ.3ರಂದು ನಡೆದಿದ್ದ, 'ಸನಾತನ ಧರ್ಮ ನಿರ್ಮೂಲನಾ ಸಮಾವೇಶ'ದಲ್ಲಿ ಮಾತನಾಡಿದ್ದ ಸಚಿವ ಉದಯನಿಧಿ, 'ಸನಾತನ ಧರ್ಮ ಕುರಿತು ಹೇಳಿಕೆ ನೀಡಿದ್ದರು.

ಸಚಿವರ ಹೇಳಿಕೆಗೆ ಆಕ್ಷೇಪಿಸಿದ್ದ ನಗರದ ಬೆಳತ್ತೂರು ಕಾಲೋನಿಯ ವಿ.ಪರಮೇಶ್, 'ಇದರಿಂದ ನನ್ನ ಧಾರ್ಮಿಕ ಭಾವನೆಗೆ ದಕ್ಕೆಯುಂಟಾಗಿದೆ' ಎಂದು ಆರೋಪಿಸಿ ಖಾಸಗಿ ದೂರು ಸಲ್ಲಿಸಿದ್ದರು.

ವಿದ್ಯುತ್ ಸ್ಪರ್ಶ ಇಬ್ಬರು ಸಾವು

ಪ್ರಜಾವಾಣಿ ವಾರ್ತೆ

ತೇರದಾಳ (ಬಾಗಲಕೋಟೆ ಜಿಲ್ಲೆ): ಇಲ್ಲಿಯ ದಾಸರಮಡ್ಡಿಯಲ್ಲಿ ಮಂಗಳವಾರ ದುರ್ಗಾದೇವಿ ಗುಡಿ ಸಮೀಪದ ಮನೆಯ ಮೇಲೆ, ವಿದ್ಯುತ್ ಪ್ರವಹಿಸುತ್ತಿದ್ದ ತಂತಿ ಕಿತ್ತು ಬಿದ್ದು ಇಬ್ಬರು ಮೃತಪಟ್ಟು, ನಾಲ್ವರು ಗಾಯಗೊಂಡರು.

ಶುಕ್ರವಾರ ಮದುವೆಯಾಗಬೇಕಿದ್ದ ವರ ಸಂತೋಷ ರಾಮಪ್ಪ ಸುಣಗಾರ (23), ಜಾತ್ರೆಗೆಂದು ಬೀಗರ ಊರಿಗೆ ಬಂದಿದ್ದ ವರನ ಅತ್ತೆ ಬೆಳಗಾವಿಯ ಬೆನ್ನಾಳದ ಶೋಭಾ ಹುಲ್ಲೆನ್ನವರ (40) ಮೃತರು.

ಶ್ರೀಕಾಂತ ರಾಮಪ್ಪ ಸುಣಗಾರ, ವಧು ಸಂಗೀತಾ ನಾಗೇಶ ಕಾಮಶೆಟ್ಟಿ, ಕಸ್ತೂರಿ ರಾಮಪ್ಪ ಸುಣಗಾರ, ಮಹೇಶ ರಾಮಪ್ಪ ಸುಣಗಾರ ಗಾಯಗೊಂಡವರು.

ಕಪ್ಪತಗುಡ್ಡ: ಗಣಿಗಾರಿಕೆ ನಿಷೇಧಕ್ಕೆ ಅಸ್ತು

1ಕಿ.ಮೀ ವ್ಯಾಪ್ತಿಯಲ್ಲಿ ನಿರ್ಬಂಧ; ಸರ್ಕಾರದ ಆದೇಶ ಪ್ರಶ್ನಿಸಿದ್ದ ಅರ್ಜಿಗಳ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗದಗ ಜಿಲ್ಲೆಯ ಕಪ್ಪತಗುಡ್ಡ ವನ್ಯಜೀವಿ ಧಾಮದ ಅಂಚಿನಿಂದ ಒಂದು ಕಿಲೋ ಮೀಟರ್ ವ್ಯಾಪ್ತಿಯಲ್ಲಿನ ಕಲ್ಲು-ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ನಿಷೇಧಿಸಿದ್ದ ರಾಜ್ಯ ಸರ್ಕಾರದ ಕ್ರಮವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ಗದಗ ಜಿಲ್ಲಾ ಕಾರ್ಯಪಡೆ ಸಮಿತಿಯ ಆದೇಶವನ್ನು ಪ್ರಶ್ನಿಸಿ ಬ್ಯಾಡಗಿ ತಾಲ್ಲೂಕು ಮೋಟೆಬೆನ್ನೂರು ಗ್ರಾಮದ ಎಸ್.ಆರ್.ಬಳ್ಳಾರಿ, ಕೆಲವು ಗಣಿಗಾರಿಕಾ ಕಂಪನಿಗಳೂ ಸೇರಿದಂತೆ ಒಟ್ಟು ಒಂಬತ್ತು ಜನ ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ವಜಾಗೊಳಿಸಿರುವ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠವು, ಕಾಯ್ದಿರಿಸಿದ್ದ ತೀರ್ಪನ್ನು ಪ್ರಕಟಿಸಿದೆ.

'ಕಪ್ಪತಗುಡ್ಡ ಮೀಸಲು ಅರಣ್ಯವನ್ನು ವನ್ಯಜೀವಿ ಧಾಮ ಎಂದು ಅಧಿಸೂಚನೆ ಹೊರಡಿಸಲಾಗಿದೆ. ಹೀಗಾಗಿ, ಈ ಅರಣ್ಯ ಪ್ರದೇಶದ ಸುತ್ತಲಿನ ಒಂದು ಕಿ.ಮೀ ಪ್ರದೇಶವು ನಿಷೇಧಿತ ವಲಯವಾಗುತ್ತದೆ. ಆದಾಗ್ಯೂ, ಪರಿಸರ ಸೂಕ್ಷ್ಮ ವಲಯದ ಅಧಿಸೂಚನೆ ಇಲ್ಲದೇ ಹೋದರೂ ಸಂರಕ್ಷಿತ ಪ್ರದೇಶದ ಅಂಚಿನಿಂದ ಒಂದು ಕಿ.ಮೀ ವ್ಯಾಪ್ತಿಯ ಸ್ಥಳವನ್ನು ಸಂರಕ್ಷಿಸಬೇಕಾಗುತ್ತದೆ. ಆದ್ದರಿಂದ, ಕಪ್ಪತಗುಡ್ಡ ವನ್ಯಜೀವಿ ಧಾಮದ ಅಂಚಿನಿಂದ ಒಂದು ಕಿ.ಮೀ ವ್ಯಾಪ್ತಿಯಲ್ಲಿ ಗಣಿಗಾರಿಕೆ ಚಟುವಟಿಕೆಗಳಿಗೆ ಅನುಮತಿ ನೀಡಲು ಆಗದು' ಎಂದು ನ್ಯಾಯಪೀಠ ತೀರ್ಪಿನಲ್ಲಿ ತಿಳಿಸಿದೆ. ರಾಜ್ಯ ಸರ್ಕಾರದ ಪರ ಎಸ್.ಎಸ್.ಮಹೇಂದ್ರ ವಾದ ಮಂಡಿಸಿದ್ದರು.

ಕಪ್ಪತಗುಡ್ಡ: ಇದು 244.15 ಚದರ ಕಿ.ಮೀ ವಿಸ್ತೀರ್ಣ ಹೊಂದಿದೆ. ಇಲ್ಲಿ ಸುಮಾರು 295 ಜಾತಿಯ ಔಷಧೀಯ ಸಸ್ಯಗಳಿವೆ. ಇದು ಯುನೆಸ್ಕೊ ಮಾನ್ಯತೆ ಪಡೆದಿರುವ ಐತಿಹಾಸಿಕ ತಾಣ ಎನಿಸಿದೆ. ಇಲ್ಲಿನ ವನ್ಯಜೀವಿ ಧಾಮವು 32,346 ಹೆಕ್ಟೇರ್ ವಿಸ್ತೀರ್ಣ ಹೊಂದಿದೆ.

ಪ್ರಕರಣವೇನು?: ಗದಗ ಜಿಲ್ಲಾ ಕಾರ್ಯಪಡೆ ಸಮಿತಿಯು (ಗಣಿ), ಗದಗ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ; ಜಿಲ್ಲಾ ಮರಳು ಮೇಲ್ವಿಚಾರಣಾ ಸಮಿತಿ, ಜಿಲ್ಲಾ ಕಲ್ಲು ಕ್ರಷರ್‌ಗಳ ಪರವಾನಗಿ ಮತ್ತು ನಿಯಂತ್ರಣ ಪ್ರಾಧಿಕಾರದ ಜೊತೆ 2022ರ ಸೆಪ್ಟೆಂಬರ್ 29ರಂದು ಸಭೆ ನಡೆಸಿತ್ತು.

ಈ ಸಭೆಯಲ್ಲಿ ಕಪ್ಪತಗುಡ್ಡ ವನ್ಯಜೀವಿ ಧಾಮದ ಅಂಚಿನಿಂದ ಒಂದು ಕಿ.ಮೀ ವ್ಯಾಪ್ತಿಯಲ್ಲಿ ಗಣಿಗಾರಿಕೆ ನಿಷೇಧಿಸಲು, 14 ಕ್ವಾರಿಗಳ ಗುತ್ತಿಗೆ ಅಮಾನತು ಮಾಡಲು ಮತ್ತು ಯಾವುದಾದರೂ ನಿಯಮ ಉಲ್ಲಂಘನೆಯಾಗಿದ್ದರೆ ಅಂತಹ ಗುತ್ತಿಗೆಗಳನ್ನು ರದ್ದುಪಡಿಸಲು ಸರ್ವಾನುಮತದಿಂದ ನಿರ್ಧಾರ ಕೈಗೊಳ್ಳಲಾಗಿತ್ತು.

ಇದರ ಅನ್ವಯ ಕಲ್ಲು ಕ್ವಾರಿ ಗುತ್ತಿಗೆಗಳನ್ನು ಅಮಾನತುಪಡಿಸಿ 2022ರ ಡಿಸೆಂಬರ್ 5ರಂದು ಗದಗ ಜಿಲ್ಲೆಯ ಗಣಿ–ಭೂ ವಿಜ್ಞಾನ ಇಲಾಖೆಯ ಹಿರಿಯ ಭೂ ವಿಜ್ಞಾನಿ ನೇತೃತ್ವದ ಮತ್ತು ಸಕ್ಷಮ ಪ್ರಾಧಿಕಾರ ಆದೇಶಿಸಿತ್ತು.

ಈ ಆದೇಶವನ್ನು ಕಪ್ಪತಗುಡ್ಡ ವನ್ಯಜೀವಿ ಧಾಮ ಗಡಿಯ ಒಂದು ಕಿ.ಮೀ ವ್ಯಾಪ್ತಿಯಲ್ಲಿ ಪರವಾನಗಿ ಪಡೆದು ಕಲ್ಲು ಹಾಗೂ ಮರಳು, ಗಣಿಗಾರಿಕೆ ನಡೆಸುತ್ತಿದ್ದ ಅರ್ಜಿದಾರರು ಪ್ರಶ್ನಿಸಿದ್ದರು.

ರಾವಸಾಹೇಬ ಪಾಟೀಲ ನಿಧನ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ದಕ್ಷಿಣ ಭಾರತ ಜೈನ ಸಭಾ ಅಧ್ಯಕ್ಷ, ಸಹಕಾರ ಧುರೀಣ ರಾವಸಾಹೇಬ ಪಾಟೀಲ (80) ಮಂಗಳವಾರ ನಿಧನರಾದರು.



ಅವರಿಗೆ ಪತ್ನಿ, ಪುತ್ರಿ, ಇಬ್ಬರು ಪುತ್ರರು ಇದ್ದಾರೆ. ಅರಿಹಂತ ಶಾಲೆ ಆವರಣದಲ್ಲಿ ಅಂತ್ಯ ಸಂಸ್ಕಾರ ನಡೆಯಿತು.

1944ರ ಏ.11ರಂದು ರೈತ ಕುಟುಂಬದಲ್ಲಿ ಜನಿಸಿದ ಅವರು 5 ದಶಕ ಸಮಾಜಮುಖಿ ಕಾರ್ಯ ಮಾಡಿದರು. ನಿಪ್ಪಾಣಿ ತಾಲ್ಲೂಕಿನ ಬೋರಗಾಂವದಲ್ಲಿ ಅರಿಹಂತ ಉದ್ಯೋಗ ಸಮೂಹದ ಅಡಿಯಲ್ಲಿ ಅರಿಹಂತ ಕ್ರೆಡಿಟ್ ಸೌಹಾರ್ದ ಸಂಸ್ಥೆ, ಅರಿಹಂತ ಜವಳಿ ಮಿಲ್, ಅರಿಹಂತ ಸಕ್ಕರೆ ಕಾರ್ಖಾನೆ, ಆರ್.ಎ. ಪಾಟೀಲ ಪ್ರಾಥಮಿಕ ಮತ್ತು ಪ್ರೌಢಶಾಲೆ ತೆರೆದಿದ್ದಾರೆ.

ಅಜ್ಜನಿಗೆ ಮೆಹಂದಿ ಕೋನ್ ತನ್ನಿ ಎಂದ ದಾದಿ

ಉಬ್ಬಿದ ರಕ್ತನಾಳ ಶಸ್ತ್ರಚಿಕಿತ್ಸೆಗೆ ಗುರುತು ಹಾಕಲು ಅಗತ್ಯ: ನಿರ್ದೇಶಕರ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಹಾಸನ: ಕಾಲು ನೋವಿನ ಸಮಸ್ಯೆಯಿಂದ ಇಲ್ಲಿನ ಜಯಚಾಮರಾಜೇಂದ್ರ ಜಿಲ್ಲಾ ಆಸ್ಪತ್ರೆಗೆ ಮಂಗಳವಾರ ಬಂದಿದ್ದ ವೃದ್ಧ ಈರಯ್ಯ ಅವರಿಗೆ, ಬ್ಯಾಂಡೇಜ್ ಜೊತೆಗೆ ಮೆಹಂದಿ ಕೋನ್ ತರಲು ಸೂಚಿಸಿದ್ದು ಸಾಮಾಜಿಕ ಜಾಲತಾಣದಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿತ್ತು.

ಆದರೆ, ಕಾಲಿನ ಉಬ್ಬಿದ ರಕ್ತನಾಳ ಶಸ್ತ್ರಚಿಕಿತ್ಸೆ ನಡೆಸಬೇಕಿದ್ದು, ಬಾಧಿತ ಭಾಗವನ್ನು ಗುರುತು ಮಾಡಲು ಮೆಹಂದಿ ಕೋನ್ ತರಿಸಿದ್ದಾಗಿ ವೈದ್ಯರು ಸ್ಪಷ್ಟಪಡಿಸಿದ ಬಳಿಕ ಕುತೂಹಲಕ್ಕೆ ತೆರೆ ಬಿತ್ತು.



ಅಜ್ಜನಿಗೆ ಬರೆದುಕೊಟ್ಟಿದ್ದ ಔಷಧಿ ಚೀಟಿ

ಈರಯ್ಯ ಅವರಿಗೆ ಔಷಧಿ ಚೀಟಿ ನೀಡಿದ್ದ ದಾದಿಯೊಬ್ಬರು, ಎರಡು ಕ್ರೇಪ್ ಬ್ಯಾಂಡೇಜ್ ಹಾಗೂ ಒಂದು ಮೆಹಂದಿ ಕೋನ್ ತರಬೇಕೆಂದು ಬರೆದಿದ್ದರು. ಔಷಧಿ ಅಂಗಡಿಯಲ್ಲಿ ಚೀಟಿಯನ್ನು ತೋರಿಸಿದಾಗ, 'ಮೊದಲನೆಯದ್ದು ಮೆಹಂದಿ ಕೋನ್. ಔಷಧಿಯಲ್ಲ. ಏಕೆ ಬರೆದುಕೊಟ್ಟಿದ್ದಾರೆ' ಎಂದು ಅಂಗಡಿಯವರು ಪ್ರಶ್ನಿಸಿದ್ದರು. ಈರಯ್ಯ ಭೇಟಿ ನೀಡಿದ ಎಲ್ಲ ಔಷಧ ಅಂಗಡಿಗಳಲ್ಲೂ ಇದೇ ಪ್ರಶ್ನೆ ಎದುರಾಗಿತ್ತು.

ಕೊನೆಗೆ ದಾರಿಯಲ್ಲಿ ಸಿಕ್ಕ ಸಾಮಾಜಿಕ ಹೋರಾಟಗಾರ್ತಿ ಸುನೀತಾ ಹೆಬ್ಬಾರ್ ಅವರು, 'ಈ ಬಗ್ಗೆ ದಾದಿಯನ್ನೇ ಕೇಳಿ' ಎಂದು ಸಲಹೆ ನೀಡಿದ್ದರು. ನಂತರ ವಿಷಯವನ್ನು ಸಾಮಾಜಿಕ ಜಾಲತಾಣದಲ್ಲಿ ಪ್ರಸ್ತಾಪಿಸಿದ್ದರಿಂದ, ಚರ್ಚೆ ನಡೆದಿತ್ತು.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಹಿಮ್ಸ್ ನಿರ್ದೇಶಕ ಡಾ.ಎಸ್.ವಿ. ಸಂತೋಷ್, 'ಈರಯ್ಯ ಉಬ್ಬಿದ ರಕ್ತನಾಳ ಸಮಸ್ಯೆಯಿಂದ ಬಳಲುತ್ತಿದ್ದು, ಶಸ್ತ್ರಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಬಾಧಿತ ಭಾಗಕ್ಕೆ ಪೆನ್‌ನಿಂದ ಗುರುತು ಹಾಕಿದರೆ, ಎರಡು ದಿನಗಳಲ್ಲಿ ಅಳಿಸಿ ಹೋಗುತ್ತದೆ. ಹೀಗಾಗಿ ಮೆಹಂದಿ ಕೋನ್‌ನಿಂದ ಗುರುತು ಹಾಕಲಾಗುತ್ತದೆ' ಎಂದು ಸ್ಪಷ್ಟಪಡಿಸಿದರು.

ಬಾಲಕ ಸಾವು ಇಲಿಜ್ವರ ಶಂಕೆ

ಬೆಳಗಾವಿ: ಶಂಕಿತ ಇಲಿ ಜ್ವರದಿಂದ ಬಳಲುತ್ತಿದ್ದ ತಾಲ್ಲೂಕಿನ ಗೋಜಗೆ ಗ್ರಾಮದ ಗಣೇಶ ಜಂಗಮ (14) ಎಂಬಾತ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ಮಂಗಳವಾರ ಮೃತಪಟ್ಟಿದ್ದಾನೆ.

'ಶಂಕಿತ ಇಲಿಜ್ವರ ಮತ್ತು ಕಿಡ್ನಿ ವೈಫಲ್ಯ ಕಾರಣ ಬಾಲಕನನ್ನು 2 ದಿನದ ಹಿಂದೆ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಡೆಂಗಿ ಇರಲಿಲ್ಲ' ಎಂದು ಟಿಎಚ್ಒ ಡಾ.ಸಂಜಯ ಡುಮ್ಮಗೋಳ ತಿಳಿಸಿದರು.

ಎಂಪಿಎಂಗೆ ಕಾಡು: ಖಂಡ್ರೆ ಒತ್ತಡ

ಒಂದನೇ ಪುಟದಿಂದ...

ಈ ಸಂದರ್ಭದಲ್ಲಿ ಖಂಡ್ರೆ ಅವರು ರಾಜ್ಯ ಸರ್ಕಾರಕ್ಕೆ ಬರಬೇಕಾದ ಕಾಂಪಾ ನಿಧಿ, ಪಾರಂಪರಿಕವಾಗಿ ಹೊಂದಿರುವ ವನ್ಯಜೀವಿ ಅಂಗಾಂಗವನ್ನು ಮರಳಿಸಲು ಕೊನೆಯ ಅವಕಾಶ ಕಲ್ಪಿಸುವ ರಾಜ್ಯ ಸರ್ಕಾರದ ನಿರ್ಧಾರದ ಕುರಿತಂತೆ ಚರ್ಚಿಸಿದರು. ಕಾಂಪಾ ನಿಧಿಯಡಿ ಹೆಚ್ಚುವರಿಯಾಗಿ ₹ 200 ಕೋಟಿ ಮಂಜೂರು ಮಾಡುವಂತೆ ಮನವಿ ಮಾಡಿದರು.

ನೀಲಗಿರಿ ನಿಷೇಧಕ್ಕೆ ಆಗ್ರಹ: ಅಕೇಶಿಯಾ ಮತ್ತು ನೀಲಗಿರಿ ನಿಷೇಧಿಸಲು ಆಗ್ರಹಿಸಿ ಹಾಗೂ ಸರ್ಕಾರವು ಎಂಪಿಎಂ ಕಾರ್ಖಾನೆಗೆ ನೀಡಿದ್ದ ಅರಣ್ಯ ಭೂಮಿಯನ್ನು ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿ 'ನಮ್ಮೂರಿಗೆ ಅಕೇಶಿಯಾ ಮರ ಬೇಡ ಹೋರಾಟ ಒಕ್ಕೂಟ'ವು ರಾಜ್ಯ ಸರ್ಕಾರಕ್ಕೆ ಇತ್ತೀಚೆಗೆ ಮನವಿ ಸಲ್ಲಿಸಿತ್ತು.

'ಮಲೆನಾಡು, ಪಶ್ಚಿಮ ಘಟ್ಟಗಳ ಶ್ರೇಣಿಯ ನಿತ್ಯ ಹರಿದ್ವರ್ಣ ಕಾಡನ್ನು ಹೊಂದಿದೆ. ಇಲ್ಲಿ ಹಲವು ನದಿಗಳು ಜನ್ಮತಾಳಿವೆ. ಜೀವ ವೈವಿಧ್ಯ ಪ್ರದೇಶವಿದು. ಇಲ್ಲಿ ಪರಿಸರ ಏರುಪೇರಾದರೆ ವನ್ಯಜೀವಿಗಳು ಮಾತ್ರವಲ್ಲ ಅದು ಮಾನವ ಸಂಕುಲದ ಮೇಲೂ ಪರಿಣಾಮ ಬೀರುತ್ತದೆ. ಇಂತಹ ಪ್ರದೇಶಗಳಲ್ಲಿ ಅಕೇಶಿಯಾ ಮತ್ತು ನೀಲಗಿರಿ ನೆಡುತೋಪುಗಳನ್ನು ಬೆಳೆಸುವುದರಿಂದ ಪರಿಸರಕ್ಕೆ ಹಾನಿಯಾಗುತ್ತದೆ' ಎಂದು ಮನವಿಯಲ್ಲಿ ತಿಳಿಸಲಾಗಿತ್ತು.

ಹಾಲು: ಪ್ಯಾಕೆಟ್‌ಗೆ ₹ 2 ಹೆಚ್ಚಳ

ಒಂದನೇ ಪುಟದಿಂದ...

'ಜಿಲ್ಲಾ ಒಕ್ಕೂಟಗಳಿಂದ ಕೆಎಂಎಫ್‌ಗೆ ಹೆಚ್ಚಿನ ಪ್ರಮಾಣದಲ್ಲಿ ಹಾಲು ಬರುತ್ತಿದೆ. ಪ್ರತಿದಿನ ಸಂಗ್ರಹವಾಗುತ್ತಿರುವ ಹಾಲಿನ ಪ್ರಮಾಣ 1 ಕೋಟಿ ಲೀಟರ್ ತಲುಪುತ್ತಿದೆ. ಹೆಚ್ಚುವರಿ ಹಾಲನ್ನು ಸಂಗ್ರಹಿಸಲು ಆಗುತ್ತಿಲ್ಲ. ಈ ಕಾರಣಕ್ಕಾಗಿ ಗ್ರಾಹಕರಿಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಹೆಚ್ಚುವರಿಯಾಗಿ 50 ಎಂಎಲ್ ಹಾಲು ನೀಡುತ್ತಿದ್ದು, ಹಾಲಿನ ದರ ಹೆಚ್ಚಿಸಿಲ್ಲ' ಎಂದು ಸ್ಪಷ್ಟಪಡಿಸಿದರು.

'ಕೆಎಂಎಫ್‌ನಲ್ಲಿ ಹಳೆಯ ಪ್ರಮಾಣ ಹಾಗೂ ದರ ಮುದ್ರಿತವಾಗಿರುವ ಹಾಲಿನ ಪ್ಯಾಕೆಟ್‌ಗಳ ದಾಸ್ತಾನಿದೆ. ಇವು ಮುಗಿಯುವವರೆಗೂ ಅದೇ ಪ್ಯಾಕೆಟ್‌ಗಳಲ್ಲಿ ಹಾಲು ಸರಬರಾಜು ಮಾಡಲಾಗುತ್ತದೆ. ಗ್ರಾಹಕರು ಸಹಕರಿಸಬೇಕು' ಎಂದು ಮನವಿ ಮಾಡಿದರು.

ದರ ಏರಿಕೆ ಲೆಕ್ಕಾಚಾರ: ಮನೆಗೆ ಹಾಲನ್ನು ಬಳಸುವವರು ಸಂಗ್ರಹಿಸಿಟ್ಟುಕೊಳ್ಳಲು ಅನುಕೂಲ ಎಂಬ ಕಾರಣಕ್ಕೆ ಅರ್ಧ ಲೀಟರ್ ಪ್ಯಾಕೆಟ್‌ಗಳನ್ನೇ ಖರೀದಿಸುತ್ತಾರೆ. ದಿನ ಅಥವಾ ಎರಡು ದಿನಕ್ಕೆ ಒಂದೂವರೆ ಅಥವಾ ಎರಡು ಲೀಟರ್ ಹಾಲು ಬಳಕೆ ಮಾಡುವವರು ಒಂದು ಲೀಟರ್ ಪ್ಯಾಕೆಟ್ ಖರೀದಿ ಮಾಡುವ ಬದಲು ಕ್ರಮವಾಗಿ ಅರ್ಧ ಲೀಟರ್‌ನ ಮೂರು ಅಥವಾ ನಾಲ್ಕು ಪ್ಯಾಕೆಟ್‌ಗಳನ್ನು ಖರೀದಿಸುವುದು ರೂಢಿ. ಎರಡು ಲೀಟರ್‌ಗೆ ಬೇಡಿಕೆ ಸಲ್ಲಿಸಿದರೆ ಮನೆಗೆ ಹಾಲನ್ನು ಪೂರೈಸುವ ನಂದಿನಿ ಉತ್ಪನ್ನಗಳ ಬಿಡಿ ಮಾರಾಟಗಾರರು ಅಥವಾ ಆ್ಯಪ್ ಆಧಾರಿತ ಪೂರೈಕೆದಾರರು ಅರ್ಧಲೀಟರ್‌ನ ನಾಲ್ಕು ಪ್ಯಾಕೆಟ್‌ಗಳನ್ನೇ ಸರಬರಾಜು ಮಾಡುತ್ತಾರೆ. ಕೆಎಂಎಫ್‌ನ ವಿವಿಧ ಒಕ್ಕೂಟಗಳ ಒಟ್ಟು ಉತ್ಪಾದನೆಯಲ್ಲಿ ಅರ್ಧ ಲೀಟರ್ ಪ್ಯಾಕೆಟ್‌ಗಳೇ ಹೆಚ್ಚಿನ ಪ್ರಮಾಣದಲ್ಲಿವೆ. ಹೋಟೆಲ್‌ಗಳು, ವಿವಿಧ ಭೋಜನ ಕೂಟಗಳಿಗೆ ಖರೀದಿಸುವಾಗಲಷ್ಟೇ ಒಂದು ಅಥವಾ ಐದು ಲೀಟರ್‌ಗಳ ಪ್ಯಾಕೆಟ್‌ಗಳನ್ನು ಖರೀದಿಸುತ್ತಾರೆ.

ಕೆಎಂಎಫ್ ಅರ್ಧ ಲೀಟರ್‌ನ ಪ್ಯಾಕೆಟ್‌ನ ದರವನ್ನು ₹2 ಹೆಚ್ಚಳ ಮಾಡಿರುವುದರಿಂದಾಗಿ ಒಂದು ಲೀಟರ್ ಪ್ಯಾಕೆಟ್‌ನ ಬದಲು, ಅರ್ಧ ಲೀಟರ್‌ನ ಎರಡು ಪ್ಯಾಕೆಟ್ ಖರೀದಿಸುವವರಿಗೆ ದರ ಏರಿಕೆಯ ಬರೆ ₹ 2 ಅಲ್ಲ; ₹ 4 ಆಗಿರುತ್ತದೆ.

ಹಾಲಿನ ದರ ಏರಿಸಿಲ್ಲ: ಸಿದ್ದರಾಮಯ್ಯ

ಒಂದನೇ ಪುಟದಿಂದ...

'ರಾಜ್ಯದಲ್ಲಿ ಹಾಲಿನ ಉತ್ಪಾದನೆ ಹೆಚ್ಚಿರುವುದರಿಂದ ರೈತರ ಅನುಕೂಲಕ್ಕಾಗಿ ಕೆಎಂಎಫ್ ಈ ನಿರ್ಧಾರ ಕೈಗೊಂಡಿದೆ' ಎಂದಿದ್ದಾರೆ.

ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಹಾಲಿನ ಉತ್ಪಾದನೆಯಲ್ಲಿ ಶೇ 15ರಷ್ಟು ಹೆಚ್ಚಳವಾಗಿದೆ. ನಿತ್ಯ 99 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ರೈತರು ತರುತ್ತಿರುವ ಹಾಲನ್ನು ಖರೀದಿ ಮಾಡಬೇಕೆಂಬ ಉದ್ದೇಶದಿಂದ ಪ್ಯಾಕೆಟ್‌ಗಳಲ್ಲಿ ಮಾರಾಟ ಮಾಡುವ ಹಾಲಿನ ಪ್ರಮಾಣದಲ್ಲಿ ತುಸು ಹೆಚ್ಚಳ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಹಾಲಿನ ದರವನ್ನು ಪ್ರತಿ ಲೀ.ಗೆ ₹ 3ರಷ್ಟು ಹೆಚ್ಚಿಸಲಾಗಿದೆ. ಅದನ್ನು ರೈತರಿಗೆ ವರ್ಗಾಯಿಸಲಾಗಿತ್ತು. ಇದರಿಂದ ಹಾಲು ಉತ್ಪಾದನೆ ಹೆಚ್ಚಳಕ್ಕೆ ಪ್ರೋತ್ಸಾಹ ದೊರಕಿತ್ತು ಎಂದು ಹೇಳಿದ್ದಾರೆ.

ಹಂಸಲೇಖಗೆ ನಾಲ್ವಡಿ ಪ್ರಶಸ್ತಿ

ಮಂಡ್ಯ: ಇಲ್ಲಿನ ಕರ್ನಾಟಕ ಸಂಘವು ಇದೇ ಮೊದಲ ಬಾರಿಗೆ ಸ್ಥಾಪಿಸಿರುವ 'ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ'ಗೆ ಸಂಗೀತ ನಿರ್ದೇಶಕ ಹಂಸಲೇಖ ಅವರನ್ನು ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ₹1 ಲಕ್ಷ ನಗದು ಹೊಂದಿದೆ.

ಹಂಸಲೇಖ

'ನಗರದಲ್ಲಿ ಜೂನ್ 30ರಂದು ಸಚಿವ ಶಿವರಾಜ ತಂಗಡಗಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಆದಿಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮೀಜಿ, ಕೊಮ್ಮೇರಹಳ್ಳಿಯ ಪುರುಷೋತ್ತಮಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ' ಎಂದು ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ ಮಂಗಳವಾರ ತಿಳಿಸಿದರು.

'ಸಚಿವ ಎನ್.ಚಲುವರಾಯಸ್ವಾಮಿ ಸಮಾರಂಭ ಉದ್ಘಾಟಿಸಲಿದ್ದು, ಮಂಡ್ಯ ಶಾಸಕ ರವಿಕುಮಾರಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಸಿ.ಎಸ್.ಪುಟ್ಟರಾಜು ನಾಲ್ವಡಿ ಭಾವಚಿತ್ರ ಅನಾವರಣ ಮಾಡಲಿದ್ದಾರೆ' ಎಂದರು.

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರು ವ್ಯವಹರಿಸಲು ಉದ್ದೇಶಿಸಿರುವ, ಕೆಳಕಂಡ ಸರ್ವೆ ನಂಬರ್‌ಗಳಲ್ಲಿನ ಸಂಪೂರ್ಣ ಅಥವಾ ಭಾಗಶಃ ಜಮೀನುಗಳ ಹಕ್ಕುಗಳನ್ನು, ನಮ್ಮ ಕಕ್ಷಿದಾರರ ಪರವಾಗಿ ನಾವು ಪರಿಶೋಧಿಸುತ್ತಿದ್ದೇವೆ. ಅವು ಯಾವುವು ಎಂದರೆ, ಸರ್ವೆ ನಂ. 305/2 ರಲ್ಲಿನ 2 ಗುಂಟಾ ಬಿ ಖರಾಬ್ ಸೇರಿದಂತೆ 8 ಗುಂಟಾ ವಿಸ್ತೀರ್ಣದ, ಸರ್ವೆ ನಂ. 305/3 ರಲ್ಲಿನ 2 ಗುಂಟಾ ಬಿ ಖರಾಬ್ ಸೇರಿದಂತೆ 7 ಗುಂಟಾ ವಿಸ್ತೀರ್ಣದ, ಸರ್ವೆ ನಂ. 305/4 ರಲ್ಲಿನ 0.12 ಗುಂಟಾ, ಸರ್ವೆ ನಂ. 305/7 ರಲ್ಲಿನ 2 ಗುಂಟಾ ಬಿ ಖರಾಬ್ ಸೇರಿದಂತೆ 8 ಗುಂಟಾ ವಿಸ್ತೀರ್ಣದ, ಸರ್ವೆ ನಂ. 118/2 ರಲ್ಲಿನ 0.02 ಗುಂಟಾ ಎ ಖರಾಬ್ ಸೇರಿದಂತೆ 18.02 ಗುಂಟಾ ವಿಸ್ತೀರ್ಣದ, ಸರ್ವೆ ನಂ. 155/3 ರಲ್ಲಿನ 5 ಗುಂಟಾ ವಿಸ್ತೀರ್ಣದ, ಸರ್ವೆ ನಂ. 155/2 ರಲ್ಲಿನ 5 ಗುಂಟಾ ವಿಸ್ತೀರ್ಣದ, ಸರ್ವೆ ನಂ. 155/7 ರಲ್ಲಿನ 6 ಗುಂಟಾ ವಿಸ್ತೀರ್ಣದ, ಸರ್ವೆ ನಂ. 154/4 ರಲ್ಲಿನ 0.08 ಗುಂಟಾ ಬಿ ಖರಾಬ್ ಸೇರಿದಂತೆ 38 ಗುಂಟಾ ವಿಸ್ತೀರ್ಣದ, ಸರ್ವೆ ನಂ. 153/4 ರಲ್ಲಿನ 8 ಗುಂಟಾ ವಿಸ್ತೀರ್ಣದ, ಸರ್ವೆ ನಂ. 153/2 ರಲ್ಲಿನ 0.12 ಗುಂಟಾ ಎ ಖರಾಬ್ ಸೇರಿದಂತೆ 34.12 ಗುಂಟಾ ವಿಸ್ತೀರ್ಣದ, ಸರ್ವೆ ನಂ. 151/2 ರಲ್ಲಿನ 4 ಎಕರೆ 6 ಗುಂಟಾ ವಿಸ್ತೀರ್ಣದ, ಸರ್ವೆ ನಂ. 201/6 ರಲ್ಲಿನ 2 ಗುಂಟಾ ಬಿ ಖರಾಬ್ ಸೇರಿದಂತೆ 4 ಎಕರೆ 20 ಗುಂಟಾ ವಿಸ್ತೀರ್ಣದ, ಸರ್ವೆ ನಂ. 201/3 ರಲ್ಲಿನ 0.08 ಗುಂಟಾ ಬಿ ಖರಾಬ್ ಸೇರಿದಂತೆ 22.08 ಗುಂಟಾ ವಿಸ್ತೀರ್ಣದ, ಸರ್ವೆ ನಂ. 165/1 ರಲ್ಲಿನ 2 ಗುಂಟಾ ಎ ಖರಾಬ್ ಸೇರಿದಂತೆ 22 ಗುಂಟಾ ವಿಸ್ತೀರ್ಣದ, ಸರ್ವೆ ನಂ. 165/2 ರಲ್ಲಿನ 3 ಗುಂಟಾ ಎ ಖರಾಬ್ ಸೇರಿದಂತೆ 1 ಎಕರೆ 6 ಗುಂಟಾ ವಿಸ್ತೀರ್ಣದ, ಸರ್ವೆ ನಂ. 165/3 ರಲ್ಲಿನ 1 ಗುಂಟಾ ಎ ಖರಾಬ್ ಸೇರಿದಂತೆ 35 ಗುಂಟಾ ವಿಸ್ತೀರ್ಣದ, ಸರ್ವೆ ನಂ. 165/4 ರಲ್ಲಿನ 20 ಗುಂಟಾ ವಿಸ್ತೀರ್ಣದ, ಸರ್ವೆ ನಂ. 165/5 ರಲ್ಲಿನ 1 ಗುಂಟಾ ಎ ಖರಾಬ್ ಸೇರಿದಂತೆ 11 ಗುಂಟಾ ವಿಸ್ತೀರ್ಣದ, ಸರ್ವೆ ನಂ. 165/6 ರಲ್ಲಿನ 1 ಗುಂಟಾ ಎ ಖರಾಬ್ ಸೇರಿದಂತೆ 1 ಎಕರೆ 6 ಗುಂಟಾ ವಿಸ್ತೀರ್ಣದ, ಸರ್ವೆ ನಂ. 166/1 ರಲ್ಲಿನ 6.08 ಗುಂಟಾ ವಿಸ್ತೀರ್ಣದ, ಸರ್ವೆ ನಂ. 166/3 ರಲ್ಲಿನ 6.08 ಗುಂಟಾ ವಿಸ್ತೀರ್ಣದ, ಸರ್ವೆ ನಂ. 166/4 ರಲ್ಲಿನ 7 ಗುಂಟಾ ವಿಸ್ತೀರ್ಣದ, ಸರ್ವೆ ನಂ. 166/2 ರಲ್ಲಿನ 30 ಗುಂಟಾ ವಿಸ್ತೀರ್ಣದ, ಸರ್ವೆ ನಂ. 167/1 ರಲ್ಲಿನ 1 ಎಕರೆ 2 ಗುಂಟಾ ವಿಸ್ತೀರ್ಣದ, ಸರ್ವೆ ನಂ. 167/2 ರಲ್ಲಿನ 1 ಎಕರೆ 2 ಗುಂಟಾ ವಿಸ್ತೀರ್ಣದ, ಸರ್ವೆ ನಂ. 167/3 ರಲ್ಲಿನ 1 ಎಕರೆ 2 ಗುಂಟಾ ವಿಸ್ತೀರ್ಣದ, ಸರ್ವೆ ನಂ. 167/4 ರಲ್ಲಿನ 1 ಎಕರೆ 2 ಗುಂಟಾ ವಿಸ್ತೀರ್ಣದ, ಸರ್ವೆ ನಂ. 158 ರಲ್ಲಿನ 22 ಗುಂಟಾ ವಿಸ್ತೀರ್ಣದ, ಸರ್ವೆ ನಂ. 159 ರಲ್ಲಿನ 3 ಗುಂಟಾ ಬಿ ಖರಾಬ್ ಸೇರಿದಂತೆ 38 ಗುಂಟಾ ವಿಸ್ತೀರ್ಣದ, ಸರ್ವೆ ನಂ. 160 ರಲ್ಲಿನ 10 ಗುಂಟಾ ಎ ಖರಾಬ್ ಸೇರಿದಂತೆ 7 ಎಕರೆ 24 ಗುಂಟಾ ವಿಸ್ತೀರ್ಣದ, ಸರ್ವೆ ನಂ. 164 ರಲ್ಲಿನ 6 ಗುಂಟಾ ಎ ಖರಾಬ್ ಸೇರಿದಂತೆ 5 ಎಕರೆ 9 ಗುಂಟಾ ವಿಸ್ತೀರ್ಣದ, ಸರ್ವೆ ನಂ. 161/1 ರಲ್ಲಿನ 2 ಎಕರೆ 7 ಗುಂಟಾ ವಿಸ್ತೀರ್ಣದ, 161/2 ರಲ್ಲಿನ 1 ಎಕರೆ ವಿಸ್ತೀರ್ಣದ,ಸರ್ವೆ ನಂ. 161/3 ರಲ್ಲಿನ 7 ಗುಂಟಾ ವಿಸ್ತೀರ್ಣದ, ಸರ್ವೆ ನಂ. 161/4 ರಲ್ಲಿನ 20 ಗುಂಟಾ ವಿಸ್ತೀರ್ಣದ, ಸರ್ವೆ ನಂ. 161/5 ರಲ್ಲಿನ 20 ಗುಂಟಾ ವಿಸ್ತೀರ್ಣದ, ಸರ್ವೆ ನಂ. 162/1 ರಲ್ಲಿನ 35 ಗುಂಟಾ ವಿಸ್ತೀರ್ಣದ, ಸರ್ವೆ ನಂ. 162/2 ರಲ್ಲಿನ 2 ಗುಂಟಾ ಬಿ ಖರಾಬ್ ಸೇರಿದಂತೆ 2 ಎಕರೆ 7 ಗುಂಟಾ ವಿಸ್ತೀರ್ಣದ ಮತ್ತು ಸರ್ವೆ ನಂ. 163 ರಲ್ಲಿನ 2 ಎಕರೆ 37 ಗುಂಟಾ ವಿಸ್ತೀರ್ಣದ, ಒಟ್ಟಾರೆ 47 ಎಕರೆ 11.02 ಗುಂಟಾ ವಿಸ್ತೀರ್ಣವುಳ್ಳ, ನಂದಗುಡಿ ಗ್ರಾಮ, ನಂದಗುಡಿ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ ಜಮೀನು ಭೂಭಾಗಗಳು (ಇಲ್ಲಿ ಇನ್ನುಮುಂದೆ, ಸಮಗ್ರವಾಗಿ, 'ಷೆಡ್ಯೂಲ್ ಪ್ರಾಪರ್ಟಿ' ಎನ್ನಲಾಗುತ್ತದೆ).

ಯಾವುದೇ ವ್ಯಕ್ತಿ/ವ್ಯಕ್ತಿಗಳು ಅಥವಾ ಸಂಸ್ಥೆ/ಸಂಸ್ಥೆಗಳು ಉಲ್ಲೇಖಿತ ಷೆಡ್ಯೂಲ್ ಪ್ರಾಪರ್ಟಿಯ ಮೇಲಾಗಲಿ ಅಥವಾ ಪ್ರಾಪರ್ಟಿಯ ಯಾವುದೇ ಭಾಗದ ಮೇಲಾಗಲಿ, ಮಾರಾಟ, ವರ್ಗಾವಣೆ, ವಿನಿಮಯ, ಅಸೈನ್‌ಮೆಂಟ್, ಅಗ್ರಿಮೆಂಟ್, ಗುತ್ತಿಗೆ, ಮಾರಾಟ, ಜಿಬಿಗೊಯಿಂಗ್, ಫ್ಲೋರ್ ಸ್ಪೇಸ್ ಇಂಡೆಕ್ಸ್, ಅಭಿವೃದ್ಧಿ ಸಾಧ್ಯತೆ, ಅಭಿವೃದ್ಧಿ ಹಕ್ಕುಗಳು, ಉಯಿಲು, ರಿಲೀಸ್, ರಿಲಿಕ್ವಿಷ್‌ಮೆಂಟ್ ರೀತಿಯಾಗಿ ಅಥವಾ ಯಾವುದೇ ಕಾನೂನು ನ್ಯಾಯಾಲಯದ, ನ್ಯಾಯತೀರ್ಮ ಪ್ರಾಧಿಕಾರದ ಡಿಕ್ರಿ ಅಥವಾ ಆದೇಶದ ರೂಪದಲ್ಲಿ ಅಥವಾ ಋಣಭಾರ, ಅಡಮಾನ (ಇಕ್ವಿಟೇಬಲ್ ಅಥವಾ ಇನ್ನಾವುದೇ ರೀತಿಯ), ಭೋಗ್ಯ, ಲೀನ್, ಚಾರ್ಜ್, ನಿರ್ವಹಣೆ, ಲೈಸನ್ಸ್, ಉಡುಗೊರೆ, ಅನುವಂಶಿಕ, ಸಕ್ಸೆಶನ್, ಹೈಪೊಥಿಕೇಶನ್, ಅವಿಭಜಿತ ಪಾಲು, ಸ್ವಾಧೀನತೆ, ಈಸ್‌ಮೆಂಟ್, ಟ್ರಸ್ಟ್, ಬಿಕ್ವೆಸ್ಟ್, ಉಪ ಭೋಗ್ಯ, ಭೋಗ್ಯದ ಅಡಿಯಲ್ಲಿ, ಟೆನ್ಸಿ, ಸಬ್ ಟೆನ್ಸಿ, ಲೀವ್ ಅಂಡ್ ಲೈಸನ್ಸ್, ಈಸ್‌ಮೆಂಟ್, ಆಪ್ಷನ್, ಮೊದಲ ತಿರಸ್ಕಾರದ ಹಕ್ಕು ಅಥವಾ ಮೊದಲ ಆಫರ್ ಹಕ್ಕು ಅಥವಾ ಪ್ರಿಯಂಪ್ಷನ್ ಅಥವಾ ಇನ್ನಾವುದೇ ಸ್ವರೂಪದ ಋಣಭಾರ, ಕೊವೆನಂಟ್ ಅಥವಾ ಕಂಡಿಷನ್, ಪಾಲುದಾರಿಕೆ, ಟ್ರಸ್ಟ್, ಪರಿವಾರ ವ್ಯವಸ್ಥೆ ಅಥವಾ ಕೌಟುಂಬಿಕ ಇತ್ಯರ್ಥ, ಅಥವಾ ಇತರೆ ಡಿಸ್ಪೊಸಿಷನ್ ಅಥವಾ ಯಾವುದೇ ಕಾನೂನು ನ್ಯಾಯಾಲಯ ಅಥವಾ ನ್ಯಾಯಾಧಿಕರಣ ಅಥವಾ ಕಂದಾಯ ಅಥವಾ ಶಾಸನಬದ್ಧ ಪ್ರಾಧಿಕಾರ ಅಥವಾ ನ್ಯಾಯತೀರ್ಮ ಪ್ರಾಧಿಕಾರ ನೀಡಿರುವ ಯಾವುದೇ ಲಿಸ್ ಪೆಂಡೆನ್ಸ್, ಇಂಜಂಕ್ಷನ್, ಅಟ್ಯಾಚ್‌ಮೆಂಟ್, ಡಿಕ್ರಿ ಅಥವಾ ಆದೇಶ ಅಥವಾ ಇನ್ನಾವುದೇ ರೀತಿಯ ಅಥವಾ ಯಾವುದೇ ಒಡಂಬಡಿಕೆ, ಡೀಡ್, ದಾಖಲಾತಿ ಅಥವಾ ಪವರ್ ಆಫ್ ಅಟಾರ್ನಿ ಅಥವಾ ಇನ್ನಾವುದೇ ಸ್ವರೂಪದ ಆಕ್ಷೇಪಣೆಗಳನ್ನು ಹೊಂದಿದ್ದರೆ, ಅಂತಹವರು ಈ ಪ್ರಕಟಣೆಯ ದಿನಾಂಕದಿಂದ 14 (ಹದಿನಾಲ್ಕು) ದಿನಗಳೊಳಗೆ, ಈ ಕೆಳಗಿನ ಸಹಿದಾರರಿಗೆ, ಕೆಳಗೆ ನಮೂದಿಸಲಾಗಿರುವ ಅವರ ವಿಳಾಸಕ್ಕೆ, ತಮ್ಮ ಆಕ್ಷೇಪಣೆಗಳನ್ನು ಅಥವಾ ಕ್ಲೇಮುಗಳನ್ನು ಲಿಖಿತ ರೂಪದಲ್ಲಿ ಮತ್ತು ನೋಟರಿ ಅಥವಾ ಸರ್ಟಿಫೈ ಮಾಡಲಾಗಿರುವ ಟ್ರೂ ಕಾಪಿ ಪೂರಕ ದಾಖಲಾತಿಗಳ ಸಮೇತ ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ, ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿತ ಹಕ್ಕುಗಳು ಸ್ಪಷ್ಟವಾಗಿವೆ, ಅಧಿಕೃತವಾಗಿವೆ ಮತ್ತು ವ್ಯವಹಾರಕ್ಕೆ ಯೋಗ್ಯವಾಗಿವೆ ಮತ್ತು ಸದರಿ ಷೆಡ್ಯೂಲ್ ಪ್ರಾಪರ್ಟಿಯ ಮೇಲೆ ಅನ್ಯ ಯಾವುದೇ ವ್ಯಕ್ತಿಯ ಯಾವುದೇ ಹಕ್ಕು, ಅಧಿಕಾರ, ಹಿತಾಸಕ್ತಿ, ಕ್ಲೇಮ್, ಡಿಮಾಂಡ್‌ಗಳು ಇರುವುದಿಲ್ಲ ಎಂದು ಪರಿಗಣಿಸಲಾಗುತ್ತದೆ. ಪೂರಕ ದಾಖಲಾತಿ ಇಲ್ಲದಿರುವ ಯಾವುದೇ ಕ್ಲೇಮ್‌ಗಳನ್ನು ಪರಿಗಣಿಸಲಾಗುವುದಿಲ್ಲ.

ದಯವಿಟ್ಟು ಲಕೋಟೆಯ ಮೇಲೆ 'ಪ್ರಾಜೆಕ್ಟ್ – ಇನ್‌ಫಿನೈಟ್ ಸ್ಪೇಸ್' ಎಂದು ದಪ್ಪ ಅಕ್ಷರಗಳಲ್ಲಿ ನಮೂದಿಸಬೇಕು.

ದಿನಾಂಕ: 26/06/2024
ಸ್ಥಳ: ಬೆಂಗಳೂರು

ಅಭಿಲಾಷ್ ಪಿಳ್ಳೈ
ಪಾಲುದಾರರು
ಸಿರಿಲ್ ಅಮರಚಂದ್ ಮಂಗಲದಾಸ್
ವಕೀಲರು ಮತ್ತು ಸಾಲಿಸಿಟರ್ಸ್
ಪ್ರೆಸ್ಟೀಜ್ ಫಾಲ್ಕನ್ ಟವರ್, 3ನೇ ಮಹಡಿ
ಬ್ರುಂಟನ್ ರೋಡ್, ಎಂ.ಜಿ.ರೋಡ್ ಪಕ್ಕ
ಬೆಂಗಳೂರು – 560 025
ಫೋನ್ ನಂ. 080 6792 2000

ಕರ್ನಾಟಕ ಸರಕಾರ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ

E-mail: eerdwsdydg@gmail.com ಫ್ಯಾಕ್ಸ್ : 08473 253805 ದೂರವಾಣಿ : 253805

ಸಂ: ಗ್ರಾಕುನೀ&ನೈ/ವಿಯಾ/ಸಿಬ್ಬಂದಿ–1/2024–25/372 ದಿನಾಂಕ:25–06–2024

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ)

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ ರವರಿಂದ 2024–25ನೇ ಸಾಲಿಗೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ ಮತ್ತು ಮೂರು ಉಪ–ವಿಭಾಗ (ಯಾದಗಿರಿ, ಶಹಾಪೂರ, ಸುರಪೂರ) ಗಳಿಗೆ ತಾ.ಸ, ಜಿಲ್ಲಾ & ತಾಲೂಕ ಪ್ರಯೋಗಾಲಯ, ಹಾಗೂ ಅವಶ್ಯಕವಿರುವ, ಡಾಟಾ ಎಂಟ್ರಿ ಆಪರೇಟರ್, ವಾಹನ ಚಾಲಕರು, ಮತ್ತು ಗ್ರೂಪ್ "ಡಿ" ಹುದ್ದೆಗಳನ್ನು ಹೊರಗುತ್ತಿಗೆ ಮೂಲಕ ಭರ್ತಿ ಮಾಡುವ ಸಲುವಾಗಿ ನೊಂದಾಯಿತ ಅರ್ಹ ಮಾನವ ಸಂಪನ್ಮೂಲ ಸಂಸ್ಥೆಗಳಿಂದ KPPP ಟೆಂಡರ್ ಕರೆಯಲಾಗಿದ್ದು, ಸಂಬಂಧಪಟ್ಟ ನೊಂದಾಯಿತ ಸಂಸ್ಥೆಗಳು KPPP ಕಾಯ್ದೆ ಪ್ರಕಾರ ರೂ.1,58,000/–ಮೊತ್ತದ ಇ.ಎಂ.ಡಿಯನ್ನು ಸಲ್ಲಿಸುವುದು.

Tender schedule : 1) Amount Put to Tender (Approximately): Rs.78,98,700/- **2) EMD:** Rs.1,58,000/- **3) Bid Validity Period (in Days):** As per KTPP Act **4) Last Date & Time for Tender Queries/Clarifications:** Date: 27-06-2024Time:10.30 am **5) Last Date & Time for receipt of tenders :**Date :06-07-2024 Time: 4.30 pm **6) Date & Time for Opening of Technical Bid:** Date :08-07-2024 Time : 11.00 am **7) Date & Time for Opening of Financial Bid:** Date :11-07-2024 Time : 11.00 am

ಉಳಿದ ವಿವರಗಳನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದು ಹಾಗೂ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಯಾದಗಿರಿ

ವಾ.ಸಾ.ಸಂ.ಇ/ಯಾದಗಿರಿ/39/ಕೆ.ಎಸ್.ಎಂ.ಸಿ.&ಎ/2024–25

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು – 560 009

ಸಂಖ್ಯೆ: ಕೆಆರ್‌ಐಡಿಎಲ್/ಡಬ್ಲ್ಯೂಕೆಎಸ್/ಟಿಎನ್‌ಡಿ/ಸಿಟಿಬಿ/ಎಇಎಫ್, ಟಿಐ ಮತ್ತು ಪಿಎಂಸಿ/2024–25 ದಿನಾಂಕ: 24.06.2024

ಸಲಹಾ ಸೇವೆಗಳಿಗಾಗಿ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ ಇವರು ಕೆಳಕಂಡ ಕಾರ್ಯಗಳ ಜೊತೆಗೆ ಸಲಹಾ ಸೇವೆಗಳನ್ನು ಒದಗಿಸಲು ಇ–ಟೆಂಡರುಗಳನ್ನು ಆಹ್ವಾನಿಸಿದ್ದಾರೆ. **"ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ವಾಣಿಜ್ಯ ತೆರಿಗೆ ಕಟ್ಟಡ ನಿರ್ಮಾಣಕ್ಕಾಗಿ ವಾಸ್ತುಶಿಲ್ಪಿ, ಇಂಜನಿಯರಿಂಗ್ ಸೇವೆಗಳು, ಮೂರನೆ ವ್ಯಕ್ತಿ ಪರಿಶೀಲನೆ ಮತ್ತು ಯೋಜನೆ ನಿರ್ವಹಣೆ ಸಲಹಾ ಸೇವೆಗಳನ್ನು ಒದಗಿಸುವುದಕ್ಕಾಗಿ"**. ವಾಸ್ತುಶಿಲ್ಪಿ ಇಂಜನಿಯರಿಂಗ್ ಸಂಸ್ಥೆಯು ಕಂಪನಿಗಳ ರಿಜಿಸ್ಟ್ರಾರ್ ಇವರಲ್ಲಿ ನೋಂದಣಿ ಮಾಡಿಸಿರಬೇಕು ಮತ್ತು ಇದೇ ರೀತಿಯ ಕಾರ್ಯಗಳನ್ನು ಮಾಡಿರುವ ಬಗ್ಗೆ ಸಲಹೆಗಾರರಾಗಿ ಕನಿಷ್ಠ 10 ವರ್ಷಗಳ ಅನುಭವ ಹೊಂದಿರಬೇಕು ಮತ್ತು ಕರ್ನಾಟಕದಲ್ಲಿ ತನ್ನ ಕಚೇರಿ ಹೊಂದಿರಬೇಕು. ಸಲಹಾ ಸಂಸ್ಥೆಯು ಕಳೆದ 5 ಹಣಕಾಸಿನ ವರ್ಷಗಳಲ್ಲಿ (ಹಣಕಾಸಿನ ವರ್ಷ 2019–2020 ರಿಂದ 2023–24 ರವರೆಗೆ) ವರ್ಷ ಒಂದಕ್ಕೆ **ರೂ. 100.00 ಲಕ್ಷಗಳಿಗಿಂತ** ಕಡಿಮೆ ಇಲ್ಲದ ವಾರ್ಷಿಕ ವಹಿವಾಟು ಹೊಂದಿರಬೇಕು. ಸಲಹಾ ಸಂಸ್ಥೆಯು ಕಳೆದ ಐದು ವರ್ಷಗಳಲ್ಲಿ ಸರ್ಕಾರ/ಅರೆ ಸರ್ಕಾರ/ಪಿಎಸ್‌ಯುಗಳಿಗೆ ಇದೇ ರೀತಿಯ ಕನಿಷ್ಠ ಮೂರು ಸಲಹಾ ಕಾರ್ಯಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿರಬೇಕು.

ಟೆಂಡರಿನಲ್ಲಿ ಭಾಗವಹಿಸಲು ಅಪೇಕ್ಷೆ ಹೊಂದಿರುವ ಸಂಸ್ಥೆಗಳು ಇ–ಆಡಳಿತ ಕಾರ್ಯಾಲಯದ ಹೊಸ ವೆಬ್‌ಸೈಟ್: **www.kppp.karnataka.gov.in** ಮೂಲಕ ವಿವರಗಳನ್ನು ನೋಡಬಹುದು, ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್ ಸಲ್ಲಿಸಬಹುದು. ಟೆಂಡರುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ನಿಗದಿತ ದಿನಾಂಕ ಮತ್ತು ಸಮಯದ ಒಳಗೆ ವಿದ್ಯುನ್ಮಾನ ರೂಪದಲ್ಲಿ (ಇನ್‌ಟರ್‌ನೆಟ್ ಮೂಲಕ ಆನ್‌ಲೈನ್‌ನಲ್ಲಿ) ಸಲ್ಲಿಸತಕ್ಕದ್ದು. ಇ–ಪ್ರೋಕ್ ಸಹಾಯವಾಣಿ ಸಂಪರ್ಕ ಸಂಖ್ಯೆ: + **91–8046010000 / +91–8068948777. (1) ಸಂಸ್ಥೆಯು ರೂ.30,000/–ಮೊತ್ತದ ಇಎಂಡಿ ಪಾವತಿಸಬೇಕು.** (2) ವಿಚಾರಣೆಗೆ ಕಡೆಯ ದಿನಾಂಕ ಮತ್ತು ಸಮಯ **10.07.2024 ರಂದು 14.00 ಗಂಟೆ ವರೆಗೆ.** (3) ಟೆಂಡರ್ ಸ್ವೀಕರಿಸುವ ಕಡೆಯ ದಿನಾಂಕ ಮತ್ತು ಸಮಯ **10.07.2024 ರಂದು 16.00 ಗಂಟೆ ವರೆಗೆ.** (4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ **12.07.2024 ರಂದು 16.00 ಗಂಟೆಗೆ.** (5) ಆರ್ಥಿಕ ಬಿಡ್ ತೆರೆಯುವ ದಿನಾಂಕ **15.07.2024 ರಂದು 16.00 ಗಂಟೆಗೆ.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
ಮುಖ್ಯ ಅಭಿಯಂತರರು (ಬೆಂಗಳೂರು)
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು–09
ದೂರವಾಣಿ: 080–28015604/+91 82176 33267/ +91 93801 34784
ಇ–ಮೇಲ್: tenderworks@kridl.net / ddworkskridl@gmail.com

ಸಹಿ/– ಮುಖ್ಯ ಅಭಿಯಂತರರು (ಬೆಂಗಳೂರು)

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಮುಖ್ಯ ಅಭಿಯಂತರರು & ಮುಖ್ಯ ಪ್ರಧಾನ ವ್ಯವಸ್ಥಾಪಕರ ಕಛೇರಿ (ತಾಂತ್ರಿಕ), ಬೆಂಘತ್ಯಾನಿನಿ, 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560 052.

ಸಂ: ಉಪ್ರವ್ಯ–1/ಬೆಂಘತ್ಯಾನಿನಿ/ಟೆಂಡ್/02/2024–25 ದಿನಾಂಕ:25.06.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

1. ಕೆಳಗಿನ ಕೋಷ್ಟಕದಲ್ಲಿ ಉಲ್ಲೇಖಿಸಲಾದ ಕಾಮಗಾರಿಗಳಿಗೆ 15ನೇ ಹಣಕಾಸು ಆಯೋಗದ ಅಡಿಯಲ್ಲಿ ಅನುದಾನವನ್ನು ಒದಗಿಸಲಾಗಿದೆ ಮತ್ತು ಅದಕ್ಕೆ ಅನುಗುಣವಾಗಿ ಕ್ರಿಯಾ ಯೋಜನೆಯನ್ನು ಸರ್ಕಾರವು ಅನುಮೋದಿಸಿದೆ.
2. ಈ ನಿಟ್ಟಿನಲ್ಲಿ, ಉಪ ಪ್ರಧಾನ ವ್ಯವಸ್ಥಾಪಕರು, ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ, ವ್ಯವಸ್ಥಾಪಕ ನಿರ್ದೇಶಕರು, ಬೆಂಘತ್ಯಾನಿನಿ, ಬೆಂಗಳೂರು ಅವರು ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕೆಲಸಗಳಿಗೆ ಅರ್ಹ ಬಿಡ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. ಬಿಡ್‌ದಾರರು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನ (ಅಂದರೆ https://kppp.karnataka.gov.in) ಮೂಲಕ ಕೋಷ್ಟಕದಲ್ಲಿ ನೀಡಲಾದ ಕಾಮಗಾರಿಗಳಿಗೆ ಬಿಡ್‌ಗಳನ್ನು ಸಲ್ಲಿಸಬಹುದು ಬಿಡ್‌ದಾರರು ಷರತ್ತು–3 ರಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತೆಯ ಮಾನದಂಡಗಳನ್ನು ಗಮನಿಸಲು ಸೂಚಿಸಲಾಗಿದೆ. ಅರ್ಹತೆ ಪಡೆಯಲು ಕೆ.ಡಬ್ಲ್ಯೂ–4 ನೋಂದಾಯಿತ ಗುತ್ತಿಗೆದಾರರಾಗಿರಬೇಕು.
3. ಬಿಡ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಬಹುದು.
4. ಇತರೆ ವಿವರಗಳನ್ನು ಟೆಂಡರ್ ದಾಖಲೆಗಳಲ್ಲಿ ನೋಡಬಹುದು.

ಕ್ರ. ಸಂ.	ಕಾಮಗಾರಿಯ ವಿವರ	ಟೆಂಡರಿನ ಅಂದಾಜು ಮೊತ್ತ (ರೂ ಲಕ್ಷಗಳಲ್ಲಿ)	ಇಎಂಡಿ (ರೂಗಳಲ್ಲಿ)	ಪೂರ್ಣಗೊಳಿಸುವ ಅವಧಿ (ಮಳೆಗಾಲ ಸೇರಿಸಿ)
1	ಬೆಂಕಿ ಅನಾಹುತ ಉಂಟಾದಲ್ಲಿ ಬೆಂಕಿಯ ಅಪಾಯವನ್ನು ಕಡಿಮೆ ಮಾಡಲು DWCC ಯಲ್ಲಿ ಅಗ್ನಿಶಾಮಕ ಸಾಧನಗಳನ್ನು ಒದಗಿಸುವುದು. (4ನೇ ಕರೆ).	400.00 (GST ಸೇರಿಸಿ)	ರೂ. 1,00,000/– ಇ–ಪಾವತಿಯ ಮೂಲಕ ಅಂದರೆ, ಆನ್‌ಲೈನ್/ ಆರ್‌ಟಿಜಿಎಸ್ / ಎನ್‌ಇಎಫ್‌ಟಿ/ ಓಟಿಸಿ ಹಾಗೂ ಉಳಿದ ರೂ. 5,00,000/– ಬ್ಯಾಂಕ್ ಗ್ಯಾರಂಟಿ/ ಎಫ್‌ಡಿಆರ್ ಮೂಲಕ ರಾಷ್ಟ್ರೀಕೃತ/ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡುವುದು.	6 ತಿಂಗಳು

1. ಬಿಡ್ ಪೂರ್ವಭಾವಿ ಸಭೆಯು **02.07.2024 ರಂದು 15:00 ಗಂಟೆಗೆ** ಮುಖ್ಯ ಅಭಿಯಂತರರು ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ ನಿಯಮಿತ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052 ಕಚೇರಿಯಲ್ಲಿ ನಡೆಯಲಿದೆ.
2. ಅಗತ್ಯ ಮಾಹಿತಿ/ದಾಖಲೆಗಳೊಂದಿಗೆ ತಾಂತ್ರಿಕ ದಾಖಲೆಗಳನ್ನು **10.07.2024 ರಂದು ಅಥವಾ 16:00 ಗಂಟೆಗಳ ಮೊದಲು** ಟೆಂಡರ್ ಡಾಕ್ಯುಮೆಂಟ್ ಪ್ರಕಾರ ಕೆಪಿಪಿ ಪೋರ್ಟಲ್ **https://kppp.karnataka.gov.in** ಗೆ ಅಪ್‌ಲೋಡ್ ಮಾಡಬೇಕು. ತಾಂತ್ರಿಕ ಬಿಡ್ ಅನ್ನು ಕೆಪಿಪಿ–ಪೋರ್ಟಲ್ ಮೂಲಕ **11.07.2024 ರಂದು 16:30 ಗಂಟೆಗಳ ನಂತರ** ನಿಗದಿತ ಸ್ಥಳದಲ್ಲಿ ತೆರೆಯಲಾಗುತ್ತದೆ. ಬಿಡ್‌ದಾರರು ಅಥವಾ ಆರಂಭಿಕ ಪ್ರಕ್ರಿಯೆಗೆ ಹಾಜರಾಗಲು ಬಯಸುವ ಅವರ ಅಧಿಕೃತ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ಕೆಪಿಪಿ–ಪೋರ್ಟಲ್ ಮೂಲಕ ನಿರ್ದಿಷ್ಟಪಡಿಸಿದಂತೆ ಬಿಡ್‌ಗಳನ್ನು ತೆರೆಯುವ ದಿನಾಂಕದಂದು ಕಚೇರಿಯನ್ನು ಮುಚ್ಚಿದರೆ, ಮುಂದಿನ ಕೆಲಸದ ದಿನದಂದು ಅದೇ ಸಮಯದಲ್ಲಿ ಮತ್ತು ಸ್ಥಳದಲ್ಲಿ ಬಿಡ್‌ಗಳನ್ನು ತೆರೆಯಲಾಗುತ್ತದೆ.
3. ನಿಯಂತ್ರಣಕ್ಕೆ ಮೀರಿದ ಸಿಸ್ಟಮ್ ವೈಫಲ್ಯದ ಕಾರಣದಿಂದಾಗಿ ಯಾವುದೇ ವಿಳಂಬಗಳಿಗೆ ಬಿಎಸ್‌ಡಬ್ಲ್ಯೂಎಂಎಲ್ ಜವಾಬ್ದಾರವಾಗಿರುವುದಿಲ್ಲ. ಯಾವುದೇ ಟೆಂಡರ್ ನವೀಕರಣಗಳನ್ನು ಟೆಂಡರ್‌ದಾರರಿಗೆ ತಿಳಿಸಲು ಸಿಸ್ಟಮ್ ಪ್ರಯತ್ನಿಸಿದರೂ ಸಹ, ಟೆಂಡರ್‌ದಾರರು ಸ್ವೀಕರಿಸದ ಯಾವುದೇ ಮಾಹಿತಿಗೆ ಬಿಎಸ್‌ಡಬ್ಲ್ಯೂಎಂಎಲ್ ಜವಾಬ್ದಾರನಾಗಿರುವುದಿಲ್ಲ. ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಅನ್ನು ಪರಿಶೀಲಿಸುವುದು ಟೆಂಡರ್‌ದಾರರ ಜವಾಬ್ದಾರಿಯಾಗಿದೆ, ಹೆಲ್ಪ್‌ಡೆಸ್ಕ್‌ನ ಇ–ಮೇಲ್ ವಿಳಾಸ **https://kppp.karnataka.gov.in** ಆಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಹೆಲ್ಪ್ ಡೆಸ್ಕ್ ದೂರವಾಣಿ ಸಂಖ್ಯೆಗಳು: 080–22371090/22373788. ಟೆಂಡರ್‌ದಾರರು ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯಕ್ಕೆ ಮುಂಚಿತವಾಗಿ ಕಂಪ್ಯೂಟರ್‌ನ ಬ್ರೌಸರ್ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳಬೇಕು. ಇಂಟರ್ನೆಟ್ ಸಂಪರ್ಕದ ಸಮಸ್ಯೆಗಳು ಮತ್ತು ತಾಂತ್ರಿಕ ದೋಷಗಳಿಂದಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ಗೆ ಪ್ರವೇಶಿಸಲಾಗದಿರುವಿಕೆಗೆ ಬಿಎಸ್‌ಡಬ್ಲ್ಯೂಎಂಎಲ್ ಜವಾಬ್ದಾರರಾಗಿರುವುದಿಲ್ಲ.
4. ಯಾವುದೇ ತಿದ್ದುಪಡಿ/ಅನುಬಂಧಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–1, ಬೆಂಘತ್ಯಾನಿನಿ

ವಾಸಾಸಂಇ/ವಾಪ್ರ/572/2024–25

ಬಳಕೆ ಪ್ರಮಾಣಪತ್ರ ನೀಡಿಲ್ಲವೆಂದು ಪತ್ರ ಬರೆದ ಕೇಂದ್ರ • ರಾಜ್ಯ ಸರ್ಕಾರವೇ ಹೊಣೆ ಎಂದೂ ಉಲ್ಲೇಖ

₹83 ಕೋಟಿಗೆ 'ಲೆಕ್ಕ' ನೀಡದ ಎಸ್‌ಟಿ ಇಲಾಖೆ

• ರಾಜೇಶ್ ರೈ ಚಟ್ಲ

ಬೆಂಗಳೂರು: ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯು ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ₹83 ಕೋಟಿಗೂ ಹೆಚ್ಚು ಮೊತ್ತದ ಅನುದಾನಕ್ಕೆ ಬಳಕೆ ಪ್ರಮಾಣಪತ್ರವನ್ನೇ ಸಲ್ಲಿಸಿಲ್ಲ.

ಬಳಕೆ ಪ್ರಮಾಣಪತ್ರ ಸಲ್ಲಿಸದಿರುವುದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿ ಮೇ 6ರಂದು ಪತ್ರ ಬರೆದಿರುವ ಕೇಂದ್ರ ಸರ್ಕಾರ, ಇದಕ್ಕೆ ರಾಜ್ಯ ಸರ್ಕಾರವೇ ಜವಾಬ್ದಾರಿ ಎಂದು ದೂರಿದೆ.

ಕೇಂದ್ರ ಸರ್ಕಾರದ ಬುಡಕಟ್ಟು ವ್ಯವಹಾರಗಳ ಸಚಿವಾಲಯವು (ಎಂಒಟಿಎ) ಸಂವಿಧಾನದ ಅನುಚ್ಛೇದ 275(1) ಅಡಿ ಬುಡಕಟ್ಟು ಪ್ರದೇಶಗಳ ಆರ್ಥಿಕತೆ ಸುಧಾರಿಸಲು ಅಗತ್ಯವಾದ ನಿರ್ಣಾಯಕ ಮೂಲಸೌಕರ್ಯಗಳ ಸೃಷ್ಟಿ ಮತ್ತು ಉನ್ನತೀಕರಣಕ್ಕೆ 2022–23ನೇ ಸಾಲಿನಲ್ಲಿ ರಾಜ್ಯಕ್ಕೆ ₹42.97 ಕೋಟಿ ಅನುದಾನ ಬಿಡುಗಡೆ ಮಾಡಿತ್ತು. ಈ ಅನುದಾನವನ್ನು ಬಳಕೆ ಮಾಡಿರುವುದಕ್ಕೆ ಯಾವುದೇ ಪ್ರಮಾಣಪತ್ರ ಸ್ವೀಕೃತ ಆಗಿಲ್ಲ ಎಂದು ಕೇಂದ್ರ ಸರ್ಕಾರ ಪತ್ರದಲ್ಲಿ ಹೇಳಿದೆ.

ಅಲ್ಲದೆ, 2023–24ನೇ ಸಾಲಿನಲ್ಲಿ ಒಟ್ಟು ₹40.70 ಕೋಟಿಯನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ. ಇದಕ್ಕೂ ಬಳಕೆ ಪ್ರಮಾಣಪತ್ರ ಸಲ್ಲಿಸಿಲ್ಲ. ಯೋಜನೆಗೆ ಸಂಬಂಧಿಸಿದಂತೆ ಭೌತಿಕ, ಆರ್ಥಿಕ ಪ್ರಗತಿಯ ವರದಿಯನ್ನೂ ಸಲ್ಲಿಸಿಲ್ಲ. ಆದಿವಾಸಿ ಅನುದಾನ ನಿರ್ವಹಣೆಯ ಸಿಸ್ಟಂ (ಎಡಿಐಜಿಆರ್ ಎಎಂಎಸ್) ಪೋರ್ಟಲ್‌ನಲ್ಲಿಯೂ ನಮೂದಿಸಿದ ಮಾಹಿತಿಗಳು ಅಪೂರ್ಣವಾಗಿದೆ ಎಂದೂ ಪತ್ರದಲ್ಲಿದೆ.

'ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯ ಅಧ್ಯಕ್ಷತೆಯಲ್ಲಿ ನಡೆದ ಹಲವು ಸಭೆಗಳಲ್ಲಿ ಈ ವಿಚಾರ ಪ್ರಸ್ತಾಪವಾಗಿದ್ದು, ಬಳಕೆ ಪ್ರಮಾಣ ಪತ್ರಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸುವಂತೆ ಇಲಾಖೆಯ ನಿರ್ದೇಶಕ ಬಿ. ಕಲ್ಲೇಶ್ ಅವರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿತ್ತು. ಆದರೂ ಯಾವುದೇ ಕ್ರಮ ವಹಿಸಿಲ್ಲ. ಹೀಗಾಗಿ ಅವರಿಗೆ ಕಾರಣ ಕೇಳುವ ನೋಟಿಸ್ ಜಾರಿ ಮಾಡಲಾಗಿತ್ತು. ಈ ನೋಟಿಸ್‌ಗೆ ಕಲ್ಲೇಶ್ ಅವರು ಲಿಖಿತ ಸಮಜಾಯಿಷಿ ನೀಡಿದ್ದರೂ ಸೂಕ್ತ ದಾಖಲೆಗಳೊಂದಿಗೆ ಸಮರ್ಥನೀಯ ಹೇಳಿಕೆಯನ್ನು ಸಲ್ಲಿಸಿಲ್ಲ' ಎಂದು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಮೂಲಗಳು ಹೇಳಿವೆ.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಇದೇ 18ರಂದು ನಡೆದ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಇಲಾಖೆ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳ ಕುರಿತು ಚರ್ಚೆ ನಡೆದಿದೆ. ನಿರ್ದೇಶಕ ಕಲ್ಲೇಶ್ ಅವರು ವಸತಿನಿಲಯಗಳ ಪರಿವೀಕ್ಷಣೆ ಮಾಡದಿರುವುದು ಮತ್ತು ಇಲಾಖೆಯ ಅಧೀನದಲ್ಲಿರುವ ವಿದ್ಯಾರ್ಥಿ ನಿಲಯಗಳು ಮತ್ತು ವಸತಿ ನಿಲಯಗಳಿಂದ ಬೇಡಿಕೆ ಪಡೆಯದೇ ಸಾಮಗ್ರಿಗಳನ್ನು ಕೇಂದ್ರೀಕೃತ ಟೆಂಡರ್ ಮೂಲಕ ಖರೀದಿಸಿ ಸರಬರಾಜು ಮಾಡಿರುವುದು ಈ ಸಭೆಯಲ್ಲಿ ಪ್ರಸ್ತಾವವಾಗಿದೆ. ನಿರ್ದೇಶಕರ ಕಾರ್ಯವೈಖರಿಯಿಂದ ಸಾರ್ವಜನಿಕ ಹಣ ಸಮರ್ಪಕವಾಗಿ ನಿಯೋಜಿತ ಕಾರ್ಯಕ್ರಮಗಳಿಗೆ ಬಳಕೆ ಆಗದಿರುವುದು ಮತ್ತು ವಸತಿ, ಆಶ್ರಯ ಶಾಲೆಗಳಲ್ಲಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಶೇ 75ಕ್ಕಿಂತ ಕಡಿಮೆ ಇದ್ದು, ವಿದ್ಯಾರ್ಥಿಗಳಿಗೆ ಹೆಚ್ಚುವರಿ ತರಬೇತಿ ಮೂಲಕ ಗುಣಾತ್ಮಕ ಶಿಕ್ಷಣ ನೀಡಲು ಕ್ರಮ ವಹಿಸದ ವಿಚಾರವೂ ಚರ್ಚೆಗೆ ಬಂದಿದೆ. ನಿರ್ದೇಶಕರ ಈ ಕಾರ್ಯವೈಖರಿಗೆ ಮುಖ್ಯಮಂತ್ರಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು' ಎಂದೂ ಮೂಲಗಳು ತಿಳಿಸಿವೆ.

ಕೇಂದ್ರದಿಂದ 8 ನೆನಪಿನೋಲೆ!

'ಕೇಂದ್ರ ಸರ್ಕಾರದ ಪರಿಶಿಷ್ಟ ಪಂಡಗಳ ಸಚಿವಾಲಯ ಫೆ. 5ರಂದು ಬರೆದಿದ್ದ ಪತ್ರದಲ್ಲಿ ವಿಶೇಷ ದುರ್ಬಲ ಬುಡಕಟ್ಟು ಗುಂಪುಗಳ (ಪಿವಿಟಿಜಿ) ಯೋಜನೆಯಡಿ 2021–22 ಮತ್ತು 2022–23ನೇ ಸಾಲಿನಲ್ಲಿ ರಾಜ್ಯಕ್ಕೆ ಬಿಡುಗಡೆ ಮಾಡಿರುವ ₹ 21 ಕೋಟಿ ಅನುದಾನದಲ್ಲಿ ₹ 5.24 ಕೋಟಿ ಅನುದಾನಕ್ಕೆ ಬಳಕೆ ಪ್ರಮಾಣಪತ್ರ ನೀಡಿಲ್ಲ. ಎಸ್‌ಎನ್‌ಎ (ಏಕ ನೋಡಲ್ ಖಾತೆ) ಖಾತೆಯಲ್ಲಿ ಬಾಕಿ ಇರುವ ₹ 2.47 ಕೋಟಿ ಮತ್ತು ಅದೇ ಖಾತೆಯಲ್ಲಿ ಬಾಕಿ ಇರುವ ಬಡ್ಡಿ ಮೊತ್ತ ₹ 60.83 ಲಕ್ಷ ವರ್ಗಾವಣೆಗೆ ಬಾಕಿ ಇದೆ. ಈ ಬಗ್ಗೆ ಕೇಂದ್ರ ಸರ್ಕಾರ ಎಂಟು ನೆನಪೋಲೆಗಳನ್ನು ಕಳುಹಿಸಿದ್ದರೂ ನಿಗದಿತ ಅವಧಿಯಲ್ಲಿ ಬಳಕೆ ಪ್ರಮಾಣಪತ್ರ ಸಲ್ಲಿಸಿಲ್ಲ. ಈ ಕರ್ತವ್ಯ ಲೋಪಕ್ಕೂ ಕಲ್ಲೇಶ್ ಅವರಿಗೆ ಕಾರಣ ಕೇಳುವ ನೋಟಿಸ್ ಜಾರಿ ಮಾಡಲಾಗಿತ್ತು. ಅದಕ್ಕೆ ಅವರು ಸಲ್ಲಿಸಿದ್ದ ಲಿಖಿತ ಸಮಜಾಯಿಷಿಯಲ್ಲಿಯೂ ಸೂಕ್ತ ದಾಖಲೆಗಳ ಸಹಿತ ಸಮರ್ಥನೀಯ ಹೇಳಿಕೆ ಸಲ್ಲಿಸಿಲ್ಲ' ಎಂದೂ ಇಲಾಖೆಯ ಮೂಲಗಳು ಹೇಳಿವೆ.

ನಿರ್ದೇಶಕ ಅಮಾನತು

ಕಲ್ಲೇಶ್ ಅವರು ತೀವ್ರ ಸ್ವರೂಪದ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಹೀಗಾಗಿ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಅಮಾನತಿನಲ್ಲಿ ಇಟ್ಟು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಇದೇ 22ರಂದು ಆದೇಶ ಹೊರಡಿಸಿದೆ. ಅಲ್ಲದೆ, ಕಲ್ಲೇಶ್ ಅವರ ಸೇವೆಯನ್ನು ಮಾತೃ ಇಲಾಖೆಯಾದ ಸಮಾಜ ಕಲ್ಯಾಣ ಇಲಾಖೆಗೆ ಹಿಂದಿರುಗಿಸಿದೆ.

ಸುದ್ದಿ 2 ನಿಮಿಷ

ಕನ್ನಡ ಬೋಧನಾ ಅವಧಿ ಹೆಚ್ಚಿಸಲು ಬರಗೂರು ಆಗ್ರಹ

ಬೆಂಗಳೂರು: ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್‌ಇಪಿ) ಪರ್ಯಾಯವಾಗಿ ರೂಪಿಸುತ್ತಿರುವ ರಾಜ್ಯ ಶಿಕ್ಷಣ ನೀತಿಯಲ್ಲೂ (ಎಸ್‌ಇಪಿ) ಕನ್ನಡಕ್ಕೆ ಅನ್ಯಾಯವಾಗುತ್ತಿದ್ದು, ತಕ್ಷಣ ಸರಿಪಡಿಸಬೇಕು ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಒತ್ತಾಯಿಸಿದ್ದಾರೆ.

ಈ ಕುರಿತು ಉನ್ನತ ಶಿಕ್ಷಣ ಸಚಿವರಿಗೆ ಪತ್ರ ಬರೆದಿರುವ ಅವರು, ರಾಜ್ಯ ಶಿಕ್ಷಣ ನೀತಿಯನ್ನು ರೂಪಿಸಲು ಸರ್ಕಾರ ಈಗಾಗಲೇ ಆಯೋಗವನ್ನು ರಚಿಸಿದೆ. ಆಯೋಗ ನೀಡಿದ ಮಧ್ಯಂತರ ವರದಿಯಂತೆ ಮೂರು

ವರ್ಷಗಳ ಪದವಿ ಶಿಕ್ಷಣವನ್ನು ಮರು ಜಾರಿ ಮಾಡಲು ನಿರ್ಧರಿಸಲಾಗಿದೆ. ಇದು ಸರಿಯಾದ ಕ್ರಮ. ಆದರೆ, ಗೊಂದಲಗಳು ಮುಂದುವರೆದಿವೆ ಎನ್ನುವುದು ಅನೇಕ ಅಧ್ಯಾಪಕರ ಅಭಿಪ್ರಾಯ ಎಂದು ಹೇಳಿದ್ದಾರೆ.

ಇದೇ ಮೇನಲ್ಲಿ ಸರ್ಕಾರ ಹೊರಡಿಸಿದ ಆದೇಶ ಹಾಗೂ ಪಠ್ಯಕ್ರಮ ವಿನ್ಯಾಸದ ಸಮಿತಿ ನೀಡಿದ ವರದಿಯಂತೆ ವಿವಿಧ ವಿಶ್ವವಿದ್ಯಾಲಯಗಳು ಪದವಿಯ ಮೊದಲ ಎರಡು ಸೆಮಿಸ್ಟರ್‌ಗಳಿಗೆ ಪಠ್ಯಕ್ರಮ ನಿಗದಿ ಮಾಡಿವೆ. ಕೆಲ ವಿಶ್ವವಿದ್ಯಾಲಯಗಳು ಕನ್ನಡವನ್ನೂ ಒಳಗೊಂಡಂತೆ ಭಾಷಾ ವಿಷಯಗಳಿಗೆ ವಾರಕ್ಕೆ ಮೂರು ಗಂಟೆ ಬೋಧನಾ ಅವಧಿ ನಿಗದಿ ಮಾಡಿರುವುದು ಅನ್ಯಾಯ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಅನ್ಯಾಯವನ್ನು ಕೂಡಲೇ ಸರಿಮಾಡಬೇಕು. ಎಲ್ಲ ವಿವಿಗಳಲ್ಲೂ ಕನ್ನಡವನ್ನು ವಾರಕ್ಕೆ 4 ಗಂಟೆ ಬೋಧಿಸಲು ನಿರ್ದೇಶನ ನೀಡಬೇಕು ಎಂದಿದ್ದಾರೆ.

ಪಿಜಿ–ಸಿಇಟಿ ಪರೀಕ್ಷೆ ಮುಂದೂಡಿಕೆ

ಬೆಂಗಳೂರು: 2024-25ನೇ ಸಾಲಿನ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು (ಪಿಜಿ-ಸಿಇಟಿ) ಮುಂದೂಡಲಾಗಿದೆ.

ಈ ಮೊದಲು ಎಂ.ಇ, ಎಂ.ಟೆಕ್, ಎಂ.ಆರ್ಕಿಟೆಕ್ಚರ್ ಕೋರ್ಸ್‌ಗಳ ಪ್ರವೇಶ ಪರೀಕ್ಷೆ ಜುಲೈ 13 ಹಾಗೂ ಎಂ.ಸಿ.ಎ ಮತ್ತು ಎಂ.ಬಿ.ಎ. ಕೋರ್ಸ್‌ಗಳ ಪ್ರವೇಶ ಪರೀಕ್ಷೆಯನ್ನು ಜುಲೈ 14ರಂದು ಪರೀಕ್ಷೆ ನಡೆಸಲು ನಿರ್ಧರಿಸಲಾಗಿತ್ತು.

ವಿವಿಧ ವಿಶ್ವವಿದ್ಯಾಲಯಗಳ ಪದವಿ ತರಗತಿಗಳ ಅಂತಿಮ ಸೆಮಿಸ್ಟರ್ ಪರೀಕ್ಷೆಗಳು ಜುಲೈ 5 ಮತ್ತು ಜುಲೈ 10ರಿಂದ ಪ್ರಾರಂಭವಾಗುತ್ತಿವೆ. ಹಾಗಾಗಿ, ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಹೊಸ ದಿನಾಂಕವನ್ನು ಶೀಘ್ರ ಪ್ರಕಟಿಸಲಾಗುವುದು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಅರ್ಜಿ ಸಲ್ಲಿಕೆ ಅವಧಿಯನ್ನೂ ವಿಸ್ತರಿಸಲಾಗಿದ್ದು, ಜುಲೈ 7ರ ಒಳಗೆ ಆನ್‌ಲೈನ್ ಮೂಲಕ ನೋಂದಣಿ ಮಾಡಬಹುದು. ಜುಲೈ 9ರ ಸಂಜೆ 6ರ ಒಳಗೆ ಶುಲ್ಕ ಪಾವತಿಸಲು ಅವಕಾಶ ನೀಡಲಾಗಿದೆ. ಪರಿಷ್ಕೃತ ಮಾಹಿತಿಗಾಗಿ http://kea.kar.nic.in ಸಂಪರ್ಕಿಸಬಹುದು.

ವಾದ್ಯ ವೈವಿಧ್ಯ...

ಕಲಬುರಗಿಯ ಸರಾಫ್ ಬಜಾರ್ ಬಳಿ ಪುಟ್ಟ ಮಳಿಗೆಯೊಂದರಲ್ಲಿ ವಾದ್ಯಗಳ ರಿಪೇರಿಯಲ್ಲಿ ತೊಡಗಿದ್ದ ವ್ಯಾಪಾರಿಗಳು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಮೂವರಿಗೆ 'ವರ್ಷದ ಲೇಖಕಿ' ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘ ನೀಡುವ ಅಂಕಿತ ಪುಸ್ತಕದ 'ವರ್ಷದ ಲೇಖಕಿ' ದತ್ತಿನಿಧಿ ಪ್ರಶಸ್ತಿಗೆ ಲೇಖಕಿಯರಾದ ಬಾನು ಮುಷ್ತಾಕ್, ಎಚ್.ಎಸ್. ಅನುಪಮಾ ಹಾಗೂ ಪ್ರತಿಭಾ ನಂದಕುಮಾರ್ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ತಲಾ ₹35 ಸಾವಿರ ನಗದು ಒಳಗೊಂಡಿದೆ. ಲೇಖಕಿ ಗೀತಾ ಶೆಣೈ, ಅಂಕಿತ ಪುಸ್ತಕದ ಪ್ರಕಾಶ್ ಕಂಬತ್ತಳ್ಳಿ, ಪ್ರಭಾ ಕಂಬತ್ತಳ್ಳಿ ಹಾಗೂ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ಒಳಗೊಂಡ ಸಮಿತಿ 2022, 2023 ಮತ್ತು 2024ನೇ ಸಾಲಿಗೆ ಈ ಆಯ್ಕೆ ಮಾಡಿದೆ.

ಅಂಕಿತ ಪುಸ್ತಕ ಪ್ರಕಾಶನ ಸಂಸ್ಥೆಯು ಕರ್ನಾಟಕ ಲೇಖಕಿಯರ ಸಂಘದಲ್ಲಿ ಈ ದತ್ತಿನಿಧಿ ಸ್ಥಾಪಿಸಿದೆ. ಸಾಹಿತ್ಯದಲ್ಲಿ ಗುರುತರ ಕೆಲಸ ಮಾಡಿದವರನ್ನು ಗುರುತಿಸಿ ಈ ಪುರಸ್ಕಾರ ನೀಡಲಾಗುತ್ತಿದೆ.

ಬಾನು ಮುಷ್ತಾಕ್

ಅನುಪಮಾ

ಪ್ರತಿಭಾ ನಂದಕುಮಾರ್

ಇದೇ 30ರಂದು ಬೆಳಿಗ್ಗೆ 10.30ಕ್ಕೆ ಎನ್.ಆರ್. ಕಾಲೊನಿಯಲ್ಲಿರುವ ಬಿ.ಎಂ.ಶ್ರೀ. ಪ್ರತಿಷ್ಠಾನದ ಸಭಾಂಗಣದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಸಾಹಿತಿ ಬರಗೂರು ರಾಮಚಂದ್ರಪ್ಪ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ನೆರವು ಕೋರಿದ ರೇಣುಕಸ್ವಾಮಿ ಕುಟುಂಬ

ಬೆಂಗಳೂರು: ಕೊಲೆಯಾಗಿರುವ ಚಿತ್ರದುರ್ಗದ ರೇಣುಕಸ್ವಾಮಿ ಅವರ ತಂದೆ ಮತ್ತು ತಾಯಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮಂಗಳವಾರ ಭೇಟಿ ಮಾಡಿದ್ದು, ಕುಟುಂಬಕ್ಕೆ ನೆರವು ನೀಡುವಂತೆ ಮನವಿ ಮಾಡಿದರು.

'ರೇಣುಕಸ್ವಾಮಿಯ ದುಡಿಮೆಯಿಂದಲೇ ಕುಟುಂಬ ನಿರ್ವಹಣೆ ಆಗುತ್ತಿತ್ತು. ಮಗನ ಅಗಲಿಕೆಯಿಂದ ಕುಟುಂಬ ನಿರ್ವಹಣೆಗೂ ಕಷ್ಟವಾಗಿದೆ. ರೇಣುಕ ಸ್ವಾಮಿಯ ಪತ್ನಿಗೆ ಸರ್ಕಾರಿ ಉದ್ಯೋಗ ನೀಡುವ ಮೂಲಕ ನೆರವಿಗೆ ಬರಬೇಕು' ಎಂದು ತಂದೆ ಮತ್ತು ತಾಯಿ ಮನವಿ ಮಾಡಿದರು. 'ನಮ್ಮ ಸರ್ಕಾರ ರೇಣುಕ ಸ್ವಾಮಿಯ ಸಾವಿಗೆ ನ್ಯಾಯ ದೊರಕಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಿದೆ. ಜೊತೆಗೆ ಅವರ ಕುಟುಂಬಕ್ಕೆ ಸಾಧ್ಯವಿರುವ ಅಗತ್ಯ ನೆರವು ನೀಡುವುದಾಗಿ ಭರವಸೆ ನೀಡಿದ್ದೇನೆ' ಎಂದು ಸಿಎಂ ತಿಳಿಸಿದ್ದಾರೆ.

ಕೆಪಿಎಸ್‌ಸಿಗೆ ದೇವಪ್ಪ ಸದಸ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಸದಸ್ಯರಾಗಿ ಬಾಗಲಕೋಟೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶನಾಲಯದ ಸಂಶೋಧನೆ ಮತ್ತು ವಿಸ್ತರಣಾ ಸಹ ನಿರ್ದೇಶಕ ಪ್ರೊ. ವಿ. ದೇವಪ್ಪ ಅವರನ್ನು ನೇಮಿಸಿ ಮಂಗಳವಾರ ಅಧಿಸೂಚನೆ ಹೊರಡಿಸಲಾಗಿದೆ. ದೇವಪ್ಪ ಅವರನ್ನು ಅಧಿಕಾರಿ ವಿಭಾಗದಿಂದ ಖಾಲಿ ಇರುವ ಸದಸ್ಯ ಸ್ಥಾನಕ್ಕೆ ನೇಮಿಸಲಾಗಿದೆ. ಕೆಪಿಎಸ್‌ಸಿಗೆ 16 ಸದಸ್ಯರ ನೇಮಕಕ್ಕೆ ಅವಕಾಶವಿದ್ದು, ಪ್ರೊ. ದೇವಪ್ಪ ಅವರ ನೇಮಕದ ಮೂಲಕ 15 ಸ್ಥಾನಗಳು ಭರ್ತಿ ಆದಂತಾಗಿದೆ.

ಸೂರಜ್ ರೇವಣ್ಣ ವಿರುದ್ಧ ಆಪ್ತ ದೂರು

ಪ್ರಜಾವಾಣಿ ವಾರ್ತೆ

ಹೊಳೆನರಸೀಪುರ (ಹಾಸನ): ವಿಧಾನ ಪರಿಷತ್ ಸದಸ್ಯ ಡಾ.ಸೂರಜ್ ರೇವಣ್ಣ ಪರವಾಗಿ ದೂರು ಸಲ್ಲಿಸಿದ್ದ, ಹನುಮನಹಳ್ಳಿಯ ಶಿವಕುಮಾರ್, ಮಂಗಳವಾರ ಇಲ್ಲಿನ ನಗರ ಠಾಣೆಯಲ್ಲಿ ಸೂರಜ್ ವಿರುದ್ಧವೇ ದೂರು ದಾಖಲಿಸಿದ್ದಾರೆ.

ಮಂಗಳವಾರ ಮಧ್ಯಾಹ್ನ ಠಾಣೆಗೆ ಬಂದು ದೂರು ಕೊಟ್ಟ ಬಳಿಕ ಮಾತನಾಡಿ, 'ನನಗೆ ಆಗಿರುವ ಅನ್ಯಾಯಕ್ಕೆ ನ್ಯಾಯ ಕೊಡಿಸಿ ಎಂದು ದೂರು ದಾಖಲಿಸಿದ್ದೇನೆ' ಎಂದು ಹೇಳಿದರು. ಅಷ್ಟರೊಳಗೆ ಪೊಲೀಸರು ಅವರನ್ನು ಜೀಪಿನಲ್ಲಿ ಹತ್ತಿಸಿಕೊಂಡು ಗ್ರಾಮಾಂತರ ಠಾಣೆಯತ್ತ ತೆರಳಿದರು.

'ಡಾ.ಸೂರಜ್ ನನ್ನ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ' ಎಂದು ಸಂತ್ರಸ್ತ ಖಾಸಗಿ ವಾಹಿನಿಯಲ್ಲಿ ಹೇಳಿಕೆ ನೀಡಿದ್ದರು. ಅದರ ಬೆನ್ನಲ್ಲೇ, ಜೂನ್ 21 ರಂದು ಶಿವಕುಮಾರ್, 'ಸಂತ್ರಸ್ತ ಹಣಕ್ಕೆ ಬೇಡಿಕೆ ಇಟ್ಟಿದ್ದು, ಹಣ ಕೊಡದಿದ್ದರೆ ಮಾನ ಹರಾಜು ಹಾಕುವುದಾಗಿ ಬೆದರಿಕೆ ಹಾಕಿದ್ದ' ಎಂದು ನಗರ ಠಾಣೆಯಲ್ಲಿ ದೂರು ದಾಖಲಿಸಿದ್ದರು.

22 ರಂದು ಹೊಳೆನರಸೀಪುರ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದ ಸಂತ್ರಸ್ತ, 'ಡಾ.ಸೂರಜ್ ಅವರು ನನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದು, ಸೂರಜ್ ಹಾಗೂ ಶಿವಕುಮಾರ್ – ಇಬ್ಬರಿಂದಲೂ ಬೆದರಿಕೆ ಇದೆ' ಎಂದು ದೂರು ದಾಖಲಿಸಿದ್ದರು.

23 ರಂದು ಸೂರಜ್ ಅವರನ್ನು ಪೊಲೀಸರು ಬಂಧಿಸಿ ಬೆಂಗಳೂರಿಗೆ ಕರೆದೊಯ್ದಿದ್ದರು. ಸಂತ್ರಸ್ತ ನೀಡಿದ್ದ ದೂರಿನಲ್ಲಿ ಎರಡನೇ ಆರೋಪಿಯಾಗಿದ್ದ ಶಿವಕುಮಾರ್‌ಗಾಗಿ ಪೊಲೀಸರು ಹುಡುಕಾಟ ನಡೆಸಿದ್ದರು. ಇದೀಗ ಅವರೇ, ನಗರ ಠಾಣೆಯಲ್ಲಿ ಡಾ.ಸೂರಜ್ ವಿರುದ್ಧ ದೂರು ದಾಖಲಿಸಿದ್ದಾರೆ.

ಶಿವಕುಮಾರ್ ವಿರುದ್ಧ ದೂರು: ಖಾಸಗಿ ಫೈನಾನ್ಸ್‌ನಲ್ಲಿ ಕೆಲಸ ಮಾಡುತ್ತಿದ್ದ ಶಿವಕುಮಾರ್, ಗ್ರಾಹಕರು ಸಾಲದ ವಂತಿಗೆ ನೀಡಲು ಕಟ್ಟಿದ್ದ ₹2,91,916 ದುರ್ಬಳಕೆ ಮಾಡಿಕೊಂಡಿರುವುದಾಗಿ ಅರಕಲಗೂಡು ತಾಲ್ಲೂಕಿನ ಕೊಣನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೈದ್ಯಕೀಯ ಪರೀಕ್ಷೆಗೆ ಸಿದ್ಧತೆ

ಬೆಂಗಳೂರು: ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಸೂರಜ್ ರೇವಣ್ಣ ಅವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲು ಎಸ್‌ಐಟಿ ಸಿದ್ಧತೆ ನಡೆಸಿದೆ. 'ಜುಲೈ 1ರ ತನಕ ಸೂರಜ್ ಅವರನ್ನು ಎಸ್‌ಐಟಿ ಕಸ್ಟಡಿಗೆ ನ್ಯಾಯಾಲಯ ನೀಡಿದೆ. ಬೌರಿಂಗ್ ಅಥವಾ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆ ನಡೆಸಲಾಗುವುದು. ನಂತರ, ಆರೋಪಿಯನ್ನು ಸ್ಥಳ ಮಹಜರಿಗೆ ಕರೆದೊಯ್ಯಲಾಗುವುದು' ಎಂದು ಮೂಲಗಳು ತಿಳಿಸಿವೆ.

ಸಿಐಡಿ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಪ್ರಜ್ವಲ್, ಪ್ರೀತಂ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಪ್ರೀತಂ ಜೆ.ಗೌಡ

ಬೆಂಗಳೂರು: ಲೈಂಗಿಕ ದೌರ್ಜನ್ಯ ಮತ್ತು ಪೆನ್‌ಡ್ರೈವ್ ಹಂಚಿಕೆ ಪ್ರಕರಣದಲ್ಲಿ ನಾಲ್ವರ ವಿರುದ್ಧ ಸಿಐಡಿ ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧ ಮತ್ತೊಂದು ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲಾಗಿದೆ. ಜತೆಗೆ ಅಶ್ಲೀಲ ವಿಡಿಯೊ ಹಂಚಿಕೆ ಆರೋಪ ಸಂಬಂಧ ಮಾಜಿ ಶಾಸಕ, ಬಿಜೆಪಿಯ ಪ್ರೀತಂಗೌಡ ಸೇರಿ ಮೂವರ ವಿರುದ್ಧ ಪ್ರಕರಣ ದಾಖಲಾಗಿದೆ.

'ಪ್ರಜ್ವಲ್ ಅವರು ಲೈಂಗಿಕ ದೌರ್ಜನ್ಯ ಎಸಗಿ, ವಿಡಿಯೊ ಮಾಡಿದ್ದಾರೆ. ಆ ವಿಡಿಯೊವನ್ನು ಪ್ರೀತಂಗೌಡ ಹಾಗೂ ಅವರ ಆಪ್ತರಾದ ಕಿರಣ್, ಶರತ್ ಎಂಬವರು ಹಂಚಿಕೆ ಮಾಡಿದ್ದಾರೆ ಎಂದು ಸಂತ್ರಸ್ತೆಯೊಬ್ಬರು ನ್ಯಾಯಾಧೀಶರ ಎದುರು ಹೇಳಿಕೆ ದಾಖಲಿಸಿದ್ದರು. ನ್ಯಾಯಾಲಯದ ಸೂಚನೆ ಮೇರೆಗೆ ನಾಲ್ವರ ವಿರುದ್ಧ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಆರೋಪಿಗಳ ವಿರುದ್ಧ ಐಪಿಸಿ ಸೆಕ್ಷನ್ 354ಎ (ಲೈಂಗಿಕ ಕಿರುಕುಳ), 354ಡಿ (ಇಚ್ಛೆಗೆ ವಿರುದ್ಧವಾಗಿ ಸಂವಹನ ನಡೆಸುವ ಹಾಗೂ ಮಹಿಳೆ ಹಿಂಬಾಲಿಸುವ), 354ಬಿ (ಮಹಿಳೆ ಮೇಲೆ ಆಕ್ರಮಣ ಹಾಗೂ ವಿವಸ್ತ್ರಗೊಳಿಸುವಂತೆ ಒತ್ತಾಯ), 506 (ಬೆದರಿಕೆ), 66ಇ (ಐ.ಟಿ ಕಾಯ್ದೆಯ ಉಲ್ಲಂಘಿಸಿ ಚಿತ್ರೀಕರಣ) ಅಡಿ ಪ್ರಕರಣಗಳು ದಾಖಲಾಗಿವೆ ಎಂದು ಮೂಲಗಳು ಹೇಳಿವೆ.

ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇರೆಗೆ ಏಪ್ರಿಲ್ 28ರಂದು ಪ್ರಜ್ವಲ್ ರೇವಣ್ಣ ಅವರ ವಿರುದ್ಧ ಹೊಳೆನರಸೀಪುರ ಠಾಣೆಯಲ್ಲಿ ಮೊದಲ ಪ್ರಕರಣ ದಾಖಲಾಗಿತ್ತು. ಪ್ರಕರಣ ದಾಖಲಾಗುತ್ತಿದ್ದಂತೆಯೇ ಪ್ರಜ್ವಲ್ ಅವರು ವಿದೇಶಕ್ಕೆ ತೆರಳಿ ತಲೆಮರೆಸಿಕೊಂಡಿದ್ದರು. ಪ್ರಕರಣವನ್ನು ಸರ್ಕಾರ ಎಸ್‌ಐಟಿಗೆ ವಹಿಸಿ ತನಿಖೆಗೆ ಆದೇಶಿಸಿತ್ತು. ತನಿಖಾ ತಂಡ ಆರೋಪಿ ವಿರುದ್ಧ ಬ್ಲೂಕಾರ್ನರ್ ನೋಟಿಸ್ ಜಾರಿಗೊಳಿಸಿತ್ತು. ನ್ಯಾಯಾಲಯ ಸಹ ಬಂಧನದ ವಾರಂಟ್ ಹೊರಡಿಸಿತ್ತು. ವಿದೇಶದಿಂದ ನಗರಕ್ಕೆ ಬಂದ ಅವರನ್ನು ಎಸ್‌ಐಟಿ ಬಂಧಿಸಿತ್ತು.

'ಮೇ 1ರಂದು ಸಿಐಡಿ ಠಾಣೆಯಲ್ಲಿ ಹಾಗೂ ಮೇ 8ರಂದು ಕೆ.ಆರ್.ನಗರ ಠಾಣೆಯಲ್ಲಿ ಸಂತ್ರಸ್ತೆಯ ಅಪಹರಣ ಹಾಗೂ ಅತ್ಯಾಚಾರಕ್ಕೆ ಸಂಬಂಧಿಸಿದ ಪ್ರಕರಣ ದಾಖಲಾಗಿದ್ದವು. ಈಗ ಪ್ರಜ್ವಲ್ ವಿರುದ್ಧ ಮತ್ತೊಂದು ಪ್ರಕರಣ ದಾಖಲಾಗಿದೆ' ಎಂದು ಪೊಲೀಸರು ಹೇಳಿದರು.

ಪ್ರೀತಂಗೌಡಗೆ ನೋಟಿಸ್: 'ನಾಲ್ಕನೇ ಪ್ರಕರಣದಲ್ಲಿ ಎಸ್‌ಐಟಿ ಪ್ರಜ್ವಲ್ ಅವರನ್ನು ಕಸ್ಟಡಿಗೆ ಪಡೆದುಕೊಂಡಿದ್ದು, ಹಾಸನ ಸೇರಿ ವಿವಿಧ ಸ್ಥಳಕ್ಕೆ ಕರೆದೊಯ್ದು ಮತ್ತೆ ಮಹಜರು ನಡೆಸಲಾಗುವುದು. ಪ್ರೀತಂಗೌಡಗೆ ವಿಚಾರಣೆ ಹಾಜರಾಗುವಂತೆ ನೋಟಿಸ್ ಜಾರಿ ಮಾಡಲಾಗಿದೆ' ಎಂದು ಮೂಲಗಳು ಹೇಳಿವೆ.

'ಸಿಐಡಿ ಸೈಬರ್ ಠಾಣೆಯಲ್ಲಿ ಪ್ರಕರಣ ದಾಖಲಾದ ಮಾಹಿತಿ ಇಲ್ಲ. ಮಾಹಿತಿ ತಿಳಿದು ಪ್ರತಿಕ್ರಿಯಿಸುತ್ತೇನೆ' ಎಂದು ಪ್ರೀತಂಗೌಡ ನಗರದಲ್ಲಿ ಮಂಗಳವಾರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದರು.

ಪ್ರಜ್ವಲ್ ನಾಲ್ಕು ದಿನ ಪೊಲೀಸ್ ಕಸ್ಟಡಿಗೆ

ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರ ಆರೋಪಕ್ಕೆ ಸಂಬಂಧಿಸಿದಂತೆ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಇದೇ 29ರವರೆಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಪ್ರಜ್ವಲ್ ರೇವಣ್ಣ

ಸದ್ಯ ಜೈಲಿನಲ್ಲಿರುವ ಆರೋಪಿ ಪ್ರಜ್ವಲ್ ರೇವಣ್ಣ ಅವರನ್ನು ಹಗರಣದ ನಾಲ್ಕನೇ ಪ್ರಕರಣಕ್ಕೆ ಸಂಬಂಧಿಸಿದಂತೆ ಜೈಲಿನಿಂದಲೇ ವಿಡಿಯೊ ಕಾನ್ಫರೆನ್ಸ್ ಮುಖಾಂತರ ಮಂಗಳವಾರ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ (ಎಸಿಎಂಎಂ–42) ನ್ಯಾಯಾಧೀಶ ಕೆ.ಎನ್. ಶಿವಕುಮಾರ್ ಅವರ ಮುಂದೆ ಹಾಜರು ಪಡಿಸಲಾಯಿತು.

ವಿಚಾರಣೆ ವೇಳೆ ರಾಜ್ಯ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್, 'ಆರೋಪಿಯನ್ನು ಹಾಸನಕ್ಕೆ ಕರೆದುಕೊಂಡು ಹೋಗಿ ಮಹಜರು ಮಾಡಬೇಕಿದೆ. ಧ್ವನಿ ಪರೀಕ್ಷೆ ನಡೆಸಬೇಕಿದೆ ಹಾಗೂ ವಿಚಾರಣೆಯಲ್ಲಿ ಹಲವು ಸಾಕ್ಷಿಗಳನ್ನು ಆರೋಪಿಗೆ ಮುಖಾಮುಖಿಯಾಗಿಸಿ ಹೇಳಿಕೆ ದಾಖಲು ಮಾಡಿಕೊಳ್ಳಬೇಕಾಗಿದೆ. ಹೀಗಾಗಿ, ಏಳು ದಿನಗಳವರೆಗೆ ಪೊಲೀಸ್ ಕಸ್ಟಡಿಗೆ ನೀಡಬೇಕು' ಎಂದು ಮನವಿ ಮಾಡಿದರು. ಇದನ್ನು ಆಕ್ಷೇಪಿಸಿದ ಪ್ರಜ್ವಲ್ ಪರ ವಕೀಲ ಜಿ.ಅರುಣ್, 'ಈಗಾಗಲೇ ನಾಲ್ಕು ಬಾರಿ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗಿದೆ. ಆದ್ದರಿಂದ, ಅಷ್ಟು ದಿನಗಳ ಕಸ್ಟಡಿ ಅವಶ್ಯಕತೆ ಇಲ್ಲ. ಅಂತೆಯೇ, ಅರ್ಜಿದಾರರಿಗೆ ಮನೆ ಊಟ ಕೊಡಲು ಮತ್ತು ಅಗತ್ಯ ವೈದ್ಯಕೀಯ ಚಿಕಿತ್ಸೆ ದೊರಕಿಸಲು ನಿರ್ದೇಶಿಸಬೇಕು' ಎಂದು ಕೋರಿದರು.

ಅರ್ಜಿದಾರರ ಪರ ವಕೀಲರ ಕೋರಿಕೆಯನ್ನು ಮಾನ್ಯ ಮಾಡಿದ ನ್ಯಾಯಾಧೀಶರು ಆರೋಪಿಯನ್ನು ನಾಲ್ಕು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಿ ಆದೇಶಿಸಿದರು.

ಸ್ಪೀಕರ್ ಪಟ್ಟ: ಬಿಗಿ ಪಟ್ಟು

ಒಂದನೇ ಪುಟದಿಂದ...

ಸ್ಪೀಕರ್ ಸ್ಥಾನಕ್ಕೆ 'ಅಪರೂಪ'ಕ್ಕೆ ಚುನಾವಣೆ ನಡೆಯುತ್ತಿದೆ. ಎನ್‌ಡಿಎ ಬಹುಮತ ಹೊಂದಿದ್ದು, ಓಂ ಬಿರ್ಲಾ ಸಭಾಧ್ಯಕ್ಷರಾಗಿ ಆಯ್ಕೆಯಾಗುವುದು ಬಹುತೇಕ ಖಚಿತವಾಗಿದೆ.

ಆರಂಭದಲ್ಲಿ ಒಮ್ಮತ- ಮತ್ತೆ ಜಟಾಪಟಿ: ಸ್ಪೀಕರ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡುವ ವಿಷಯದಲ್ಲಿ ಎನ್‌ಡಿಎ ಹಾಗೂ ಇಂಡಿಯಾ ಮೈತ್ರಿಕೂಟಗಳು ಆರಂಭದಲ್ಲಿ ಸಹಮತಕ್ಕೆ ಬಂದಿದ್ದವು. ಸಂಪ್ರದಾಯದ ಪ್ರಕಾರ ಉಪಸಭಾಧ್ಯಕ್ಷ ಸ್ಥಾನವನ್ನು ವಿಪಕ್ಷಕ್ಕೆ ಬಿಟ್ಟುಕೊಡಬೇಕು ಎಂದು ಕಾಂಗ್ರೆಸ್ ನಾಯಕರು ಪಟ್ಟು ಹಿಡಿದರು.

ಈಗಲೇ ಭರವಸೆ ನೀಡಲಾಗದು ಎಂದು ಬಿಜೆಪಿ ನಾಯಕರು ಹೇಳಿದ್ದರಿಂದ ಮಾತುಕತೆ ಮುರಿದು ಬಿತ್ತು.

ವಿಪಕ್ಷಗಳ ಜತೆಗೆ ಸಂಧಾನ ನಡೆಸಲು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರನ್ನು ನಿಯೋಜಿಸಿತು. ಸಿಂಗ್ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಸೋಮವಾರ ರಾತ್ರಿ ದೂರವಾಣಿಯಲ್ಲಿ ಮಾತನಾಡಿ ಅವಿರೋಧ ಆಯ್ಕೆಗೆ ಸಹಕಾರ ನೀಡುವಂತೆ ಕೋರಿದರು. ರಾಜನಾಥ್ ಸಿಂಗ್ ಕಚೇರಿಯಲ್ಲಿ ಮಂಗಳವಾರ ಬೆಳಿಗ್ಗೆ ನಡೆದ ಸಭೆಯಲ್ಲಿ ಕಾಂಗ್ರೆಸ್ ನಾಯಕ ಕೆ.ಸಿ.ವೇಣುಗೋಪಾಲ್, ಡಿಎಂಕೆಯ ಟಿ.ಆರ್. ಬಾಲು ಮತ್ತಿತರ ನಾಯಕರು ಭಾಗಿಯಾದರು. ಸ್ಪೀಕರ್ ಸ್ಥಾನವನ್ನು ವಿಪಕ್ಷಕ್ಕೆ ನೀಡುವುದಾಗಿ ಕೂಡಲೇ ವಾಗ್ದಾನ ಮಾಡಬೇಕು ಎಂದು ವೇಣುಗೋಪಾಲ್ ಆಗ್ರಹಿಸಿದರು. 'ಈ ಬಗ್ಗೆ ಈಗಲೇ ಭರವಸೆ ನೀಡಲು ಸಾಧ್ಯವಿಲ್ಲ. ಮುಂದಿನ ದಿನಗಳಲ್ಲಿ ಡೆಪ್ಯುಟಿ ಸ್ಪೀಕರ್ ಸ್ಥಾನದ ಬಗ್ಗೆ ಚರ್ಚೆ ನಡೆಯಲಿದ್ದು, ಆಗ ಪ್ರತಿಪಕ್ಷ ಮುಖಂಡರ ಜತೆಗೆ ಸಮಾಲೋಚನೆ ನಡೆಸಲಾಗುತ್ತದೆ' ಎಂದು ಬಿಜೆಪಿ ನಾಯಕರು ಸ್ಪಷ್ಟಪಡಿಸಿದರು. ಇದಕ್ಕೆ ವೇಣುಗೋಪಾಲ್ ಒಪ್ಪಲಿಲ್ಲ. ಸಭೆಯಿಂದ ವೇಣುಗೋಪಾಲ್ ಹಾಗೂ ಟಿ.ಆರ್.ಬಾಲು ನಿರ್ಗಮಿಸಿದರು. ಇಂಡಿಯಾ ಮೈತ್ರಿಕೂಟದ ನಾಯಕರ ಸೂಚನೆಯ ಮೇರೆಗೆ ಸುರೇಶ್ ನಾಮಪತ್ರ ಸಲ್ಲಿಸಿದರು.

ಎನ್‌ಡಿಎ ಮೈತ್ರಿಕೂಟದ ಎಲ್ಲ ಪಕ್ಷಗಳ ನಾಯಕರು ಓಂ ಬಿರ್ಲಾ ನಾಮನಿರ್ದೇಶನ ಪತ್ರಕ್ಕೆ ಸಹಿ ಹಾಕಿದ್ದಾರೆ. ಮತ್ತೊಂದೆಡೆ, ಟಿಎಂಸಿ ಹೊರತುಪಡಿಸಿ ಇಂಡಿಯಾ ಮೈತ್ರಿಕೂಟದ ಎಲ್ಲ ಪಕ್ಷಗಳು ಸುರೇಶ್ ನಾಮಪತ್ರಕ್ಕೆ ಸಹಿ ಹಾಕಿವೆ. ಸದನದಲ್ಲಿ ಪಕ್ಷದ ಸದಸ್ಯರು ಬುಧವಾರ ಕಡ್ಡಾಯವಾಗಿ ಹಾಜರಾಗಬೇಕು ಎಂದು ಕಾಂಗ್ರೆಸ್ ಹಾಗೂ ಬಿಜೆಪಿ ವಿಪ್ ಜಾರಿ ಮಾಡಿವೆ.

'ಸುರೇಶ್ ಅವರನ್ನು ಕಣಕ್ಕಿಳಿಸುವ ಕುರಿತು ಟಿಎಂಸಿ ಜತೆಗೆ ಸಮಾಲೋಚನೆ ನಡೆಸಿಲ್ಲ. ಪಕ್ಷದ ವರಿಷ್ಠೆ ಮಮತಾ ಬ್ಯಾನರ್ಜಿ ನಿರ್ದೇಶನದಂತೆ ಮುಂದಿನ ಹೆಜ್ಜೆ ಇಡಲಾಗುವುದು' ಎಂದು ಪಕ್ಷದ ನಾಯಕರು ತಿಳಿಸಿದ್ದಾರೆ.

ಜಾಖಡ್ ದಾಖಲೆ ಸರಿಗಟ್ಟಲಿರುವ ಓಂ ಬಿರ್ಲಾ?

ಬುಧವಾರ ನಡೆಯಲಿರುವ ಚುನಾವಣೆಯಲ್ಲಿ ಓಂ ಬಿರ್ಲಾ ಗೆದ್ದರೆ ಸ್ಪೀಕರ್ ಆಗಿ ಸತತ ಎರಡನೇ ಅವಧಿಗೆ ಆಯ್ಕೆಯಾದ ಬಲರಾಮ್ ಜಾಖಡ್ ಅವರ ದಾಖಲೆಯನ್ನು ಸರಿಗಟ್ಟಲಿದ್ದಾರೆ. ಓಂ ಬಿರ್ಲಾ ಅವರು 17ನೇ ಲೋಕಸಭೆಯಲ್ಲಿ ಪೂರ್ಣ ಅವಧಿಗೆ ಸ್ಪೀಕರ್ ಆಗಿ ಕಾರ್ಯನಿರ್ವಹಿಸಿದ್ದರು. 18ನೇ ಲೋಕಸಭೆಯಲ್ಲಿ ಪೂರ್ಣ ಅವಧಿಗೆ ಸಭಾಧ್ಯಕ್ಷರಾದರೆ ಜಾಖಡ್ ಅವರ ದಾಖಲೆಯನ್ನು ಸರಿಗಟ್ಟಲಿದ್ದಾರೆ. ಜಾಖಡ್ ಅವರು 1980ರಿಂದ 9 ವರ್ಷ ಹಾಗೂ 11 ತಿಂಗಳು ಸ್ಪೀಕರ್ ಆಗಿದ್ದರು.

ಕಾಂಗ್ರೆಸ್‌ನಿಂದ ವಿಪ್ ಜಾರಿ

ನವದೆಹಲಿ (ಪಿಟಿಐ): ತಮ್ಮ ಪಕ್ಷದ ಸಂಸದರಿಗೆ ಕಾಂಗ್ರೆಸ್ ಮಂಗಳವಾರ ವಿಪ್ ಜಾರಿಗೊಳಿಸಿದ್ದು, ಬುಧವಾರ ಬೆಳಿಗ್ಗೆ ನಡೆಯಲಿರುವ ಲೋಕಸಭೆಯ ಸ್ಪೀಕರ್ ಚುನಾವಣೆಯ ವೇಳೆ ಸಂಸತ್‌ನಲ್ಲಿ ಕಡ್ಡಾಯವಾಗಿ ಹಾಜರಿರುವಂತೆ ಹೇಳಿದೆ.

'ನಾಳೆ, 2024 ಜೂನ್ 26ರ ಬುಧವಾರ, ಲೋಕಸಭೆಯಲ್ಲಿ ಬಹು ಮುಖ್ಯವಾದ ವಿಷಯವನ್ನು ಕೈಗೆತ್ತಿಕೊಳ್ಳಲಾಗಿದೆ. ಕಾಂಗ್ರೆಸ್ ಪಕ್ಷದ ಎಲ್ಲ ಸಂಸದರೂ ಬೆಳಿಗ್ಗೆ 11 ಗಂಟೆಯಿಂದ ಲೋಕಸಭೆಯ ಕಲಾಪವನ್ನು ಮುಂದೂಡುವವರೆಗೆ ತಪ್ಪದೇ ಹಾಜರಿದ್ದು, ಪಕ್ಷದ ನಿಲುವನ್ನು ಬೆಂಬಲಿಸಬೇಕು' ಎಂದು ಪಕ್ಷದ ಮುಖ್ಯ ಸಚೇತಕ ಕೆ.ಸುರೇಶ್ ವಿಪ್ ಜಾರಿ ಮಾಡಿದ್ದಾರೆ. ಸುರೇಶ್ ಅವರು ಸ್ಪೀಕರ್ ಹುದ್ದೆಗಾಗಿ 'ಇಂಡಿಯಾ' ಕೂಟದ ಅಭ್ಯರ್ಥಿಯಾಗಿದ್ದು, ಅವರು ಎನ್‌ಡಿಎನ ಓಂ ಬಿರ್ಲಾ ವಿರುದ್ಧ ಪೈಪೋಟಿ ನಡೆಸುತ್ತಿದ್ದಾರೆ.

'ರಕ್ತ ಹೀರುವ ಸಿ.ಎಂ, ಡಿಸಿಎಂ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಗ್ಯಾರಂಟಿ ಹೆಸರಿನಲ್ಲಿ ತಿಗಣೆ ರೀತಿ ಬಡವರ ರಕ್ತ ಹೀರುತ್ತಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು.

'ಲೋಕಸಭಾ ಚುನಾವಣೆ ಸೋಲಿನ ಕೋಪವನ್ನು ಜನರ ಮೇಲೆ ತೀರಿಸಿಕೊಳ್ಳುತ್ತಿದ್ದು, ರಾಜ್ಯದಲ್ಲಿ ಈಗ ಬೆಲೆ ಏರಿಕೆ ಪರ್ವ ಶುರುವಾಗಿದೆ. ಸಿಮೆಂಟ್, ಕಬ್ಬಿಣ ಮಾತ್ರವಲ್ಲ, ಹಾಲಿನ ದರವನ್ನೂ ಹೆಚ್ಚಿಸಿದ್ದಾರೆ. ಕಳೆದ ವರ್ಷ ಪ್ರತಿ ಲೀಟರ್‌ಗೆ ₹3 ಹೆಚ್ಚಿಸಿದ್ದರು. ಈಗ ಮತ್ತೆ ಹೆಚ್ಚಿಸಲಾಗಿದೆ' ಎಂದು ಅವರು ಮಂಗಳವಾರ ತಿಳಿಸಿದರು.

6%ನೌಕರರ ವರ್ಗಾವಣೆಗೆ ಅವಕಾಶ

ಒಂದನೇ ಪುಟದಿಂದ...

ನೌಕರನ ಮೇಲೆ ಗಂಭೀರ ಆರೋಪಗಳಿದ್ದರೆ, ಇಲಾಖಾ ವಿಚಾರಣೆ, ಕ್ರಿಮಿನಲ್ ನಡಾವಳಿ ಆರಂಭಿಸಿದ್ದರೆ ಅಥವಾ ಬಾಕಿ ಇದ್ದರೆ ಅಂಥವರನ್ನು ಸೂಕ್ಷ್ಮ ಹುದ್ದೆಗಳಿಗೆ ಅಥವಾ ಕಾರ್ಯಕಾರಿ ಹುದ್ದೆಗಳಿಗೆ ನೇಮಿಸದೆ, ತಮ್ಮ ವಿರುದ್ಧ ಬಾಕಿ ಇರುವ ತನಿಖೆಯಲ್ಲಿ ಹಸ್ತಕ್ಷೇಪ ಮಾಡಲು ಅವಕಾಶ ಇಲ್ಲದ ಕಾರ್ಯಕಾರಿಯೇತರ ಹುದ್ದೆಗೆ ನೇಮಿಸಬೇಕು. ಇಲಾಖೆ ವಿಚಾರಣೆ, ಕ್ರಿಮಿನಲ್ ಮೊಕದ್ದಮೆ ಬಾಕಿ ಇರುವ ನೌಕರನನ್ನು ಆತ ಕೋರುವ ಹುದ್ದೆಗೆ ಸ್ಥಳ ನಿಯುಕ್ತಿ ಮಾಡಬಾರದು ಎಂದೂ ಸೂಚಿಸಲಾಗಿದೆ.

ವರ್ಗಾವಣೆಯ ಮಾರ್ಗಸೂಚಿಯೇನು?

- ನಿವೃತ್ತನಾಗಲು 2 ವರ್ಷಕ್ಕಿಂತ ಕಡಿಮೆ ಸೇವಾವಧಿ ಇದ್ದಲ್ಲಿ, ಒಂದು ಹುದ್ದೆಯಲ್ಲಿ ಕನಿಷ್ಠ 2 ವರ್ಷ ಪೂರೈಸಬೇಕು ಎಂಬ ನಿಯಮದಿಂದ ವಿನಾಯ್ತಿ ಇದ್ದು, ವರ್ಗಾವಣೆ ಮಾಡಬಹುದು
- ವಿಶೇಷ ತಾಂತ್ರಿಕ ಅರ್ಹತೆ, ಅನುಭವ ಹೊಂದಿದ್ದು, ನಿರ್ದಿಷ್ಟ ಹುದ್ದೆಗೆ ತಕ್ಷಣಕ್ಕೆ ನೇಮಿಸಲು ನೌಕರ ಲಭ್ಯ ಇಲ್ಲದಿದ್ದರೂ ವರ್ಗಾವಣೆಗೆ ಅವಕಾಶ
- ಯಾವುದಾದರೂ ಯೋಜನೆ ಪೂರ್ಣವಾಗದೇ ಇದ್ದರೆ, ಆ ಯೋಜನೆಯಲ್ಲಿ ಕೆಲಸ ಮಾಡುವವರ ವರ್ಗಾವಣೆಗೆ ಅವಕಾಶ ಇಲ್ಲ
- ಪತಿ– ಪತ್ನಿ ಇಬ್ಬರೂ ಸರ್ಕಾರಿ ನೌಕರರಾಗಿದ್ದು, ಒಬ್ಬರು ವರ್ಗಾವಣೆಗೊಂಡು, ಇನ್ನೊಬ್ಬರು ಕನಿಷ್ಠ ಸೇವಾ ಅವಧಿ ಪೂರೈಸದಿದ್ದರೂ ವರ್ಗಾವಣೆ ಮಾಡಬಹುದು
- ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಯಾಗಿದ್ದರೆ, ಪದಾಧಿಕಾರದ ಅವಧಿ ಮುಗಿಯುವವರೆಗೆ ವರ್ಗಾವಣೆ ಮಾಡಬಾರದು
- ನೌಕರ, ಆತನ ಪತ್ನಿ ಅಥವಾ ಮಕ್ಕಳು ಗಂಭೀರ ಕಾಯಿಲೆಯಿಂದ ಬಳಲುತ್ತಿದ್ದರೆ ಚಿಕಿತ್ಸಾ ಸೌಲಭ್ಯ ಲಭ್ಯವಿರುವ ಕಡೆಗೆ ವರ್ಗಾವಣೆ ಮಾಡಬಹುದು

'ವೇಶ್ಯಾವಾಟಿಕೆ ಸಂತ್ರಸ್ತೆಯನ್ನು ವಿಚಾರಣೆಗೆ ಗುರಿ ಮಾಡಬೇಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೇಶ್ಯಾವಾಟಿಕೆ ಸಂತ್ರಸ್ತೆಯನ್ನು ವಿಚಾರಣೆಗೆ ಗುರಿಪಡಿಸುವುದು ಕಾನೂನು ಪ್ರಕ್ರಿಯೆಯ ದುರುಪಯೋಗ ಮತ್ತು ಅನ್ಯಾಯಕ್ಕೆ ಕಾರಣವಾಗುತ್ತದೆ' ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಸ್ಪಷ್ಟಪಡಿಸಿದೆ.

'ವೇಶ್ಯಾವಾಟಿಕೆ ಆರೋಪಕ್ಕೆ ಸಂಬಂಧಿಸಿದಂತೆ ನನ್ನ ವಿರುದ್ಧ ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು' ಎಂದು ಕೋರಿ ಸಂತ್ರಸ್ತೆ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ. ಅಂತೆಯೇ, ಸಂತ್ರಸ್ತ ಮಹಿಳೆಯ ವಿರುದ್ಧ ವಿಚಾರಣಾ ನ್ಯಾಯಾಲಯದ ಪ್ರಕ್ರಿಯೆಯನ್ನು ರದ್ದುಪಡಿಸಿದೆ.

'ವೇಶ್ಯಾವಾಟಿಕೆ ಸಂತ್ರಸ್ತೆಯನ್ನು ಶಿಕ್ಷಿಸಬೇಕು ಎಂದು ಮಾನವ ಕಳ್ಳಸಾಗಣೆ ಕಾಯ್ದೆಯಡಿ ಎಲ್ಲಿಯೂ ಹೇಳಿಲ್ಲ. ಹೀಗಾಗಿ, ವೇಶ್ಯಾವಾಟಿಕೆ ಸಂತ್ರಸ್ತೆಯನ್ನು ವಿಚಾರಣೆಗೆ ಗುರಿಪಡಿಸುವುದು ಕಾನೂನು ಪ್ರಕ್ರಿಯೆಯ ದುರುಪಯೋಗವಾಗುತ್ತದೆ' ಎಂಬ ಬಾಂಬೆ ಹೈಕೋರ್ಟ್ ಆದೇಶವನ್ನು ಉಲ್ಲೇಖಿಸಿರುವ ನ್ಯಾಯಪೀಠ, 'ವೇಶ್ಯಾವಾಟಿಕೆಯ ಸಂತ್ರಸ್ತೆಯನ್ನು ಶಿಕ್ಷಿಸಲು ಯಾವುದೇ ಕಾನೂನು ಇಲ್ಲ' ಎಂದು ಹೇಳಿದೆ.

'ವೇಶ್ಯಾವಾಟಿಕೆ ಆರೋಪ ಸಂಬಂಧ ಸಂತ್ರಸ್ತೆಯ ವಿರುದ್ಧ ಮಾನವ ಕಳ್ಳ ಸಾಗಣೆ ತಡೆ ಕಾಯ್ದೆ-1956ರ ಕಲಂ 5ರ ಅಡಿಯಲ್ಲಿ ವಿಚಾರಣಾ ನ್ಯಾಯಾಲಯ ಸಂಜ್ಞೇಯ ಅಪರಾಧವನ್ನು ಪರಿಗಣಿಸಿದೆ. ಆದರೆ, ಸಂತ್ರಸ್ತ ಮಹಿಳೆಯನ್ನು ಶಿಕ್ಷಿಸಬೇಕು ಎಂದು ಕಲಂ 5ರಲ್ಲಿ ಎಲ್ಲಿಯೂ ಹೇಳಿಲ್ಲ. ಹಾಗಾಗಿ, ಆಕೆಯ ವಿರುದ್ಧ ಮುಂದಿನ ವಿಚಾರಣೆಗೆ ಅನುಮತಿ ನೀಡುವುದು ಕಾನೂನು ಪ್ರಕ್ರಿಯೆಯ ದುರ್ಬಳಕೆಯಾಗಲಿದೆ ಮತ್ತು ಅನ್ಯಾಯಕ್ಕೆ ಕಾರಣವಾಗಲಿದೆ' ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ವಿವರಿಸಿದೆ.

ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಅವ್ಯವಹಾರ

700ಕ್ಕೂ ಹೆಚ್ಚು ಖಾತೆಗಳಿಗೆ ಹಣ ವರ್ಗ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದ ಎನ್ನಲಾದ ಹಗರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ, ನೂರಾರು ಖಾತೆಗಳಿಗೆ ಹಣ ವರ್ಗಾವಣೆ ಆಗಿರುವುದನ್ನು ಪತ್ತೆ ಹಚ್ಚಿದೆ.

ಹೈದರಾಬಾದ್‌ನ 'ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ– ಆಪರೇಟಿವ್ ಸೊಸೈಟಿ'ಯ (ಎಫ್‌ಎಫ್‌ಸಿಸಿಎಸ್‌ಎಲ್) ವಿವಿಧ ಖಾತೆಗಳಿಗೆ ವಾಲ್ಮೀಕಿ ನಿಗಮದ ಖಾತೆಯಿಂದ ₹94.73 ಕೋಟಿ ಹಣ ವರ್ಗಾವಣೆ ಆಗಿತ್ತು. ಈ ಸಂಬಂಧ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆಯನ್ನು ಎಸ್‌ಐಟಿ ನಡೆಸುತ್ತಿದೆ.

ಬ್ಯಾಂಕ್‌ನಲ್ಲಿ ನಕಲಿ ಖಾತೆಗಳನ್ನು ತೆರೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಆರೋಪದಡಿ ಹೈದರಾಬಾದ್‌ನಲ್ಲಿ ಸತ್ಯನಾರಾಯಣ ವರ್ಮಾ ಅವರನ್ನು ಈ ಹಿಂದೆ ಬಂಧಿಸಲಾಗಿತ್ತು. ಅವರ ಸಹಚರ, ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಸಾಯಿತೇಜ್ ಎಂಬುವರನ್ನು ಹೈದರಾಬಾದ್‌ನಲ್ಲಿ ಬಂಧಿಸಿ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಎಸ್‌ಐಟಿ ಮೂಲಗಳು ಹೇಳಿವೆ.

ಆತ್ಮಹತ್ಯೆಗೆ ಶರಣಾದ ನಿಗಮದ ಅಧಿಕಾರಿ ಚಂದ್ರಶೇಖರ್ ಅವರು ಬರೆದಿದ್ದ ಡೆತ್‌ನೋಟ್‌ನಲ್ಲಿ ಸಾಯಿತೇಜ್ ಅವರ ಹೆಸರನ್ನು ಉಲ್ಲೇಖಿಸಿದ್ದರು. ಅಕ್ರಮ ನಡೆಸಲು ವರ್ಮಾ ಅವರಿಗೆ ಸಾಯಿತೇಜ್ ನೆರವು ನೀಡುತ್ತಿದ್ದ ಎಂದು ತನಿಖಾಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ಈ ಪ್ರಕರಣದ ಇದುವರೆಗೂ 11 ಮಂದಿಯನ್ನು ಬಂಧಿಸಿ, ಒಟ್ಟು ₹14.7 ಕೋಟಿ ಜಪ್ತಿ ಮಾಡಲಾಗಿದೆ. ₹94.73 ಕೋಟಿ ಪೈಕಿ ₹5 ಕೋಟಿಯನ್ನು ನಿಗಮದ ಬ್ಯಾಂಕ್ ಖಾತೆಗೆ ವಾಪಸ್ ಮಾಡಲಾಗಿತ್ತು. ಉಳಿದ ₹89 ಕೋಟಿಯನ್ನು 700ಕ್ಕೂ ಹೆಚ್ಚು ಮಂದಿ ಬ್ಯಾಂಕ್ ಖಾತೆಗಳಿಗೆ ಹಾಕಿ ಹಣ ಡ್ರಾ ಮಾಡಿಕೊಳ್ಳಲಾಗಿದೆ ಎಂಬ ಮಾಹಿತಿಯಿದೆ. ಬ್ಯಾಂಕ್ ಖಾತೆಗಳ ಮಾಹಿತಿ ಕಲೆ ಹಾಕಲಾಗುತ್ತಿದೆ. ಯಾರು ಹಣ ಹಾಕಿದ್ದರು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ವರ್ಮಾ ಸೂತ್ರದಾರ: 'ಹೈದರಾಬಾದ್, ಬಳ್ಳಾರಿ ಹಾಗೂ ಬೆಂಗಳೂರು ಗ್ರಾಮಾಂತರ ಭಾಗದಲ್ಲಿ ಕಾರ್ಮಿಕರು ಸೇರಿದಂತೆ ಹಲವರ ಖಾತೆಗಳಿಗೆ ಹಣ ವರ್ಗಾವಣೆ ಆಗಿರುವುದು ತನಿಖೆಯಿಂದ ದೃಢಪಟ್ಟಿದೆ. ₹5 ಲಕ್ಷದಿಂದ ₹ 2 ಕೋಟಿ ತನಕ ಹಣ ವರ್ಗಾವಣೆ ಮಾಡಲಾಗಿದೆ. ಬ್ಯಾಂಕ್ ಖಾತೆಗಳನ್ನು ತೆರೆಯುವುದು, ಹಣ ವರ್ಗಾವಣೆ ಹಾಗೂ ಹಣ ಡ್ರಾ ಮಾಡುವಲ್ಲಿ ಸತ್ಯನಾರಾಯಣ ವರ್ಮಾ ಸೇರಿದಂತೆ ಹಲವರು ಪ್ರಮುಖ ಪಾತ್ರ ವಹಿಸಿರುವುದು ಗೊತ್ತಾಗಿದೆ' ಎಂದು ಮೂಲಗಳು ಹೇಳಿವೆ.

ಐಐಎಸ್‌ಇಆರ್: ಮಿಹಿರ್‌ಗೆ 16ನೇ ರ‍್ಯಾಂಕ್

ಪ್ರಜಾವಾಣಿ ವಾರ್ತೆ

ಮಿಹಿರ್ ಗಿರೀಶ್ ಕಾಮತ್

ಮಂಗಳೂರು: ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯದ ಅಧೀನದಲ್ಲಿರುವ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಎಜುಕೇಷನ್ ಆ್ಯಂಡ್ ರಿಸರ್ಚ್ (ಐಐಎಸ್‌ಇಆರ್) ನಡೆಸಿದ ಪ್ರವೇಶ ಪರೀಕ್ಷೆಯಲ್ಲಿ ಇಲ್ಲಿಯ ಎಕ್ಸ್‌ಪರ್ಟ್ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ಮಿಹಿರ್ ಗಿರೀಶ್ ಕಾಮತ್ ಅಖಿಲ ಭಾರತ ಮಟ್ಟದಲ್ಲಿ ಜನರಲ್ ಕೆಟಗರಿ ವಿಭಾಗದಲ್ಲಿ 16ನೇ ರ‍್ಯಾಂಕ್ ಪಡೆದಿದ್ದಾರೆ.

ವಿಜ್ಞಾನ ಶಿಕ್ಷಣ ಮತ್ತು ಸಂಶೋಧನೆಗಳನ್ನು ಸಂಯೋಜಿಸಲು ಮತ್ತು ಉತ್ತೇಜಿಸಲು ಕೇಂದ್ರ ಸರ್ಕಾರವು ಬೆಹ್ರಾಂಪುರ, ಭೋಪಾಲ್, ಕೋಲ್ಕತ್ತ, ಮೊಹಾಲಿ, ಪುಣೆ, ತಿರುವನಂತಪುರ ಮತ್ತು ತಿರುಪತಿಯಲ್ಲಿ ಐಐಎಸ್‌ಇಆರ್‌ಗಳನ್ನು ಸ್ಥಾಪಿಸಿದೆ.

ಈ ಸಂಸ್ಥೆಗಳ ಪ್ರವೇಶಕ್ಕೆ ಮಿಹಿರ್ ಗಿರೀಶ್ ಕಾಮತ್ ಆಯ್ಕೆಯಾಗಿದ್ದಾರೆ.

ಮೊಬೈಲ್ ಕಳವು: ದೆಹಲಿಯಲ್ಲಿ ಅತಿ ಹೆಚ್ಚು, ಎರಡನೇ ಸ್ಥಾನದಲ್ಲಿ ಕರ್ನಾಟಕ

ಮೊಬೈಲ್ ಫೋನ್ ಜಪ್ತಿ: ರಾಜ್ಯ ಮೊದಲು

• ಸಂತೋಷ ಜಿಗಳಿಕೊಪ್ಪ

ಹಾವೇರಿ: ಕಳೆದುಕೊಂಡ ಹಾಗೂ ಕಳ್ಳತನವಾದ ಸಾರ್ವಜನಿಕರ ಮೊಬೈಲ್‌ಫೋನ್‌ಗಳನ್ನು ಪತ್ತೆ ಮಾಡಿ ಜಪ್ತಿ ಮಾಡುವಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ. ಆದರೆ, ಮೊಬೈಲ್ ಕಳವು ಆಗುವ ರಾಜ್ಯಗಳ ಪೈಕಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ.

ರಾಜ್ಯದ ಹಲವು ಜಿಲ್ಲೆಗಳಲ್ಲಿ ಕಳ್ಳತನವಾದ ಹಾಗೂ ಕಳೆದುಹೋದ ಮೊಬೈಲ್‌ಗಳ ಮಾಹಿತಿ 'ಇ–ಲಾಸ್ಟ್' ಆ್ಯಪ್ ಮತ್ತು ಕೇಂದ್ರ ಸರ್ಕಾರದ 'ಸೆಂಟ್ರಲ್ ಎಕ್ವಿಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್ (ಸಿಇಐಆರ್)' ಜಾಲತಾಣದಲ್ಲಿ ದಾಖಲಾಗುತ್ತಿದೆ. ಇದನ್ನೇ ಆಧರಿಸಿ ತನಿಖೆ ನಡೆಸುತ್ತಿರುವ ರಾಜ್ಯದ ಪೊಲೀಸರು, ತಾಂತ್ರಿಕ ಸುಳಿವು ಆಧರಿಸಿ ಕಡಿಮೆ ಸಮಯದಲ್ಲಿ ಅತಿ ಹೆಚ್ಚು ಮೊಬೈಲ್‌ಗಳನ್ನು ಜಪ್ತಿ ಮಾಡಿ ದೂರುದಾರರಿಗೆ ವಾಪಸು ಕೊಟ್ಟಿದ್ದಾರೆ.

'ಇ–ಲಾಸ್ಟ್' (2016) ಹಾಗೂ 'ಸಿಇಐಆರ್' ವ್ಯವಸ್ಥೆ (2023) ಜಾರಿಯಾದ ದಿನಗಳಿಂದ ರಾಜ್ಯದಲ್ಲಿ ಇದುವರೆಗೂ 2.45 ಲಕ್ಷ (2,45,876) ಮೊಬೈಲ್ ಕಳೆದುಹೋಗಿರುವುದಾಗಿ ದಾಖಲಾಗಿದೆ. ಇದರಲ್ಲಿ ಕಳ್ಳತನವಾದ ಮೊಬೈಲ್‌ಗಳೂ ಇವೆ. ಮೊಬೈಲ್ ಕಳೆದುಕೊಂಡಿರುವ ಸಾರ್ವಜನಿಕರು, ಆನ್‌ಲೈನ್ ಮೂಲಕ ದೂರು ನೀಡಿದ್ದಾರೆ.

ಹೀಗಾಗಿ, ಈ ಎಲ್ಲ ಮೊಬೈಲ್‌ಗಳನ್ನು ಪೊಲೀಸರು ಈಗಾಗಲೇ ಬ್ಲಾಕ್ (ನಿಷ್ಕ್ರಿಯ) ಮಾಡಿಸಿದ್ದಾರೆ.

ಬ್ಲಾಕ್ ಮಾಡಿರುವ ಮೊಬೈಲ್‌ಗಳ ಪೈಕಿ 1.20 ಲಕ್ಷ ಮೊಬೈಲ್‌ಗಳ ವಿಳಾಸವನ್ನು ಪೊಲೀಸರು ಪತ್ತೆ ಮಾಡಿದ್ದಾರೆ. ಈ ಪೈಕಿ 41,534 ಮೊಬೈಲ್‌ಗಳನ್ನು ಜಪ್ತಿ ಮಾಡಿ ದೂರುದಾರರಿಗೆ ಹಿಂದಿರುಗಿಸಿದ್ದಾರೆ. ರಾಜ್ಯದ ವಿವಿಧ ಜಿಲ್ಲೆಗಳು ಹಾಗೂ ದೇಶದ ವಿವಿಧ ರಾಜ್ಯಗಳಲ್ಲಿ ಲಭಿಸಿದ ಮೊಬೈಲ್‌ಗಳ ಜಪ್ತಿಗೆ ಸ್ಥಳೀಯ ಪೊಲೀಸರ ನೆರವು ಪಡೆದಿದ್ದಾರೆ.

ಮೊಬೈಲ್ ಕಳ್ಳತನ–ದೆಹಲಿಯಲ್ಲಿ ಹೆಚ್ಚು: ಮೊಬೈಲ್ ಜಪ್ತಿಯಲ್ಲಿ ತೆಲಂಗಾಣ ಎರಡನೇ ಸ್ಥಾನದಲ್ಲಿದ್ದು, ಮಹಾರಾಷ್ಟ್ರ ಮೂರನೇ ಸ್ಥಾನದಲ್ಲಿದೆ. ಹೆಚ್ಚು ಮೊಬೈಲ್ ಕಳ್ಳತನವಾಗುತ್ತಿರುವ ರಾಜ್ಯಗಳ ಪೈಕಿ ದೆಹಲಿ ಮೊದಲ ಸ್ಥಾನದಲ್ಲಿದ್ದು, ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಮಹಾರಾಷ್ಟ್ರ ಹಾಗೂ ತೆಲಂಗಾಣ, ಮೂರು–ನಾಲ್ಕನೇ ಸ್ಥಾನದಲ್ಲಿವೆ.

ದೇಶದಲ್ಲಿ ಕಳ್ಳತನವಾದ ಹಾಗೂ ಕಳೆದುಹೋದ ಒಟ್ಟು 17.66 ಲಕ್ಷ ಮೊಬೈಲ್‌ಗಳ ಬಗ್ಗೆ ದೂರುಗಳು ದಾಖಲಾಗಿವೆ. ಈ ಪೈಕಿ 10.14 ಲಕ್ಷ ಮೊಬೈಲ್ ಪತ್ತೆ ಮಾಡಲಾಗಿದ್ದು, 1.58 ಲಕ್ಷ ಮೊಬೈಲ್ ಜಪ್ತಿ ಮಾಡಲಾಗಿದೆ.

ಮೊಬೈಲ್ ಕಳ್ಳತನವಾದಾಗ ಹಾಗೂ ಕಳೆದುಹೋದಾಗ ಜನರು ಠಾಣೆಗೆ ಬರಬೇಕೆಂದಿಲ್ಲ. 'ಇ–ಲಾಸ್ಟ್' ಹಾಗೂ ಸಿಇಐಆರ್ ಆನ್‌ಲೈನ್ ಮೂಲಕ ದೂರು ನೀಡಬಹುದಾಗಿದೆ
ಅಂಶುಕುಮಾರ್, ಹಾವೇರಿ ಎಸ್‌ಪಿ

ಕಳೆದುಹೋದ / ಕಳ್ಳತನವಾದ ಮೊಬೈಲ್ ವಿವರ

ರಾಜ್ಯ	ಬ್ಲಾಕ್ ಮಾಡಿದ ಮೊಬೈಲ್	ಲೊಕೇಷನ್ ಪತ್ತೆಯಾದ ಮೊಬೈಲ್	ಜಪ್ತಿಯಾದ ಮೊಬೈಲ್
ಕರ್ನಾಟಕ	2,45,871	1,20,688	41,532
ತೆಲಂಗಾಣ	1,91,427	98,923	33,637
ಮಹಾರಾಷ್ಟ್ರ	2,38,610	1,28,430	17,902
ದೆಹಲಿ	5,52,419	3,50,689	5,065
ಆಂಧ್ರಪ್ರದೇಶ	51,745	29,321	8,775

(ಮಾಹಿತಿ: ಸಿಇಐಆರ್)

ಏನಿದು ಸಿಇಐಆರ್ ವ್ಯವಸ್ಥೆ?

ಕಳೆದುಹೋದ ಹಾಗೂ ಕಳ್ಳತನವಾದ ಮೊಬೈಲ್‌ಗಳನ್ನು ಬ್ಲಾಕ್ ಮಾಡಿಸಲು ಕೇಂದ್ರ ಸರ್ಕಾರ ರೂಪಿಸಿರುವ ವ್ಯವಸ್ಥೆ. ಐಎಂಇಐ ನಂಬರ್ ಮೂಲಕ ಮೊಬೈಲ್ ಪತ್ತೆ ಮಾಡಲು ಈ ವ್ಯವಸ್ಥೆ ಅನುಕೂಲವಾಗಿದೆ.

ಮೊಬೈಲ್ ಕಳೆದುಹೋದರೆ ಅಥವಾ ಕಳ್ಳತನವಾದರೆ ಯಾರಾದರೂ ತಕ್ಷಣವೇ ಜಾಲತಾಣಕ್ಕೆ ಭೇಟಿ ನೀಡಬೇಕು. ಮೊಬೈಲ್ ವಿವರಗಳನ್ನು ಐಎಂಇಐ ನಂಬರ್ ಹಾಗೂ ಒಟಿಪಿ (ಒನ್ ಟೈಂ ಪಾಸ್‌ವರ್ಡ್) ಸಮೇತ ದಾಖಲಿಸಬೇಕು. ನಂತರ, ರಶೀದಿ ಸಿಗುತ್ತದೆ. ಈ ರೀತಿ ದೂರು ಸಲ್ಲಿಕೆ ನಂತರ, ಸಂಬಂಧಪಟ್ಟ ಠಾಣೆಗೆ ಮಾಹಿತಿ ಹೋಗುತ್ತದೆ. ತಕ್ಷಣವೇ ಮೊಬೈಲ್ ಬ್ಲಾಕ್ ಆಗುತ್ತದೆ.

ಜಾಲತಾಣದ ವಿಳಾಸ: https://www.ceir.gov.in

ಬಾಕಿ ಕೂಲಿ ₹200 ಕೊಡದಿದ್ದಕ್ಕೆ ಜಗಳ: ಕೊಪ್ಪಳದಲ್ಲಿ ವೃದ್ಧೆ ಕೊಲೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಕೆಲಸ ಮಾಡಿಸಿಕೊಂಡು ಬಾಕಿ ಉಳಿಸಿಕೊಂಡಿದ್ದ ₹200 ಕೂಲಿ ನೀಡಲು ಸತಾಯಿಸಿದ್ದರಿಂದ ವ್ಯಕ್ತಿಯೊಬ್ಬ ಕೊಪ್ಪಳ ತಾಲ್ಲೂಕಿನ ನಾಗೇಶನಹಳ್ಳಿ ಗ್ರಾಮದಲ್ಲಿ ಸೋಮವಾರ ರಾತ್ರಿ ಮಹಿಳೆಯನ್ನು ಕೊಲೆ ಮಾಡಿದ್ದಾನೆ.

ರೇಣುಕಮ್ಮ (62) ಕೊಲೆಗೀಡಾದವರು, ಆರೋಪಿ ಮಹೇಶ ಗೊಲ್ಲರ ಎಂಬಾತನನ್ನು ಬಂಧಿಸಲಾಗಿದೆ.

ಏನಿದು ಘಟನೆ?: ಕೂಲಿ ಕೆಲಸಕ್ಕಾಗಿ ರೇಣುಕಮ್ಮ ಅವರ ಪತಿ ಅಲ್ಲಪ್ಪ ಆರೋಪಿ ಮಹೇಶ ಸೇರಿದಂತೆ ಕೆಲವರನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದರು. ನಿತ್ಯ ₹650 ಕೂಲಿ ನಿಗದಿಯಾಗಿತ್ತು. ಇದರಲ್ಲಿ ಅಲ್ಲಪ್ಪ ₹200 ಬಾಕಿ ಉಳಿಸಿಕೊಂಡಿದ್ದರು.

ಬಾಕಿ ಹಣದ ವಿಚಾರವಾಗಿ ಮಹೇಶ ಮತ್ತು ಅಲ್ಲಪ್ಪ ನಡುವೆ ಭಾನುವಾರ ಸಂಜೆ ನಾಗೇಶನಹಳ್ಳಿಯಲ್ಲಿ ಜಗಳ ನಡೆದು ವಿಕೋಪಕ್ಕೆ ಹೋಗಿದೆ. 'ಈಗ ನನ್ನ ಬಳಿ ಹಣವಿಲ್ಲ; ನಂತರ ಕೊಡುವೆ' ಎಂದು ಅಲ್ಲಪ್ಪ ಹೇಳಿದ್ದರಿಂದ ಮಹೇಶ ಆಕ್ರೋಶಗೊಂಡಿದ್ದ.

ಸೋಮವಾರ ರಾತ್ರಿ ಕೂಡ ಇದೇ ವಿಷಯಕ್ಕೆ ಮತ್ತೆ ನಡೆದ ಜಗಳವನ್ನು ಬಿಡಿಸಲು ಬಂದ ಅಲ್ಲಪ್ಪ ಪತ್ನಿ ರೇಣುಕಮ್ಮಳಿಗೆ ಮಹೇಶ ಕಟ್ಟಿಗೆಯಿಂದ ಬಲವಾಗಿ ಹೊಡೆದಿದ್ದರಿಂದ ಆಕೆ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಆರೋಪಿ ವಿರುದ್ಧ ರೇಣುಕಮ್ಮ ಮಗಳು ಹುಲಿಗೆಮ್ಮ ಮಂಗಳವಾರ ನೀಡಿದ ದೂರಿನಂತೆ ಮುನಿರಾಬಾದ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಆಂಗ್ಲ ಮಾಧ್ಯಮ: ಹೆಚ್ಚುವರಿ ವಿಭಾಗಕ್ಕೆ ಸಮ್ಮತಿ

ಬೆಂಗಳೂರು: ಒಂದನೇ ತರಗತಿಯಿಂದ ಆಂಗ್ಲ ಮಾಧ್ಯಮದಲ್ಲಿ ಬೋಧನೆ ಮಾಡುತ್ತಿರುವ 25 ಸರ್ಕಾರಿ ಶಾಲೆಗಳಲ್ಲಿ ಹೆಚ್ಚುವರಿಯಾಗಿ ಮತ್ತೊಂದು ವಿಭಾಗ ಆರಂಭಿಸಲು ಶಾಲಾ ಶಿಕ್ಷಣ ಇಲಾಖೆ ಅನುಮತಿ ನೀಡಿದೆ.

ರಾಜ್ಯದಲ್ಲಿ ಪ್ರಸ್ತುತ 2,404 ಸರ್ಕಾರಿ ಶಾಲೆಗಳಲ್ಲಿ ಕನ್ನಡ ಹಾಗೂ ಉರ್ದು ಮಾಧ್ಯಮದ ಜತೆಗೆ, ಆಂಗ್ಲ ಮಾಧ್ಯಮ ತರಗತಿಗಳಿಗೂ ಅವಕಾಶ ನೀಡಲಾಗಿದೆ. 2024–25ನೇ ಸಾಲಿನಲ್ಲಿ 1,419 ಶಾಲೆಗಳನ್ನು ಆರಂಭಿಸಲು ಅನುಮತಿ ನೀಡಲಾಗಿತ್ತು. ಈಗ ಹೆಚ್ಚುವರಿ ವಿಭಾಗ ತೆರೆಯಲು ಸಮ್ಮತಿ ನೀಡಲಾಗಿದ್ದು, ಆರ್ಥಿಕ ಹೊರೆಯಾಗದಂತೆ ಸಂಪನ್ಮೂಲಗಳನ್ನು ಬಳಸಲು ಸೂಚಿಸಲಾಗಿದೆ.

ಕೊಡಗಿನಲ್ಲಿ ಮುಂಗಾರು ಬಿರುಸು

ಮಡಿಕೇರಿ/ಮಂಗಳೂರು: ಕೊಡಗು ಜಿಲ್ಲೆಯ ಕೆಲವೆಡೆ ಮಂಗಳವಾರ ಮಳೆ ಬಿರುಸಾಗಿದೆ. ಮಡಿಕೇರಿ ನಗರದಲ್ಲಿ ಸೋಮವಾರ ರಾತ್ರಿಯಿಂದಲೂ ನಿರಂತರವಾಗಿ ಮಳೆಯಾಯಿತು. ಮಂಗಳವಾರ ಬಿರುಗಾಳಿಯೊಂದಿಗೆ ಬಿರುಸಾಗಿ ಸುರಿಯಿತು. ಹಾರಂಗಿ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣವೂ 500 ಕ್ಯೂಸೆಕ್ ದಾಟಿದ್ದು, ಉತ್ತಮ ಮಳೆಯ ನಿರೀಕ್ಷೆಗಳನ್ನು ಗರಿಗೆದರಿಸಿದೆ.

ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಿದೆ. ಪಶ್ಚಿಮ ಘಟ್ಟ ಪ್ರದೇಶದಲ್ಲಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯಾಪಕ ಮಳೆಯಾಗಿದ್ದರಿಂದ ನೇತ್ರಾವತಿ, ಫಲ್ಗುಣಿ, ನಂದಿನಿ, ಶಾಂಭವಿ ಹಾಗೂ ಕುಮಾರಧಾರಾ ನದಿಗಳಲ್ಲಿ ನೀರಿನ ಹರಿವಿನ ಮಟ್ಟ ಹೆಚ್ಚಾಗಿದೆ.

ಕರ್ನಾಟಕ ಸರಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ
ಜಿಲ್ಲಾ ನಗರಾಭಿವೃದ್ಧಿ ಕೋಶ ಹಾವೇರಿ ಜಿಲ್ಲೆ, ಹಾವೇರಿ
Phone: 08375-249097 e-mail: eedudchaver@gmail.com
ಸಂ: ಜಿ.ನ.ಕೋ/ಕಾ.ನಿ.ಅ/ನ.ಹಂ–04/ಟೆ.ಪ್ರ/01/2024–25 ದಿನಾಂಕ: 21–06–2024.

ಅಲ್ಪಾವಧಿ ಮರು ಟೆಂಡರ ಪ್ರಕಟಣೆ

ಈ ಮೂಲಕ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ ಇಂಡೆಂಟ್ ಸಂಖ್ಯೆ : 13324/CALL-2, 15182/CALL-2, 15186/CALL-2, 15188/CALL-2, 15305/CALL-2 ಟೆಂಡರನ್ನು ಆಹ್ವಾನಿಸಿದ್ದು, ಇಚ್ಛೆಯುಳ್ಳ ಅರ್ಹ ಗುತ್ತಿಗೆದಾರರು ಇ–ಪ್ರಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಟೆಂಡರನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಇ–ಪ್ರಕ್ಯೂರಮೆಂಟ್ ವೆಬ್ ಸೈಟ್ https://kppp.karnataka.gov.in ರಲ್ಲಿ ಪ್ರಕಟಿಸಲಾಗಿದ್ದು, ಹೆಚ್ಚಿನ ಮಾಹಿತಿ ಬೇಕಾದಲ್ಲಿ ಈ ಕಾರ್ಯಾಲಯದಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಹಾವೇರಿ
ವಾ.ಸಾ.ಇ/ಹಾವೇರಿ/52/ದೇಶಪಾಂಡೆಪಬ್ಲಿಸಿಟಿ/2024–25

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು–570 022.
ಸಂ.ಕಾಅ/ಗ್ರಾಕುನೀ&ನೈವಿ/ಮೈ/ಇ–ಪ್ರಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಇ–ಟೆಂಡರ್ ಪ್ರಕಟಣೆ ಸಂಖ್ಯೆ 03/2024–25 ದಿನಾಂಕ: 24.06.2024

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರುರವರು ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಬೆಂಗಳೂರುರವರ ಸಹಯೋಗದೊಂದಿಗೆ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್‌ರೋಲ್ ಮಾಡಿದ 4ನೇ ದರ್ಜೆ ಗುತ್ತಿಗೆದಾರರು ಮತ್ತು ಮೇಲ್ಪಟ್ಟು ಟೆಂಡರ್ ನಮೂನೆ, KW-4 ರೀತ್ಯಾ 2–ಲಕೋಟೆ ಪದ್ಧತಿಯಂತೆ), ಹುಣಸೂರು 1 ಕಾಮಗಾರಿಗಳಿಗೆ, HUNSUR TALUK(H/A:MRF / SBM/ 2023-24), (ಅಂದಾಜು ಮೊತ್ತ 154.00 ಲಕ್ಷದವರೆಗೆ) ಇ–ಪ್ರಕ್ಯೂರ್ ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಲು ನಿಗಧಿತ ಅವಧಿ ದಿ: 25.06.2024 ರಿಂದ 04.07.2024 ರವರೆಗೆ, ಪ್ರೀ ಬಿಡ್ ಮೀಟಿಂಗ್ ದಿ: 26.06.2024 ಸಾಧ್ಯವಾದರೆ ಟೆಂಡರ್ ತೆರೆಯುವ ದಿ: 05.07.2024 ರ ಸಂಜೆ 5.30 ಘಂಟೆಯ ನಂತರ. ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (KPPP portal) ವೆಬ್ ಸೈಟ್‌ನಲ್ಲಿ ಪಡೆಯಬಹುದು. https://kppp.karnataka.gov.in/ ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಮೈಸೂರು (ಫೋನ್ ನಂ.0821–2460495)ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರು
DIPR/DDMYS-133/KSMCA-/2024-25

ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ–583 101
ಪಿನ್ ಕೋಡ್ ನಂ.583101 ದೂ:08392–273731. ಇ–ಮೇಲ್: combudably@gmail.com
ಸಂಖ್ಯೆ: ಬನಅಪ್ರಾ/ಇಎನ್‌ಜಿಜಿ/01/ಕ್ರಿಯೋ/ಟೆಂಡರ್/24–25 ದಿನಾಂಕ: .06.2024

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ 2023–24ನೇ ಸಾಲಿನ ಸರ್ಕಾರದ ಅನುಮೋದಿತ ಆಯವ್ಯಯದಂತೆ ಪ್ರಾಧಿಕಾರದ ಸಭೆಯ ದಿನಾಂಕ:07.03.2024 ವಿಷಯ ಸಂಖ್ಯೆ:155 ರ ನಿರ್ಣಯದಂತೆ ಈ ಕೆಳಕಂಡ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪಿ.ಡಬ್ಲ್ಯೂಡಿ ನೋಂದಾಯಿತ ಸಿವಿಲ್ ಗುತ್ತೇದಾರರಿಗೆ ಟೆಂಡರ್ ಅಹ್ವಾನಿಸಲಾಗಿದೆ.

Note: Any changes either in tender dates or any other conditions, tenderers Can view in Karnataka Public Procurement Portal.

Details of Work: 1.BUDA/2024-25/OW/WORK_INDENT34 **Estimated Cost (Rs. in Lakhs):** 24.99. 2.BUDA/2024-25/OW/WORK_INDENT35 **Estimated Cost (Rs. in Lakhs):** 19.00. 3.BUDA/2024-25/RD/WORK_INDENT36 **Estimated Cost (Rs. in Lakhs):** 49.95. 4.BUDA/2023-24/EL/WORK_INDENT3/CALL-2 **Estimated Cost (Rs. in Lakhs):** 415.65

The Tender Events are as under: a) Pre-Bid Meeting for Work Sl No 4: **23-07-2024 up to 11:30 Hrs.** b) Last Dates for Queries (through e-procurement Portal).1) Sl No 1 to 3, 2) Sl No 4 **1)08-07-2024 up to 16:30 Hrs. 2)24-07-2024 Up to 16:30 Hrs.** c) Last Date for submission of Tenders through e-procurement Portal.1) Sl No 1 to 3, 2) Sl No 4 **1)09-07-2024 up to 16:30 Hrs. 2)25-07-2024 up to 16:30 Hrs.** d) Date and Time of Opening of Technical Bids 1) Sl No 1 to 3, 2) Sl No 4 **1)11-07-2024 at 10:30 Hrs. 2)27-07-2024 at 10:30 Hrs.** e) Date and Time of Opening of Financial Bids 1) Sl No 1 to 3, 2) Sl No 4 **1)15-07-2024 at 10:30 Hrs 2)01-08-2024 at 10:30 Hrs.**

ಟೆಂಡರ್‌ನಲ್ಲಿನ ಹೆಚ್ಚಿನ ಮಾಹಿತಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಅಥವಾ **www.KPPP.karnataka.gov.in** ವೆಬ್ ಸೈಟ್‌ನಲ್ಲಿ ಅಥವಾ ಈ ಕಛೇರಿಯ ದೂರವಾಣಿ ಸಂಖ್ಯೆ:08392–273731 ರವರಿಂದ ಪಡೆಯಬಹುದಾಗಿದೆ. ನಿಬಂಧನೆಗಳು 1)ಯಾವುದೇ ಕಾರಣಕ್ಕೂ ನಿಗಧಿಪಡಿಸಿದ ಕೊನೆಯ ದಿನಾಂಕದಂದು ಸಂಪರ್ಕಜಾಲ (ಅನ್‌ಲೈನ್)ಸಿಗದಿದ್ದರೆ ಈ ಕಛೇರಿ ಜವಾಬ್ದಾರಿಯಾಗಿರುವುದಿಲ್ಲ 2)ಯಾವುದೇ ಟೆಂಡರ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರ ಆಯುಕ್ತರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ ಇವರು ಕಾಯ್ದಿರಿಸಿಕೊಂಡಿರುತ್ತಾರೆ ಹಾಗೂ ಇನ್ನುಳಿದ ಎಲ್ಲಾ ಷರತ್ತುಗಳು ಅನ್ವಯವಾಗುತ್ತದೆ.

ಸಹಿ/– ಆಯುಕ್ತರು, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/158/ಕೆಎಸ್‌ಎಂಸಿಎ/2024–25

ನಗರಸಭಾ ಕಾರ್ಯಾಲಯ, ಉಡುಪಿ
ಸಂಖ್ಯೆ:ಉನಸ:ಬಿ1:ಸಿಆರ್:2024–25 ದಿನಾಂಕ: 24.06.2024

ಟೆಂಡರು ಪ್ರಕಟಣೆ

2024–25ನೇ ಸಾಲಿನ ನಗರಸಭಾ ನಿಧಿಯಡಿ ಈ ಕೆಳಗಿನ ಕಾಮಗಾರಿಯನ್ನು ಕೈಗೊಳ್ಳಲು ಅರ್ಹ ಗುತ್ತಿಗೆದಾರರಿಂದ **Standard Bid Document K.W-2** ರ ನಿಯಮ ನಿಬಂಧನೆಗೊಳಪಟ್ಟು (ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿರುವಂತೆ) e-procurement ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಬಂಧಿಸಿದವರಿಂದ ಮತ್ತು ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.

(1) ತುಂಬಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 08.07.2024 ಸಂಜೆ 5.00 ಗಂಟೆಗೆ** (2) ಸ್ವೀಕರಿಸಲಾದ ಟೆಂಡರುಗಳನ್ನು ತೆರೆಯುವ **ದಿನಾಂಕ: 09.07.2024 ಸಂಜೆ 5.01 ಗಂಟೆಗೆ** (3) ಆರ್ಥಿಕ ಬಿಡ್ಡು ತೆರೆಯುವ ದಿನಾಂಕ ಅರ್ಹ ಬಿಡ್ಡುದಾರರಿಗೆ ಪ್ರತ್ಯೇಕ ತಿಳಿಸಲಾಗುವುದು.

ಒಟ್ಟು 3 ಸಂಖ್ಯೆಯ (ಪ್ಯಾಕೇಜ್) ಕಾಮಗಾರಿಯ ವಿವರ ಈ ಕೆಳಗಿನಂತಿದೆ.
(1) ಪ್ಯಾಕೇಜ್–1: DMA/2024-25/EL/WORK_INDENT18801
(2) ಪ್ಯಾಕೇಜ್–2: DMA/2024-25/EL/WORK_INDENT18802
(3) ಪ್ಯಾಕೇಜ್–3: DMA/2024-25/EL/WORK_INDENT18806

ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್ **https://kppp.karnataka.gov.in** ನಿಂದ ಟೆಂಡರು ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಹಾಗೂ ಇದಕ್ಕೆ ಸಂಬಂಧಪಟ್ಟ ಹೆಚ್ಚಿನ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಸಂಬಂಧಪಟ್ಟವರಿಂದ ಪಡೆದುಕೊಳ್ಳಬಹುದು.

ಸಹಿ/– ಪೌರಾಯುಕ್ತರು, ಉಡುಪಿ ನಗರಸಭೆ
ವಾಸಾಇ/ಸನಿಉ/ಕೆಎಸ್‌ಎಂಸಿಎ/75/24–25 ದಿ: 25.06.2024

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಇಂಜಿನಿಯರಿಂಗ್ ಘಟಕ
ಮುಖ್ಯ ಇಂಜಿನಿಯರ್‌ರವರ ಕಛೇರಿ, ಆರೋಗ್ಯ ಸೌಧ, 3ನೇ ಮಹಡಿ, ಕುಷ್ಠರೋಗ ಆಸ್ಪತ್ರೆ ಆವರಣ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು – 560 023, ದೂ: 080–29557023 ಇ–ಮೇಲ್: cekhsdrp@gmail.com
ಸಂಖ್ಯೆ: ಆಕುಕ/ಇಂ.ಘ/ಮು.ಇಂ/ತಾ.ಸ–3/ಸ.ಇಂ–8/ಟೆಂಡರ್/2024–25/587 ದಿ: 25.06.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗೆ ದ್ವಿ ಟೆಂಡರ್ ದಸ್ತಾವೇಜು ಪದ್ಧತಿಯಲ್ಲಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (KPPP) ಮೂಲಕ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು: Repairs and Renovation of CHC Staff Qtrs at Itagi of Hadagali Tq in Vijayapura District. (Call-2) taken up under KMERC Funds. ಅಂದಾಜು ಮೊತ್ತ (Including GST): **ರೂ. 200.00 ಲಕ್ಷಗಳು**. ಇಎಂಡಿ ಮೊತ್ತ: **ರೂ. 3.00 ಲಕ್ಷಗಳು**. ಕಾಲಾವಧಿ(ಮಳೆಗಾಲ ಸೇರಿದಂತೆ): **11 ತಿಂಗಳು.**

ಟೆಂಡರ್ ಪ್ರಕ್ರಿಯೆಗಳ ದಿನಾಂಕಗಳು: (1) ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಮೂಲಕ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **11.07.2024 ರಂದು 16.00 ಗಂಟೆಯವರೆಗೆ.** (2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: **12.07.2024 ರಂದು 16.00 ಗಂಟೆಗೆ.**

ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through Karnataka Public Procurement Portal) **www.kppp.karnataka.gov.in** ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಪ್ರಕ್ರಿಯೆ ಶುಲ್ಕವನ್ನು **www.kppp.karnataka.gov.in** ನಲ್ಲಿ ವಿದ್ಯುನ್ಮಾನ **(Electronic)** ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಗುತ್ತಿಗೆದಾರರು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ (Through Karnataka Public Procurement Portal) ನೋಂದಾಯಿಸುವ ಅಗತ್ಯ ಇದೆ.

ಟಿಪ್ಪಣಿ: (1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. (2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/–ಮುಖ್ಯ ಇಂಜಿನಿಯರ್, ಆ&ಕುಕಇ, ಇಂಜಿನಿಯರಿಂಗ್ ಘಟಕ, ಬೆಂಗಳೂರು.

ಸಮಾಜ ಕಲ್ಯಾಣ ಇಲಾಖೆ
ರಾಮನಗರ ಜಿಲ್ಲಾ ಪಂಚಾಯತ್, ಜಂಟಿ ನಿರ್ದೇಶಕರ ಕಛೇರಿ, ಪಂಚಾಯತ್ ಭವನ, 2ನೇ ಮಹಡಿ, ಬಿ.ಎಂ. ರಸ್ತೆ, ರಾಮನಗರ ಜಿಲ್ಲೆ – 562159.
ದೂರವಾಣಿ : 080–27273003, ಇ–ಮೇಲ್ : dswormgm12@gmail.com
ಸಂಖ್ಯೆ : ಜ.ನಿ.ಕ./ಸ.ಕ.ಇ./ರಾ.ಜಿ./ಸಿಬ್ಬಂದಿ/ಹೊ.ಗು./ಟೆಂಡರ್/ಸಿಆರ್–01/2024–25
ದಿನಾಂಕ : 24–06–2024

ಪತ್ರಿಕಾ ಪ್ರಕಟಣೆ

2024–25 ನೇ ಸಾಲಿನಲ್ಲಿ ರಾಮನಗರ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ / ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯ / ಆಶ್ರಮ ಶಾಲೆಗಳಲ್ಲಿ ಖಾಲಿ ಇರುವ ಭೋಧಕ / ಭೋಧಕೇತರ ಹುದ್ದೆಗಳ ಸೇವೆಯನ್ನು ಹೊರ ಸಂಪನ್ಮೂಲದಿಂದ ನೇಮಕಾತಿ ಮಾಡಿಕೊಳ್ಳಲು ಅರ್ಹ ಮತ್ತು ಅನುಭವ ಹೊಂದಿರುವ ಹಾಗೂ ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಹೊರಸಂಪನ್ಮೂಲ ಸಂಸ್ಥೆಗಳಿಂದ ಎರಡು ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ. (ಟೆಂಡರ್ ನಂ. : SWD/2024-25/SE0096) ಇಚ್ಛೆಯುಳ್ಳ ಸಂಸ್ಥೆಯವರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ : https://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.

1) ಟೆಂಡರ್ ಪ್ರಕಟಣೆ ದಿನಾಂಕ : 24–06–2024, 2) ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ : ರೂ. 348.00 ಲಕ್ಷಗಳು, 3) ಟೆಂಡರ್ ಫಾರಂ ಬೆಲೆ : ಇ–ಪ್ರೊಕ್ಯೂರ್‌ಮೆಂಟ್ ನಂತೆ, 4) ಟೆಂಡರ್ ಫಾರಂ ವಿತರಿಸುವ ದಿನಾಂಕ : ಇ–ಪ್ರೊಕ್ಯೂರ್‌ಮೆಂಟ್‌ನಂತೆ, 5) ಟೆಂಡರ್ ಫಾರಂ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ : 31–07–2024 ಸಂಜೆ 5.00 ಗಂಟೆಗೆ https://kppp.karnataka.gov.in, 6) ಪೂರ್ವ ಭಾವಿ ಸಭೆ ದಿನಾಂಕ : 22–07–2024 ಬೆಳಿಗ್ಗೆ 11.00 ಗಂಟೆ 7) ತಾಂತ್ರಿಕ ಲಕೋಟೆ ತೆರೆಯುವ ವೇಳೆ ಮತ್ತು ದಿನಾಂಕ : 02–08–2024 ಸಮಯ ಬೆಳಿಗ್ಗೆ 11:30 ಗಂಟೆಗೆ ಅಥವಾ ನಂತರ ತಿಳಿಸುವ ದಿನಾಂಕದಂದು, 8) ಆರ್ಥಿಕ ಲಕೋಟೆಯನ್ನು ತೆರೆಯುವ ವೇಳೆ ಮತ್ತು ದಿನಾಂಕ : 05–08–2024 ಬೆಳಿಗ್ಗೆ 11.30 ಗಂಟೆಗೆ ಅಥವಾ ನಂತರ ತಿಳಿಸುವ ದಿನಾಂಕದಂದು. 9) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ : ರೂ. 5.22 ಲಕ್ಷ, 10) ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ : Website : www.kppp.karnataka.gov.in, 11) ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಜಿಲ್ಲಾ ಪಂಚಾಯತ್ ಭವನ, 2ನೇ ಮಹಡಿ, ರಾಮನಗರ ಜಿಲ್ಲೆ, ದೂರವಾಣಿ ಸಂಖ್ಯೆ : 080-27273003 / 9480843043, email-dswormgm12@gmail.com

ಹೆಚ್ಚಿನ ವಿವರಗಳನ್ನು ಹಾಗೂ ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್ : www.eproc.karnataka.gov.in ನಲ್ಲಿ ವೀಕ್ಷಿಸ ಬಹುದಾಗಿರುತ್ತದೆ ಹಾಗೂ ಮೇಲ್ಕಂಡ ವಿಳಾಸದ ಕಛೇರಿಯಿಂದ ಪಡೆಯಬಹುದಾಗಿರುತ್ತದೆ.

ಸಹಿ/– ಜಂಟಿ ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ, ರಾಮನಗರ ಜಿಲ್ಲೆ.
ಡಿಐಪಿಆರ್/ರಾಮನಗರ/104/ಮಣಿಪಾಲ್/2024–25

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್ ಕಾರ್ಯಾಲಯ, ಹಾಸನ
ದೂರವಾಣಿ ಸಂಖ್ಯೆ: 08172–234455, 08172–268339, Mail ID zpdev.hassan@gmail.com

ಪತ್ರಿಕಾ ಪ್ರಕಟಣೆಗಾಗಿ

ವಿಷಯ: ಹಾಸನ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಹೊರಗುತ್ತಿಗೆ ಸಿಬ್ಬಂದಿಗಳ ಸೇವೆ ಪಡೆಯಲು ಜಿಲ್ಲಾ ಮಟ್ಟದಲ್ಲಿ ಇ–ಪ್ರೊಕ್ಯೂರ್ ಮೆಂಟ್ ಮೂಲಕ ಆನ್ ಲೈನ್ ಟೆಂಡರ್ ಆಹ್ವಾನಿಸಲಾಗಿದೆ. ಕ್ರ.ಸಂ.1)ವಿವರ:ಇ–ಪೋರ್ಟಲ್ ನಲ್ಲಿ ಟೆಂಡರ್ ದಾಖಲೆ ಅಪ್ ಲೋಡ್ ಮಾಡಲು ಪ್ರಾರಂಭ ದಿನಾಂಕ: 19–06–2024 ರಿಂದ 16.00 4)ಇ–ಪೋರ್ಟಲ್ ನಲ್ಲಿ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 18–07–2024 ರ 16:00 ಗಂಟೆಯವರೆಗೆ. 5)ಇ–ಪೋರ್ಟಲ್ ನಲ್ಲಿ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 20–07–2024 @ 11.00 ಗಂಟೆ. 6)ಇ–ಪೋರ್ಟಲ್ ನಲ್ಲಿ ಆರ್ಥಿಕ ಬಿಡ್ ತೆರೆಯುವ ದಿನಾಂಕ:24–07–2024 @ 11.00 ಗಂಟೆ.

ಸಹಿ/–ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ಹಾಸನ.
ವಾಸಾಸಂಇ/ಹಿಸನಿ/ಹಾಸನ/95/ಕೆಎಸ್‌ಎಂಸಿಎ/2024–25

ಕರ್ನಾಟಕ ಉಚ್ಚ ನ್ಯಾಯಾಲಯ,
ಉಚ್ಚ ನ್ಯಾಯಾಲಯ ಕಟ್ಟಡಗಳು, ಬೆಂಗಳೂರು–1
ಹೆಚ್‌ಸಿಸಿ ಸಂ. Misc. No. 2023 HCA-II/58/13 ದಿನಾಂಕ : 24.06.2024

ಸಂಕ್ಷಿಪ್ತ ಮರು ಟೆಂಡರ್ ಅಧಿಸೂಚನೆ

ಕರ್ನಾಟಕ ಉಚ್ಚ ನ್ಯಾಯಾಲಯವು, ಕರ್ನಾಟಕ ಉಚ್ಚ ನ್ಯಾಯಾಲಯ ಬೆಂಗಳೂರಿನ ಪೀಠದಲ್ಲಿ "Contract for carrying out Rodent Control, Spraying Work and Fogging Work" ಗಾಗಿ ಟೆಂಡರನ್ನು Karnataka Public Procurement Portal ನಲ್ಲಿ ಆಹ್ವಾನಿಸಿದೆ. ಟೆಂಡರನ್ನು **ದಿನಾಂಕ: 09.07.2024ರ ಸಂಜೆ 4.00 ಗಂಟೆಯೊಳಗೆ** ಆಸಕ್ತರು ಅಪ್‌ಲೋಡ್ ಮಾಡಬಹುದಾಗಿದೆ. ಹೆಚ್ಚಿನ ವಿವರಗಳನ್ನು **https://kppp.karnataka.gov.in/#/portal/searchTender/live** ಜಾಲತಾಣದ ಮೂಲಕ ಪಡೆದುಕೊಳ್ಳಬಹುದು.

ಸಹಿ/- (ಎನ್.ಜಿ. ದಿನೇಶ) ರಿಜಿಸ್ಟ್ರಾರ್ (ಗಣಕ) ಮತ್ತು
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು
ವಾಸಾಸಂಇ/ಉನಿ-ಸಿ.ಪಿ/550/ಕೆಎಸ್‌ಎಂಸಿಎ/2024-25

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ
4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041
ದೂ: 080–26961928 ಫ್ಯಾಕ್ಸ್–080–26961929
ಸಂಖ್ಯೆ:ರಾಗಾವಿ/ಪ್ರೊಕ್/ಕ್ಲೀನಿಂಗ್ ಮೆಟಿರಿಯಲ್/22/2024–25 ದಿನಾಂಕ:25.06.2024

ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)

ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಸ್ವಚ್ಛತಾ ಸಾಮಗ್ರಿಗಳನ್ನು ಸರಬರಾಜು ಮಾಡಲು ಟೆಂಡರನ್ನು ಆಹ್ವಾನಿಸಿದ್ದಾರೆ. ಸೇವೆಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಲಗತ್ತಿಸಿರುವ ಉಲ್ಲೇಖಿತ ಷರತ್ತುಗಳಲ್ಲಿ ಒದಗಿಸಲಾಗಿದೆ. **(Tender Reference Number: RGUHSK /2024-25/IND0013)**

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	25/06/2024
ಟೆಂಡರ್ ವಿಚಾರಣೆ/ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ ಮತ್ತು ಸಮಯ	01/07/2024 5:30 ಗಂಟೆಗೆ
ಬಿಡ್ ಪೂರ್ವಭಾವಿ ಸಭೆಯ ದಿನಾಂಕ	02/07/2024 11:30 ಗಂಟೆಗೆ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ	10/07/2024 5:29 ಗಂಟೆಗೆ
ಮಾದರಿ ಸಲ್ಲಿಕೆಯ ದಿನಾಂಕ	10/07/2024 5:30 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	12/07/2024 11:30 ಗಂಟೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	15/07/2024 15:30 ಗಂಟೆಗೆ

ಹೆಚ್ಚಿನ ಮಾಹಿತಿಗಳನ್ನು https://kppp.karnataka.gov.in ನಿಂದ ಪಡೆದುಕೊಳ್ಳಬಹುದು.
ಸಹಿ/–
ಕುಲಸಚಿವರು
ಡಿಐಪಿಆರ್/574/2024–25

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ನಂ.ಮುಇಂವಿ/(ಟಿ&ಪಿ)/ಅಇಂ(ವಿ)2/ಇಇಟಿ12ಎನ್/2024–25/1884–89 ದಿನಾಂಕ: 25.06.2024

ಸಂಕ್ಷಿಪ್ತ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣಾ ಸಂಖ್ಯೆಯ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ವಿಚಾರಣಾ ಸಂಖ್ಯೆ / ಕಾಮಗಾರಿ ವಿವರ
ಕವಿಪ್ರನಿನಿ/2024–25/ಇಎಲ್/ವರ್ಕ್_ಇಂಡೆಂಟ್905ರ ಮೂಲಕ ಕವಿಪ್ರನಿನಿಗಾಗಿ 01 ಸಂಖ್ಯೆಯ 66/11ಕೆವಿ, 1X20 ಎಂವಿಎ ಸಾಮರ್ಥ್ಯದ ಜಿಐಎಸ್/ಹೈಬ್ರಿಡ್ ಸ್ವಿಚ್‌ಗೇರ್ ಮೊಬೈಲ್ ಕಾಂಪ್ಯಾಕ್ಟ್ ಸಬ್–ಸ್ಟೇಷನ್ (MCS) ನ ವಿನ್ಯಾಸ, ತಯಾರಿಕೆ, ಪರೀಕ್ಷೆ, ಪೂರೈಕೆ ಮತ್ತು ಸ್ಥಾಪನೆ/ಪ್ರದರ್ಶನಗೊಳಿಸುವುದು.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ-ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ "ಇ-ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ" ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ **ದಿನಾಂಕ 01.07.2024 ರಂದು ಅಪರಾಹ್ನ 15:00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. ಬಿಡ್ ಸಲ್ಲಿಕೆಗೆ ಕೊನೆಯ **ದಿನಾಂಕ 22.07.2024 ರಂದು ಅಪರಾಹ್ನ 15:00 ಗಂಟೆ. ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದ್ದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳ ಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು / ಸೇರ್ಪಡೆಗಳನ್ನು ಗಮನಿಸತಕ್ಕದ್ದು.

ಸಹಿ/-, ಮುಖ್ಯ ಇಂಜಿನಿಯರ್ (ವಿದ್ಯುತ್), ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್, ಕವಿಪ್ರನಿನಿ, 3ನೇ ಮಹಡಿ, ಕಾವೇರಿ ಭವನ, ಬೆಂಗಳೂರು-560 009.

ಮಂಗಳೂರು ಮಹಾನಗರಪಾಲಿಕೆ
DMA/2024-25/WORK INDENT NO.18973, 18989, 18961, 15342, 15250 ದಿನಾಂಕ: 19.06.2024

ಟೆಂಡರ್ ಪ್ರಕಟಣೆ
E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ 2023–24ನೇ ಸಾಲಿನ ಮಹಾನಗರಪಾಲಿಕೆ ಅನುದಾನದಲ್ಲಿ DMA/2024-25/WORK INDENT NO.18973, 18989, 18961, 15342, 15250 ಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 11.07.2024, ಅಪರಾಹ್ನ 4.00 ಗಂಟೆ. ಹೆಚ್ಚಿನ ವಿವರವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ kppp.karnataka.gov.in ಮುಖಾಂತರ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಮಹಾನಗರಪಾಲಿಕೆ ಮಂಗಳೂರು
DIPR / MNG /133/ MPL / 24-25

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ಪರಿಸರ ಭವನ, ನಂ.49, ಚರ್ಚ್ ರಸ್ತೆ, ಬೆಂಗಳೂರು–560001
ದೂರವಾಣಿ : 080–25581383, ಫ್ಯಾಕ್ಸ್ : 080–25586321
ಸಂಖ್ಯೆ: ಮಾನಿಮಂ/107/ಕ/2023/2024–25/1175 ದಿನಾಂಕ: 18/06/2024

ಟೆಂಡರ್‌ಗಾಗಿ ಆಹ್ವಾನ – ಕರೆ – 1
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ www.kppp.karnataka.gov.in ಮುಖಾಂತರ)

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ಕೆಎಸ್‌ಪಿಸಿಬಿ) ಸದಸ್ಯ ಕಾರ್ಯದರ್ಶಿಗಳು ಅರ್ಹ ಟೆಂಡರ್‌ದಾರರಿಂದ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ https://kppp.karnataka.gov.in ಮುಖಾಂತರ ಕೆಳಕಂಡ ಕೆಲಸಕ್ಕೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ

ಕೆಲಸದ ಹೆಸರು: ಚಿತ್ರದುರ್ಗದ ಕೆಎಸ್‌ಪಿಸಿಬಿ ಪ್ರಾದೇಶಿಕ ಕಛೇರಿ ಕಟ್ಟಡಕ್ಕೆ ಬಣ್ಣ ಬಳಿಯುವುದು, ಶೌಚಾಲಯದ ದುರಸ್ತಿ ಮತ್ತು ಇತರೆ ಕಾಮಗಾರಿಗಳು. **ಕೆಲಸದ ಅಂದಾಜು ಮೌಲ್ಯ:** ರೂ.10.08 ಲಕ್ಷಗಳು. ಟೆಂಡರ್ ಬೆಲೆ, ಇಎಂಡಿ ಇತ್ಯಾದಿ, ಮುಂತಾದ ಪಾವತಿಗಳನ್ನು ಇ–ಪಾವತಿ ವಿಧಾನದಲ್ಲಿ ಮಾತ್ರ ಪಾವತಿಸಬೇಕು.

ಹೆಚ್ಚಿನ ವಿವರಗಳನ್ನು, ದಯವಿಟ್ಟು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನಲ್ಲಿ ವೀಕ್ಷಿಸಿ.

ಸಹಿ/–
ಸದಸ್ಯ ಕಾರ್ಯದರ್ಶಿಗಳು
ವಾ.ಸಾ.ಸಂ.ಇ/ವಾಪ್ರ/557/ಆಕಾರ್/2024–25

ನಮ್ಮೆಲ್ಲರ ಚಿತ್ತ, ನೈಸರ್ಗಿಕ ಸಂಪನ್ಮೂಲಗಳ ಮಿತ ಬಳಕೆಯತ್ತ :
ತ್ಯಾಜ್ಯ ಉತ್ಪಾದನೆಯನ್ನು ತಗ್ಗಿಸಿ

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು – 560 009
ಸಂಖ್ಯೆ:ಕೆಆರ್‌ಐಡಿಎಲ್/ಎಸಿಟಿ/ಟಿಎನ್‌ಡಿ/ಎಫ್‌ಡಿ/2024–25 ದಿನಾಂಕ:25.06.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕೆಆರ್‌ಐಡಿಎಲ್ ಇವರು ನಿಶ್ಚಿತ ಠೇವಣಿಯಲ್ಲಿ ಒಂದು ವರ್ಷದ ಅವಧಿಗೆ ಸುಮಾರು ರೂ. 118.00 ಕೋಟಿ ಮೊತ್ತವನ್ನು ಹೂಡಿಕೆ ಮಾಡಲು ಸಾರ್ವಜನಿಕ ವಲಯದ ಬ್ಯಾಂಕುಗಳು/ ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು/ ಖಾಸಗಿ ವಲಯದ ಬ್ಯಾಂಕುಗಳಿಂದ ಇ-ಬಿಡ್ಡಿಂಗ್ ಮೂಲಕ ಟೆಂಡರುಗಳನ್ನು ಆಹ್ವಾನಿಸಿದ್ದಾರೆ. ಇತರೆ ನಿಯಮಗಳು ಮತ್ತು ನಿಬಂಧನೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: www.kppp.karnataka.gov.in ಇಲ್ಲಿ ದಿನಾಂಕ: 28.06.2024 ರಿಂದ ನೋಡಬಹುದು. ಸಹಾಯವಾಣಿ ಇ–ಪ್ರೊಕ್ ಸಂಪರ್ಕ: +91–8046010000, +91–8068948777. (1) ಇ–ಹರಾಜು ಅಧಿಸೂಚನೆ ಪ್ರಕಟಣೆ ದಿನಾಂಕ: 28.06.2024. (2) ಬಿಡ್ ಸಲ್ಲಿಸುವ ಕಡೆಯ ದಿನಾಂಕ: 06.07.2024 ರಂದು 15.00 ಗಂಟೆಗೆ. (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 08.07.2024 ರಂದು 16.00 ಗಂಟೆಗೆ. (4) ಇ–ಹರಾಜು ತೆರೆಯುವ ದಿನಾಂಕ: 11.07.2024 ರಂದು ಬೆಳಿಗ್ಗೆ 10.30 ಗಂಟೆಯಿಂದ ಮಧ್ಯಾಹ್ನ 15.00 ಗಂಟೆಯ ವರೆಗೆ

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
ಮುಖ್ಯ ಹಣಕಾಸು ಅಧಿಕಾರಿ
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು–09
ದೂರವಾಣಿ: 080–28015609, ಇ–ಮೇಲ್: cfo-1@kridl.net
ಸಹಿ/– ಮುಖ್ಯ ಹಣಕಾಸು ಅಧಿಕಾರಿ, ಕೆಆರ್‌ಐಡಿಎಲ್, ಬೆಂಗಳೂರು

ಪುರಸಭೆ ಕಾರ್ಯಾಲಯ, ಕೊಣ್ಣೂರ
ತಾ॥ ಗೋಕಾಕ ದೂರವಾಣಿ ನಂ–08332–285501 ಜಿ॥ ಬೆಳಗಾವಿ
ನಂ:ಪುಸಕೊ:ಲೋ.ಇ:15ನೇ.ಹ:ಎಸ್.ಎಫ್.ಸಿ.ಎಸ್.ಬಿ.ಎಮ್:2024–25 ದಿ:26–06–24

–:ಕೆ.ಪಿ.ಪಿ.ಪಿ ಪೋರ್ಟಲ್:– –:ಅಲ್ಪಾವಧಿ ಟೆಂಡರ ಪ್ರಕಟಣೆ :–

ಪುರಸಭೆ ಕೊಣ್ಣೂರ ವ್ಯಾಪ್ತಿಯಲ್ಲಿ ಸನ್ 2017–18 ನೇ ಸಾಲಿನ ಸ್ವಚ್ಛ ಭಾರತ ಮಿಷಯನ್ ಯೋಜನೆಯ ಘನತ್ಯಾಜ್ಯ ವಸ್ತು ವಿಲೇವಾರಿ ಅನುದಾನದಡಿ ಈ ಕೆಳಗೆ ವಿವರಿಸಿದ 2 ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯ ಇಂಜಿನಿಯರಿಂಗ್ ವಿಭಾಗದಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಸಿವ್ಹಿಲ್ ಮತ್ತು ಇಲೆಕ್ಟ್ರಿಕಲ್ ಗುತ್ತಿಗೆದಾರರು/ ಮತ್ತು ಪೂರೈಕೆದಾರರಿಂದ, ಕೆ.ಜಿ–2 ಮತ್ತು 3 ರ ಪ್ರಕಾರ ಐಟಂವಾರ ಟೆಂಡರಗಳನ್ನು ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಅಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ನಿಗಧಿಪಡಿಸಿದ ಟೆಂಡರ ದಾಖಲಾತಿಯನ್ನು ಕೆ.ಪಿ.ಪಿ.ಪಿ ಪೋರ್ಟಲ್‌ನಿಂದ ನಿಗಧಿತ ಶುಲ್ಕ ಪಾವತಿಯೊಂದಿಗೆ ಡೌನ್ ಲೋಡ್ ಮಾಡಿಕೊಳ್ಳತಕ್ಕದ್ದು ಇ.ಎಂ.ಡಿ ಮೊತ್ತದೊಂದಿಗೆ ಭರ್ತಿ ಮಾಡಿದ ಟೆಂಡರುಗಳನ್ನು ದಿ:01–07–2024 ರ ಸಾಯಂಕಾಲ 5.30 ಘಂಟೆಯೊಳಗಾಗಿ ಕೆ.ಪಿ.ಪಿ.ಪಿ–ಪೋರ್ಟಲ್‌ನಲ್ಲಿ ಸಲ್ಲಿಸತಕ್ಕದ್ದು. ಸದರೀ ಟೆಂಡರಿನ ಪ್ರೀ ಬಿಡ್ ಮೀಟಿಂಗನ್ನು ದಿ:30–06–2024 ರಂದು ಮಧ್ಯಾಹ್ನ 12.00 ಘಂಟಗೆ ಪುರಸಭೆ ಕಾರ್ಯಾಲಯದಲ್ಲಿ ನಿಗದಿಪಡಿಸಲಾಗಿದೆ ತಾಂತ್ರಿಕ ಬಿಡ್‌ನ್ನು ತೆರೆಯುವ,ದಿ:02–07–2024 ರಂದು ಮುಂಜಾನೆ 11 ಘಂಟೆಗೆ ತೆರೆಯಲಾಗುವುದು, ಆರ್ಥಿಕ ಬಿಡ್‌ನ್ನು ತೆರೆಯವ ದಿ:08–07–2024 ರಂದು ಮುಂಜಾನೆ 11 ಘಂಟೆಗೆ (ತಾಂತ್ರಿಕ ಬಿಡ್‌ನ್ನು ಸಕ್ಷಮ ಪ್ರಾಧಿಕಾರದಿಂದ ಮಂಜೂರಾದ ನಂತರ)ಆರ್ಥಿಕ ಬಿಡ್‌ನ್ನು ತೆರೆಯಲಾಗುವದು ಕಾಮಗಾರಿಗಳ ಟೆಂಡರ್ ಪಡೆಯಲು ಬೇಕಾದ ಅರ್ಹತೆ ಹಾಗೂ ಇತರೆ ಷರತ್ತುಗಳನ್ನು ಟೆಂಡರ್ ಫಾರಂಗಳಲ್ಲಿ ವಿವರವಾಗಿ ನಮೂದಿಸಲಾಗಿದೆ. ವಿವರವಾದ ಟೆಂಡರ ಪ್ರಕಟಣೆಯನ್ನು ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ.ಹಾಗೂ ಕಛೇರಿ ದೂರವಾಣಿ ನಂ–08332–285501 ರಿಂದ ಮಾಹಿತಿ ಪಡೆಯಬಹುದು.ಮತ್ತು ಅಂತರ್ಜಾಲದ ಮೂಲಕ ವೆಬ್‌ಸೈಟ್ ಕಾಮಗಾರಿ ವಿವರ ಹಾಗೂ ಶರತ್ತುಗಳು www.KPPP.Karnataka.gov.in, ಅಥವಾ ಈ ಕಛೇರಿ website: www.konnurtown.mrc.gov.in ಇದರಲ್ಲಿ ಪಡೆಯಬಹುದು.

ಸಹಿ/–ಮುಖ್ಯಾಧಿಕಾರಿ, ಪುರಸಭೆ ಕೊಣ್ಣೂರ
ಸಹಿ/–ಆಡಳಿತಾಧಿಕಾರಿ, ಪುರಸಭೆ ಕೊಣ್ಣೂರ
DIPR/BGM/RO-NO-184/KSMCA/2024-25

ಸುಭಾಷಿತ

ನಾವು ಲೋಕೋದ್ಧಾರಕ್ಕಾಗಿ ಕೆಲಸ ಮಾಡುತ್ತಿದ್ದೇವೆ ಎಂದು ಯಾರೂ ತಿಳಿದುಕೊಳ್ಳಬಾರದು. ನಮ್ಮ ಪ್ರಯತ್ನ ನಮ್ಮ ಏಳಿಗೆಗಾಗಿ, ನಮ್ಮ ಬಾಳು ಸಫಲಗೊಳ್ಳುವುದಕ್ಕಾಗಿ, ನಮ್ಮ ಜೀವಸಂಸ್ಕಾರಕ್ಕಾಗಿ.

–**ಡಿ.ವಿ.ಗುಂಡಪ್ಪ**

ಹೊರಳುದಾರಿಯಲ್ಲಿ ಬಿಎಸ್‌ಪಿ ದುರ್ಬಲಗೊಳ್ಳುತ್ತಿರುವ ದಲಿತ ರಾಜಕಾರಣ

ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ರಾಜಕಾರಣ ಹಾಗೂ ಆ ಪಕ್ಷದ ನಾಯಕತ್ವವು ಈಚಿನ ವರ್ಷಗಳಲ್ಲಿ ಹಲವು ಬದಲಾವಣೆಗಳನ್ನು ಹಾದುಬಂದಿವೆ. ಈಗ, ಪಕ್ಷದ ನಾಯಕಿ ಮಾಯಾವತಿ ಅವರು ತಮ್ಮ ಸೋದರ ಸಂಬಂಧಿ ಆಕಾಶ್ ಆನಂದ್ ಅವರನ್ನು ಪಕ್ಷದ ರಾಷ್ಟ್ರೀಯ ಸಂಚಾಲಕರನ್ನಾಗಿ ಮರುನೇಮಕ ಮಾಡಿದ್ದಾರೆ. ಅಲ್ಲದೆ ಆಕಾಶ್ ಅವರೇ ತಮ್ಮ ರಾಜಕೀಯ ಉತ್ತರಾಧಿಕಾರಿ ಎಂಬುದನ್ನು ಮಾಯಾವತಿ ಸ್ಪಷ್ಟಪಡಿಸಿದ್ದಾರೆ. ಕೆಲವೇ ವಾರಗಳ ಹಿಂದೆ ಆಕಾಶ್ ಅವರನ್ನು ಪಕ್ಷದ ಎಲ್ಲ ಜವಾಬ್ದಾರಿಗಳಿಂದ ಮುಕ್ತಗೊಳಿಸಿದ್ದ ಮಾಯಾವತಿ, ಈಗ ಮತ್ತೆ ಅವರಿಗೆ ಬಹಳ ಪ್ರಮುಖವಾದ ಹೊಣೆಗಾರಿಕೆ ನೀಡಿದ್ದಾರೆ. ಇಲ್ಲಿ ಮಾಯಾವತಿ ಅವರು ತೀರಾ ಗೊಂದಲಕ್ಕೆ ಒಳಗಾಗಿರುವುದು ಹಾಗೂ ಮನಸೋಇಚ್ಛೆ ತೀರ್ಮಾನಗಳನ್ನು ಕೈಗೊಳ್ಳುತ್ತಿರುವುದು ಎದ್ದುಕಾಣುವಂಥದ್ದು. ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಮಾಯಾವತಿ ಅವರು ಆಕಾಶ್ ಅವರನ್ನು ಜವಾಬ್ದಾರಿಗಳಿಂದ ಮುಕ್ತಗೊಳಿಸಿದ್ದರು. ಆಗಲೂ ಅವರ ತೀರ್ಮಾನವು ಹಲವರ ಹುಬ್ಬೇರುವಂತೆ ಮಾಡಿತ್ತು, ಹಲವು ಪ್ರಶ್ನೆಗಳು ಮೂಡುವಂತೆ ಮಾಡಿತ್ತು. ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಬಿಎಸ್‌ಪಿ, 'ಇಂಡಿಯಾ' ಮೈತ್ರಿಕೂಟವನ್ನು ಸೇರಲು ಒಲ್ಲೆ ಎಂದಿತ್ತು. ಬಿಎಸ್‌ಪಿಯು ಎನ್‌ಡಿಎ ಮೈತ್ರಿಕೂಟದ ಭಾಗವಾಗಿಲ್ಲದೆ ಇದ್ದರೂ, ಕೆಲವು ಲೋಕಸಭಾ ಕ್ಷೇತ್ರಗಳಲ್ಲಿ ನಿರ್ದಿಷ್ಟ ಅಭ್ಯರ್ಥಿಗಳು ಕಣಕ್ಕೆ ಇಳಿಯುವಂತೆ ಮಾಡುವ ಮೂಲಕ ಎನ್‌ಡಿಎ ಮೈತ್ರಿಕೂಟಕ್ಕೆ ನೆರವು ಒದಗಿಸಿದೆ ಎಂಬ ಮಾತು ಇದೆ. ದೇಶದ ಅತಿದೊಡ್ಡ ರಾಜ್ಯವಾದ ಉತ್ತರಪ್ರದೇಶದ ಆಡಳಿತ ಚುಕ್ಕಾಣಿಯನ್ನು ಹಿಂದೆ ಒಂದು ಸಂದರ್ಭದಲ್ಲಿ ಹಿಡಿದಿದ್ದ, ದೇಶದ ಎಲ್ಲೆಡೆ ಅಸ್ತಿತ್ವ ಹೊಂದಿದ್ದ ಬಿಎಸ್‌ಪಿ ಈಚಿನ ಕೆಲವು ವರ್ಷಗಳಲ್ಲಿ ಬಹಳ ದುರ್ಬಲಗೊಂಡಿದೆ.

ಬಿಎಸ್‌ಪಿ ನಾಯಕಿ ಮಾಯಾವತಿ ಅವರು ತೀರಾ ಗೊಂದಲಕ್ಕೆ ಒಳಗಾಗಿರುವುದು ಹಾಗೂ ಮನಸೋಇಚ್ಛೆ ತೀರ್ಮಾನಗಳನ್ನು ಕೈಗೊಳ್ಳುತ್ತಿರುವುದು ಎದ್ದುಕಾಣುವಂಥದ್ದು

ಹಿಂದಿನ ಲೋಕಸಭೆಯಲ್ಲಿ ಬಿಎಸ್‌ಪಿ 10 ಸ್ಥಾನಗಳನ್ನು ಹೊಂದಿತ್ತು. ಆದರೆ ಈ ಬಾರಿ ಈ ಪಕ್ಷಕ್ಕೆ ಒಂದು ಸ್ಥಾನವನ್ನು ಗೆಲ್ಲಲೂ ಸಾಧ್ಯವಾಗಿಲ್ಲ. ದಲಿತರ ಅಸ್ಮಿತೆಯನ್ನು ಆಧರಿಸಿ, ಇನ್ನೊಂದು ಪಕ್ಷವಾದ, ಚಂದ್ರಶೇಖರ ಆಜಾದ್ ನೇತೃತ್ವದ ಆಜಾದ್ ಸಮಾಜ ಪಕ್ಷವು (ಕಾನ್ಶಿರಾಮ್), ಉತ್ತರಪ್ರದೇಶದಲ್ಲಿ ದಲಿತರ ನಾಯಕತ್ವದ ವಿಚಾರದಲ್ಲಿ ಮಾಯಾವತಿ ಅವರ ಬಿಎಸ್‌ಪಿಗೆ ಸವಾಲು ಒಡ್ಡಿದೆ. ಆಜಾದ್ ಅವರು ಉತ್ತರಪ್ರದೇಶದ ಪಶ್ಚಿಮ ಭಾಗದಲ್ಲಿ ಇರುವ ನಾಗಿನಾ ಕ್ಷೇತ್ರದಲ್ಲಿ 1.5 ಲಕ್ಷ ಮತಗಳಿಗೂ ಹೆಚ್ಚು ಅಂತರದಿಂದ ಜಯ ಸಾಧಿಸಿದ್ದಾರೆ. ದಲಿತ ಸಮುದಾಯದ ಒಂದು ವರ್ಗವು ಬಿಎಸ್‌ಪಿಯಿಂದ ಅದಾಗಲೇ ದೂರ ಸಾಗಿತ್ತು. ಈಗ ಉಳಿದಿರುವ ಬೆಂಬಲಿಗರು ಕೂಡ ಪಕ್ಷದ ತೆಕ್ಕೆಯಿಂದ ಜಾರುತ್ತಿದ್ದಾರೆ ಎಂಬ ಎಚ್ಚರಿಕೆಯನ್ನು ಆಜಾದ್ ಅವರ ಜಯವು ರವಾನಿಸಿದೆ. ಆಜಾದ್ ಅವರು ತಳಮಟ್ಟದಿಂದ ಮೇಲೆ ಬಂದವರು, ಅವರು ಬಹಳ ಕಷ್ಟಪಟ್ಟು ಪಕ್ಷವನ್ನು ಕಟ್ಟಿದ್ದಾರೆ. ಕಾನ್ಶಿರಾಮ್ ಅವರು ಬಿಎಸ್‌ಪಿಯನ್ನು ಹೇಗೆ ಕಷ್ಟಪಟ್ಟು ಕಟ್ಟಿದ್ದರೋ ಅದೇ ರೀತಿಯಲ್ಲಿ. ಆ ಕಾರಣದಿಂದಾಗಿಯೇ ಕಾನ್ಶಿರಾಮ್ ಅವರ ರಾಜಕೀಯ ಉತ್ತರಾಧಿಕಾರಿ ತಾವು ಎಂಬ ಮಾತನ್ನು ಆಜಾದ್ ಅವರು ಬಹಳ ಚೆನ್ನಾಗಿ ಹಕ್ಕೊತ್ತಾಯದ ರೀತಿಯಲ್ಲಿ ದಲಿತ ಸಮುದಾಯದ ಮುಂದೆ ಇರಿಸಿದ್ದಾರೆ. ಆಕಾಶ್ ಆನಂದ್ ಅವರು ಮಾಯಾವತಿ ಅವರ ನೆರಳಿನಲ್ಲಿ ಈಚೆಗೆ ರಾಜಕಾರಣ ಮಾಡಿಕೊಂಡು ಬಂದವರು. ಅಲ್ಲದೆ, ಅವರು ಅಧಿಕಾರ ಪಡೆದುಕೊಂಡಿರುವುದು ಕೂಡ ಮಾಯಾವತಿ ಅವರಿಂದಲೇ. ಅಂದರೆ, ಮಾಯಾವತಿ ಅವರು ಇಲ್ಲದೆ ಆಕಾಶ್ ಅವರಿಗೆ ಪಕ್ಷದಲ್ಲಿ ಯಾವುದೇ ಪಾತ್ರ ಇಲ್ಲ.

ಪಕ್ಷದ ಬೆಂಬಲಿಗ ವರ್ಗವು ದೂರ ಸರಿದಿದ್ದು ಹಾಗೂ ಪಕ್ಷವು ವ್ಯಕ್ತಿಕೇಂದ್ರಿತ ರಾಜಕಾರಣವನ್ನು ನೆಚ್ಚಿಕೊಂಡಿದ್ದು ಬಿಎಸ್‌ಪಿಯು ದುರ್ಬಲವಾಗುವುದಕ್ಕೆ ಕಾರಣವಾಯಿತು. ಮಾಯಾವತಿ ಅವರ ನಾಯಕತ್ವ ದುರ್ಬಲಗೊಳ್ಳಲು ಕೂಡ ಇದೇ ಕಾರಣ. ಸರ್ವಾಧಿಕಾರಿ ಧೋರಣೆಯಿಂದ ತೀರ್ಮಾನಗಳನ್ನು ಕೈಗೊಂಡಿದ್ದು ಹಾಗೂ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಗಂಭೀರ ಆರೋಪಗಳು ಕೂಡ ಅವರ ನಾಯಕತ್ವಕ್ಕೆ ಪೆಟ್ಟು ಕೊಟ್ಟಿವೆ. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಬಹಳ ವರ್ಷಗಳವರೆಗೆ ದಲಿತ ಸಮುದಾಯದ ಆಶೋತ್ತರಗಳನ್ನು ಪ್ರತಿನಿಧಿಸುವ ಒಂದು ಪಕ್ಷ ಅಥವಾ ನಾಯಕತ್ವ ಇರಲಿಲ್ಲ. ಬಿಎಸ್‌ಪಿ ಮಾತ್ರ ದೇಶದ ಉದ್ದಗಲಕ್ಕೂ ಅಸ್ತಿತ್ವವನ್ನು ಕೆಲವು ಕಾಲದವರೆಗೆ ಹೊಂದಿತ್ತು. ಆದರೆ ಅದು ಈಗ ದುರ್ಬಲಗೊಳ್ಳುತ್ತಿದೆ. ತಮಿಳುನಾಡಿನ ವಿಡುದಲೈ ಚಿರುತೈಗಳ್ ಕಚ್ಚಿ (ವಿಸಿಕೆ), ಲೋಕ ಜನಶಕ್ತಿ ಪಕ್ಷ (ರಾಮ್ ವಿಲಾಸ್) ಮತ್ತು ಹಿಂದೂಸ್ತಾನಿ ಆವಾಮ್ ಮೋರ್ಚಾ ಪಕ್ಷಗಳು ಸಂಸತ್ತಿನಲ್ಲಿ ಸಣ್ಣ ಪ್ರಾತಿನಿಧ್ಯ ಹೊಂದಿವೆ, ಅವು ಒಂದಲ್ಲ ಒಂದು ಮೈತ್ರಿಕೂಟದ ಭಾಗಗಳಾಗಿವೆ. ದೇಶದ ಬೇರೆ ಬೇರೆ ಕಡೆ ಸಣ್ಣ ಪಕ್ಷಗಳು ಇವೆಯಾದರೂ ಅವು ಶಾಸನಸಭೆಗಳಲ್ಲಿ ಪ್ರಾತಿನಿಧ್ಯ ಹೊಂದಿಲ್ಲ. ದಲಿತ ರಾಜಕಾರಣವು ದೇಶದ ಎಲ್ಲೆಡೆ ದುರ್ಬಲಗೊಂಡಿದೆ, ಒಡೆದುಹೋಗುತ್ತಿದೆ.

ಜನರಿಗೆ ಹತ್ತಿರ, ಪ್ರಭುತ್ವಕ್ಕೆ ದೂರವಿರಬೇಕಾದುದೇ ಸೃಜನಶೀಲತೆಯ ನಿಜ ರಾಜಕಾರಣ

ಸೆರೆಗೆ ಸಿಗಲಾರದ ಬಣ್ಣಗಳು

ವಿಶ್ಲೇಷಣೆ

ಸಬಿತಾ ಬನ್ನಾಡಿ

ಸಾಹಿತ್ಯ, ಕಲೆ ಎಂದರೇನು? ಅವು ಪೋಷಾಕುಗಳೇ? ಪೀಠಗಳೇ? ಕಿರೀಟಗಳೇ? ಆಯುಧಗಳೇ? ಅಥವಾ ಅನುಭವದ ವಿಸ್ತಾರವೇ? ಇದನ್ನೂ ದಾಟಿ ಇವು ಮನುಷ್ಯರ ಅವಶ್ಯಕತೆಗಳೇ? ಪಾರಂಪರಿಕ ಕಟ್ಟಡವೊಂದರಲ್ಲಿ ಇತ್ತೀಚೆಗೆ ಎಲ್ಲ ಜನರಿಗೂ ಮುಕ್ತವಾಗಿಟ್ಟು ನಡೆದ ಕಲಾಪ್ರದರ್ಶನವೊಂದನ್ನು ನೋಡಿದಾಗ ಇಂತಹ ಪ್ರಶ್ನೆಗಳು ಹುಟ್ಟಿಕೊಂಡವು. ಅಲ್ಲಿ ನಾನು ಗಮನಿಸುತ್ತಲೇ ಇದ್ದೆ. ಸುಮಾರು ಮೂರು ಗಂಟೆಗಳ ಕಾಲ ಬೇರೆ ಬೇರೆ ವಯಸ್ಸಿನ ವ್ಯಕ್ತಿಗಳನ್ನೂ ನನ್ನೊಳಗನ್ನೂ ಗಮನಿಸಿಕೊಳ್ಳುತ್ತಲೇ ಇದ್ದೆ. ಅದೊಂದು ಅಚ್ಚರಿಯ ಅನುಭವವಾಗಿತ್ತು.

ಮೊದಲು ಅನುಮಾನದಿಂದಲೇ ಕಲಾಂಗಣದೊಳಗೆ ಪ್ರವೇಶಿಸಿದ ಜನ ಕ್ರಮೇಣ ತಮ್ಮನ್ನು ಕಳೆದುಕೊಂಡು ಕಲಾರೂಪಗಳ ಜೊತೆಗೆ ಬೆಸೆದುಕೊಳ್ಳುತ್ತಿದ್ದರು. ಚಿಕ್ಕ ಮಕ್ಕಳು ಖುಷಿಯಿಂದ ಅರಳುತ್ತಿದ್ದರು. ವಯಸ್ಸಾದವರೂ ಮಕ್ಕಳಂತೆ ಬೆರೆಯುತ್ತಿದ್ದರು. ಅಲ್ಲಿರುವ ಚಿತ್ರಗಳಲ್ಲಿನ ಅನುಭವಗಳನ್ನು ಮಥಿಸಿಕೊಳ್ಳುತ್ತಿದ್ದರು. ಅಳು, ಆಘಾತ, ಮೌನ, ಹರ್ಷದಲ್ಲಿ ಲೀನವಾಗುತ್ತಿದ್ದರು. ಹಲವು ಒತ್ತಡಗಳ ಕಳೆ ತುಂಬಿದ ಹೊಲವಾಗಿರುವ ಮನಸ್ಸುಗಳಿಗೆ 'ಅವಸರವೂ ಇಲ್ಲಿ ಸಾವಧಾನದ ಬೆನ್ನೇರಿದೆ' ಎಂಬ ಕುವೆಂಪು ನುಡಿಯ ಮಹತ್ವ ಅರಿವಾಗುವಂತಿತ್ತು.

ಅರೆ! ಅಲ್ಲಿ ಯಾವ ವಿವರಣೆಯೂ ಇರಲಿಲ್ಲ. ಆದರದು ಮಾತಾಡುತ್ತಿತ್ತು. ಏನೋ ಹಗುರಾದಂತೆ, ಜೊತೆಗೇ ಯೋಚನೆಗೆ ಹಚ್ಚಿದಂತಹ ಭಾವವೊಂದು ಅವರಲ್ಲಿ ಹರಿದಾಡುತ್ತಿದ್ದಂತೆ ಇತ್ತು. ನನಗೂ ಅದು ಮೊದಲ ಅನುಭವ. ಚಿತ್ರಕಲೆಯನ್ನೂ ಸೇರಿಸಿಕೊಂಡು ಯಾವುದೇ ಕಲಾಕೃತಿಗಳನ್ನು ಸೂಕ್ತ ಹಿನ್ನೆಲೆಯಿಲ್ಲದೆ ನೋಡಿದರೆ ಅವು ಗಾಢವಾದ ಅನುಭವವನ್ನು ಕೊಡುವುದಿಲ್ಲ. ಹೀಗಾಗಿ, ಕಲಾವಿದರು ಅದಕ್ಕಾಗಿ ಇರುವ, ಕೆಲವರದೇ ಸೊತ್ತಾಗಿರುವ ಗ್ಯಾಲರಿಗಳ ಲಭ್ಯತೆಗಾಗಿ ಕಾಯಬೇಕು. ಆದರೆ ಈ ಗ್ಯಾಲರಿಗಳಿಗೂ ಸಾಮಾನ್ಯ ಜನರಿಗೂ ಸಂಬಂಧವೇ ಇಲ್ಲದ ಸ್ಥಿತಿಯೊಂದು ನಮ್ಮ ನಡುವೆ ಇದೆ. ಹೀಗಾಗಿ, ಸಾಮಾನ್ಯ ಜನರು ಕಲಾನುಭವದಿಂದ ವಂಚಿತರಾಗುವ ಅನ್ಯಾಯಕ್ಕೆ ಒಳಗಾಗುತ್ತಿದ್ದಾರೆ.

ಕಲೆ, ಸಾಹಿತ್ಯವು ಪ್ರಭುತ್ವ ಮತ್ತು ಶ್ರೀಮಂತವರ್ಗಗಳ ಕೈವಶವಾದಾಗ ಏನಾಗುತ್ತದೆ? ಬದುಕಿನ ಏಕತಾನತೆಯ ನಡುವೆ ಜನರ ಅವಶ್ಯಕತೆಯೂ ಆಗಿರುವ ಒಳಗನ್ನು ಅರಳಿಸಿಕೊಳ್ಳುವ, ಚೈತನ್ಯವನ್ನು ಕಾಪಿಟ್ಟುಕೊಳ್ಳುವ, ತನ್ನ ಸುತ್ತಲನ್ನು ಒಳಗೊಳ್ಳುವ ತಮ್ಮದೇ ಅವಕಾಶವನ್ನು ಸಾಮಾನ್ಯ ಜನ ಕಳೆದುಕೊಳ್ಳಬೇಕಾಗುತ್ತದೆ. ವ್ಯಾವಹಾರಿಕತೆಯೇ ಕೇಂದ್ರವಾದ ಬದುಕಿನ ಕ್ರಮವನ್ನು ನಾವು ಅಳವಡಿಸಿಕೊಂಡಷ್ಟೂ ಕಲೆ ನಮ್ಮಿಂದ ದೂರವಾಗುತ್ತದೆ. ಮಾನವೀಯ ಸಂಬಂಧಗಳೇ ಮೂಲವಾದ ಬದುಕಿನಲ್ಲಿ ಕಲೆ ಜನರ ಹತ್ತಿರದಲ್ಲಿರುತ್ತದೆ. ಜಾನಪದ ಕಲೆಗಳು ಹುಟ್ಟುವುದು ಹಾಗೂ ಜನ ಅದರೊಳಗೆ ತಲ್ಲೀನತೆ ಅನುಭವಿಸುವುದು ಈ ಕಾರಣದಿಂದಲೇ. ಆದರೆ ಆಧುನಿಕ ಬದುಕಿನಲ್ಲಿ ನಮ್ಮ ಬದುಕುಗಳು ನಮ್ಮವೇ ಆಗಿರುವುದಿಲ್ಲ. ಮಾತ್ರವಲ್ಲ, ಕಲೆ ಸಾಹಿತ್ಯವನ್ನೂ ಹೀಗೇ ಇಂತೇ ಎಂದು ಚೌಕಟ್ಟುಗಳಲ್ಲಿ ನಿರ್ಬಂಧಿಸಲಾಗುತ್ತದೆ.

ಸಾಹಿತ್ಯವೇನೋ ಹಲವು ಸ್ತರಗಳಲ್ಲಿ ತನ್ನನ್ನು ಚಟುವಟಿಕೆಯಲ್ಲಿ ಇಟ್ಟುಕೊಂಡಿದೆ. ಇಂದು ಪುಸ್ತಕ ಪ್ರಕಟಣೆಯು ಮೊದಲಿನಂತೆ ಯಾರದೋ ಮರ್ಜಿ ಕಾಯಬೇಕಾದ ಅಗತ್ಯ ಇಲ್ಲ. ಸಾಮಾಜಿಕ ಮಾಧ್ಯಮಗಳು ಹೊಸ ಸಾಧ್ಯತೆ ತೆರೆದಿಟ್ಟಿವೆ. ಹಾಗಾದರೆ ಬೇರೆ ಕ್ಷೇತ್ರಗಳಲ್ಲೂ ಇದೇ ಬದಲಾವಣೆ ಆಗಿದೆಯಲ್ಲವೇ ಎಂದು ಅನ್ನಿಸಬಹುದು. ಇದೇ ಬೆಳವಣಿಗೆ ಆಗಿದ್ದರೂ ಕೆಲವು ಕಲೆಗಳ ಪ್ರದರ್ಶನದ ಸ್ವರೂಪವೇ ಬೇರೆ ರೀತಿಯದು. ಇಂದು ಚಿತ್ರಕಲೆಯು ಬಹುಬಗೆಯ ಅಭಿವ್ಯಕ್ತಿಯನ್ನು ಹುಡುಕಿಕೊಂಡಿದೆ. ಆದರೆ ಇವುಗಳ ಪ್ರದರ್ಶನಕ್ಕಿರುವ ಗ್ಯಾಲರಿಗಳು ಸಿರಿಗರಕ್ಕೆ ಒಳಗಾಗಿವೆ. ಕಲಾಕೃತಿಗಳ ಮಾರಾಟವೊಂದೇ ಮಾನದಂಡವಾಗಿರುವ ಇವುಗಳ ಸ್ವರೂಪದಿಂದಾಗಿ ಹೇಗೆ ಅನೇಕ ಕಲಾವಿದರು ಅವಕಾಶವಿಲ್ಲದೆ ಬಳಲುತ್ತಿದ್ದಾರೆ ಎಂಬುದು ಒಂದು ಮಗ್ಗುಲಾದರೆ, ಜನರನ್ನೂ ಹೇಗೆ ದೂರ ಇಟ್ಟಿವೆ ಎಂಬುದು ಇನ್ನೊಂದು ಮಗ್ಗುಲಾಗಿದೆ.

ಯಾವ ಕಲಾವಿದರ ಕಲಾಕೃತಿಗಳು ಮಾರಾಟವಾಗುತ್ತವೋ ಅವರಿಗೆ ಮಾತ್ರ ಮಣೆ ಹಾಕುವ ಪರಿ ಕಲೆಯನ್ನು ಕೆಲವರ ಸೊತ್ತಾಗಿಸಿದೆ. ಒಂದು ಎಲೈಟ್ ವರ್ಗವನ್ನು ಸೃಷ್ಟಿಸಿ, ಅವರವರೇ ಅದರ ಚರ್ಚೆ, ವಿಮರ್ಶೆ ಮಾಡಿ, ಅವರದೇ ಪ್ರತ್ಯೇಕ ಲೋಕವೊಂದನ್ನು ನಿರ್ಮಿಸಿಕೊಳ್ಳುವುದರ ಮೂಲಕ ಏನನ್ನು ಸಾಧಿಸಿದಂತಾಗುತ್ತದೆ ಎಂಬ ಪ್ರಶ್ನೆ ಈ ಲೋಕದಾಚೆ ಇರುವವರನ್ನು ಕಾಡುತ್ತದೆ. ಸ್ವಾಯತ್ತತೆ ಎಂದರೇನು ಎಂಬ ಚರ್ಚೆಗೆ ಇದು ಅನುವು ಮಾಡಿಕೊಡುತ್ತದೆ. ಸಾಹಿತ್ಯಕ್ಕೂ ಈ ಅಪಾಯ ಇಲ್ಲವೆಂದಲ್ಲ. ಈ ಕಾರಣಕ್ಕೇ ಸಾಹಿತ್ಯವೂ ಪ್ರಭುತ್ವದ ಅಡಿಯಾಳಾಗಬಾರದು ಎಂಬ ಎಚ್ಚರಿಕೆಯನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳಬೇಕಾಗುತ್ತದೆ. ಸಾಹಿತಿಗಳು ಬರೆಯುವುದನ್ನಷ್ಟೇ ತಮ್ಮ ಕಸುಬು ಅಥವಾ ಜೀವನೋಪಾಯ ಮಾಡಿಕೊಳ್ಳದೇ ಇರುವುದರಿಂದ ಈ ಅಪಾಯದಿಂದ ಪಾರಾಗಿದ್ದಾರೆ. ಆದರೆ ಮನ್ನಣೆ, ಪ್ರಶಸ್ತಿ, ಸ್ಥಾನಗಳು ಆಮಿಷವಾಗಿ ಬದಲಾದರೆ ಮತ್ತು ಆಮಿಷದಿಂದ ಇವುಗಳನ್ನು ಪಡೆಯುವ ವಾತಾವರಣ ಸೃಷ್ಟಿಯಾದರೆ ಆಗ 'ರಾಜಕಾರಣ'ವು ಬೆರೆಯತೊಡಗುತ್ತದೆ. ಇದೊಂದು ನಿರ್ಲಜ್ಜ ಸ್ಥಿತಿ. ಪಕ್ಷ ರಾಜಕಾರಣ ಮಾಡುವ ರಾಜಕಾರಣಿಗಳಿಗೂ ರಾಜಕೀಯ ಹಕ್ಕೊತ್ತಾಯ ಮಾಡಬೇಕಾದ ಸಾಹಿತಿ, ಕಲಾವಿದರಿಗೂ ಆಗ ವ್ಯತ್ಯಾಸ ಉಳಿಯುವುದಿಲ್ಲ. ಆಗಲೇ, ಕಲೆಯ ಬಗೆಗೆ ಯಾವ ಅರಿವೂ ಇಲ್ಲದ ರಾಜಕಾರಣಿಗಳೂ ಸಾಹಿತಿ, ಕಲಾವಿದರ ಕುರಿತು ಕೇವಲವಾಗಿ ಮಾತನಾಡುವ ಹಂತಕ್ಕೆ ಮುಟ್ಟುತ್ತಾರೆ.

ಯಾವ ಕ್ಷೇತ್ರವೂ 'ರಾಜಕೀಯ'ವನ್ನು ಬಿಟ್ಟಿರಲು ಸಾಧ್ಯವಿಲ್ಲ. ಆದರೆ ಇಲ್ಲಿ ನಾನು ಹೇಳುತ್ತಿರುವ ರಾಜಕೀಯ ಎಂಬುದು ನ್ಯಾಯದ ಹಕ್ಕೊತ್ತಾಯ ಎಂಬ ಅರ್ಥದಲ್ಲಿದೆ. ಅಂದರೆ, ಪ್ರಭುತ್ವವಾಗಲಿ, ಸಾಮಾಜಿಕ ವ್ಯವಸ್ಥೆಯಾಗಲಿ ತಪ್ಪು ಮಾಡಿದಾಗ, ತಾರತಮ್ಯ ಮಾಡಿದಾಗ ಅದನ್ನು ಖಂಡಿಸುವ, ತರತಮರಹಿತ ಸಾಮಾಜಿಕ ವ್ಯವಸ್ಥೆಯನ್ನು ಮಂಡಿಸುವ, ಪ್ರತಿಭಟಿಸುವ, ಸುಸ್ಥಿರ ಬದುಕಿನ ಅನುಕೂಲಗಳನ್ನು ಒದಗಿಸಿಕೊಡಲು ಒತ್ತಾಯಿಸುವ ಕೆಲಸವನ್ನು ಸಾಹಿತ್ಯ ಮತ್ತು ಸಾಹಿತಿಗಳು ಮಾಡಬೇಕಾಗುವುದು ಅವರ ಸಾಮಾಜಿಕ ಹೊಣೆಗಾರಿಕೆಯ ಭಾಗವಾಗುತ್ತದೆ. ಆ ಹೊಣೆಗಾರಿಕೆ ಇಲ್ಲದೇ ಹೋದಲ್ಲಿ ಅದು ಬಸವಲಿಂಗಪ್ಪನವರು ಹೇಳಿದಂತೆ ಬೂಸಾ ಸಾಹಿತ್ಯವಾಗುತ್ತದೆ.

1984ರಲ್ಲಿ ಗೋವಿಂದ ನಿಹಲಾನಿಯವರು ನಿರ್ದೇಶಿಸಿದ 'ಪಾರ್ಟಿ' ಎಂಬ ಸಿನಿಮಾ ಈ ಕುರಿತು ಅತ್ಯಂತ ಸಶಕ್ತವಾಗಿ ಮಾತನಾಡುತ್ತದೆ. ರಾಷ್ಟ್ರಪ್ರಶಸ್ತಿ ಪಡೆದ ಲೇಖಕರಿಗಾಗಿ ಶ್ರೀಮಂತ ಮಹಿಳೆಯೊಬ್ಬರು ಏರ್ಪಡಿಸಿದ ಪಾರ್ಟಿಯಲ್ಲಿ ತತ್ವ, ಸಿದ್ಧಾಂತ, ಕಲಾತ್ಮಕತೆ ಎಲ್ಲದರ ಮಾತು ಬರುತ್ತದೆ. ಆದರೆ ಇವೆಲ್ಲವೂ ಬರೀ ಮಾತಾಗಿ ಬಡಬಡಿಸುತ್ತಿರುತ್ತವೆ. ಕುಡಿತದ ಅಮಲಿನಲ್ಲಿ ಒಂದೊಂದೇ ಮುಖವಾಡ ತೆರೆದುಕೊಳ್ಳತೊಡಗುತ್ತದೆ. ಅಲ್ಲಿ ಇಲ್ಲದ, ಈಗ ಹೋರಾಟಗಾರನಾಗಿರುವ ಕವಿ ಅಮೃತ್‌ನ ಉಲ್ಲೇಖ ಪದೇ ಪದೇ ಬರುತ್ತದೆ. ಬರೆಯುವುದು ಬಿಟ್ಟು ಆದಿವಾಸಿಗಳ ಪರವಾಗಿ ಹೋರಾಟಕ್ಕೆ ಹೋಗಿರುವ ಇವನ ಪರಿ ಇವರಿಗೆ ರೊಮ್ಯಾಂಟಿಕ್ ಭ್ರಮೆಯಾಗಿ ಕಾಣಿಸುತ್ತದೆ. ಆದಿವಾಸಿಗಳ ಹೋರಾಟವು ಹಿಂಸೆಯಂತೆ ಕಾಣುತ್ತದೆ. ಸರ್ಕಾರ ಮತ್ತು ಪೊಲೀಸರ ಕುತಂತ್ರ, ದಮನವನ್ನು ಪರಿಗಣಿಸದೆ ಅದನ್ನು ಕಾನೂನು ಸುವ್ಯವಸ್ಥೆ ಕಾಪಾಡುವ ಅನಿವಾರ್ಯ ಎನ್ನುವುದು ಈ ಸಾಹಿತಿ, ಕಲಾವಿದರ ಟೊಳ್ಳುತನವನ್ನು ತೋರುತ್ತದೆ.

ವ್ಯವಸ್ಥೆಗೆ ಬಲಿಯಾಗುವ ಅಮೃತ್ ಆ ಕಾರಣಕ್ಕೇ ಇವರನ್ನು ಕಾಡತೊಡಗುತ್ತಾನೆ. ಅಮೃತ್‌ನ ಗೆಳೆಯ ಅವಿನಾಶ್, 'ಕಲೆಯನ್ನು ರಾಜಕೀಯದಿಂದ ದೂರ ಮಾಡಲಾಗದು. ಜಗತ್ತಿನ ಹಲವು ಸರ್ಕಾರಗಳು ತಮ್ಮ ಸತ್ತೆಗಳನ್ನು ಭದ್ರಪಡಿಸಿಕೊಳ್ಳಲು ಕಲೆಯನ್ನು ಬಳಸುತ್ತವೆ. ಆದರೆ ಸಾಮಾಜಿಕ ಪರಿವರ್ತನೆ ತರಬೇಕೆಂದರೆ ಕಲೆಯನ್ನು ಒಂದು ಹತ್ಯಾರವಾಗಿಯೇ ಬಳಸಬೇಕು' ಎನ್ನುತ್ತಾನೆ. ಹಾಗಾದರೆ ಕಲೆ, ಸಾಹಿತ್ಯ ಬರೀ ಹತ್ಯಾರಗಳಷ್ಟೇ ಆಗಿರುತ್ತವೆಯೇ? ಅವಕ್ಕೊಂದು ಸ್ವತಂತ್ರ ಅಸ್ತಿತ್ವವಿಲ್ಲವೇ? ಖಂಡಿತಾ ಇದೆ. ಅವುಗಳ ಸ್ವಾತಂತ್ರ್ಯ ಅವು ಹೊಂದಿರುವ ಸಂವೇದನೆಯಲ್ಲಿ ಇರುತ್ತದೆ. ಆ ಸಂವೇದನೆಯು ಕಲಾತ್ಮಕತೆಯ ಮೂಲಕ ಹೊಮ್ಮಿಸುವ ಹೊಸ ದೃಷ್ಟಿಯಲ್ಲಿರುತ್ತದೆ.

'ನಿನ್ನ ಕಿವಿಯಿಂದ ಈ ನಿನ್ನ ಕಾಯಿಲೆ ಶುರುವಾಗಿದೆ!' ಎಂದು ಲಂಕೇಶರ 'ಗುಣಮುಖ' ನಾಟಕದ ಬಡ ಹಕೀಮ ಅಲಾವಿಖಾನ್ ಜನರ ಕಷ್ಟಕ್ಕೆ ಕಿವಿಗೊಡದ ಕ್ರೂರಿ ರಾಜ ನಾದಿರ್‌ಗೆ ಹೇಳಬಲ್ಲ. ಹೀಗೆ ಕಾಣಿಸುವ ಕಣ್ನೋಟವಿರುವ ಕಲೆ, ಸಾಹಿತ್ಯವನ್ನು ಯಾರೂ ಸೆರೆಯಲ್ಲಿಡಲಾರರು. ಅವು ಜನರ ನಲಿವಿನಲ್ಲೂ ನೋವಿನಲ್ಲೂ ಸಮಾನವಾಗಿ ಭಾಗಿಯಾಗುತ್ತವೆ. ಹಾಗೆ ಭಾಗಿಯಾಗಲು ಅವು ಜನರಿಗೆ ಮುಕ್ತವಾಗಿ ಲಭ್ಯವಿರಬೇಕು ಮತ್ತು ಪ್ರಭುತ್ವದಿಂದ, ಸಿರಿಗರದಿಂದ ಅಂತರವನ್ನು ಕಾಯ್ದುಕೊಳ್ಳಬೇಕು.

ಚುರುಮುರಿ

ಕನ್ನಡ ತುತ್ತೂರಿ

• ಮಣ್ಣೆ ರಾಜು

'ನಮ್ಮ ಸಂಸದರು ಕನ್ನಡದಲ್ಲಿ ಪ್ರಮಾಣ ಮಾಡಿ ಪಾರ್ಲಿಮೆಂಟಿನಲ್ಲಿ ಕನ್ನಡ ಕಹಳೆ ಊದಿ ಪುಳಕಿತರಾದರು ಕಣ್ರೀ...' ಸುಮಿಯೂ ರೋಮಾಂಚನಗೊಂಡಳು.

'ಆಗಲೇಬೇಕು. ಅದರ್ ಟಂಗ್ ಪರಿಸರದಲ್ಲಿ ಮದರ್ ಟಂಗ್ ಯಾವತ್ತೂ ಮುದ ನೀಡುತ್ತದೆ' ಎಂದ ಶಂಕ್ರಿ.

'ದೆಹಲಿಯಲ್ಲಿ ಕನ್ನಡ ಊದಿದರೆ ಸಾಲದು, ಕನ್ನಡ ನಾಡಿನಲ್ಲಿ ನಿತ್ಯ ಕನ್ನಡದ ಕಹಳೆ ಮೊಳಗಬೇಕು. ಅನ್ಯಭಾಷಿಕರು ಕಡ್ಡಾಯವಾಗಿ ಕನ್ನಡ ಕಲಿಯಬೇಕು ಎಂದು ಮುಖ್ಯಮಂತ್ರಿ ಹೇಳಿದ್ದಾರೆ'.

'ಕಲಿಯಬೇಕು ಎಂದರೆ ಸಾಕೆ? ಕಲಿಸುವವರೂ ಬೇಕಲ್ವೆ? ವಯಸ್ಕರ ಶಿಕ್ಷಣದಂತೆ ಸರ್ಕಾರ ಕನ್ನಡೇತರರಿಗೆ ಅ ಆ ಇ ಈ ಕಲಿಸುವ ಕಾರ್ಯಕ್ರಮ ಹಾಕಿಕೊಳ್ಳಬೇಕು'.

'ಇರುವ ಶಾಲಾಕಾಲೇಜಿನ ಮಕ್ಕಳಿಗೆ ಪಾಠ ಕಲಿಸಿ, ಪರೀಕ್ಷೆ ನಡೆಸಲೇ ಸರ್ಕಾರಕ್ಕೆ ಸಾಕಾಗುತ್ತದೆ. ಎಲ್ಲದಕ್ಕೂ ಸರ್ಕಾರವನ್ನೇ ನಂಬಿ ಕೂರಬಾರದು. ಅನ್ಯಭಾಷಿಕರಿಗೆ ನಾವೇ ಕನ್ನಡ ಕಲಿಸಬೇಕು. ಮರ ಬೆಳೆಸಿದರೆ, ಕನ್ನಡ ಕಲಿಸಿದರೆ ನಮ್ಮ ಸುತ್ತಲಿನ ಪರಿಸರ ಉತ್ತಮವಾಗುತ್ತದೆ'.

'ಹೌದು, ಹಾಗಾಗಿಯೇ ಸಕ್ಕರೆ, ಕಾಫಿಪುಡಿ ನೆಪದಲ್ಲಿ ನಾನು ಆಗಾಗ ನೆರೆಹೊರೆಯ ಅನ್ಯಭಾಷಿಕರ ಮನೆಗೆ ಹೋಗಿ ಅವರಿಗೆ ಒಂದು ಬಟ್ಟಲು ಕನ್ನಡ ಕೊಟ್ಟು ಸವಿಯಲು ಹೇಳುತ್ತಿದ್ದೇನೆ'.

'ಹಾಗೇ ಮಾಡು, ಕನ್ನಡೇತರರ ಕಿವಿ ಮೇಲೆ ಪದೇಪದೇ ಕನ್ನಡ ಬೀಳುತ್ತಿದ್ದರೆ ಅದು ಬಾಯಿಂದ ಹೊರಬರುತ್ತದೆ. ಈ ಪ್ರಕ್ರಿಯೆಯಲ್ಲಿ ಅವರು ಕನ್ನಡದತ್ತ ಹೊರಳುತ್ತಾರೆ'.

'ನಮ್ಮ ಮಕ್ಕಳನ್ನು ಅವರ ಮಕ್ಕಳ ಜೊತೆ ಆಟವಾಡಲು ಕಳಿಸಿ, ಕನ್ನಡ ಹೇಳಿಕೊಡಲು ಹೇಳಿದ್ದೇನೆ. ಪಕ್ಕದ ಮನೆಯ ಪರಭಾಷಿ ಗಂಡ-ಹೆಂಡತಿ ಕನ್ನಡದಲ್ಲೇ ಜಗಳವಾಡುವಷ್ಟು ಸುಧಾರಿಸಿದ್ದಾರೆ ಕಣ್ರೀ...' ಸುಮಿಗೆ ಆನಂದ.

'ವರಮಹಾಲಕ್ಷ್ಮಿ, ಸಂಕ್ರಾಂತಿ ಹಬ್ಬಕ್ಕೆ ನೆರೆಭಾಷಿಕರನ್ನು ಕುಂಕುಮಕ್ಕೆ ಕರೆದು ಕನ್ನಡದ ತಾಂಬೂಲ ಕೊಡು. ಕನ್ನಡದತ್ತ ಹೊರಳಿಕೊಂಡು ಅವರು ಕನ್ನಡಕ್ಕಾಗಿ ಕೈ ಎತ್ತಲಿ, ನಾವು ತಲೆ ಎತ್ತೋಣ...' ಅಂದ ಶಂಕ್ರಿ.

ದಿನದ ಟ್ವೀಟ್

ನಮ್ಮವರಿಗೆ ಅಧಿಕಾರ ಸಿಕ್ಕರೆ...

ಭಾರತದ ಪ್ರತಿ ರಾಜಕಾರಣಿಯೂ ಲೀ ಕ್ವಾನ್ ಯೂ ಅವರಂತೆ ಆಗಲು... ಸಿಂಗಪುರವನ್ನು ಕಟ್ಟಲು ಅವರಿಗಿದ್ದಂತಹ ಅಧಿಕಾರವನ್ನು ಹೊಂದಲು ಬಯಸುತ್ತಾರೆ... ಒಂದು ವೇಳೆ ಭಾರತದಲ್ಲಿ ಯಾರಿಗಾದರೂ ಅಂತಹ ಅಧಿಕಾರ ಸಿಕ್ಕಿದ್ದೇ ಆದರೆ ಅವರು ಸದೃಢ ರಾಷ್ಟ್ರ ನಿರ್ಮಿಸುವ ಬದಲು, ಒಂದು ಸಮುದಾಯವನ್ನು ಮಾತ್ರ ಶ್ರೀಮಂತಗೊಳಿಸಲು ಅದನ್ನು ಬಳಸುತ್ತಾರೆ.

ದೇವದತ್ತ ಪಟ್ಟನಾಯಕ, ಲೇಖಕ

ಕಿಡಿನುಡಿ

ಓಂ ಬಿರ್ಲಾ ಅವರು ಎನ್‌ಡಿಎ ಸ್ಪೀಕರ್ ಅಭ್ಯರ್ಥಿ. ಈಗ ನಾವು 234 ಮಂದಿ ಇರುವುದರಿಂದ, ಈ ಬಾರಿ 'ನೌ ಬೈಠಿಯೇ' (ಈಗ ಕುಳಿತುಕೊಳ್ಳಿ) ಎಂಬ ಮಾತನ್ನು ಹಿಂದಿನಂತೆ ಅನುಷ್ಠಾನಗೊಳಿಸುವುದು ಅಷ್ಟು ಸುಲಭವಲ್ಲ ಎಂಬುದು ಅವರಿಗೆ ಮನವರಿಕೆಯಾಗುತ್ತದೆ ಎಂದು ಭಾವಿಸಿದ್ದೇನೆ.

ಮಹುವಾ ಮೊಯಿತ್ರಾ, ಟಿಎಂಸಿ ಸಂಸದೆ

25 ವರ್ಷಗಳ ಹಿಂದೆ

ಶನಿವಾರ, 26-6-1999

• ಉದ್ರಿಕ್ತ ಸ್ಥಿತಿ ಶಮನಗೊಳಿಸಲು ಪಾಕಿಸ್ತಾನಕ್ಕೆ ಅಮೆರಿಕದ ಸಲಹೆ

ಇಸ್ಲಾಮಾಬಾದ್, ಜೂನ್ 25 (ಪಿಟಿಐ): ಕಾರ್ಗಿಲ್ ವಿಷಯದಲ್ಲಿ ಪಾಕಿಸ್ತಾನದ ವಿರುದ್ಧ ಕಠಿಣ ನಿಲುವನ್ನು ತಳೆದಿರುವ ಅಮೆರಿಕ, ಗಡಿ ನಿಯಂತ್ರಣ ರೇಖೆಯಲ್ಲಿ ಈಗಿರುವ ಉದ್ರಿಕ್ತ ಸ್ಥಿತಿಯನ್ನು ಕಡಿಮೆ ಮಾಡಲು ಕ್ರಮ ಕೈಗೊಳ್ಳಬೇಕೆಂದು ಪಾಕಿಸ್ತಾನದ ಅಧ್ಯಕ್ಷ ನವಾಜ್ ಷರೀಫ್ ಅವರಿಗೆ ಇಂದು ತಿಳಿಸಿತು. ಆದರೆ, ಕಾಶ್ಮೀರ ಸಮಸ್ಯೆ ಬಗೆಹರಿಸುವ ವರೆಗೂ ಇಂತಹ ಪರಿಸ್ಥಿತಿ ಮುಂದುವರಿಯುತ್ತದೆ ಎಂದು ಷರೀಫ್ ಹೇಳಿದರು.

ಅಮೆರಿಕದ ಅಧ್ಯಕ್ಷ ಬಿಲ್ ಕ್ಲಿಂಟನ್ ಅವರ ಸಂದೇಶವನ್ನು ಅಮೆರಿಕದ ಉನ್ನತ ಮಟ್ಟದ ನಿಯೋಗ ಇಂದು ಷರೀಫ್ ಅವರಿಗೆ ತಲುಪಿಸಿತು. ಅಮೆರಿಕದ ಸೆಂಟ್ರಲ್ ಕಮಾಂಡ್‌ನ ಕಮಾಂಡರ್ ಇನ್ ಚೀಫ್ ಅಂಟೋನಿ ಜಿನ್ನಿ ಅವರು ನಿಯೋಗದ ನೇತೃತ್ವ ವಹಿಸಿದ್ದಾರೆ.

• ಲೆಫ್ಟಿನೆಂಟ್ ಕರ್ನಲ್ ರಾಘವನ್ ವೀರಮರಣ

ನವದೆಹಲಿ, ಜೂನ್ 25– ಭಾರತೀಯ ಸೇನಾ ಪಡೆಗಳು ಇಂದು ಬಟಾಲಿಕ್ ಪ್ರದೇಶದಲ್ಲಿ ಪರಿಣಾಮಕಾರಿಯಾಗಿ ನಡೆಸಿದ ಜಂಟಿ ಸೇನಾ ಕಾರ್ಯಾಚರಣೆಯಲ್ಲಿ ಏಳು ಮಂದಿ ಪಾಕಿಸ್ತಾನಿ ಸೈನಿಕರು ಬಲಿಯಾಗಿದ್ದು, ಇತರೆ ಇಬ್ಬರು ಗಾಯಗೊಂಡಿದ್ದಾರೆ.

ಈ ಮಧ್ಯೆ ಕುಮಾನ್ ರೆಜಿಮೆಂಟ್‌ನ ನೇತೃತ್ವ ವಹಿಸಿ, ಕಾಶ್ಮೀರ ಕಣಿವೆಯಲ್ಲಿ ಪಾಕಿಸ್ತಾನದ ಉಗ್ರಗಾಮಿಗಳ ವಿರುದ್ಧ ಕಾರ್ಯಾಚರಣೆಯಲ್ಲಿ ತೊಡಗಿದ್ದ ಲೆಫ್ಟಿನೆಂಟ್ ಕರ್ನಲ್ ಎನ್.ವಿ. ರಾಘವನ್ ಅವರು ಉಗ್ರಗಾಮಿಗಳ ಗುಂಡಿನ ದಾಳಿಗೆ ಬಲಿಯಾಗಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 26-6-1974

• ವಿಧಾನಪರಿಷತ್ತಿನ ನಾಲ್ಕು ಕ್ಷೇತ್ರಗಳಲ್ಲೂ ಕಾಂಗ್ರೆಸ್ಸಿಗೆ ಸೋಲು

ಬೆಂಗಳೂರು, ಜೂನ್ 25– ವಿಧಾನ ಪರಿಷತ್ತಿನ ಎರಡು ಪದವೀಧರ ಹಾಗೂ ಎರಡು ಅಧ್ಯಾಪಕರ ಕ್ಷೇತ್ರಗಳಿಂದ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ತನ್ನ ಒಂದು ಸ್ಥಾನವನ್ನು ಕಳೆದುಕೊಳ್ಳುವುದರ ಜೊತೆಗೆ ಉಳಿದ ಮೂರು ಕ್ಷೇತ್ರಗಳಲ್ಲೂ ಪರಾಜಯ ಹೊಂದಿದೆ.

ಜನಸಂಘ ಹಾಗೂ ಅದರ ಬೆಂಬಲ ಪಡೆದ ಅಭ್ಯರ್ಥಿಗಳು ತಮ್ಮ ಸ್ಥಾನಗಳನ್ನು ಉಳಿಸಿಕೊಂಡಿದ್ದಾರೆ.

ಆಡಳಿತ ಕಾಂಗ್ರೆಸ್ಸಿನ ಒಂದು ಸ್ಥಾನವನ್ನು ಸಂಸ್ಥಾ ಕಾಂಗ್ರೆಸ್ ಕಸಿದು ಒಟ್ಟು ಎರಡು ಸ್ಥಾನಗಳನ್ನು ಪಡೆದಿದೆ.

• ಹಾಸನ ಜಿಲ್ಲೆಯಲ್ಲಿ ಭೀಕರ ಪರಿಸ್ಥಿತಿ

ಬೆಂಗಳೂರು, ಜೂನ್ 25– ಮುಂಗಾರು ಮಳೆ ಇಲ್ಲ, ಬೆಳೆಯೂ ಇಲ್ಲ. ಆಷಾಢ ಮಾಸದಲ್ಲೂ ಕುಡಿಯುವ ನೀರಿಗೆ ಅಭಾವ.

ಕರ್ನಾಟಕದ ಹಳೆಯ ಮೈಸೂರಿನ ಬಹುತೇಕ ಪ್ರದೇಶ, ಅದರಲ್ಲೂ ಹಾಸನ ಜಿಲ್ಲೆಯಲ್ಲಿ ಈ 'ಭೀಕರ' ಪರಿಸ್ಥಿತಿ.

ಈ ಪರಿಸ್ಥಿತಿ ಹತೋಟಿ ಮೀರುವ ಮುನ್ನವೇ ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ವಿರೋಧ ಪಕ್ಷದ ನಾಯಕ ಎಚ್.ಡಿ. ದೇವೇಗೌಡ ಅವರು ಸರ್ಕಾರವನ್ನು ಒತ್ತಾಯ ಮಾಡಿದ್ದಾರೆ.

ಸಂಗತ

ಎಂಜಿನಿಯರಿಂಗ್ ಕೋರ್ಸ್: ಇರಲಿ ವಿವೇಚನೆ

ಆಸಕ್ತಿ, ಕಲಿಕಾ ಸಾಮರ್ಥ್ಯ, ಆರ್ಥಿಕ ಪರಿಸ್ಥಿತಿ ಎಲ್ಲವನ್ನೂ ಗಣನೆಗೆ ತೆಗೆದುಕೊಂಡು ಸೂಕ್ತ ನಿರ್ಧಾರ ಕೈಗೊಳ್ಳಬೇಕಾಗುತ್ತದೆ

• ಎಚ್.ಕೆ.ಶರತ್

ಆಟೊ ಓಡಿಸುವ ಪರಿಚಿತರೊಬ್ಬರು ಇತ್ತೀಚೆಗೆ ಎದುರಾದಾಗ, ತಮ್ಮ ಮಗನಿಗೆ ಒಂದು ಲಕ್ಷ ರೂಪಾಯಿ ಶುಲ್ಕ ಕಟ್ಟಿ ಖಾಸಗಿ ಕಾಲೇಜೊಂದರಲ್ಲಿ ಎಂಜಿನಿಯರಿಂಗ್ ಸೀಟು ಕೊಡಿಸಿರುವುದಾಗಿ ತಿಳಿಸಿದರು. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸುವ ಸೀಟು ಹಂಚಿಕೆ ಪ್ರಕ್ರಿಯೆ ಪ್ರಾರಂಭವಾಗುವ ಮೊದಲೇ ಮ್ಯಾನೇಜ್‌ಮೆಂಟ್ ಕೋಟಾದಡಿ ಲಭ್ಯವಿರುವ ಸೀಟು ಕೊಡಿಸಿದ್ದ ಅವರ ಮಾತು ಕೇಳಿ ಅಚ್ಚರಿಯಾಯಿತು.

'ಮೊದಲಿಗೆ ಸಿಇಟಿ ಮೂಲಕ ಸೀಟು ಪಡೆಯೋಕೆ ಪ್ರಯತ್ನ ಪಡೋದಲ್ವಾ? ಇಷ್ಟು ತರಾತುರಿಯಲ್ಲಿ ಏಕೆ ಮಗನನ್ನು ಎಂಜಿನಿಯರಿಂಗ್‌ಗೆ ಸೇರಿಸಲು ಹೋದ್ರಿ' ಅಂತ ವಿಚಾರಿಸಿದೆ. 'ಒಂದೂವರೆ ಲಕ್ಷಕ್ಕಿಂತ ಹೆಚ್ಚಿನ ರ್‍ಯಾಂಕ್ ಪಡೆದಿರುವ ಮಗ, ಓದುವುದಾದರೆ ಕಂಪ್ಯೂಟರ್ ಸೈನ್ಸ್‌ಗೆ ಸಂಬಂಧಿಸಿದ ಕೋರ್ಸ್‌ಗಳನ್ನು ಮಾತ್ರ ಓದುತ್ತೇನೆ ಅಂತ ಹಟ ಹಿಡಿದ. ಅದೂ ಅಲ್ಲದೆ ತನ್ನ ಕೆಲ ಸ್ನೇಹಿತರು ಈಗಾಗಲೇ ಪ್ರವೇಶ ಪಡೆದಿರುವ ಕಾಲೇಜಿಗೇ ಸೇರಿಸುವಂತೆ ಬೇಡಿಕೆ ಇಟ್ಟ. ಹೀಗಾಗಿ, ಸೀಟು ಖಾಲಿಯಾಗುವ ಮೊದಲೇ ಸೇರಿಸೋಣ ಅಂತ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಅಂಡ್ ಮೆಷಿನ್ ಲರ್ನಿಂಗ್ ಬ್ರ್ಯಾಂಚಿಗೆ ಮ್ಯಾನೇಜ್‌ಮೆಂಟ್ ಕೋಟಾದಡಿ ಸೀಟು ಕೊಡಿಸಿದೆ' ಅಂದರು.

ಸಿಇಟಿಯಲ್ಲಿ ಒಂದೂಮುಕ್ಕಾಲು ಲಕ್ಷದ ಆಸುಪಾಸಿನ ರ್‍ಯಾಂಕು ಗಳಿಸಿರುವ ತಮ್ಮ ಮಗಳು, ಕಂಪ್ಯೂಟರ್ ಸೈನ್ಸ್ ಕೋರ್ಸ್ ಓದಬೇಕೆಂದು ಬಯಸುತ್ತಿದ್ದಾಳೆ. ಅವಳ ರ್‍ಯಾಂಕಿಗೆ ಸರ್ಕಾರಿ ಕೋಟಾದಲ್ಲಿ ಕಂಪ್ಯೂಟರ್ ಸೈನ್ಸ್ ಸೀಟು ಸಿಗುವುದಿಲ್ಲ. ಮ್ಯಾನೇಜ್‌ಮೆಂಟ್ ಕೋಟಾದಡಿ ಸೀಟು ಕೊಡಿಸುವುದಾದರೆ ಎಷ್ಟಾಗಬಹುದು ಅಂತ ಆತ್ಮೀಯರೊಬ್ಬರು ವಿಚಾರಿಸಿದರು. ಅವರು ಕೇಳಿದ ಕಾಲೇಜಿನಲ್ಲಿ ನಾಲ್ಕು ವರ್ಷಗಳ ಪದವಿಗೆ ₹ 20 ಲಕ್ಷ ಶುಲ್ಕ ಪಾವತಿಸಬೇಕಿತ್ತು. ಇಷ್ಟು ಹಣ ನೀಡಲು ತಯಾರಿದ್ದರೂ ಸೀಟು ಸಿಗುವ ಖಾತರಿ ಇರಲಿಲ್ಲ. ಅಲ್ಲದೆ ₹ 20 ಲಕ್ಷ ಹಣ ಖರ್ಚು ಮಾಡಿ ಮಗಳನ್ನು ಓದಿಸುವಷ್ಟು ಅವರು ಆರ್ಥಿಕವಾಗಿ ಶಕ್ತರಾಗಿರಲಿಲ್ಲ.

ನಲವತ್ತು ಸಾವಿರದ ಆಸುಪಾಸಿನ ರ್‍ಯಾಂಕು ಗಳಿಸಿರುವ ಪರಿಚಿತ ಹುಡುಗನೊಬ್ಬ, ಸರ್ಕಾರಿ ಕೋಟಾದಡಿ ತನಗೆ ಯಾವ ಕೋರ್ಸಿನ ಸೀಟು ಸಿಗುವುದೋ ಆ ಕೋರ್ಸ್ ಓದುವುದಾಗಿ ತನ್ನ ತಂದೆಗೆ ತಿಳಿಸಿದ. ಸ್ನೇಹಿತರ ಮಕ್ಕಳೆಲ್ಲ ಕಂಪ್ಯೂಟರ್ ಸೈನ್ಸ್ ಓದುತ್ತಿರುವಾಗ ತಮ್ಮ ಮಗ ಯಾಕೆ ಬೇರೆ ಕೋರ್ಸ್ ಓದಬೇಕು ಎಂದು ಭಾವಿಸಿದ, ಆರ್ಥಿಕವಾಗಿ ಸಬಲರಾದ ಹುಡುಗನ ತಂದೆ, ಮ್ಯಾನೇಜ್‌ಮೆಂಟ್ ಕೋಟಾ ಆದರೂ ಸಮಸ್ಯೆ ಇಲ್ಲ, ಕಂಪ್ಯೂಟರ್ ಸೈನ್ಸ್ ಕೋರ್ಸಿಗೇ ದಾಖಲಾಗುವಂತೆ ಮಗನಿಗೆ ಹೇಳಿ, ಮ್ಯಾನೇಜ್‌ಮೆಂಟ್ ಕೋಟಾದಡಿಯ ಸೀಟು ಕೊಡಿಸಿದ್ದಾರೆ.

ಆರಂಭದಿಂದಲೂ ಬೇಡಿಕೆ ಕಾಯ್ದುಕೊಂಡು ಬಂದಿರುವ ಸಾಫ್ಟ್‌ವೇರ್ ಕ್ಷೇತ್ರಕ್ಕೆ ಸಂಬಂಧಿಸಿದ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಹಿಂದಿನ ಐದಾರು ವರ್ಷಗಳಲ್ಲಿ ಬೇಡಿಕೆ ಮತ್ತಷ್ಟು ಹೆಚ್ಚಾಗಿದೆ. ಎಂಜಿನಿಯರಿಂಗ್ ಓದುವುದಾದರೆ ಕಂಪ್ಯೂಟರ್ ಸೈನ್ಸ್ ಮತ್ತು ಅದರ ಉಪವಿಭಾಗಗಳಿಗೆ ಸಂಬಂಧಿಸಿದ ಕೋರ್ಸ್‌ಗಳನ್ನು ಮಾತ್ರವೇ ಓದಬೇಕು ಎನ್ನುವ ಮನಃಸ್ಥಿತಿ ಬಹಳಷ್ಟು ವಿದ್ಯಾರ್ಥಿಗಳು ಹಾಗೂ ಪೋಷಕರ ವಲಯದಲ್ಲಿ ಬೇರೂರಿದೆ. ಕೋರ್ (ಮೂಲ) ಎಂಜಿನಿಯರಿಂಗ್ ಕೋರ್ಸ್‌ಗಳಾದ ಮೆಕ್ಯಾನಿಕಲ್, ಸಿವಿಲ್ ಮತ್ತು ಎಲೆಕ್ಟ್ರಿಕಲ್ ಎಂಜಿನಿಯರಿಂಗ್‌ಗೆ ದಾಖಲಾಗಲು ವಿದ್ಯಾರ್ಥಿಗಳು ಹಿಂಜರಿಯುತ್ತಿರುವ ಕಾರಣದಿಂದಾಗಿ ಇದೀಗ ಶೈಕ್ಷಣಿಕ ಮತ್ತು ಔದ್ಯೋಗಿಕ ವಲಯದಲ್ಲಿ ಸಂದಿಗ್ಧದ ಪರಿಸ್ಥಿತಿ ನಿರ್ಮಾಣವಾಗಿದೆ.

ಉತ್ತಮ ರ್‍ಯಾಂಕು ಗಳಿಸಿದ ಬಹುಪಾಲು ವಿದ್ಯಾರ್ಥಿಗಳು ಕಂಪ್ಯೂಟರ್ ಸೈನ್ಸ್ ಮತ್ತು ಅದಕ್ಕೆ ಸಂಬಂಧಿತ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ದಾಖಲಾಗುತ್ತಿರುವುದರಿಂದ ಮೆಕ್ಯಾನಿಕಲ್, ಎಲೆಕ್ಟ್ರಿಕಲ್ ಮತ್ತು ಸಿವಿಲ್ ಎಂಜಿನಿಯರಿಂಗ್ ಪದವೀಧರರ ಅಗತ್ಯವಿರುವ ಕಂಪನಿಗಳಿಗೆ ನಿರೀಕ್ಷೆಗೆ ತಕ್ಕಂತಹ ಅಭ್ಯರ್ಥಿಗಳು ದೊರೆಯುತ್ತಿಲ್ಲ. ಬೇರೆ ಆಯ್ಕೆಗಳು ಇರದ ಕಾರಣದಿಂದಾಗಿ, 'ಇರುವವರಲ್ಲಿಯೇ ಪರವಾಗಿಲ್ಲ' ಎನ್ನುವ ಮಾನದಂಡದ ಆಧಾರದಲ್ಲಿ ಉದ್ಯೋಗಕ್ಕೆ ಆರಿಸಿಕೊಳ್ಳುತ್ತಿದ್ದಾರೆ.

ಸಾಫ್ಟ್‌ವೇರ್ ಕ್ಷೇತ್ರಕ್ಕೆ ಸಂಬಂಧಿಸಿದ ಕೋರ್ಸ್‌ಗಳಿಗೆ ಹೆಚ್ಚಿನ ಬೇಡಿಕೆ ಇರುವುದನ್ನು ಮನಗಂಡ ಖಾಸಗಿ ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳು, ಬೇಡಿಕೆ ಇರುವ ಹೊಸ ಕೋರ್ಸ್‌ಗಳನ್ನು ಆರಂಭಿಸುವ ಜೊತೆಗೆ, ಇರುವ ಕೋರ್ಸ್‌ಗಳಲ್ಲಿನ ಸೀಟುಗಳನ್ನು ಎರಡರಿಂದ ಮೂರು ಪಟ್ಟು ಹೆಚ್ಚಿಸಿಕೊಂಡಿವೆ. ಗಮನಾರ್ಹ ಸಂಗತಿ ಎಂದರೆ, ಬಹುತೇಕ ಕಾಲೇಜುಗಳಲ್ಲಿ ಹೊಸ ಕೋರ್ಸ್‌ಗಳನ್ನು ಬೋಧಿಸಲು ಅರ್ಹ ಅಧ್ಯಾಪಕರೇ ಇಲ್ಲ. ಬೋಧಕರನ್ನು ನೇಮಿಸಿಕೊಳ್ಳಲು ಕಾಲೇಜುಗಳು ಸಿದ್ಧವಿದ್ದರೂ, ಅಭ್ಯರ್ಥಿಗಳ ಅಲಭ್ಯತೆ ವ್ಯಾಪಕವಾಗಿ ಕಾಡುತ್ತಿದೆ.

ಎಲ್ಲರೂ ಕಂಪ್ಯೂಟರ್ ಸೈನ್ಸ್‌ಗೆ ಸಂಬಂಧಿಸಿದ ಕೋರ್ಸ್‌ಗಳನ್ನೇ ಓದತೊಡಗಿದರೆ, ಉದ್ಯೋಗ ಮಾರುಕಟ್ಟೆಗೆ ಬೇಡಿಕೆಗಿಂತ ಎಷ್ಟೋ ಪಟ್ಟು ಅಧಿಕ ಸಂಖ್ಯೆಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್‌ಗಳ ಪ್ರವೇಶವಾಗಲಿದೆ. ಸಾಫ್ಟ್‌ವೇರ್ ಎಂಜಿನಿಯರಿಂಗ್ ಪದವೀಧರರ ಸಂಖ್ಯೆ ಏರುಗತಿಯಲ್ಲಿರುವಾಗ ಅದಕ್ಕೆ ಪೂರಕವಾಗಿ ಸಾಫ್ಟ್‌ವೇರ್ ಕ್ಷೇತ್ರದಲ್ಲಿನ ಉದ್ಯೋಗಾವಕಾಶಗಳೂ ಹೆಚ್ಚದಿದ್ದಲ್ಲಿ ಹಲವರಿಗೆ ಅರ್ಹ ಉದ್ಯೋಗ ಸಿಗದಿರುವ ಸಾಧ್ಯತೆಯೇ ಹೆಚ್ಚು.

ಆಸಕ್ತಿ, ಕಲಿಕಾ ಸಾಮರ್ಥ್ಯ ಮತ್ತು ಆರ್ಥಿಕ ಪರಿಸ್ಥಿತಿ ಎಲ್ಲವನ್ನೂ ಗಣನೆಗೆ ತೆಗೆದುಕೊಂಡು ಸೂಕ್ತ ನಿರ್ಧಾರ ಕೈಗೊಳ್ಳುವ ಸಂಯಮ ಈಗಷ್ಟೇ ಪಿಯುಸಿ ಮುಗಿಸಿ ಪದವಿಗೆ ಪ್ರವೇಶ ಪಡೆಯುವ ಹಂತದಲ್ಲಿರುವ ವಿದ್ಯಾರ್ಥಿಗಳು ಹಾಗೂ ಪೋಷಕರಲ್ಲಿ ಮನೆ ಮಾಡಬೇಕಿದೆ.

ವಾಚಕರ ವಾಣಿ

ನಿರುದ್ಯೋಗಿಗಳ ಬಗೆಗೆ ಇರಲಿ ಕಾಳಜಿ

ನಿವೃತ್ತರನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ ಯುವ ಸಮೂಹಕ್ಕೆ ಅವಕಾಶ ಕಲ್ಪಿಸಬೇಕೆಂದು ಪ್ರತಿಪಾದಿಸಿರುವ ಸಂಪಾದಕೀಯ (ಪ್ರ.ವಾ., ಜೂನ್ 25) ಸರ್ಕಾರದ ಕಣ್ಣು ತೆರೆಸುವಂತಿದೆ. ಸರ್ಕಾರಿ ಕಚೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತರನ್ನು ಬಿಡುಗಡೆಗೊಳಿಸಬೇಕೆಂದು ಈ ವರ್ಷದ ಜನವರಿಯಲ್ಲಿ ಸರ್ಕಾರ ನೀಡಿದ ಸೂಚನೆಯು ನಿವೃತ್ತರನ್ನು ಬಿಡುಗಡೆಗೊಳಿಸುವುದಕ್ಕೆ ಒತ್ತು ನೀಡುತ್ತದೆಯೇ ವಿನಾ ನಿರುದ್ಯೋಗಿ ಯುವಕರಿಗೆ ಉದ್ಯೋಗ ಒದಗಿಸುವುದರ ಕಡೆ ಆಸಕ್ತವಾಗಿಲ್ಲದಿರುವುದು ವಿಷಾದನೀಯ.

ಸರ್ಕಾರದ ಅನುದಾನದಿಂದ ನಡೆಯುವ ಒಂದು ಸ್ವಾಯತ್ತ ಸಂಸ್ಥೆಯಲ್ಲಿ ಸರ್ಕಾರದ ಈ ಸೂಚನೆ ಕೈಗೆ ಸಿಕ್ಕಿದ ಕೂಡಲೇ, ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಒಟ್ಟು ಆರು ಜನ ನಿವೃತ್ತರ ಪೈಕಿ ಇಬ್ಬರಿಗೆ ಮಾತ್ರ ಬಿಡುಗಡೆ ಆದೇಶವನ್ನು ನೀಡಲಾಯಿತು. ಆ ಸಂಸ್ಥೆಯ ಈ ಕ್ರಮವನ್ನು ಶ್ಲಾಘಿಸುತ್ತಲೇ ಉಳಿದ ನಾಲ್ವರು ನಿವೃತ್ತರನ್ನು ಇಲ್ಲಿಯವರೆಗೆ ಸಂಸ್ಥೆಯ ಕರ್ತವ್ಯದಿಂದ ಬಿಡುಗಡೆಗೊಳಿಸದಿರುವುದನ್ನು ಪ್ರಶ್ನಿಸುವುದಕ್ಕೆ ಅವಕಾಶವಿದೆ. ಮುಖ್ಯ ವಿಷಯವೆಂದರೆ, ಒಂದು ಸಂಸ್ಥೆಯ ಮುಖ್ಯಸ್ಥರಿಗೆ, ಸಂಸ್ಥೆಗೆ ಬೇಕಾದ ಸಿಬ್ಬಂದಿಯನ್ನು ತೆಗೆದುಕೊಳ್ಳುವ ಅಥವಾ ಬೇಡದ ಸಿಬ್ಬಂದಿಯನ್ನು ತೆಗೆಯುವ ಅಧಿಕಾರವಿದೆ. ಹೀಗಿರುವಾಗ, ಸಂಸ್ಥೆಯ ಮುಖ್ಯಸ್ಥರು ಹಾಲಿ ಕೆಲಸ ಮಾಡುತ್ತಿರುವ ನಿವೃತ್ತರನ್ನು ಬಿಡುಗಡೆ ಮಾಡಿ, ಆ ಜಾಗವನ್ನು ನಿರುದ್ಯೋಗಿ ಯುವಕ, ಯುವತಿಯರಿಂದ ತುಂಬಿದರೆ ಆಗ ಆ ನಿರುದ್ಯೋಗಿಗಳಿಗೂ ಅನುಕೂಲವಾಗುತ್ತದೆ, ಸರ್ಕಾರದ ಆದೇಶವನ್ನು ಪಾಲನೆ ಮಾಡಿದ ಆತ್ಮತೃಪ್ತಿಯೂ ಆ ಮುಖ್ಯಸ್ಥರಿಗೆ ದೊರೆಯುತ್ತದೆ. ಅನ್ನ ನೀಡಬೇಕಾದುದು ಹಸಿದವರಿಗೇ ವಿನಾ ಉಂಡವರಿಗಲ್ಲ.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಕಾಯುತ್ತಿದ್ದಾರೆ ಪಕೋಡಾಪ್ರಿಯರು!

ನಮಗ ಮಳಿ ಅಂದ್ರ, ಬಿಸಿ ಬಿಸಿ ಉಳ್ಳಾಗಡ್ಡಿ ಪಕೋಡ ಹೊಟ್ಟಿಗೆ ಸೇರಬೇಕು, ಅಂದ್ರ ಅದು ಮಳಿ. ವರುಣ ದೇವ ಸಿಟ್ಟಿನಿಂದ ಆರ್ಭಟಿಸುತ್ತಾ ಗುಡುಗು, ಸಿಡಿಲಿನ ಹಿಮ್ಮೇಳದೊಂದಿಗೆ ಧೋ ಎಂದು ಸುರಿಯುವ ಸಮಯವೇ ನಮ್ಮ ಈ 'ಪಕೋಡ' ಸಮಯ. ಮಳೆನೀರು ಹರಿಯುವುದನ್ನು ನೋಡುತ್ತಾ ಹಬೆಯಾಡುತ್ತಿರುವ ಪಕೋಡ ಹೊಟ್ಟಿಗಿ ಇಳಸ್ತಾ, ಆಮ್ಯಾಲ, ಚಾ ಕುಡಿಯೋ ಸುಖದ ಮುಂದ ಬ್ಯಾರೆ ಏನೂ ಇಲ್ಲ ಬಿಡ್ರಿ. ಮಳಿಗಾಲದ ಮೊದಲ ಮಾಸ ಮುಗೀಲಿಕ್ಕ ಬಂದ್ರೂ ಇನ್ನಾ ಪಕೋಡ ತಿನ್ನಾಕ ಬೇಕಾದ ಮಳಿ ಬಂದಾ ಇಲ್ರಿ. ದಿನಾ ಆಕಾಶ ನೋಡೂದಾ ಆಗೇತಿ. ಆ ಮಳಿರಾಯ ಜೋರಾಗಿ ಹುಯ್ದು, ಪಕೋಡಾಪ್ರಿಯರ ಆಸಿನಾ ಯಾವಾಗ ಪೂರ್ತಿ ಮಾಡ್ಯಾನೋ ಅಂತ ಕಾಯೂದಾ ನಡದದ. ಹೇ ವರುಣ ದೇವಾ, ಕೃಪೆ ಮಾಡು.

ವೆಂಕಟೇಶ್ ಮುದಗಲ್, ಕಲಬುರಗಿ

ಡಿಸಿಎಂ ಹುದ್ದೆ: ಯಾಕಿಷ್ಟು ಆಕರ್ಷಣೆ?

ರಾಜ್ಯದಲ್ಲಿ ಉಪಮುಖ್ಯಮಂತ್ರಿ ಹುದ್ದೆ ಬಗೆಗಿನ ಬೇಡಿಕೆ ಮತ್ತೆ ಮುನ್ನೆಲೆಗೆ ಬಂದಿರುವುದು ನಮ್ಮ ರಾಜಕೀಯ ನಾಯಕರ ಮನೋಭಿಲಾಷೆಯನ್ನು ತೋರಿಸುತ್ತದಲ್ಲದೆ ತಮಾಷೆಯಾಗಿಯೂ ಇದೆ. ಉಪಮುಖ್ಯಮಂತ್ರಿ ಎಂಬ ಹುದ್ದೆಯ ಉಲ್ಲೇಖ ಸಂವಿಧಾನದಲ್ಲಿ ಇಲ್ಲ. ಆದ್ದರಿಂದ, ಒಂದರ್ಥದಲ್ಲಿ, ಇದು ಅಸಾಂವಿಧಾನಿಕ ಹುದ್ದೆ! ಈ ಹುದ್ದೆ ಬರೀ 'ರಾಜಕೀಯ' ಸೃಷ್ಟಿ. ಇದರ ಉಗಮ 1947ರಲ್ಲಾಯಿತು- ಅಂದು ಕೇಂದ್ರದಲ್ಲಿ ಸರ್ದಾರ್ ಪಟೇಲರನ್ನು ಉಪಪ್ರಧಾನಿ ಎಂದು ಹೆಸರಿಸಿದಾಗ. ಅಂದಿನಿಂದ ರಾಜ್ಯಗಳು ಇದನ್ನು ಅನುಕರಣೆ ಮಾಡುತ್ತಾ ಬಂದಿವೆ. ಉಪಮುಖ್ಯಮಂತ್ರಿ ಮತ್ತು ಕ್ಯಾಬಿನೆಟ್ ಸಚಿವ ಈ ಇಬ್ಬರಿಗೂ ಶ್ರೇಣಿ, ಸಂಬಳದಂತಹ ಸೌಲಭ್ಯ ಮತ್ತು ಹಣಕಾಸಿನ ಅಧಿಕಾರದ ವಿಷಯಗಳಲ್ಲಿ ಯಾವ ಅಂತರವೂ ಇಲ್ಲ. ಉಪಮುಖ್ಯಮಂತ್ರಿಗೆ ತನ್ನ ಖಾತೆಗೆ ಸಂಬಂಧಿಸಿದಂತೆ ಬಜೆಟ್ಟಿನಲ್ಲಿ ವಿತರಿಸಿರುವ ಹಣಕ್ಕಿಂತ ಹೆಚ್ಚು ವೆಚ್ಚ ಮಾಡುವ ಅಧಿಕಾರವಿಲ್ಲ. ಇತರ ಮಂತ್ರಿಗಳಂತೆ ಅಂಥ ವೆಚ್ಚಕ್ಕಾಗಿ ಅವರೂ ಮುಖ್ಯಮಂತ್ರಿಯ ಪೂರ್ವಾನುಮತಿಗಾಗಿ ಕಾಯಬೇಕು.

ಅಷ್ಟಾದರೂ ಈ ಹುದ್ದೆಯ ಬಗೆಗೆ ಆಕರ್ಷಣೆ ಏಕೆ? ತಾನು ಬರೀ ಮಂತ್ರಿ ಮಾತ್ರನಲ್ಲ, ಮುಖ್ಯಮಂತ್ರಿಗಿಂತ ಒಂದು ಮೆಟ್ಟಿಲು ಕೆಳಗೆ ಇರುವವನು ಎಂದು ಹೇಳಿಕೊಳ್ಳಬಹುದಾದ ಸ್ವಪ್ರತಿಷ್ಠೆಯ ಹಂಬಲವೇ? ತನ್ನ ಸಮುದಾಯಕ್ಕೆ ಇದರಿಂದ ಒಂದು ಪ್ರತಿಷ್ಠೆ ಬಂದೀತು ಎಂಬ ಹಿರಿಯಾಸೆ ಇರಬಹುದೇ? ಒಟ್ಟಿನಲ್ಲಿ, ಬರೀ ಪ್ರತಿಷ್ಠೆಯ ಪ್ರಶ್ನೆಯೇ ವಿನಾ ಬಹುಶಃ ಇನ್ನೇನೂ ಇರಲಾರದೇನೊ ಅಥವಾ ಈ ಎಲ್ಲವೂ ಇರಬಹುದು. ಆಯಾ ಸಮುದಾಯದವರು ಇಂತಹ ಹುದ್ದೆ ಸೃಷ್ಟಿಸಬೇಕೆಂದು ಒತ್ತಾಯ ಮಾಡುತ್ತಿರುವುದಕ್ಕೆ ಈಗ 'ಮತ್ತೆ ಬಲ' ಬಂದಿದೆಯಂತೆ. ಅಂದರೆ, ಬರೀ ತಮ್ಮ ಸಮುದಾಯದವರನ್ನು ತೃಪ್ತಿಪಡಿಸುವ ಸಲುವಾಗಿ ಎಲ್ಲ ಸಚಿವರನ್ನೂ ಉಪಮುಖ್ಯಮಂತ್ರಿಗಳು ಎಂದು ಹೆಸರಿಸಿಬಿಟ್ಟರೆ ಆಸೆಗಳು ಹಿಂಗುತ್ತವೆ, ಒಳಗುದಿ ತಣಿಯುತ್ತದೆ!

ಸಾಮಗ ದತ್ತಾತ್ರಿ, ಬೆಂಗಳೂರು

ಕನ್ನಡಮ್ಮ ಮರೆತುಹೋದಳೇ?

18ನೇ ಲೋಕಸಭೆಯ ಸಂಸತ್ ಸದಸ್ಯರಾಗಿ 27 ಮಂದಿ ಕನ್ನಡದಲ್ಲಿ ಮತ್ತು ಉತ್ತರ ಕನ್ನಡ ಕ್ಷೇತ್ರದ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮಾತ್ರ ಸಂಸ್ಕೃತದಲ್ಲಿ ಪ್ರಮಾಣವಚನ ಸ್ವೀಕರಿಸಿದರೆಂಬ ಸುದ್ದಿ (ಪ್ರ.ವಾ., ಜೂನ್ 25) ಅವರ ಮೂಲ ನಿಷ್ಠೆಯನ್ನು ಸೂಚಿಸುವುದಲ್ಲದೆ, ಕನ್ನಡಿಗರ ಕಿಂಚಿತ್ ಸಂತಸಕ್ಕೂ ಸ್ವಲ್ಪಮಟ್ಟಿಗೆ ಕೊರತೆಯನ್ನು ಉಂಟುಮಾಡಿದೆ. ದೆಹಲಿಯ ಗದ್ದುಗೆಯೇರಲು ವಿಮಾನವೇರಿದ ತಕ್ಷಣ ಕಾಗೇರಿಯವರಿಗೆ ಕನ್ನಡಮ್ಮ ಮರೆತುಹೋದಳೇ? ಅಥವಾ ಅನೇಕರು ಭಾವಿಸಿರುವ ಹಾಗೆ ಇವರಿಗೂ ಎಲ್ಲ ಭಾರತೀಯ ಭಾಷೆಗಳ ಮೂಲ ಸಂಸ್ಕೃತ ಭಾಷೆ ಎಂಬ ಭ್ರಮೆ ಆವರಿಸಿದೆಯೇ? ದಕ್ಷಿಣ ಭಾರತದ ಭಾಷೆಗಳ ಮೂಲ ಸಂಸ್ಕೃತ ಅಲ್ಲ, ಅದು ದ್ರಾವಿಡ ಭಾಷೆ ಮತ್ತು ಬಹುಪಾಲು ಉತ್ತರ ಭಾರತದ ಭಾಷೆಗಳ ಮೂಲ ಸಂಸ್ಕೃತ ಭಾಷೆ ಎಂಬುದನ್ನು ಭಾಷಾಶಾಸ್ತ್ರಜ್ಞರ ಸಂಶೋಧನೆಗಳು ಹೇಳುತ್ತವೆ ಎಂಬ ವಾಸ್ತವಾಂಶವನ್ನು ಇವರಿಗೆ ಯಾರು ತಿಳಿಸಿಕೊಡಬೇಕೊ ಅರ್ಥವಾಗುತ್ತಿಲ್ಲ! ಕಾಗೇರಿ ಅವರಲ್ಲಿ ಸುಪ್ತವಾಗಿರಬಹುದಾದ ಈ 'ಶ್ರೇಷ್ಠತೆಯ ವ್ಯಸನ'ದ ಕುರುಹನ್ನು ಅರಹುವ ಈ ಕ್ರಿಯೆ ನಿಜವಾದ ಕನ್ನಡಿಗರಿಗಂತೂ ಅಸಮಾಧಾನ ಉಂಟುಮಾಡಿದೆ.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವಿಪಕ್ಷಗಳಿಗೆ ಡೆಪ್ಯುಟಿ ಸ್ಪೀಕರ್ ಹುದ್ದೆ ನಿರಾಕರಣೆ

ಲೋಕಸಭೆಯ ಒಪ್ಪಿತ ಸಂಪ್ರದಾಯಕ್ಕಿಲ್ಲ ಮಣೆ...

ಈ 18ನೇ ಲೋಕಸಭೆಯ ಸ್ಪೀಕರ್ ಮತ್ತು ಡೆಪ್ಯುಟಿ ಸ್ಪೀಕರ್ ಚುನಾವಣೆ ಕುತೂಹಲ ಕೆರಳಿಸಿದೆ. 1952ರಿಂದ ಒಟ್ಟು 16 ಲೋಕಸಭೆಗಳಲ್ಲಿ 14 ಮಂದಿ ಡೆಪ್ಯುಟಿ ಸ್ಪೀಕರ್ ಆಗಿ ಕಾರ್ಯನಿರ್ವಹಿಸಿದ್ದಾರೆ. ಕೆಲವರು ಇದರಲ್ಲಿ ಎರಡು ಅವಧಿಗೆ ಆ ಹುದ್ದೆಯನ್ನು ನಿರ್ವಹಿಸಿದ್ದಿದೆ. ಹೀಗೆ ಒಟ್ಟು 16 ಅವಧಿಯಲ್ಲಿ ವಿರೋಧ ಪಕ್ಷಗಳ ಸಂಸದರೇ 12 ಬಾರಿ ಈ ಹುದ್ದೆಗೆ ಆಯ್ಕೆಯಾಗಿದ್ದರು. ಆದರೆ ಈಗ ವಿಪಕ್ಷಗಳಿಗೆ ಈ ಹುದ್ದೆಯನ್ನು ಬಿಟ್ಟುಕೊಡಲು ಆಡಳಿತಾರೂಢ ಎನ್‌ಡಿಎ ನಿರಾಕರಿಸಿದೆ

ಪ್ರಜಾವಾಣಿ ವಾರ್ತೆ

ಲೋಕಸಭೆಯ ಸ್ಪೀಕರ್ ಸ್ಥಾನಕ್ಕೆ ಎಷ್ಟು ಮಹತ್ವವಿದೆಯೋ ಅಷ್ಟೇ ಪ್ರಮಾಣದ ಮಹತ್ವ ಡೆಪ್ಯುಟಿ ಸ್ಪೀಕರ್ ಸ್ಥಾನಕ್ಕೂ ಇದೆ. ಏಕಂದರೆ, ಅಧಿಕಾರದ ವಿಚಾರದಲ್ಲಿ ಇಬ್ಬರೂ ಸಮಾನರು ಮತ್ತು ಡೆಪ್ಯುಟಿ ಸ್ಪೀಕರ್ ಅವರದ್ದು, ಸ್ಪೀಕರ್ ಅವರ ಹುದ್ದೆಯ ಅಧೀನ ಹುದ್ದೆಯಲ್ಲ. ಸ್ಪೀಕರ್ ಅವರ ಅನುಪಸ್ಥಿತಿಯಲ್ಲಿ, ಡೆಪ್ಯುಟಿ ಸ್ಪೀಕರ್ ಅವರೇ ಸ್ಪೀಕರ್ ಆಗಿ ಕಲಾಪವನ್ನು ನಡೆಸಿಕೊಡುತ್ತಾರೆ. ಸ್ಪೀಕರ್‌ಗೆ ಇರುವಷ್ಟೇ ಹೊಣೆಗಾರಿಕೆ ಅವರಿಗೂ ಇರುತ್ತದೆ. ಅಂತಹ ಒಂದು ಮಹತ್ವದ ಹುದ್ದೆಯ ಬಗ್ಗೆ ಈಗ ಚರ್ಚೆ ಆರಂಭವಾಗಿದೆ.

ಮೊದಲ ಚುನಾಯಿತ ಲೋಕಸಭೆ ಅಸ್ತಿತ್ವಕ್ಕೆ ಬಂದಿದ್ದು 1952ರಲ್ಲಿ. ಆಗ ಆಡಳಿತಾರೂಢ ಪಕ್ಷದ ಸಂಸದರೇ ಸ್ಪೀಕರ್ ಮತ್ತು ಡೆಪ್ಯುಟಿ ಸ್ಪೀಕರ್ ಹುದ್ದೆಗೆ ಚುನಾಯಿತರಾಗಿದ್ದರು. ಆನಂತರದ 16 ಲೋಕಸಭೆಗಳಲ್ಲಿ ಆಡಳಿತ ಪಕ್ಷದ ಸಂಸದರೇ ಡೆಪ್ಯುಟಿ ಸ್ಪೀಕರ್ ಆಗಿ ಆಯ್ಕೆಯಾಗಿದ್ದು ನಾಲ್ಕು ಬಾರಿ ಮಾತ್ರ. ಉಳಿದ 12 ಲೋಕಸಭೆಗಳಲ್ಲಿ ಆ ಹುದ್ದೆಯನ್ನು ವಿರೋಧ ಪಕ್ಷಗಳಿಗೆ ಬಿಟ್ಟುಕೊಡಲಾಗಿತ್ತು. ಲೋಕಸಭೆ ಕಲಾಪ ನಿರ್ವಹಣೆಯಲ್ಲಿ ಪಕ್ಷಪಾತವಾಗದೇ ಇರುವ ರೀತಿಯಲ್ಲಿ ಎಚ್ಚರವಹಿಸುವ ಸಂಬಂಧ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳು ಕಂಡುಕೊಂಡ ಸೌಹಾರ್ದ ಮಾರ್ಗವಿದು. ಈವರೆಗೆ ಸರ್ಕಾರ ನಡೆಸಿದ ಎಲ್ಲಾ ಪಕ್ಷಗಳೂ ಈ ಸಂಪ್ರದಾಯವನ್ನು ಅನುಸರಿಸಿಕೊಂಡೇ ಬಂದಿವೆ. ಆದರೆ ಈಗ ಆ ಸಂಪ್ರದಾಯ ಮುರಿಯುವ ಸಾಧ್ಯತೆ ಇದೆ.

18ನೇ ಲೋಕಸಭೆಯ ಸ್ಪೀಕರ್ ಮತ್ತು ಡೆಪ್ಯುಟಿ ಸ್ಪೀಕರ್ ಆಯ್ಕೆ ಸಂಬಂಧ ಆಡಳಿತಾರೂಢ ಎನ್‌ಡಿಎ ಮತ್ತು ವಿರೋಧ ಪಕ್ಷಗಳ 'ಇಂಡಿಯಾ' ಒಕ್ಕೂಟದ ನಡುವೆ ಮಂಗಳವಾರ ಸಭೆ ನಡೆದಿತ್ತು. ವಿರೋಧ ಪಕ್ಷಗಳಿಗೆ ಡೆಪ್ಯುಟಿ ಸ್ಪೀಕರ್ ಹುದ್ದೆ ನೀಡಲು ಆಡಳಿತಾರೂಢ ಎನ್‌ಡಿಎ ನಿರಾಕರಿಸಿದೆ.

1952, 1962 ಮತ್ತು 1971ರಲ್ಲಿ ಮಾತ್ರ ಕಾಂಗ್ರೆಸ್ ಸರ್ಕಾರ ಮತ್ತು ಕಾಂಗ್ರೆಸ್ ಸಂಸದರೇ ಡೆಪ್ಯುಟಿ ಸ್ಪೀಕರ್ ಆಗಿ ಆಯ್ಕೆಯಾಗಿದ್ದರು. ಆನಂತರ ಆ ಹುದ್ದೆಗೆ ವಿರೋಧ ಪಕ್ಷಗಳ ನಾಯಕರನ್ನೇ ಆಯ್ಕೆ ಮಾಡಲಾಗಿದೆ. ಇದಕ್ಕೆ ಕಾನೂನಿನ ಬೆಂಬಲ ಇಲ್ಲ. ಆದರೆ ಎಲ್ಲಾ ಪಕ್ಷಗಳೂ ಅಧಿಕಾರದಲ್ಲಿ ಇದ್ದಾಗ ಈ ಸಂಪ್ರದಾಯವನ್ನು ಪಾಲಿಸಿಕೊಂಡೇ ಬಂದಿದ್ದವು. ಆ ಸಂಪ್ರದಾಯವನ್ನು ತುಸು ಬದಲಾಯಿಸಿದ್ದು ಬಿಜೆಪಿಯೇ. 2014ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಅಧಿಕಾರಕ್ಕೆ ಬಂದಿತು. ಆಗ ಡೆಪ್ಯುಟಿ ಸ್ಪೀಕರ್ ಹುದ್ದೆಯನ್ನು ವಿರೋಧ ಪಕ್ಷಗಳ ಬದಲಿಗೆ, ತನ್ನ ಮಿತ್ರ ಪಕ್ಷ ಮತ್ತು ಎನ್‌ಡಿಎಯ ಭಾಗವಾಗಿದ್ದ ಎಐಎಡಿಎಂಕೆಗೆ ಬಿಟ್ಟುಕೊಟ್ಟಿತು. ಈಗ ಬಿಜೆಪಿ, ಮತ್ತದೇ ರೀತಿಯಲ್ಲಿ ತನ್ನದೇ ಮಿತ್ರ ಪಕ್ಷಗಳಿಗೆ ಡೆಪ್ಯುಟಿ ಸ್ಪೀಕರ್ ಹುದ್ದೆ ಬಿಟ್ಟುಕೊಡುವ ಸಾಧ್ಯತೆ ಇದೆ. ವಿರೋಧ ಪಕ್ಷಗಳಿಗೆ ಈ ಹುದ್ದೆಯನ್ನು ನಿರಾಕರಿಸುವ ಮೂಲಕ ಈ ಸಂಪ್ರದಾಯವನ್ನು ಬಿಜೆಪಿ ನೇತೃತ್ವದ ಎನ್‌ಡಿಎ ಮುರಿದಿದೆ.

ಈ ಹಿಂದೆ ಸ್ಪೀಕರ್ ನಡೆಗೆ ಆಕ್ಷೇಪ

ಲೋಕಸಭೆಯ ಕಲಾಪವನ್ನು ಪಕ್ಷಾತೀತವಾಗಿ ನಡೆಸುವುದು ಸ್ಪೀಕರ್ ಮತ್ತು ಡೆಪ್ಯುಟಿ ಸ್ಪೀಕರ್ ಅವರ ಹೊಣೆಗಾರಿಕೆ. 17ನೇ ಲೋಕಸಭೆಯ, 2023ರ ಚಳಿಗಾಲದ ಅಧಿವೇಶನದಲ್ಲಿ ಕಲಾಪಕ್ಕೆ ಅಡ್ಡಿಪಡಿಸಿದ ಕಾರಣ ನೀಡಿ ವಿರೋಧ ಪಕ್ಷಗಳ 100 ಸಂಸದರನ್ನು ಅಮಾನತು ಮಾಡಲಾಗಿತ್ತು. ಈ ನಿರ್ಧಾರದ ಸಂಬಂಧ ಸ್ಪೀಕರ್ ಓಂ ಬಿರ್ಲಾ ಅವರ ವಿರುದ್ಧ ವ್ಯಾಪಕ ಆಕ್ರೋಶ ವ್ಯಕ್ತವಾಗಿತ್ತು. 'ಬಿರ್ಲಾ ಅವರು ಆಡಳಿತ ಪಕ್ಷದ ಆಣತಿಯಂತೆ ಕಾರ್ಯನಿರ್ವಹಿಸುತ್ತಿದ್ದಾರೆ' ಎಂದು ಕಾಂಗ್ರೆಸ್ ಮತ್ತು ಟಿಎಂಸಿಯ ಸಂಸದರು ಆರೋಪಿಸಿದ್ದರು. ಡೆಪ್ಯುಟಿ ಸ್ಪೀಕರ್ ಹುದ್ದೆ ಭರ್ತಿಯಾಗಿದ್ದು, ವಿರೋಧ ಪಕ್ಷಗಳ ಸಂಸದರು ಆ ಹುದ್ದೆಯಲ್ಲಿ ಇದ್ದಿದ್ದರೆ ಇಂತಹ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ ಎಂಬುದರ ಬಗ್ಗೆ ಚರ್ಚೆ ನಡೆದಿತ್ತು.

12 ಬಾರಿ ವಿಪಕ್ಷದವರೇ ಡೆಪ್ಯುಟಿ ಸ್ಪೀಕರ್

ಮದಭೂಷಿ ಅನಂತಶಯನಂ ಅಯ್ಯಂಗಾರ್
ಕಾಂಗ್ರೆಸ್ ಸಂಸದ
ಅವಧಿ: 1952–1956 | ಕಾಂಗ್ರೆಸ್ ಸರ್ಕಾರ

ಸರ್ದಾರ್ ಹುಕುಂ ಸಿಂಗ್
ಅಕಾಲಿದಳ ಸಂಸದ
ಅವಧಿ: 1956–1962 | ಕಾಂಗ್ರೆಸ್ ಸರ್ಕಾರ

ಎಸ್.ವಿ. ಕೃಷ್ಣಮೂರ್ತಿ ರಾವ್
ಕಾಂಗ್ರೆಸ್ ಸಂಸದ
ಅವಧಿ: 1962–1967 | ಕಾಂಗ್ರೆಸ್ ಸರ್ಕಾರ

ರಘುನಾಥ್ ಕೇಶವ್ ಖಾಡಿಲ್ಕರ್
ಎಐಎಂಕೆ ಸಂಸದ
ಅವಧಿ: 1967–1969 | ಕಾಂಗ್ರೆಸ್ ಸರ್ಕಾರ

ಎಂ.ತಂಬಿದೊರೈ
ಎಐಎಡಿಎಂಕೆ ಸಂಸದ
ಅವಧಿ: 1985–1989 | ಕಾಂಗ್ರೆಸ್ ಸರ್ಕಾರ

2014ರಲ್ಲಿ ಅಧಿಕೃತ ವಿರೋಧ ಪಕ್ಷ ಇರಲಿಲ್ಲ. ಹೀಗಾಗಿ ವಿಪಕ್ಷಗಳು ಈ ಹುದ್ದೆಗೆ ಬೇಡಿಕೆ ಇಟ್ಟಿರಲಿಲ್ಲ

ಗಿಲ್‌ಬರ್ಟ್ ಜಿ. ಸ್ವೆಲ್
ಕಾಂಗ್ರೆಸ್ ಸಂಸದ
ಅವಧಿ: 1969–1977 | ಕಾಂಗ್ರೆಸ್ ಸರ್ಕಾರ

ವಿ. ಶಿವರಾಜ್ ಸಿಂಗ್ ಪಾಟೀಲ್
ಕಾಂಗ್ರೆಸ್ ಸಂಸದ
ಅವಧಿ: 1990–1991 | ಜನತಾದಳ ಸರ್ಕಾರ

ಪಿ.ಎಂ. ಸಯೀದ್
ಕಾಂಗ್ರೆಸ್ ಸಂಸದ
ಅವಧಿ: 1999–2004 | ಬಿಜೆಪಿ ಸರ್ಕಾರ

ಗೋಡೆ ಮುರಹರಿ
ಕಾಂಗ್ರೆಸ್ ಸಂಸದ
ಅವಧಿ: 1977–1979 | ಜನತಾ ಪಕ್ಷ ಸರ್ಕಾರ

ಎಸ್. ಮಲ್ಲಿಕಾರ್ಜುನಯ್ಯ
ಬಿಜೆಪಿ ಸಂಸದ
ಅವಧಿ: 1991–1996 | ಕಾಂಗ್ರೆಸ್ ಸರ್ಕಾರ

ಚರಣ್‌ಜೀತ್ ಸಿಂಗ್ ಅಠಾವಾಲ್
ಬಿಜೆಪಿ ಸಂಸದ
ಅವಧಿ: 2004–2009 | ಯುಪಿಎ ಸರ್ಕಾರ

ಜಿ. ಲಕ್ಷ್ಮಣನ್
ಡಿಎಂಕೆ ಸಂಸದ
ಅವಧಿ: 1980–1984 | ಕಾಂಗ್ರೆಸ್ ಸರ್ಕಾರ

ಸೂರಜ್ ಭಾನ್
ಬಿಜೆಪಿ ಸಂಸದ
ಅವಧಿ: 1996–1997 | ಬಿಜೆಪಿ ಸರ್ಕಾರ

ಕರಿಯಾ ಮುಂಡಾ
ಬಿಜೆಪಿ ಸಂಸದ
ಅವಧಿ: 2009-2014 | ಯುಪಿಎ ಸರ್ಕಾರ

ಎಂ.ತಂಬಿದೊರೈ
ಎಐಎಡಿಎಂಕೆ ಸಂಸದ
ಎನ್‌ಡಿಎ ಸರ್ಕಾರ
ಅವಧಿ: 2014–2019

2019ರಲ್ಲೇ ಮೊದಲ ಬಾರಿ ಖಾಲಿ...

2019ರ 17ನೇ ಲೋಕಸಭೆಯಲ್ಲಿ ಡೆಪ್ಯುಟಿ ಸ್ಪೀಕರ್ ಹುದ್ದೆಯನ್ನು ತೆರವಾಗಿಯೇ ಇರಿಸಲಾಗಿತ್ತು. ಐದೂ ವರ್ಷಗಳಲ್ಲಿ ಸ್ಪೀಕರ್ ಅವರೇ ಕಲಾಪವನ್ನು ನಡೆಸಿದ್ದರು. ಅವರ ಅನುಪಸ್ಥಿತಿಯಲ್ಲಿ ಹಲವು ಸಂಸದರು ನಿಯೋಜಿತ ಸ್ಪೀಕರ್ ಆಗಿ ಕಾರ್ಯ ನಿರ್ವಹಿಸಿದ್ದಾರೆ. ಡೆಪ್ಯುಟಿ ಸ್ಪೀಕರ್ ಹುದ್ದೆಯನ್ನು ತೆರವಾಗಿಯೇ ಇರಿಸುವುದೂ ಸರಿಯಲ್ಲ ಎಂಬ ಅಭಿಪ್ರಾಯವಿದೆ.

18ನೇ ಲೋಕಸಭೆಯಲ್ಲಿ ಸ್ಪೀಕರ್ ಅವರ ಹುದ್ದೆಯನ್ನು ತೆರವಾಗಿಯೇ ಇರಿಸಿದ್ದರ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಸಲಾಗಿತ್ತು. ಅರ್ಜಿಯ ಸಂಬಂಧ ವಿಚಾರಣೆಯೂ ನಡೆದಿತ್ತು. 93ನೇ ವಿಧಿಯಲ್ಲಿ, 'shall appoint' ಎಂದು ಉಲ್ಲೇಖಿಸಲಾಗಿದೆ. ಹೀಗಾಗಿ ಡೆಪ್ಯುಟಿ ಸ್ಪೀಕರ್ ಹುದ್ದೆಗೆ ಆಯ್ಕೆ ಕಡ್ಡಾಯವಾದುದು ಎಂಬುದು ಅರ್ಜಿದಾರರ ವಾದವಾಗಿತ್ತು. ಇದನ್ನು ಒಪ್ಪಿದ್ದ ಸುಪ್ರೀಂ ಕೋರ್ಟ್ ಪೀಠವು, ಅರ್ಜಿಯ ವಿಚಾರಣೆಯನ್ನು ಕೈಗೆತ್ತಿಕೊಂಡಿತ್ತು. ಸರ್ಕಾರದಿಂದ ವಿವರಣೆಯನ್ನೂ ಕೇಳಿತ್ತು.

ಆದರೆ, ಅಂದಿನ ಆಡಳಿತಾರೂಢ ಬಿಜೆಪಿಯು ಡೆಪ್ಯುಟಿ ಸ್ಪೀಕರ್ ಹುದ್ದೆಯನ್ನು ಐದೂ ವರ್ಷ ತೆರವಾಗಿಯೇ ಇರಿಸಿತ್ತು. ಗಮನಿಸಬೇಕಾದ ಅಂಶವೆಂದರೆ, 1952ರಿಂದ 2019ರವರೆಗಿನ 16 ಲೋಕಸಭೆಗಳಲ್ಲಿ ಡೆಪ್ಯುಟಿ ಸ್ಪೀಕರ್ ಹುದ್ದೆಯನ್ನು ಒಮ್ಮೆಯೂ ತೆರವಾಗಿ ಇರಿಸಿರಲಿಲ್ಲ. ಈ ಬಾರಿ 18ನೇ ಲೋಕಸಭೆಯಲ್ಲಿ ಬಿಜೆಪಿಯು, 2014ರಲ್ಲಿ ಮಾಡಿದ್ದಂತೆ ತನ್ನ ಮಿತ್ರ ಪಕ್ಷಕ್ಕೆ ಡೆಪ್ಯುಟಿ ಸ್ಪೀಕರ್ ಹುದ್ದೆಯನ್ನು ಬಿಟ್ಟುಕೊಡುವ ಸಾಧ್ಯತೆ ಇದೆ ಎಂದು ಚರ್ಚೆಯಾಗುತ್ತಿದೆ. ಜತೆಗೆ ಈ ಬಾರಿಯೂ ಆ ಹುದ್ದೆಯನ್ನು ತೆರವಾಗಿಯೇ ಇರಿಸುವ ಸಾಧ್ಯತೆಯೂ ಇದೆ ಎಂಬ ಚರ್ಚೆ ಆರಂಭವಾಗಿದೆ.

ಆಧಾರ: ಲೋಕಸಭೆಯ ದಾಖಲೆ ಪತ್ರಗಳು, ಲೋಕಸಭೆಯ ಸ್ಪೀಕರ್–ಡೆಪ್ಯುಟಿ ಸ್ಪೀಕರ್ ಪಟ್ಟಿ, ಸಂವಿಧಾನದ 93, 94, 95 ಮತ್ತು 96ನೇ ವಿಧಿಗಳು, ಪಿಟಿಐ

ಭರ್ಜರಿಯಾಗಿದೆ ಭೈರತಿ ಹಿನ್ನೆಲೆ

ಗೀತಾ ಶಿವರಾಜ್‌ಕುಮಾರ್ ಅವರು ತಮ್ಮ 'ಗೀತಾ ಪಿಕ್ಚರ್ಸ್' ಲಾಂಛನದಲ್ಲಿ ನಿರ್ಮಾಣ ಮಾಡುತ್ತಿರುವ 'ಭೈರತಿ ರಣಗಲ್' ಸಿನಿಮಾದ ಶೂಟಿಂಗ್ ಭರ್ಜರಿಯಾಗಿ ಸಾಗುತ್ತಿದೆ. ಇದೇ ಸಂದರ್ಭದಲ್ಲಿ ಗೀತಾ ಅವರ ಜನ್ಮದಿನದಂದು ಚಿತ್ರದ ಮೇಕಿಂಗ್ ವಿಡಿಯೊವನ್ನು ನಟ ಶಿವರಾಜ್‌ಕುಮಾರ್ ಹಂಚಿಕೊಂಡಿದ್ದಾರೆ.

ನರ್ತನ್ ಆ್ಯಕ್ಷನ್ ಕಟ್ ಹೇಳಿರುವ ಚಿತ್ರದ ದೃಶ್ಯಗಳು 'ಮಫ್ತಿ'ಯನ್ನು ಮೀರಿಸಿದೆ. 'ಮಫ್ತಿ' ಚಿತ್ರದಲ್ಲಿ ಶಿವರಾಜ್‌ಕುಮಾರ್ ಅವರು ಬಣ್ಣಹಚ್ಚಿದ್ದ 'ಭೈರತಿ ರಣಗಲ್' ಪಾತ್ರ ಇಂದಿಗೂ ಪ್ರೇಕ್ಷಕರ ಮನಸ್ಸಿನಲ್ಲಿ ಅಚ್ಚೊತ್ತಿದೆ. ಇದೇ 'ಮಫ್ತಿ'ಯ ಪ್ರೀಕ್ವೆಲ್ ಈ ಸಿನಿಮಾ. ಶಿವರಾಜ್‌ಕುಮಾರ್ 'ಭೈರತಿ ರಣಗಲ್' ಆಗಿದ್ದು ಹೇಗೆ ಎನ್ನುವ ಕಥೆ ಹೊತ್ತು ಬರಲಿದೆ ಸಿನಿಮಾ. 'ಭೈರತಿ ರಣಗಲ್' ಗ್ಯಾಂಗ್‌ಸ್ಟರ್ ಆಗಿದ್ದು ಹೇಗೆ? ಆ ಕಪ್ಪು ಬಟ್ಟೆಯನ್ನು ಯಾಕೆ ಹಾಕುತ್ತಾರೆ ಎನ್ನುವುದೇ ಚಿತ್ರದ ಕಥೆ' ಎಂದು ಈ ಹಿಂದೆ ನರ್ತನ್ ಸುಳಿವು ನೀಡಿದ್ದರು. ಸಿನಿಮಾ ಆಗಸ್ಟ್ 15ರಂದು ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ತಿಳಿಸಿತ್ತು. ಆದರೆ ಚಿತ್ರೀಕರಣ ಇನ್ನೂ ಪೂರ್ಣಗೊಳ್ಳದ ಕಾರಣ ಇದು ಮುಂದೂಡಿಕೆಯಾಗುವ ಸಾಧ್ಯತೆ ಇದೆ. ಚಿತ್ರದಲ್ಲಿ ರುಕ್ಮಿಣಿ ವಸಂತ್, ರಾಹುಲ್ ಬೋಸ್, ಅವಿನಾಶ್, ದೇವರಾಜ್, ಮಧು ಗುರುಸ್ವಾಮಿ, ಛಾಯಾಸಿಂಗ್, ಬಾಬು ಹಿರಣ್ಣಯ್ಯ ಮುಂತಾದ ಕಲಾವಿದರಿದ್ದಾರೆ.


ಶಿವರಾಜ್‌ಕುಮಾರ್

ಸೆಟ್ಟೇರಿತು 'ದ ಪ್ರೆಸೆಂಟ್'

ಬಹುತೇಕ ಹೊಸಬರಿಂದಲೇ ಕೂಡಿರುವ 'ದ ಪ್ರೆಸೆಂಟ್' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಗ್ಲೋಬಲ್ ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್ ನಿರ್ಮಾಣದ ಈ ಚಿತ್ರವನ್ನು ಶಿವಪೂರ್ಣ ನಿರ್ದೇಶಿಸುತ್ತಿದ್ದಾರೆ.

'ಚಿತ್ರಕಥೆ ಸಿದ್ಧಪಡಿಸಲು ಒಂದು ವರ್ಷ ಸಮಯ ತೆಗೆದುಕೊಂಡಿದೆ. ಒಂದು ಆತ್ಮದ ಮೂರು ಜನ್ಮದ ಕಥೆ ಒಳಗೊಂಡಿದೆ. ಭೂತ, ಭವಿಷ್ಯ, ವರ್ತಮಾನ ಎಂದು ಮೂರು ಭಾಗಗಳಲ್ಲಿ ಬರಲಿದೆ. ಬೆಂಗಳೂರು ಮತ್ತು ಕೇರಳದ ಸುಂದರ ತಾಣಗಳಲ್ಲಿ ಚಿತ್ರೀಕರಣ ನಡೆಸಲಾಗುವುದು. ಪ್ರಶಾಂತ್ ಸಿದ್ದಿ ಸಂಗೀತವಿದೆ. ಟಾಲಿವುಡ್‌ನಲ್ಲಿ ಹೆಸರು ಮಾಡಿರುವ ಹಿರಿಯ ಛಾಯಾಗ್ರಾಹಕ ಪ್ರಸಾದ್ ಪುಲಿಚರ್ಲ ನಮ್ಮ ಸಿನಿಮಾದ ಮೂಲಕ ಸ್ಯಾಂಡಲ್‌ವುಡ್‌ಗೆ ಎಂಟ್ರಿ ಕೊಡುತ್ತಿದ್ದಾರೆ' ಎಂದರು ನಿರ್ದೇಶಕರು.

ರಾಜೀವ್ ರಾಥೋಡ್ ನಾಯಕನಾಗಿ ನಟಿಸುತ್ತಿದ್ದಾರೆ. ಕನ್ನಡ ಸೇರಿದಂತೆ ತಮಿಳು, ತೆಲುಗು, ಹಿಂದಿ ಹಾಗೂ ಮಲಯಾಳ ಭಾಷೆಗಳಲ್ಲಿ ಚಿತ್ರ ತೆರೆಗೆ ಬರಲಿದೆ. ದಿಯಾ, ಮಾನಸಗೌಡ ನಾಯಕಿಯರು. ಬೇಬಿ ಆರಾಧ್ಯ, ಅವಿನಾಶ್, ಶ್ರೀಧರ್ ಮುಂತಾದವರು ನಟಿಸುತ್ತಿದ್ದಾರೆ.

ದಿಯಾ
ರಾಜೀವ್ ರಾಥೋಡ್
ಮಾನಸಗೌಡ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ **'ನೀಟ್ ಪರೀಕ್ಷೆಗೆ ಸಂಬಂಧಿಸಿ** ಆರು ಮಂದಿಯನ್ನು ಜಾರ್ಖಂಡ್‌ನಲ್ಲಿ ಬಂಧಿಸಲಾಗಿದೆ. ಇವರೆಲ್ಲರೂ ಇಲ್ಲಿನ ಕಾಂಗ್ರೆಸ್ ಕಚೇರಿಯಲ್ಲಿ ಬಚ್ಚಿಟ್ಟುಕೊಂಡಿದ್ದರು' ಎಂದು ಆರೋಪಿಸುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಡುತ್ತಿದೆ. ಹಲವು ಬಿಜೆಪಿ ನಾಯಕರೂ ಈ ಆರೋಪ ಇರುವ ವಿಡಿಯೊವನ್ನು ಹಂಚಿಕೊಂಡಿದ್ದಾರೆ. ಈ ವಿಡಿಯೊವನ್ನು ಹಂಚಿಕೊಂಡಿರುವ ಕೆಲವು 'ಎಕ್ಸ್' ಖಾತೆದಾರರು, 'ಈ ಬಗ್ಗೆ ರಾಹುಲ್ ಬಾಬಾ ಏನೆನ್ನುತ್ತಾರೆ? ಬಿಜೆಪಿ ಹಾಗೂ ಮೋದಿ ಅವರನ್ನು ಅವಮಾನಿಸಲು ಕಾಂಗ್ರೆಸ್ ನಡೆಸಿರುವ ಸಂಚಿನ ಭಾಗವೇ ಇದು? ಇದಕ್ಕೆ ಉತ್ತರ ಹೌದು ಎನ್ನುವುದಾಗಿದೆ' ಎಂದು ಬರೆದುಕೊಂಡಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

✓ **ನೀಟ್ ಪರೀಕ್ಷೆಯ ಅಕ್ರಮಗಳ ಕುರಿತು** ಬಿಹಾರದಲ್ಲಿ ದೂರು ದಾಖಲಾಗಿತ್ತು. ಈ ಬಗ್ಗೆ ತನಿಖೆ ನಡೆಸಿದ ಬಿಹಾರ ಪೊಲೀಸರು ಆರು ಮಂದಿಯನ್ನು ಜಾರ್ಖಂಡ್‌ನಲ್ಲಿ ಬಂಧಿಸಿದ್ದರು. ಆದರೆ, ಅವರನ್ನು ಬಂಧಿಸಿದ್ದು ಜಾರ್ಖಂಡ್‌ನ ದೇವಘರ್ ಜಿಲ್ಲೆಯಲ್ಲಿರುವ ಏಮ್ಸ್ ಆಸ್ಪತ್ರೆಯ ಪಕ್ಕದಲ್ಲಿರುವ ಮನೆಯೊಂದರಲ್ಲಿ. ಮನೆಯೊಂದರಿಂದಲೇ ಆರೋಪಿಗಳನ್ನು ಬಂಧಿಸಿರುವುದಾಗಿ ಬಿಹಾರ ಪೊಲೀಸರು ಸ್ಪಷ್ಟಪಡಿಸಿದ್ದಾರೆ. ಆದ್ದರಿಂದ, ನೀಟ್ ಅಕ್ರಮದ ಆರೋಪಿಗಳನ್ನು ಕಾಂಗ್ರೆಸ್ ಕಚೇರಿಯಿಂದ ಬಂಧಿಸಲಾಗಿಲ್ಲ ಮತ್ತು ಆರೋಪಿಗಳು ಕಾಂಗ್ರೆಸ್ ಕಚೇರಿಯಲ್ಲಿ ಬಚ್ಚಿಟ್ಟುಕೊಂಡಿರಲಿಲ್ಲ ಎಂಬುದು ಖಚಿತವಾಗುತ್ತದೆ.

ಗುಂಡಣ್ಣ

ಹಳ್ಳಿ ಮಣ್ಣಿನ ನೆನಹು

ನುಡಿ ಬೆಳಗು

ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ಹಳ್ಳಿಯಲ್ಲಿ ಹುಟ್ಟಿ ಬೆಳೆದ ಇವರು ದೊಡ್ಡ ವೈದ್ಯರಾಗಿ ದೂರದ ಪಟ್ಟಣ ಸೇರಿದರು. ದುಡಿದು ಹೆಸರು, ಹಣ, ಜನ ಸಂಪರ್ಕ ಎಲ್ಲಾ ಗಳಿಸಿದರು. ಇವರ ಕೈಗುಣ, ತ್ವರಿತ ಸ್ಪಂದನೆಗೆ ಜನ ಮನ್ನಣೆ ಸಿಕ್ಕಿತು. ವೈದ್ಯರ ಮಾನವೀಯ ನಡವಳಿಕೆಯನ್ನು ಜನ ಇಷ್ಟಪಟ್ಟರು. ಅವರ ಮೃದುನುಡಿಯ ವಿಚಾರಣೆಯಲ್ಲೇ ಅರ್ಧ ರೋಗ ವಾಸಿಯಾದ ಭಾವನೆ ಸಿಗುತ್ತಿತ್ತು. ಅನೇಕ ಸಲ ವೈದ್ಯರ ಹತಾಶ ಸಿಟ್ಟು, ಸಣ್ಣ ಗದರಿಕೆ ಕೂಡ ತಮ್ಮ ಕಾಯಿಲೆ ಗುಣಪಡಿಸುವ ಒಂದು ವಿಧಾನ ಎಂದುಕೊಂಡರು. ವೈದ್ಯರ ಚಿಕಿತ್ಸೆ, ಕಮ್ಮಿರೇಟು, ಸರಿರಾತ್ರಿಗೆ ಹೋಗಿ ಮನೆ ಕದ ಬಡಿದರೂ ಸೂಜಿ ಚುಚ್ಚಿ, ಔಷಧಿ ಕೊಟ್ಟು, ಕೊನೆಗೆ ತಿಳಿಹೇಳಿ ಕಳಿಸುವ ಪರಿ ಪ್ರಚಲಿತವಾಯಿತು. ದುಡಿದ ಕಾಸಿನಿಂದ ವೈದ್ಯರು ನಗರದಲ್ಲೇ ಸ್ವಂತ ಆಸ್ಪತ್ರೆ ಕಟ್ಟಿಸಿದರು. ಆದರೆ ಅವರೊಳಗಿನ ಹಳ್ಳಿತನದ ನೆನಪು ಮಾಸಿರಲಿಲ್ಲ. ಆಗಾಗ ಕಾಡಿಸುತ್ತಲೇ ಇತ್ತು.

ತನ್ನ ಹಳ್ಳಿಯ ಹಬ್ಬಗಳು, ಮದುವೆ, ಜಾತ್ರೆ, ಸಂಬಂಧಿಕರ ಸಾವುಗಳಲ್ಲಿ ಭಾಗಿಯಾಗುವ ಅನೇಕ ಸಂದರ್ಭಗಳನ್ನು ಅವರ ಕೆಲಸದ ಜವಾಬ್ದಾರಿ ತಪ್ಪಿಸಿತು. ಹಳ್ಳಿಯ ಕೆಲ ಜನ ಇದನ್ನು ಕೊಬ್ಬು, ಧಿಮಾಕು, ಹಣದ ಮದ, ಎಂದೆಲ್ಲಾ ವ್ಯಾಖ್ಯಾನಿಸಿಕೊಂಡರು. ಹಳ್ಳಿ ತೊರೆದು ಜಗಮಗಿಸುವ ಸಿಟಿ ಸಿಕ್ಕ ಮೇಲೆ ಇಲ್ಲಿನ ಕೆಸರು, ಸೌದೆ ಒಲೆ, ಎತ್ತು, ಕಣ, ಹಸಿವು, ನೀರಡಿಕೆ ಎಲ್ಲಿ ನೆನಪಿರುತ್ತೆ ಎಂದು ಜರೆದರು. ಡಾಕ್ಟ್ರು ಜೊತೆ ಓದಿದ ಸ್ನೇಹಿತರು, ನೆಂಟರು, ಊರಿನ ಹಿರೀಕರು ಆಗಾಗ ನಗರಕ್ಕೆ ಹೋಗಿ ವೈದ್ಯರ ಕಂಡು ಸಹಾಯ ಪಡೆದು ಬರುತ್ತಿದ್ದರು. ತನ್ನೂರಿನವರು ಬಂದರೆ ವೈದ್ಯರು ಪುಳಕಿತರಾಗುತ್ತಿದ್ದರು. ಅಷ್ಟೇ ಭಾವುಕರಾಗುತ್ತಿದ್ದರು.

ಅಪ್ಪ ಹೇಳಿದ ಮಾತು ಮನಸ್ಸಿನಲ್ಲೇ ಕೊರೆಯುತಿತ್ತು. 'ನಮ್ಮ ಹಳ್ಳಿ ಜನರಿಗೆ ನಿನ್ನ ಸೇವೆ ಸಿಗಬೇಕು. ನಿನ್ನ ಎತ್ತಾಡಿಸಿದ ಜನ, ಓದಿದ ಶಾಲೆ, ನಾನು ಗೇದ ಹೊಲ ಯಾವುದನ್ನೂ ನೀನು ಮರೆಯಕೂಡದು. ನೀನು ಎಲ್ಲೇ ಹೋದರೂ ನಿನ್ನ ಬೇರುಗಳು ಈ ಹಳ್ಳಿಗೆ ವಾಪಸ್ಸು ಬರಬೇಕು. ಸರಿಯಾದ ವೈದ್ಯಕೀಯ ಸೌಲಭ್ಯ ಸಿಗದೆ ನಿಮ್ಮವ್ವ ಸತ್ತಿದ್ದು ನೆನಪಿಟ್ಟುಕೋ. ನಿನ್ನ ಕಷ್ಟ ಬಿದ್ದು ನಾನು ಓದಿಸಿದ್ದು ಇದಕ್ಕೇನೆ. ನನ್ನ ಈ ಆಸೆ ನೀನು ಸ್ವಾರ್ಥ ಅಂತಾನೇ ತಿಳಿದರೂ ಪರ್ವಾಗಿಲ್ಲ' ಎಂದಿದ್ದರು.

ಅಪ್ಪನ ಆಸೆಯಂತೆ ವಾರದಲ್ಲಿ ಎರಡು ದಿನ ತನ್ನ ಹಳ್ಳಿಗೆ ಅವರೀಗ ಬರುತ್ತಿದ್ದಾರೆ. ಔಷಧಿಗಳ ಗಂಟು ಮೂಟೆ ಸುತ್ತಿಕೊಂಡು ಎರಡು ದಿನ ಉಳಿಯುತ್ತಿದ್ದಾರೆ. ಎಲ್ಲರಿಗೂ ಉಚಿತ ಚಿಕಿತ್ಸೆ ಕೊಟ್ಟು ಅವರ ಇತರೆ ಅಹವಾಲುಗಳನ್ನೂ ಆಲಿಸುತ್ತಾರೆ. ಹಳ್ಳಿಯಲ್ಲಿ ಓದುವ ಮಕ್ಕಳ ಪಟ್ಟಿ ತಯಾರಿಸಿ ಅವರಿಗೆ ಬೇಕಾದ ಸಹಾಯ ಮಾಡುತ್ತಾರೆ. ಬಾಲ್ಯದ ಗೆಳೆಯರ ಕರೆಸಿಕೊಂಡು ಕಷ್ಟ ಸುಖ ಮಾತಾಡಿ ನಕ್ಕು ಹಗುರಾಗುತ್ತಾರೆ. ತಮ್ಮ ದುಡಿಮೆಯನ್ನು ಅಪ್ಪನ ಆಸೆಯಂತೆ ಹಳ್ಳಿಗೆ ಮರಳಿಸುತ್ತಿದ್ದಾರೆ. ಸಂತೋಷವಿದೆ, ಆತ್ಮತೃಪ್ತಿಯಿದೆ. ನನ್ನೂರಿನ ಋಣ ಈ ಜೀವನದಲ್ಲಿ ತೀರಿಸಲಾರೆ ಎಂದು ಅಹಂಭಾವ ಇಲ್ಲದೆ ಹೇಳುತ್ತಾರೆ. ಮರಳಿ ಹೆಜ್ಜೆ ಕಲಿತ ಮಣ್ಣಿನ ಓಣಿಗೆ ಬಂದು ನಿಲ್ಲುವ ಸುಖ ಎಷ್ಟು ಜನರಿಗೆ ಸಿಗಬಲ್ಲದು...

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜೂನ್ 26, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಪಂಚಮಿ ಗಂ. 20-56 ನಕ್ಷತ್ರ: ಧನಿಷ್ಠ ಗಂ. 13-05 ಯೋಗ: ವಿಷ್ಕಂಭ ಗಂ. 06-14 ನಂತರ ಪ್ರೀತಿ ಗಂ. 27-20 ಕರಣ: ಕೌಲವ ಗಂ. 10-04, ಮಿಥುನ ಮಾಸದ 12 ನೇ ದಿನ, ಮಳೆನಕ್ಷತ್ರ: ಆರ್ದ್ರಾ 2. ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 06-10 ಸೂರ್ಯಾಸ್ತ : 06-57
ಮುಸ್ಲಿಂ ದಿನಾಂಕ : 20 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 9, 4

ಮೇಷ: ಕೆಲವೊಂದು ಅನಿರೀಕ್ಷಿತ ಘಟನೆಗಳಿಂದ ಇತರರ ಎದುರು ತಲೆ ತಗ್ಗಿಸ ಬೇಕಾದ ಪರಿಸ್ಥಿತಿ ಬರುವುದು. ಎಲೆಕ್ಟ್ರಿಕಲ್ ಕಂಟ್ರಾಕ್ಟರ್‌ಗಳಿಗೆ ಈ ದಿನ ಉತ್ತಮ ಅವಕಾಶಗಳು ಸಿಗುವುದು. ಕ್ರೀಡಾ ಚಟುವಟಿಕೆಗಳು ಹೆಚ್ಚಲಿದೆ.

ವೃಷಭ: ಕೆಲಸ ಕಾರ್ಯಗಳಿಗೆ ಬೇಕಾದ ಸೂಕ್ತ ವ್ಯಕ್ತಿಯನ್ನು ಹುಡುಕುವಲ್ಲಿ ವಿಫಲರಾಗುವ ಮುನ್ಸೂಚನೆ ಸಿಗುವುದು. ಮಗುವಿನ ಮೊದಲ ಮಾತು ಅಥವಾ ಮಕ್ಕಳ ಅಭಿವೃದ್ಧಿ ಕಂಡು ಪುಳಕಿತಗೊಳ್ಳುವಿರಿ.

ಮಿಥುನ: ಎಲ್ಲರಿಗಿಂತ ಕಡಿಮೆ ಪರಿಶ್ರಮದಲ್ಲಿ ಇತರರಿಗಿಂತ ಒಳ್ಳೆಯ ಫಲಿತಾಂಶ ಬರುವುದು. ಉಳಿದವರಿಗೆ ಆಶ್ಚರ್ಯ ಚಕಿತ ವಿಷಯವಾಗಿ ತೋರುವುದು. ವೃತ್ತಿಯಲ್ಲಿ ಅನುಭವ ಹೊಂದಿದವರಿಂದ ಬೈಗುಳ ಕೇಳ ಬೇಕಾಗುವುದು.

ಕರ್ಕಾಟಕ: ಸ್ವಚ್ಛಂದವಾಗಿ ಯೌವನವನ್ನು ಅನುಭವಿಸುತ್ತಿರುವವರಿಗೆ ಮದುವೆ ಎನ್ನುವ ಹೆಚ್ಚುವರಿ ಜವಾಬ್ದಾರಿಯನ್ನು ಹೊರೆಸಲು ಪರಿವಾರದವರೆಲ್ಲರೂ ಕಾತುರರಾಗುವರು. ದಿನಾಂತ್ಯದಲ್ಲಿ ಅಲ್ಪ ನೆಮ್ಮದಿ ಪ್ರಾಪ್ತಿಯಾಗಲಿದೆ.

ಸಿಂಹ: ಹೆಂಡತಿಯನ್ನು ಉದ್ದೇಶಿಸಿ ಇತರರು ಹೇಳುವ ದೂರಿನ ಮಾತುಗಳನ್ನು ಕೇಳುವುದು ನಿಮಗೆ ಸಹಿಸಲಾರದ ವಿಷಯವಾಗುತ್ತದೆ. ಶುಭ ಸಮಾಚಾರಗಳನ್ನು ಕೇಳುವಷ್ಟು ವ್ಯವಧಾನ ಇಲ್ಲದಂತೆ ಆಗುತ್ತದೆ.

ಕನ್ಯಾ: ಭಾವನೆಗಳಿಗೆ ಕುಟುಂಬದವರು ಬೆಲೆ ಕೊಡದಿರುವುದು ಮಾನಸಿಕವಾಗಿ ನೊಂದುಕೊಳ್ಳುವಂತೆ ಮಾಡುತ್ತದೆ. ಅದರಿಂದಾಗಿ ನಷ್ಟಗಳು ಸಂಭವಿಸಬಹುದು. ಧೈರ್ಯದಿಂದ ಸಮಸ್ಯೆಗಳನ್ನು ಎದುರಿಸಿ.

ತುಲಾ: ಯೋಗಾಭ್ಯಾಸದಿಂದ ಏಕಾಗ್ರತೆ ಹಾಗೂ ಚಿತ್ತ ಶುದ್ಧಿ ಮಾಡಿಕೊಳ್ಳುವುದು ಉತ್ತಮ. ಬರಬೇಕಾದ ಹಣವೆಲ್ಲವೂ ನಿಮ್ಮ ಕೈ ಸೇರಿದರೂ ಈಗಿನ ನಿಮ್ಮ ಪರಿಸ್ಥಿತಿಗೆ ಇನ್ನೂ ಹೆಚ್ಚಿನ ಧನಸಂಪತ್ತು ಬೇಕಾಗುವುದು.

ವೃಶ್ಚಿಕ: ಆತ್ಮಗೌರವಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡುವ ನಿಮಗೆ ಅಹಿತಕರ ಘಟನೆ ಮರೆಯಲು ಹೆಚ್ಚಿನ ಸಮಯ ಬೇಕಾಗುವುದು. ಪ್ರಾಣಾಯಾಮ ಧ್ಯಾನವನ್ನು ನಿರಂತರವಾಗಿ ಮಾಡಿ.

ಧನು: ಮನಸ್ಸಿನಲ್ಲಿರುವ ದುಗುಡಗಳನ್ನು ಹೇಳಿಕೊಳ್ಳಲು ಸರಿಯಾದ ವ್ಯಕ್ತಿಯ ಕೊರತೆ ಉಂಟಾಗುವುದು. ಸಂಪರ್ಕ ಸಾಧನದಂತಹ ಉದ್ಯೋಗದಲ್ಲಿ ನಿರತರಾದ ವ್ಯಕ್ತಿಗಳಿಗೆ ಸನ್ಮಾನ ಲಭಿಸುವುದು.

ಮಕರ: ಮದುವೆಯ ವಿಚಾರದಲ್ಲಿ ಪದೇ ಪದೇ ಬರುತ್ತಿದ್ದ ವಿಘ್ನಗಳು ಸ್ನೇಹಿತನ ಸಹಾಯದಿಂದ ನಿವಾರಣೆಯಾಗುವುದು. ಕೂದಲೆಳೆಯಷ್ಟು ತಪ್ಪು ಮಾಡಿದ್ದಕ್ಕೂ ಆತಂಕಕ್ಕೆ ಒಳಗಾಗುವ ಪರಿಸ್ಥಿತಿ ಎದುರಾಗಬಹುದು.

ಕುಂಭ: ಯಾವುದೋ ಒಂದು ನಂಬಿಕೆಯ ಮೇಲೆ ಸಾಗುತ್ತಿದ್ದ ನಿಮ್ಮ ಜೀವನದಲ್ಲಿ ಇತರರ ಮಾತುಗಳು ವ್ಯತಿರಿಕ್ತ ಪರಿಣಾಮವನ್ನು ಬೀರಬಹುದು. ಜನಗಳ ದೃಷ್ಟಿ ದೋಷಕ್ಕೆ ಒಳಗಾಗದಂತೆ ಹೆಚ್ಚಿನ ಜಾಗ್ರತೆ ವಹಿಸಿ.

ಮೀನ: ಸಹಾಯ ಗುಣ ಹೊಂದಿರುವ ಕಾರಣದಿಂದ ಸಹಪಾಠಿಗಳೊಂದಿಗಿನ ಬಾಂಧವ್ಯ ಉತ್ತಮಗೊಳ್ಳುವುದು. ತಂತ್ರಜ್ಞಾನದಲ್ಲಿ ಇರುವ ಅನುಭವವು ಹೊಸ ಕಾರ್ಯಕ್ಷೇತ್ರದಲ್ಲಿ ಕಡಿಮೆ ಎಂದು ಅನ್ನಿಸುವುದು.

ಪದಬಂಧ 5723

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ನೀರಿನ ಬುಗ್ಗೆ (3)
4.ತಿಕ್ಕಲ ಇರಿಸಿದ ಬೊಟ್ಟು (3)
5.ಯಜಮಾನನ ಹುಟ್ಟುಗುಣ (4)
6. ತಾಣದಲ್ಲಿ ಕಾಣಿಸುತ್ತಿರುವ ನಕ್ಷತ್ರಗಳ ಗುಂಪು (4)
7.ಇಂದ್ರಿಯ ನಿಗ್ರಹಿಸುವವನು ಯಥಾಸ್ಥಿತಿಯಲ್ಲಿದ್ದಾನೆ! (2)
9.ಒಂಬತ್ತಾದರೂ ಹೊಸದು! (2)
13.ಇದು ಸೂಕ್ತವಾದುದು (4)
14.ಈತ ಪೂಜೆ ಮಾಡುವವನು (4)
15.ವಿರಳವಾಗಿರುವ ರಕ್ತ (3)
16.ಬಾಣ ಹಿಡಿದು ಬಂದಿರುವ ಶೈವ ಭಕ್ತ (3)

ಮೇಲಿಂದ ಕೆಳಕ್ಕೆ
1.ನಡುವೆ ಪಾದವನ್ನಿಟ್ಟು ದೃಢಪಡಿಸುವಿಕೆ! (5)
2.ಅಕಸ್ಮತ್ತಾಗಿ ನಡೆದುದು (5)
3.ಅನಿಶ್ಚಿತಸ್ಥಿತಿಯಲ್ಲಿ ತಾತ್ಕಾಲಿಕವಾಗಿ ತಡೆಹಿಡಿಯುವುದು (4)
5.ಇಲ್ಲೇ ಇದೆ ಬುದ್ಧಿವಂತಿಕೆ! (4)
8.ಹೊಟ್ಟೆಬಾಕ ಇಲ್ಲಿದ್ದಾನೆ (4)
10.ಮಾನಸಿಕ ಪ್ರಭಾವ ಬೀರಿ ವಶಪಡಿಸಿಕೊಳ್ಳುವುದು (5)
11.ಈತ ಕೈಲಾಗದವನು (5)
12.ಮಧ್ಯಾಹ್ನವಾದ ಮೇಲಿನ ಕಾಲ (4)



5722ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಖನಿಜ 5.ನಮಸ್ಕಾರ
6.ವಿರೇಚಕ 8.ನವಾಬ
11.ಪರಮ 13.ಸಮಾಧಾನಿ
17.ಕರಜಾತ 18.ರಥಿಕ

ಮೇಲಿಂದ ಕೆಳಕ್ಕೆ:
1.ಖಚರ 2.ಜನಮನ
3.ಹರವಿ 4.ಹೂಮಂಚ
7.ಕಳಭ 9.ಬಳಪ
10.ನೀರಸ 12.ಮನ್ವಂತರ
14.ಮಾರ್ದವ 15.ನಿಕರ
16.ಸ್ಥಾಪಕ

ಸುಡೊಕು 6108

			8		1	9		
	8	2					3	1
3		1	2		9		5	6
	1	7			8	3		
							8	4
8		3	9				6	
1			7		2	4		3
		8		4			1	
	3		1		5			8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6107 ಸುಡೊಕು

4	9	6	3	7	8	5	2	1
8	5	3	2	1	9	4	7	6
1	7	2	4	6	5	3	9	8
6	1	9	7	2	3	8	4	5
2	8	7	5	4	6	9	1	3
3	4	5	8	9	1	2	6	7
5	6	4	9	3	7	1	8	2
7	2	8	1	5	4	6	3	9
9	3	1	6	8	2	7	5	4

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹201
ಆರ್‌ಎಸ್‌ಎಸ್-5	₹193
ಗುಡ್ ಲಾಟ್	₹180

(ಪ್ರತಿ ಕೆ.ಜಿಗೆ)

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,537
ಇಂದಿನ ಅಂತ್ಯ	23,721
▲	183
ದಿನದ ಗರಿಷ್ಠ	23,754

ವಿನಿಮಯ ದರ

$ ಡಾಲರ್	83.48
£ ಪೌಂಡ್	105.90
€ ಯುರೊ	89.49
¥ ಯೆನ್ (100ಕ್ಕೆ)	52

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹560
12 ಕ್ಕೆ	₹75
ಮೈಸೂರು	
100ಕ್ಕೆ	₹565

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1530 (1510)
ಸೋಯಾ (ರಿಫೈನ್ಡ್)	₹965 (975)
ಸೂರ್ಯಕಾಂತಿ (ರಿಫೈನ್ಡ್)	₹970 (970)
ಪಾಮೋಲಿನ್	₹905 (943)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹499-439
ದ್ವಿತಳಿ (ಬಿ.ವಿ)	₹379-609

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹7500-9210
ಕೆ.ಆರ್.ಪೇಟೆ	₹9356-9450
ಮಧುಗಿರಿ	₹5000-7500
ತಿಪಟೂರು	₹8800-9400

ವಿವಾಹಿತೆಯರ ನೇಮಕಕ್ಕೆ ಕೊಕ್

ಫಾಕ್ಸ್‌ಕಾನ್‌ನಲ್ಲಿ ತಾರತಮ್ಯ: ರಾಯಿಟರ್ಸ್ ತನಿಖಾ ವರದಿ

ಶ್ರೀಪೆರಂಬೂರು (ರಾಯಿಟರ್ಸ್): ಐಫೋನ್ ತಯಾರಿಕಾ ಕಂಪನಿ ಫಾಕ್ಸ್‌ಕಾನ್ ತಮಿಳುನಾಡಿನಲ್ಲಿರುವ ತನ್ನ ಘಟಕದಲ್ಲಿ ವಿವಾಹಿತೆಯರನ್ನು ಉದ್ಯೋಗಕ್ಕೆ ನೇಮಕ ಮಾಡಿಕೊಳ್ಳಲು ನಿರಾಕರಿಸುತ್ತಿದೆ. ಈ ಕುರಿತು ನಡೆಸಿದ ತನಿಖೆಯಲ್ಲಿ ಸತ್ಯಾಂಶ ಬಯಲಾಗಿದೆ.

ಪಾರ್ವತಿ ಮತ್ತು ಜಾನಕಿ ಎಂಬ ಸಹೋದರಿಯರು ಕಳೆದ ವರ್ಷದ ಮಾರ್ಚ್‌ನಲ್ಲಿ ವಾಟ್ಸ್‌ಆ್ಯಪ್‌ನಲ್ಲಿ ಉದ್ಯೋಗ ಭರ್ತಿ ಕುರಿತು ಬಂದ ಸಂದೇಶದ ಮೇರೆಗೆ ಫಾಕ್ಸ್‌ಕಾನ್ ಘಟಕಕ್ಕೆ ಸಂದರ್ಶನಕ್ಕೆ ತೆರಳಿದ್ದರು. ಘಟಕದ ಮುಖ್ಯದ್ವಾರದಲ್ಲಿದ್ದ ಭದ್ರತಾ ಅಧಿಕಾರಿ, 'ನಿಮಗೆ ಮದುವೆಯಾಗಿದೆಯೇ?' ಎಂದು ಪ್ರಶ್ನಿಸಿದ್ದರು. ಈ ಇಬ್ಬರು 'ಹೌದು' ಎಂದು ಉತ್ತರಿಸಿದ ಬಳಿಕ ಅವರನ್ನು ವಾಪಸ್ ಕಳುಹಿಸಿದ್ದಾರೆ.

'ನಮ್ಮಿಬ್ಬರಿಗೂ ವಿವಾಹವಾಗಿದೆ. ಹಾಗಾಗಿ, ಉದ್ಯೋಗ ನೀಡಲಿಲ್ಲ' ಎಂದು ಪಾರ್ವತಿ ಹೇಳಿದ್ದಾರೆ.

'ಸಾಂಸ್ಕೃತಿಕ ಹಾಗೂ ಸಾಮಾಜಿಕ ವಿಷಯಕ್ಕೆ ಸಂಬಂಧಿಸಿದ ಕೆಲವು ಕಾರಣಗಳಿಂದಾಗಿ ವಿವಾಹಿತೆಯರಿಗೆ ಫಾಕ್ಸ್‌ಕಾನ್ ಘಟಕದಲ್ಲಿ ಉದ್ಯೋಗ ನೀಡದೆ ತಿರಸ್ಕರಿಸಲಾಗುತ್ತಿದೆ' ಎಂದು ಕಂಪನಿ ತೊರೆದಿರುವ ಫಾಕ್ಸ್‌ಕಾನ್ ಇಂಡಿಯಾದ ಮಾನವ ಸಂಪನ್ಮೂಲ ವಿಭಾಗದ ಕಾರ್ಯ ನಿರ್ವಾಹಕ ಅಧಿಕಾರಿ ಎಸ್. ಪಾಲ್ ಹೇಳಿದ್ದಾರೆ.

'ವಿವಾಹಿತೆಯರಿಗೆ ಕೌಟುಂಬಿಕ ಜವಾಬ್ದಾರಿಗಳು ಹೆಚ್ಚಿರುತ್ತವೆ. ಮದುವೆ ಬಳಿಕ ಮಗುವಿಗೆ ಜನ್ಮ ನೀಡುತ್ತಾರೆ. ಆಗ ಅವರಿಗೆ ರಜೆ ಸೇರಿ ಇತರೆ ಸವಲತ್ತು ಕಲ್ಪಿಸಬೇಕಾಗುತ್ತದೆ. ಇದರಿಂದ ಕೆಲಸಕ್ಕೆ ಹೆಚ್ಚು ಗೈರುಹಾಜರಾಗುತ್ತಾರೆ' ಎಂದು ಕಂಪನಿಯ ಮಾನವ ಸಂಪನ್ಮೂಲ ವಿಭಾಗದ ಮೂಲಗಳು ಹೇಳಿವೆ.

'ಹಿಂದೂ ಮಹಿಳೆಯರು ಮಾಂಗಲ್ಯ ಸೇರಿ ಚಿನ್ನದ ಆಭರಣಗಳನ್ನು ಧರಿಸುತ್ತಾರೆ. ಇದರಿಂದ ಐಫೋನ್ ತಯಾರಿಕಾ ಕೆಲಸಕ್ಕೆ ತೊಂದರೆಯಾಗುತ್ತಿದೆ. ಹಾಗಾಗಿ, ವಿವಾಹಿತೆಯರಿಗೆ ನೇಮಕಕ್ಕೆ ಅವಕಾಶ ನೀಡಲು ಹಿಂದೇಟು ಹಾಕಲಾಗುತ್ತಿದೆ' ಎಂದು ತಿಳಿಸಿವೆ.

ಆ್ಯಪಲ್ ಹೇಳಿದ್ದೇನು?: '2022ರಲ್ಲಿ ವಿವಾಹಿತೆಯರಿಗೆ ಕೆಲಸ ನೀಡುತ್ತಿಲ್ಲ ಎಂಬ ಆರೋಪ ಕೇಳಿಬಂದಿತ್ತು. ವಿವಾಹಿತೆಯರಿಗೆ ಕೆಲಸ ನೀಡುವ ಬಗ್ಗೆ ಮಾನದಂಡ ಪಾಲಿಸಲು ಸೂಚಿಸಲಾಗಿತ್ತು. ಭಾರತದಲ್ಲಿ ಫಾಕ್ಸ್‌ಕಾನ್ ಸೇರಿ ನಮಗೆ ಐಫೋನ್ ಪೂರೈಸುವ ಎಲ್ಲಾ ಕಂಪನಿಗಳ ಘಟಕಗಳಲ್ಲಿ ವಿವಾಹಿತೆಯರನ್ನು ನೇಮಕ ಮಾಡಿಕೊಳ್ಳಲಾಗುತ್ತಿದೆ' ಎಂದು ಆ್ಯಪಲ್ ಕಂಪನಿ ಪ್ರತಿಕ್ರಿಯಿಸಿದೆ.

'ಉದ್ಯೋಗ ಆಧಾರದ ಮೇಲೆ ವಿವಾಹಿತೆಯರಿಗೆ ತಾರತಮ್ಯ ಮಾಡುತ್ತಿಲ್ಲ. ಲಿಂಗ, ಧರ್ಮ ಹಾಗೂ ಇತರೆ ವಿಷಯದಲ್ಲಿ ತಾರತಮ್ಯ ಎಸಗುತ್ತಿಲ್ಲ' ಎಂದು ಫಾಕ್ಸ್‌ಕಾನ್ ಸ್ಪಷ್ಟನೆ ನೀಡಿದೆ.

ಐ.ಟಿ, ಬಿ.ಟಿ ನಿಯೋಗದ ಪ್ರವಾಸ ಫಲಪ್ರದ: ಪ್ರಿಯಾಂಕ್ ಖರ್ಗೆ ನಿರೀಕ್ಷೆ

₹51 ಸಾವಿರ ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ (ಐ.ಟಿ ಮತ್ತು ಬಿ.ಟಿ) ಇಲಾಖೆಯ ಉನ್ನತಮಟ್ಟದ ನಿಯೋಗವು ಅಮೆರಿಕ, ಬ್ರಿಟನ್, ಜರ್ಮನಿ ಮತ್ತು ಫ್ರಾನ್ಸ್ ರಾಷ್ಟ್ರಗಳಲ್ಲಿ ಕೈಗೊಂಡ ಪ್ರವಾಸದ ಫಲವಾಗಿ ರಾಜ್ಯಕ್ಕೆ ₹51,000 ಕೋಟಿ ಹೂಡಿಕೆ ಹರಿದುಬರುವ ನಿರೀಕ್ಷೆ ಇದೆ ಎಂದು ಐ.ಟಿ ಮತ್ತು ಬಿ.ಟಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಪ್ರಿಯಾಂಕ್ ಖರ್ಗೆ

ಜೂನ್ 4ರಿಂದ 7ರ ವರೆಗೆ ಅಮೆರಿಕದಲ್ಲಿ ಮತ್ತು ಜೂನ್ 10ರಿಂದ 14ರವರೆಗೆ ಬ್ರಿಟನ್, ಜರ್ಮನಿ ಹಾಗೂ ಫ್ರಾನ್ಸ್‌ನಲ್ಲಿ ತಮ್ಮ ನೇತೃತ್ವದ ನಿಯೋಗವು ವಿವಿಧ ತಂತ್ರಜ್ಞಾನ, ವಾಣಿಜ್ಯ ಸಮಾವೇಶಗಳಲ್ಲಿ ಭಾಗವಹಿಸಿ ಹೂಡಿಕೆ ಆಕರ್ಷಣೆಗೆ ನಡೆಸಿದ ಪ್ರಯತ್ನಗಳ ಕುರಿತು ಅವರು ಮಂಗಳವಾರ ಪತ್ರಿಕಾ ಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ನಮ್ಮ ನಿಯೋಗವು ಲಂಡನ್ ಟೆಕ್ ವೀಕ್, ಆ್ಯನ್ಸಿ ಇಂಟರ್‌ನ್ಯಾಷನಲ್ ಅನಿಮೇಷನ್ ಫೆಸ್ಟಿವಲ್ (ಫ್ರಾನ್ಸ್), ಬಯೋ ಯುಎಸ್-2024 (ಸ್ಯಾನ್ ಡಿಯಾಗೊ) ಮತ್ತು ಜರ್ಮನಿಯ ಕೆಲವೆಡೆ ಭೇಟಿ ನೀಡಿ ಹೂಡಿಕೆದಾರರ ಜತೆ ಮಾತುಕತೆ ನಡೆಸಿದೆ. ಹೂಡಿಕೆಗೆ ಆಸಕ್ತಿ ತೋರಿ ಬಂದಿರುವ ಪ್ರಸ್ತಾವಗಳನ್ನು ರಾಜ್ಯ ಉನ್ನತಮಟ್ಟದ ಒಪ್ಪಿಗೆ ಸಮಿತಿ ಮುಂದೆ ಮಂಡಿಸಲಾಗುವುದು. ಕೆಲವು ಹೂಡಿಕೆದಾರರು ಸಹಾಯಧನಕ್ಕೆ ಈಗಾಗಲೇ ಅರ್ಜಿಗಳನ್ನೂ ಸಲ್ಲಿಸಿದ್ದಾರೆ' ಎಂದರು.

'ಈ ಬಾರಿ ನಿರ್ದಿಷ್ಟ ಗುರಿಗಳೊಂದಿಗೆ ಹೂಡಿಕೆದಾರರನ್ನು ಭೇಟಿ ಮಾಡಿದ್ದೇವೆ. ಹೀಗಾಗಿ, ಹೂಡಿಕೆ ಆಕರ್ಷಣೆ ಫಲ ನೀಡುವ ವಿಶ್ವಾಸವಿದೆ. 180 ದಿನದೊಳಗೆ ಹೂಡಿಕೆಗೆ ಸಂಬಂಧಿಸಿದ ಎಲ್ಲ ಪ್ರಕ್ರಿಯೆಗಳನ್ನೂ ಪೂರ್ಣಗೊಳಿಸುವ ಗುರಿ ಇದೆ' ಎಂದರು.

ಕರ್ನಾಟಕದ ಮಾನವ ಸಂಪನ್ಮೂಲಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಬೇಡಿಕೆ ಇದೆ. ಕರ್ನಾಟಕವು ಗುಜರಾತ್, ಆಂಧ್ರಪ್ರದೇಶ, ಮಧ್ಯಪ್ರದೇಶ ಸೇರಿದಂತೆ ಭಾರತದ ರಾಜ್ಯಗಳ ಜತೆ ಸ್ಪರ್ಧೆ ನಡೆಸುತ್ತಿಲ್ಲ. ಅಮೆರಿಕ, ಚೀನಾ, ವಿಯೆಟ್ನಾಂ ಮತ್ತು ಯುರೋಪ್ ರಾಷ್ಟ್ರಗಳ ಜತೆ ಸ್ಪರ್ಧಿಸುತ್ತಿದೆ ಎಂದರು.

ಬೆಂಗಳೂರಿಗೆ ಲಾಭ: ನಿಯೋಗದಲ್ಲಿದ್ದ ಕಿಯೋನಿಕ್ಸ್ ಅಧ್ಯಕ್ಷ ಶರತ್ ಬಚ್ಚೇಗೌಡ ಮಾತನಾಡಿ, 'ಸ್ಟ್ಯಾನ್‌ಫೋರ್ಡ್ ಬೈಯರ್ಸ್ ಸೆಂಟರ್ ಫಾರ್ ಬಯೋ ಡಿಸೈನ್‌ನ 'ಫೌಂಡರ್ಸ್ ಫೋರಂ' ಯೋಜನೆಯನ್ನು ಬೆಂಗಳೂರಿನಲ್ಲಿ ಅನುಷ್ಠಾನಗೊಳಿಸಲು ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ತಂತ್ರಜ್ಞಾನಕ್ಕೆ ಸಂಬಂಧಿಸಿದ ನವೋದ್ಯಮಗಳನ್ನು ಪ್ರೋತ್ಸಾಹಿಸುವ ಕಾರ್ಯಕ್ರಮ ಇದರಲ್ಲಿ ಸೇರಿದೆ. ಸ್ಟ್ಯಾನ್‌ಫೋರ್ಡ್ ಬೈಯರ್ಸ್ ತಂಡವು ಶೀಘ್ರದಲ್ಲೇ ಬೆಂಗಳೂರಿಗೆ ಭೇಟಿ ನೀಡಲಿದೆ. ಇದರಿಂದ ಬೆಂಗಳೂರಿಗೆ ಲಾಭವಾಗಲಿದೆ' ಎಂದರು.

ಲಂಡನ್‌ನ ಸ್ಟಾರ್ಟ್ ಅಪ್ ಜೆನೋಮ್‌ನ ಯೋಜನೆಯಡಿ ಕರ್ನಾಟಕದ 100 ನವೋದ್ಯಮಗಳು ಅನುಕೂಲ ಪಡೆಯಲಿವೆ ಎಂದರು.

'ವಿದೇಶಿ ಹೂಡಿಕೆ ಆಕರ್ಷಿಸುವುದಕ್ಕೆ ಪೂರಕವಾಗಿ ಎಲೆಕ್ಟ್ರಾನಿಕ್ ಸಿಸ್ಟಂ ವಿನ್ಯಾಸ ಮತ್ತು ಉತ್ಪಾದನೆಗೆ (ಇಎಸ್‌ಡಿಎಂ) ಸಂಬಂಧಿಸಿದ ಹೊಸ ನೀತಿಯನ್ನು ರೂಪಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ' ಎಂದು ಹೇಳಿದರು.

ಐ.ಟಿ ಮತ್ತು ಬಿ.ಟಿ ಇಲಾಖೆ ಕಾರ್ಯದರ್ಶಿ ಏಕರೂಪ್ ಕೌರ್ ಪತ್ರಿಕಾಗೋಷ್ಠಿಯಲ್ಲಿದ್ದರು.

ಪ್ರಧಾನಿ ಅಡ್ಡಗಾಲು: ಆರೋಪ

ರಾಜ್ಯಕ್ಕೆ ವಿದೇಶಿ ಹೂಡಿಕೆ ಆಕರ್ಷಣೆಗೆ ಪ್ರಧಾನಿ ನರೇಂದ್ರ ಮೋದಿ ಅಡ್ಡಗಾಲು ಹಾಕುತ್ತಿದ್ದಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸಿದರು.

'ನಾವು ಕರೆದುಕೊಂಡು ಬರುವ ಹೂಡಿಕೆದಾರರನ್ನು ಸಂಪರ್ಕಿಸಿ ಗುಜರಾತ್ ಮತ್ತು ಉತ್ತರ ಪ್ರದೇಶದಲ್ಲಿ ಹೂಡಿಕೆ ಮಾಡುವಂತೆ ಒತ್ತಡ ಹೇರಿ, ಅಲ್ಲಿಗೆ ಕರೆದುಕೊಂಡು ಹೋಗುತ್ತಿದ್ದಾರೆ' ಎಂದು ಆರೋಪಿಸಿದರು.

'ನಾವು ವಿದೇಶ ಸುತ್ತಿ ಹೂಡಿಕೆದಾರರನ್ನು ಕರೆದುಕೊಂಡು ಬರುತ್ತೇವೆ. ಅಷ್ಟರೊಳಗೆ ಪ್ರಧಾನಿ ಮತ್ತು ಅವರ ಸಚಿವಾಲಯದ ಅಧಿಕಾರಿಗಳು ಹೂಡಿಕೆದಾರರನ್ನು ಸಂಪರ್ಕಿಸಿ ಗುಜರಾತ್ ಅಥವಾ ಉತ್ತರ ಪ್ರದೇಶಕ್ಕೆ ಹೋಗುವಂತೆ ಒತ್ತಡ ಹೇರುತ್ತಾರೆ. ತೆಲಂಗಾಣಕ್ಕೆ ಬಂದ ಹೂಡಿಕೆದಾರರಿಗೂ ಒತ್ತಡ ಹೇರಿರುವ ಉದಾಹರಣೆಗಳಿವೆ. ಮುಂದೆ ಎಲ್ಲವನ್ನೂ ಬಹಿರಂಗಪಡಿಸುತ್ತೇವೆ' ಎಂದರು.

ಒಂದು ಕಂಪನಿ ರಾಜ್ಯದಲ್ಲಿ ಹೂಡಿಕೆಗೆ ಆಸಕ್ತಿ ತೋರಿ ಮಾತುಕತೆಗೆ ಬಂದಿತ್ತು. ರಾಜ್ಯದಿಂದ ಆಂಧ್ರಪ್ರದೇಶಕ್ಕೆ ಆ ಕಂಪನಿ ಹೋಯಿತು. ಅಲ್ಲಿಂದ ಗುಜರಾತ್‌ನಲ್ಲಿ ಹೋಗಿ ಹೂಡಿಕೆ ಮಾಡಿತು. ಕರ್ನಾಟಕದಲ್ಲಿ ಹೂಡಿಕೆಗೆ ಬಂದಿದ್ದ ಮತ್ತೊಂದು ಕಂಪನಿಯನ್ನು ಒತ್ತಡ ಹೇರಿ ಗುಜರಾತ್‌ಗೆ ಕರೆದೊಯ್ಯಲಾಯಿತು ಎಂದು ಹೇಳಿದರು.

78,000 ಗಡಿ ದಾಟಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ದೇಶೀಯ ಷೇರು-ಪೇಟೆಗಳಲ್ಲಿ ಗೂಳಿ ಓಟ ಜೋರಾಗಿದ್ದು, ಮಂಗಳವಾರ ನಡೆದ ವಹಿವಾಟಿನಲ್ಲಿ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಇದೇ ಮೊದಲ ಬಾರಿಗೆ 78 ಸಾವಿರ ಅಂಶದ ಗಡಿ ದಾಟಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಹೊಸ ಎತ್ತರಕ್ಕೆ ಜಿಗಿದಿದೆ.

ಬ್ಯಾಂಕಿಂಗ್ ವಲಯದ ಬ್ಲೂಚಿಪ್ ಕಂಪನಿಗಳು ಹಾಗೂ ರಿಲಯನ್ಸ್ ಇಂಡಸ್ಟ್ರಿಸ್ ಷೇರುಗಳ ಖರೀದಿಯಿಂದಾಗಿ ಷೇರು ಸೂಚ್ಯಂಕಗಳು ಏರಿಕೆಯ ಹಾದಿ ಹಿಡಿದವು.

ಸೆನ್ಸೆಕ್ಸ್ 712 ಅಂಶ ಏರಿಕೆ (ಶೇ 0.92ರಷ್ಟು) ಕಂಡು 78,053 ಅಂಶಗಳಲ್ಲಿ ವಹಿವಾಟು ಮುಗಿಸುವ ಮೂಲಕ ಸಾರ್ವಕಾಲಿಕ ದಾಖಲೆ ಬರೆದಿದೆ. ಜೂನ್ 10ರಂದು ನಡೆದ ವಹಿವಾಟಿನಲ್ಲಿ ಸೆನ್ಸೆಕ್ಸ್ ಪ್ರಥಮ ಬಾರಿಗೆ 77 ಸಾವಿರದ ಗಡಿ ದಾಟಿತ್ತು.

ನಿಫ್ಟಿ 183 ಅಂಶ ಏರಿಕೆ ಕಂಡು 23,721 ಅಂಶಗಳಲ್ಲಿ ಸ್ಥಿರಗೊಂಡಿತು. ಸೆನ್ಸೆಕ್ಸ್ ಗುಚ್ಛದಲ್ಲಿನ ಎಕ್ಸಿಸ್ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಟೆಕ್ ಮಹೀಂದ್ರ, ಎಲ್ ಆ್ಯಂಡ್ ಟಿ, ಬಜಾಜ್ ಫಿನ್‌ಸರ್ವ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ರಿಲಯನ್ಸ್ ಇಂಡಸ್ಟ್ರೀಸ್, ಇನ್ಫೊಸಿಸ್ ಕಂಪನಿಯ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಪವರ್ ಗ್ರಿಡ್, ಏಷ್ಯನ್ ಪೇಂಟ್ಸ್, ಟಾಟಾ ಸ್ಟೀಲ್, ನೆಸ್ಲೆ ಇಂಡಿಯಾ, ಮಾರುತಿ ಸುಜುಕಿ, ಜೆಎಸ್‌ಡಬ್ಲ್ಯು ಸ್ಟೀಲ್‌ನ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಗೋಧಿ ದಾಸ್ತಾನಿಗೆ ಮಿತಿ ಹೇರಿದ ಕೇಂದ್ರ

ನವದೆಹಲಿ (ಪಿಟಿಐ): ಮಾರುಕಟ್ಟೆಯಲ್ಲಿ ಬೆಲೆ ಏರಿಕೆ ನಿಯಂತ್ರಿಸಲು ಕೇಂದ್ರ ಸರ್ಕಾರವು ಸೋಮವಾರ ಗೋಧಿ ದಾಸ್ತಾನಿಗೆ ಮಿತಿ ಹೇರಿದೆ.

ಸಗಟು ಮಾರಾಟಗಾರರು 3,000 ಟನ್, ಚಿಲ್ಲರೆ ಮತ್ತು ದೊಡ್ಡ ಮಾರಾಟಗಾರರು ಪ್ರತಿ ಚಿಲ್ಲರೆ ಮಳಿಗೆಗೆ 10 ಟನ್, ಡಿಪೊಗಳು 3,000 ಟನ್, ಸಂಸ್ಕರಣಾಗಾರವು ತಿಂಗಳ ಸಾಮರ್ಥ್ಯದ ಶೇ 70ರಷ್ಟನ್ನು ದಾಸ್ತಾನು ಮಾಡಿಕೊಳ್ಳಬಹುದಾಗಿದೆ. ಈ ದಾಸ್ತಾನು ಮಿತಿ ಆದೇಶವು 2025ರ ಮಾರ್ಚ್ 31ರ ವರೆಗೆ ಇರಲಿದೆ ಎಂದು ಕೇಂದ್ರ ಆಹಾರ ಸಚಿವಾಲಯ ತಿಳಿಸಿದೆ.

ಗೋಧಿ ರಫ್ತು ಮೇಲಿನ ನಿರ್ಬಂಧವನ್ನು ತೆಗೆದುಹಾಕಿಲ್ಲ. ಬೆಲೆ ನಿಯಂತ್ರಣದಲ್ಲಿಡಲು ಅಗತ್ಯವಿದ್ದಲ್ಲಿ ಆಹಾರ ಧಾನ್ಯದ ಮೇಲಿನ ಆಮದು ಸುಂಕವನ್ನು ಕಡಿತಗೊಳಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿದೆ.

ಕಬ್ಬು ಬೆಳೆ: ಮಾಹಿತಿ ವಿನಿಮಯಕ್ಕೆ ಸಲಹೆ

ನವದೆಹಲಿ (ಪಿಟಿಐ): 'ರೋಗ ನಿರೋಧಕ ತಳಿಗಳು ಮತ್ತು ಬೆಳೆ ಪದ್ಧತಿ ಕುರಿತ ಹೊಸ ಅನ್ವೇಷಣೆಗಳ ಬಗ್ಗೆ ಕಬ್ಬು ಬೆಳೆಯುವ ರಾಷ್ಟ್ರಗಳು ಪರಸ್ಪರ ಮಾಹಿತಿ ವಿನಿಮಯ ಮಾಡಿಕೊಂಡರೆ ಕಬ್ಬಿನ ಇಳುವರಿ ಹೆಚ್ಚಿಸಲು ಸಹಕಾರಿಯಾಗಲಿದೆ' ಎಂದು ಕೇಂದ್ರ ಗ್ರಾಹಕ ವ್ಯವಹಾರಗಳು ಮತ್ತು ಆಹಾರ ಸಚಿವ ಪ್ರಲ್ಹಾದ ಜೋಶಿ ಸಲಹೆ ನೀಡಿದ್ದಾರೆ.

ಮಂಗಳವಾರ ನಡೆದ ಅಂತರ ರಾಷ್ಟ್ರೀಯ ಸಕ್ಕರೆ ಸಂಸ್ಥೆಯ (ಐಎಸ್‌ಒ) 64ನೇ ಸಭೆಯಲ್ಲಿ ಮಾತನಾಡಿದ ಅವರು, ಕಬ್ಬಿನ ಇಳುವರಿ ಹೆಚ್ಚಿಸಲು ಸಂಶೋಧನೆಗೂ ಒತ್ತು ನೀಡಬೇಕಿದೆ ಎಂದರು.

ಸಕ್ಕರೆ ಉತ್ಪಾದನೆ ಪ್ರಕ್ರಿಯೆಯಲ್ಲಿ ಸುಧಾರಿತ ತಂತ್ರಜ್ಞಾನದ ಅಳವಡಿಕೆಯು ಬಹುಮುಖ್ಯ. ಇದರಿಂದ ತ್ಯಾಜ್ಯದ ಪ್ರಮಾಣ ಕಡಿಮೆಯಾಗಲಿದೆ ಎಂದರು.

5ಜಿ ತರಂಗಾಂತರ ಹರಾಜು ಶುರು

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ಮಂಗಳವಾರ 5ಜಿ ತರಂಗಾಂತರ ಹರಾಜು ಪ್ರಕ್ರಿಯೆ ಆರಂಭಿಸಿದೆ.

ಈ ಹರಾಜಿನ ಮೂಲಕ ಒಟ್ಟು ₹96,238 ಕೋಟಿ ಸಂಗ್ರಹಿಸುವ ಗುರಿ ಹೊಂದಿದೆ. ಮೊದಲ ದಿನ ನಡೆದ ಐದು ಸುತ್ತಿನ ಹರಾಜಿನಲ್ಲಿ ₹11 ಸಾವಿರ ಕೋಟಿ ಮೌಲ್ಯದ ತರಂಗಾಂತರಗಳಿಗೆ ಬಿಡ್ ಸಲ್ಲಿಕೆಯಾಗಿವೆ. 2022ರ ಅಕ್ಟೋಬರ್‌ನಲ್ಲಿ ಕೊನೆಯದಾಗಿ ಹರಾಜು ಪ್ರಕ್ರಿಯೆ ನಡೆದಿತ್ತು. ಪ್ರಸ್ತುತ 10ನೇ ಹರಾಜು ಪ್ರಕ್ರಿಯೆ ನಡೆಯುತ್ತಿದೆ.

'ಪ್ರಸ್ತುತ ದೇಶದಲ್ಲಿ ಇರುವ ದೂರ ಸಂಪರ್ಕ ಸೇವೆಯ ಅಭಿವೃದ್ಧಿ ಮತ್ತು ಮತ್ತಷ್ಟು ವಿಸ್ತರಣೆಗೆ ಈ ಹರಾಜು ಪ್ರಕ್ರಿಯೆ ಆರಂಭಿಸಲಾಗಿದೆ. ಗ್ರಾಹಕರಿಗೆ ಕೈಗೆಟಕುವ ದರದಲ್ಲಿ ಗುಣಮಟ್ಟದ ಸೇವೆ ನೀಡುವುದೇ ಇದರ ಹಿಂದಿರುವ ಉದ್ದೇಶ' ಎಂದು ಸರ್ಕಾರ ತಿಳಿಸಿದೆ.

ಮಾರ್ಚ್ 8ರಂದು ಕೇಂದ್ರ ದೂರ ಸಂಪರ್ಕ ಇಲಾಖೆಯು ತರಂಗಾಂತರ ಹರಾಜು ಮತ್ತು ಹಂಚಿಕೆ ಕುರಿತ ಷರತ್ತುಗಳ ಬಗ್ಗೆ ಪ್ರಕಟಣೆ ಹೊರಡಿಸಿತ್ತು.

'800 ಮೆಗಾ ಹರ್ಟ್ಜ್, 900 ಮೆಗಾ ಹರ್ಟ್ಜ್, 1,800 ಮೆಗಾ ಹರ್ಟ್ಜ್, 2,100 ಮೆಗಾ ಹರ್ಟ್ಜ್, 2,500 ಮೆಗಾ ಹರ್ಟ್ಜ್, 3,300 ಮೆಗಾ ಹರ್ಟ್ಜ್ ಹಾಗೂ 26 ಗಿಗಾ ಹರ್ಟ್ಜ್ ತರಂಗಾಂತರ ಬ್ಯಾಂಡ್‌ಗಳ ಹರಾಜು ನಡೆಯಲಿದೆ' ಎಂದು ತಿಳಿಸಿದೆ.

3,300 ಮೆಗಾ ಹರ್ಟ್ಜ್ ಹಾಗೂ 26 ಗಿಗಾ ಹರ್ಟ್ಜ್ ತರಂಗಾಂತರವು 5ಜಿ ಸೇವೆ ಒದಗಿಸಲು ಸೂಕ್ತ ಬ್ಯಾಂಡ್ ಆಗಿವೆ.

ತರಂಗಾಂತರ ಖರೀದಿಗಾಗಿ ರಿಲಯನ್ಸ್ ಜಿಯೊ ಕಂಪನಿಯು ₹3 ಸಾವಿರ ಕೋಟಿ ಮೊತ್ತವನ್ನು ಠೇವಣಿ ಇಟ್ಟಿದೆ. ಹಾಗಾಗಿ, ಹೆಚ್ಚಿನ ಮೊತ್ತದ ಬಿಡ್ ಸಲ್ಲಿಕೆ ಮಾಡುವ ನಿರೀಕ್ಷೆಯಿದೆ. ಭಾರ್ತಿ ಏರ್‌ಟೆಲ್ ₹1,050 ಕೋಟಿ ಹಾಗೂ ವೊಡಾಫೋನ್ ಐಡಿಯಾ ₹300 ಕೋಟಿ ಠೇವಣಿ ಇಟ್ಟಿದೆ.

'ಈ ಹರಾಜು ಪ್ರಕ್ರಿಯೆಯು ದೇಶದಲ್ಲಿ 5ಜಿ ಸೇವೆಯ ವೇಗವರ್ಧನೆ ಹಾಗೂ ಕ್ಷಿಪ್ರಗತಿಯಲ್ಲಿ ಸೇವೆ ಒದಗಿಸಲು ಸಹಕಾರಿಯಾಗಿದೆ' ಎಂದು ಭಾರತದ ದೂರಸಂಪರ್ಕ ಸೇವಾದಾತರ ಸಂಘಟನೆಯ ಮಹಾ ನಿರ್ದೇಶಕ ಎಸ್.ಪಿ. ಕೊಚ್ಚರ್ ತಿಳಿಸಿದ್ದಾರೆ.

ಯಾವ ಬ್ಯಾಂಡ್‌ಗೆ ಬೇಡಿಕೆ?

ಮೊದಲ ದಿನವೇ ಭಾರ್ತಿ ಏರ್‌ಟೆಲ್, ರಿಲಯನ್ಸ್ ಜಿಯೊ, ವೊಡಾಫೋನ್ ಐಡಿಯಾ ಕಂಪನಿಯು ಬಿಡ್ ಸಲ್ಲಿಕೆ ಮಾಡಿವೆ ಎಂದು ಮೂಲಗಳು ತಿಳಿಸಿವೆ.

ಈ ಕಂಪನಿಗಳು ಹರಾಜು ಪ್ರಕ್ರಿಯೆಯ ನಾಲ್ಕನೇ ಸುತ್ತಿನಲ್ಲಿ 900 ಮೆಗಾ ಹರ್ಟ್ಜ್, 1,800 ಮೆಗಾ ಹರ್ಟ್ಜ್, 2,100 ಮೆಗಾ ಹರ್ಟ್ಜ್ ಹಾಗೂ 2,500 ಮೆಗಾ ಹರ್ಟ್ಜ್ ಬ್ಯಾಂಡ್‌ಗಳಲ್ಲಿನ ತರಂಗಾಂತರ ಖರೀದಿಗೆ ಹೆಚ್ಚು ಆಸಕ್ತಿ ತೋರಿವೆ ಎಂದು ಆ ಮೂಲಗಳು ಹೇಳಿವೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಗುಣಶೇಖರ್, ಚಿತ್ರದುರ್ಗ.

- **ಪ್ರಶ್ನೆ: 2020ರ ಸೆಪ್ಟೆಂಬರ್ 19ರಂದು ಎಸ್‌ಬಿಐನಲ್ಲಿ ಶೇ 5.40ರ ಬಡ್ಡಿ ದರದಲ್ಲಿ ತಿಂಗಳಿಗೆ ₹5,000ರಂತೆ ಐದು ವರ್ಷಗಳ ಆರ್‌ಡಿ ಖಾತೆ ಪ್ರಾರಂಭಿಸಿದೆ. ಪ್ರಸ್ತುತ ನನ್ನ ಉಳಿತಾಯವು ₹2.30 ಲಕ್ಷ ಆಗಿದೆ. ಬ್ಯಾಂಕ್ ಮಾಹಿತಿ ಪ್ರಕಾರ ಮೆಚ್ಯೂರಿಟಿ ಸಂದರ್ಭದಲ್ಲಿ ನನ್ನ ಬಳಿ ₹3,44,850 ಇರುತ್ತದೆ. ನನ್ನ ಖಾತೆಯ ಐದು ವರ್ಷಗಳ ಅವಧಿ ಪೂರ್ಣಗೊಂಡಾಗ ನಾನು ತೆರಿಗೆ ಪಾವತಿಸಬೇಕೇ? ಹಾಗಿದ್ದರೆ, ವಿಧಿಸಲ್ಪಡುವ ತೆರಿಗೆಯ ಹೆಸರೇನು ಮತ್ತು ಅದು ಎಷ್ಟು? ಅಗತ್ಯಕ್ಕಿಂತ ಹೆಚ್ಚಿನ ತೆರಿಗೆ ಪಾವತಿ ತಪ್ಪಿಸಲು ಇದೀಗ ಯಾವ ಕ್ರಮಗಳನ್ನು ತೆಗೆದುಕೊಳ್ಳಬಹುದು?**

ಉತ್ತರ: ನೀವು ನೀಡಿರುವ ಮಾಹಿತಿಯಂತೆ ನಿಮ್ಮ ಒಟ್ಟಾರೆ ಐದು ವರ್ಷಗಳ ಮಾಸಿಕ ಹೂಡಿಕೆಯ ಅಸಲು ಮೊತ್ತ ಸುಮಾರು ₹3 ಲಕ್ಷ. ಈ ಅವಧಿಯಲ್ಲಿ ನೀವು ಗಳಿಸುವ ಒಟ್ಟು ಬಡ್ಡಿ ಮೊತ್ತ ₹ 44,850 ಆಗಿರುತ್ತದೆ. ಯಾವುದೇ ತೆರಿಗೆ ಕಡಿತ ಅನ್ವಯ ಮಾಡುವಾಗ ಆದಾಯ ತೆರಿಗೆಯ ಸೆಕ್ಷನ್ 194ಎ ಇದರ ನಿಯಮಾವಳಿಗಳನ್ನು ಪರಿಗಣಿಸಲಾಗುತ್ತದೆ.

ಇದರಂತೆ ಪ್ರತಿ ಆರ್ಥಿಕ ವರ್ಷದಲ್ಲಿ ಒಂದೇ ಬ್ಯಾಂಕ್‌ನಿಂದ ₹40 ಸಾವಿರಕ್ಕೂ ಹೆಚ್ಚು ಬಡ್ಡಿ ಪಾವತಿಯಾಗುವುದಿದ್ದರೆ ಶೇ 10ರ ದರದಲ್ಲಿ ತೆರಿಗೆ ಕಡಿತಗೊಳಿಸಲಾಗುತ್ತದೆ. ನೀವು 60 ವರ್ಷ ಮೀರಿದ ಹಿರಿಯ ನಾಗರಿಕರಾಗಿದ್ದರೆ ಈ ಮಿತಿಯು ₹50 ಸಾವಿರ ಆಗಿರುತ್ತದೆ.

ನೀವು ಗಳಿಸುತ್ತಿರುವ ಬಡ್ಡಿಗೆ ಅನ್ವಯವಾಗುವ ತೆರಿಗೆ ಐದು ವರ್ಷದ ಕೊನೆಗೆ ಪಾವತಿಯಾಗುವುದಿದ್ದರೂ ಅದನ್ನು ಆಯಾ ವರ್ಷದ ಬಡ್ಡಿ ಆದಾಯವೆಂದೇ ಪರಿಗಣಿಸಲಾಗುತ್ತದೆ. ಹೀಗಾಗಿ ನಿಮ್ಮ ವಿಚಾರದಲ್ಲಿ ಯಾವುದೇ ಒಂದು ವರ್ಷದ ಬಡ್ಡಿ ಮೇಲೆ ಉಲ್ಲೇಖಿಸಿರುವ ಮಿತಿ ಮೀರುವ ಸಾಧ್ಯತೆ ಇರುವುದಿಲ್ಲ. ನೀವು ಬೇರೆ ಉದ್ಯೋಗದಲ್ಲಿದ್ದು, ಈಗಾಗಲೇ ತೆರಿಗೆ ಪಾವತಿಸುತ್ತಿದ್ದರೆ ಅಂತಹ ಆದಾಯದೊಡನೆ ಆರ್‌ಡಿಗೆ ಸಿಗುವ ವಾರ್ಷಿಕ ಬಡ್ಡಿ ಸೇರಿಸಿ ತೆರಿಗೆ ಲೆಕ್ಕ ಹಾಕಬೇಕೆನ್ನುವುದು ಗಮನದಲ್ಲಿ ಇರಲಿ.

ಈ ಬಡ್ಡಿಗೆ ಬ್ಯಾಂಕ್‌ನವರು ಮೇಲಿನ ಮಾಹಿತಿ ಪ್ರಕಾರ ತೆರಿಗೆ ಕಡಿತ ಮಾಡುವ ಅನಿವಾರ್ಯತೆ ಇಲ್ಲವೆಂದಾದರೂ, ನಿಮ್ಮ ಒಟ್ಟಾರೆ ಆದಾಯಕ್ಕೆ ತೆರಿಗೆ ಅನ್ವಯವಾಗುವುದಿದ್ದರೆ, ನಿಮಗೆ ಅನ್ವಯವಾಗುವ ತೆರಿಗೆ ದರದಲ್ಲಿ ತೆರಿಗೆ ಪಾವತಿಸಬೇಕಾಗುತ್ತದೆ. ನೀವು ಈ ಬಗ್ಗೆ ಬ್ಯಾಂಕ್‌ನಲ್ಲಿ ವಿಚಾರಿಸಿ ಸಮಸ್ಯೆ ಬಗೆಹರಿಸಿಕೊಳ್ಳಬಹುದು. ಪರ್ಯಾಯವಾಗಿ ನಿಮಗೆ ಮೂಲ ವಿನಾಯಿತಿ ಮಿತಿಗಿಂತ ಆದಾಯ ಕಡಿಮೆ ಇದ್ದಲ್ಲಿ ಹಾಗೂ ತೆರಿಗೆ ಕಡಿತವಾಗುವ ಸಂದೇಹವಿದ್ದಲ್ಲಿ ಫಾರಂ 15ಜಿ ಅಥವಾ ಎಚ್ ಕೂಡ ಬ್ಯಾಂಕ್‌ಗೆ ಸಲ್ಲಿಸಬಹುದು.

ಸಂಧ್ಯಾ, ಬೆಂಗಳೂರು.

- **ಪ್ರಶ್ನೆ: ಪ್ರಸ್ತುತ ನಾನು ಖಾಸಗಿ ಕಂಪನಿಯೊಂದರಲ್ಲಿ ಉದ್ಯೋಗದಲ್ಲಿದ್ದು, ಇತ್ತೀಚೆಗೆ ನಾವು ಸಾಕಷ್ಟು ವಿಚಾರಿಸಿ ಮನೆಯೊಂದನ್ನು ಖರೀದಿಸುತ್ತಿದ್ದೇವೆ. ಮನೆಯ ಒಟ್ಟಾರೆ ಮೌಲ್ಯ ಸುಮಾರು ₹75 ಲಕ್ಷ. ಇದರ ಮಾಲೀಕರು ವಿದೇಶದಲ್ಲಿದ್ದು, ಅವರು ಎನ್‌ಆರ್‌ಐ ಎಂಬುದಾಗಿ ತಿಳಿದು ಬಂತು. ನಾವು ಬಲ್ಲ ಮಾಹಿತಿಯಂತೆ ₹50 ಲಕ್ಷಕ್ಕೂ ಮೀರಿದ ಆಸ್ತಿ-ಭೂಮಿ ಇತ್ಯಾದಿ ಸ್ಥಿರ ಆಸ್ತಿಗಳಲ್ಲಿ ವ್ಯವಹರಿಸುವಾಗ ಖರೀದಿಸುವವರು ಮಾರಾಟ ಮಾಡುವವರ ಪ್ಯಾನ್ ಖಾತೆಯಲ್ಲಿ ಟಿಡಿಎಸ್ ಕಡಿತಗೊಳಿಸಬೇಕೆನ್ನುವ ಕಾನೂನು ಇದೆ. ನಾವು ಈ ಆಸ್ತಿಯನ್ನು ಖರೀದಿಸುವುದಾದರೆ ತೆರಿಗೆ ವಿಚಾರದಲ್ಲಿ ಯಾವ ರೀತಿ ಮುಂದುವರಿಯಬೇಕು. ಅಲ್ಲದೆ ಮಾರಾಟ ಮಾಡುವವರು, ನಾವು ಮಾಡಬೇಕಾಗುವ ತೆರಿಗೆ ಕಡಿತದಿಂದ ವಿನಾಯಿತಿ ಪಡೆಯಬಹುದೇ? ಈ ಬಗ್ಗೆ ಮಾಹಿತಿ ನೀಡಿ.**

ಉತ್ತರ: ಅನಿವಾಸಿ ಭಾರತೀಯರಿಂದ (ಎನ್‌ಆರ್‌ಐ) ಆಸ್ತಿ ಖರೀದಿಸುವಾಗ ಹಲವಾರು ತೆರಿಗೆ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಮೊದಲ ಹಂತದಲ್ಲಿ ತೆರಿಗೆ (ಟಿಡಿಎಸ್) ಕಡಿತಕ್ಕಾಗಿ ಖರೀದಿದಾರರು ಟ್ಯಾನ್ ಸಂಖ್ಯೆ ಹೊಂದಿರಬೇಕು. ಇದಕ್ಕಾಗಿ ಖರೀದಿದಾರರಾದ ನೀವು ಟ್ಯಾನ್ ಸಂಖ್ಯೆಯನ್ನು ಆದಾಯ ತೆರಿಗೆ ಇಲಾಖೆಯಿಂದ ಪಡೆಯಬೇಕು. ತದನಂತರ ಅನ್ವಯವಾಗುವ ತೆರಿಗೆ ದರದಂತೆ (ಶೇ 22.88ರಷ್ಟು) ತೆರಿಗೆ ಕಡಿತಗೊಳಿಸಬೇಕು.

ಟಿಡಿಎಸ್ ಜಮಾ ಮಾಡಿದ ನಂತರ ಖರೀದಿದಾರರು ಟಿಡಿಎಸ್ ರಿಟರ್ನ್ಸ್ ಸಲ್ಲಿಸಬೇಕಾಗುತ್ತದೆ. ಈ ಟಿಡಿಎಸ್ ರಿಟರ್ನ್ಸ್ ಅನ್ನು ಟಿಡಿಎಸ್ ಕಡಿತಗೊಳಿಸಿದ ತ್ರೈಮಾಸಿಕದ ಅಂತ್ಯದಿಂದ 31 ದಿನಗಳಲ್ಲಿ ಸಲ್ಲಿಸಬೇಕಾಗುತ್ತದೆ. ಈ ರಿಟರ್ನ್ಸ್ ಫಾರ್ಮ್ 27ಕ್ಯು ನಲ್ಲಿ ಸಲ್ಲಿಸಬೇಕು. ಕೊನೆಯ ಹಂತವಾಗಿ ಖರೀದಿದಾರರಾದ ನೀವು ಆಸ್ತಿ ಮಾರಾಟ ಮಾಡಿದವರಿಗೆ 'ಫಾರ್ಮ್ 16ಎ' ಅನ್ನು ಒದಗಿಸಬೇಕಾಗುತ್ತದೆ.

ಈ ವ್ಯವಹಾರಕ್ಕೆ ಸಂಬಂಧಿಸಿ ನೀವೇ ಸ್ವತಃ ಟ್ಯಾನ್ ಸಂಖ್ಯೆ ಪಡೆಯುವುದು ತುಸು ಕಷ್ಟವಾಗಬಹುದು. ಹೀಗಾಗಿ ನಿಮ್ಮ ಸಮೀಪದ ತೆರಿಗೆ ಸಲಹೆಗಾರರ ನೆರವು ಪಡೆದು ಕಡಿತಗೊಳಿಸಿದ ತೆರಿಗೆ ರಿಟರ್ನ್ಸ್ ಸಲ್ಲಿಸಿ. ನಿಮ್ಮ ಖರೀದಿ ಪೂರ್ಣಗೊಂಡ ನಂತರ ಟ್ಯಾನ್ ಸಂಖ್ಯೆಯನ್ನು ರದ್ದು ಮಾಡಲು ಅರ್ಜಿ ಸಲ್ಲಿಸಬಹುದು. ಇನ್ನು ಅನಿವಾಸಿ ಭಾರತೀಯರು ಆಸ್ತಿ ಮಾರಾಟದ ಮೇಲೆ ಟಿಡಿಎಸ್ ಅನ್ನು ತಗ್ಗಿಸಲು ಅಥವಾ ಶೂನ್ಯ ದರದ ಟಿಡಿಎಸ್ ಪ್ರಮಾಣ ಪತ್ರ ಪಡೆಯಲು ಆದಾಯ ತೆರಿಗೆ ಇಲಾಖೆಗೆ 'ಫಾರ್ಮ್ 13' ಸಲ್ಲಿಸಬೇಕು. ಇದಕ್ಕಾಗಿ ಸ್ಥಳೀಯ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಬಹುದು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001
ಇ–ಮೇಲ್:businessdesk@prajavani.co.in

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಿಧನ

ಶ್ರೀಮತಿ ಹೆಚ್.ವಿ. ಸರೋಜಮ್ಮ
15-06-2024
ವೈಕುಂಠಸಮಾರಾಧನೆ
ದಿನಾಂಕ: 27-06-2024ರಂದು
ಜೆ.ಪಿ. ನಗರದ ನಿವಾಸದಲ್ಲಿ
ಸದಾ ಸ್ಮರಿಸುವ
ಕುಟುಂಬವರ್ಗದವರು ಮತ್ತು ಬಂಧುಗಳು

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Engg/ Production Technical

ವರ್ಲ್ಡ್ ಡಿಸೈನ್ ಪ್ರೊಟೊಪೊಲಿಸ್ (ಡಬ್ಲ್ಯುಡಿಪಿ) ಬೆಂಗಳೂರು ಪ್ರೊಗ್ರಾಮ್ ಆಫೀಸ್ ಇವರು ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳುತ್ತಿದ್ದಾರೆ! ಡಬ್ಲ್ಯುಡಿಪಿ ಇವರನ್ನು ವರ್ಲ್ಡ್ ಡಿಸೈನ್ ಸಂಸ್ಥೆಯು ನಗರದ ಪ್ರತಿಷ್ಠಿತ ಜಾಗತಿಕ ಸಂಸ್ಥೆ ಎಂದು ನಾಮ ನಿರ್ದೇಶನ ಮಾಡಿರುತ್ತದೆ. ನಗರದಲ್ಲಿನ ನಾಗರಿಕರು ಎದುರಿಸುತ್ತಿರುವ ಕೆಲವು ಪ್ರಮುಖ ಸಮಸ್ಯೆಗಳನ್ನು ಮುಂಬರುವ 5 ವರ್ಷಗಳಲ್ಲಿ ಪರಿಹರಿಸುವುದಕ್ಕಾಗಿ, ಡಬ್ಲ್ಯುಡಿಪಿ ಇವರಿಂದ ಪ್ರೊಟೊಟೈಪ್ಸ್ ವಿನ್ಯಾಸಗೊಳಿಸಲಾಗುತ್ತದೆ ಮತ್ತು ಇವನ್ನು ಬಿಬಿಎಂಪಿ ಅನುಷ್ಠಾನಗೊಳಿಸುತ್ತದೆ. ಆರಂಭಿಕವಾಗಿ ಡಬ್ಲ್ಯುಡಿಪಿ ಇವರಿಂದ ಪೂರ್ಣಾವಧಿ ಕಾರ್ಯಪಡೆ ನಿಯೋಜಿಸಿಕೊಳ್ಳಲಾಗುತ್ತಿದ್ದು, ಇದರ ಅವಧಿಯನ್ನು ಮುಂದಿನ 1 ವರ್ಷದವರೆಗೆ ವಿಸ್ತರಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಭೇಟಿ ಕೊಡಿ: www.adi.org.in/wdp, https://www.srishtimanipalinstitute.in/ Jobs-WDP. html,bengaluru@associationofdesignersofindia.org

Cook

ನುರಿತ ಅಡಿಗೆ ಮಾಡುವ ಮಹಿಳೆಯರು ಬೇಕಾಗಿದ್ದಾರೆ. ಸ್ಥಳ: ರಾಜರಾಜೇಶ್ವರಿ ನಗರ, ಬೆಂಗಳೂರು. ಸಂಪರ್ಕಿಸಿರಿ : 9844483931

"ಇಂದಿರಾನಗರದಲ್ಲಿರುವ ಮನೆಗೆ ಮಹಿಳಾ ಅಡಿಗೆ ಕೆಲಸದವರು ಮತ್ತು ಮಹಿಳಾ ಮನೆಗೆಲಸದವರು ಬೇಕಾಗಿದ್ದಾರೆ ಉತ್ತಮ ಸಂಬಳ ಹಾಗೂ ಇಬ್ಬರಿಗೂ ಪ್ರತ್ಯೇಕ ವಸತಿ ಸೌಲಭ್ಯ ನೀಡಲಾಗುತ್ತದೆ. 9845058243"

General

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟವಸತಿಯಿದೆ. 13,000/- - 17,000/-, 8951315839, 9141634619

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6364468422 9663542555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

EDUCATION CORNER ಕ್ಲಾಸಿಫೈಡ್ಸ್

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳೆಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿವಮೊಗ್ಗ 8095555517

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು,ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/- ರಿಂದ 20,000/- . ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ಸಂಪರ್ಕಿಸಿ: 7899235388, 9148525233

ಭವಿಷ್ಯ

Astrology

★ಪರಮಶ್ರೇಷ್ಠ★ ಶ್ರೀದೇವಾನಂದನ್‌ರವರಿಂದ ನಿಮ್ಮ ಎಲ್ಲಾ ಪರಿಹಾರವಾಗದ ವಿವಾಹ,ಕುಟುಂಬ,ದಾಂಪತ್ಯ ಕಲಹ,ಬಂಜೇತನ ದುರ್ನಡತೆ, ದುಶ್ಚಟ,ಸಾಲ,ಶತ್ರು ರೋಗ ಲೈಂಗಿಕತೆ, ಸ್ತ್ರೀಪುರುಷ ವಶೀಕರಣಕ್ಕೆ ಸಂಪರ್ಕಿಸಿರಿ: 9845005009

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕ ಪ್ರಕಟಣೆ
ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ತುರುವೇಕೆರೆ,
O.S. No.6/ 2023
ವಾದಿ: ಪುಟ್ಟಮ್ಮ ಮತ್ತು ಇತರರು
ಪ್ರತಿವಾದಿಗಳು: ಲಕ್ಷ್ಮಮ್ಮ ಮತ್ತು ಇತರರು
ಪ್ರತಿವಾದಿಗಳು: ಪ್ರತಿವಾದಿ1: ಲಕ್ಷ್ಮಮ್ಮ ಕೋಂ ಲೇಟ್ ದೊಡ್ಡಲಿಂಗಯ್ಯ, ವಯಸ್ಸು ಸುಮಾರು 75ವರ್ಷ. ಪ್ರತಿವಾದಿ2: ಸುವರ್ಣ ಕೋಂ ಗಂಗರಾಜು, ವಯಸ್ಸು ಸುಮಾರು 35ವರ್ಷ, ಪ್ರತಿವಾದಿ3: ಜವರಪ್ಪ ಬಿನ್ ಲೇಟ್ ಕಾಶಿ ಉ ದೊಡ್ಡಲಿಂಗಯ್ಯ ವಯಸ್ಸು ಸುಮಾರು 60 ವರ್ಷ, ಪ್ರತಿವಾದಿ5: ಜವರಮ್ಮ ಕೋಂ ಅಜ್ಜಪ್ಪ ಉ ಸಿದ್ದಯ್ಯ ಕೋಂ ಕಾಶಿ ಉ ದೊಡ್ಡಲಿಂಗಯ್ಯ ವಯಸ್ಸು ಸುಮಾರು 65 ವರ್ಷ, ಪ್ರತಿವಾದಿ 1, 2, 3 ಮತ್ತು 5 ರವರ ವಾಸ ದೊಡ್ಡಬೀರನಕೆರೆ ಗ್ರಾಮ, ಮಾಯಸಂದ್ರ ಹೋಬಳಿ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ, ಪ್ರತಿವಾದಿ 9: ನಿಂಗಮ್ಮ ಕೋಂ ಲೇಟ್ ನಿಂಗಪ್ಪ ವಯಸ್ಸು ಸುಮಾರು 72 ವರ್ಷ, ನಂಬರ್ 64, 10ನೇ ಕ್ರಾಸ್, 4ನೇ ಮೈನ್ ರೋಡ್, ಎಲ್.ಎನ್.ಪುರ, ಬೆಂಗಳೂರು-21, ಪ್ರತಿವಾದಿ 10: ಲಲಿತಮ್ಮ ಕೋಂ ಸೋಮಶೇಖರ ಬಿನ್ ಲೇಟ್ ನಿಂಗಪ್ಪ ವಯಸ್ಸು ಸುಮಾರು 30 ವರ್ಷ, ನಂಬರ್ 28, ಸಾಯಿಬಾಬಾ ನಗರ, ಅಂದ್ರಹಳ್ಳಿ ಮುಖ್ಯ ರಸ್ತೆ, ಪೀಣ್ಯ 2ನೇ ಹಂತ, ಅನುಪಮ ಕಾಲೇಜ್ ರಸ್ತೆ, ಬೆಂಗಳೂರು-91. ಪ್ರತಿವಾದಿ 11: ದೊಡ್ಡಲಿಂಗಯ್ಯ ಬಿನ್ ಲೇಟ್ ನಿಂಗಪ್ಪ, ವಯಸ್ಸು ಸುಮಾರು 28 ವರ್ಷ, ನಂಬರ್ 64, 10ನೇಕ್ರಾಸ್, 4ನೇ ಮುಖ್ಯರಸ್ತೆ, ಎಲ್.ಎನ್.ಪುರ, ಬೆಂಗಳೂರು-21 ಪ್ರತಿವಾದಿ 13: ವಿನೋದ ಕೋಂ ವಾಸು ಬಿನ್ ಲೇಟ್ ಕಾಶಪ್ಪ, ವಯಸ್ಸು ಸುಮಾರು 25 ವರ್ಷ, ಜೋಗೇರ ಹಳ್ಳಿ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು. ಪ್ರತಿವಾದಿ 14: ಲತ ಕೋಂ ಸಿದ್ದಣ್ಣ ಬಿನ್ ಲೇಟ್ ಕಾಶಪ್ಪ, ವಯಸ್ಸು 28 ವರ್ಷ, ಅರಕೆರೆ ಗ್ರಾಮ, ಬಾಣಾವರ ಹೋ॥, ಅರಸಿಕೆರೆ ತಾ॥, ಹಾಸನ ಜಿಲ್ಲೆ.
ಪ್ರಕಟಣೆ
ಈ ಕೇಸಿನ ಪ್ರತಿವಾದಿಗಳು 1, 2, 3, 5, 9, 10, 11, 13 ಮತ್ತು 14ರವರ ಮೇಲೆ ತುರುವೇಕೆರೆ ಹಿರಿಯ ಶ್ರೇಣಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ವಾದಿಯು ದಾವೆಯನ್ನು ಸಲ್ಲಿಸಿದ್ದು ಇದರಲ್ಲಿ ನಿಮ್ಮನ್ನು ಪ್ರತಿವಾದಿ 1, 2, 3, 5, 9, 10, 11, 13 ಮತ್ತು 14 ಎಂದು ಸೇರಿಸಿದ್ದು, ನಿಮಗೆ ಸಮನ್ಸ್ ಜಾರಿಯಾಗದೆ ವಾಪಸು ಬಂದಿರುತ್ತದೆ. ಈ ದಾವೆಯಲ್ಲಿನ ಮುಂದಿನ ವಿಚಾರಣೆಯನ್ನು ದಿನಾಂಕ:29-7-24ಕ್ಕೆ ನಿಗಧಿಪಡಿಸಿದ್ದು, ಸದರಿ ದಿನಾಂಕದಂದು ಪ್ರತಿವಾದಿಗಳಾದ ನೀವು ಬೆಳಗ್ಗೆ 11.00 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಖುದ್ದಾಗಿಯಾಗಲೀ ಅಥವಾ ನಿಮ್ಮ ವಕೀಲರ ಮುಖಾಂತರವಾಗಲೀ ಮೇಲ್ಕಂಡ ನ್ಯಾಯಾಲಯಕ್ಕೆ ಹಾಜರಾಗಿ ನಿಮ್ಮ ತಕರಾರನ್ನು ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ಸದರಿ ದಾವೆಯನ್ನು ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾಗುವುದು ಎಂದು ತಿಳಿಯತಕ್ಕದ್ದು. 2024ನೇ ಇಸವಿ ಜೂನ್ ಮಾಹೆ 22ನೇ ದಿನಾಂಕದಂದು ನ್ಯಾಯಾಲಯದ ಸಹಿ ಮತ್ತು ಮೊಹರಿನೊಂದಿಗೆ ನೀಡಲಾಗಿದೆ.
ನ್ಯಾಯಾಲಯದ ಅಪ್ಪಣೆ ಮೇರೆಗೆ
ಆಡಳಿತಾತ್ಮಕ ಶಿರಸ್ತೇದಾರ್
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ತುರುವೇಕೆರೆ
ವಾದಿಯ ಪರ ವಕೀಲರು:
ಡಿ.ಪಿ.ನಂದೀಶ್, ವಕೀಲರು
ತುರುವೇಕೆರೆ, ಮೊ: 9482153056

ಸಾರ್ವಜನಿಕ ಪ್ರಕಟಣೆ
ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರಾದ ಮೆ. ಹಂಟರ್ ಡೌಗ್ಲಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್., ಕಾರ್ಪೊರೇಟ್ ಕಚೇರಿ ವಿಳಾಸ ನಂ. 661 & 662, ಬಿಲ್ಡಿಂಗ್ ನಂ. 6, 6ನೇ ಮಹಡಿ, ಸಾಲಿಟೇರ್ ಕಾರ್ಪೊರೇಟ್ ಪಾರ್ಕ್, ಚಕಾಲಾ, ಅಂಧೇರಿ ಗೋರಖ್‌ಪುರ ಲಿಂಕ್ ರಸ್ತೆ, ಅಂಧೇರಿ (ಈಸ್ಟ್), ಮುಂಬೈ 400093 ಇವರು, "ಟರ್ನಿಲ್ ಮರ್ಮೆಟ್ ಮಟೀರಿಯಲ್ಸ್" ಬ್ರಾಂಡ್‌ನ ಕಾನೂನುಬದ್ಧ ಮಾಲೀಕರಾಗಿರುತ್ತಾರೆ.
ನಮ್ಮ ಕಕ್ಷಿದಾರರ ಹೇಳಿಕೆಯ ಪ್ರಕಾರ, 15.09.2020 ರಿಂದ 14.09.2023 ರವರೆಗಿನ ಅವಧಿಗೆ ಮಾತ್ರ ತಮ್ಮ ಬ್ರಾಂಡ್ ಹೆಸರನ್ನು ಬಳಸಿಕೊಳ್ಳಲು ಮೆ. ಸನ್‌ರೈಸ್ ಬ್ರೈಂಡ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಪರವಾನಗಿ ನೀಡಿರುತ್ತಾರೆ.
ಮುಂದುವರಿದಂತೆ, ನಮ್ಮ ಕಕ್ಷಿದಾರರ ಪ್ರಕಾರ, ಮೆ. ಸನ್‌ರೈಸ್ ಬ್ರೈಂಡ್ಸ್ ಪ್ರೈವೇಟ್ ಲಿಮಿಟೆಡ್ ಜೊತೆಗಿನ ಸದರಿ ಒಪ್ಪಂದವು 14.09.2023 ರಂದು ಬರ್ಖಾಸ್ತುಗೊಂಡಿರುತ್ತದೆ ಮತ್ತು ಸದರಿ ದಿನಾಂಕದ ಬಳಿಕ ಮೆ. ಸನ್‌ರೈಸ್ ಬ್ರೈಂಡ್ಸ್ ಪ್ರೈವೇಟ್ ಲಿಮಿಟೆಡ್ ರವರು ನಮ್ಮ ಕಕ್ಷಿದಾರರ ಮೆ. ಹಂಟರ್ ಡೌಗ್ಲಸ್ ಇಂಡಿಯಾ ಪ್ರೈ. ಲಿ., ಎಂಬ ಬ್ರಾಂಡ್ ಹೆಸರನ್ನು ಬಳಸಿಕೊಳ್ಳಲು ಪರವಾನಗಿ ಹೊಂದಿರುವುದಿಲ್ಲ.
ಇದೀಗ, ಸದರಿ ಮೆ. ಸನ್‌ರೈಸ್ ಬ್ರೈಂಡ್ಸ್ ಪ್ರೈವೇಟ್ ಲಿಮಿಟೆಡ್‌ರವರು ಅದೇ ಸ್ಥಳದಲ್ಲಿ/ಆವರಣದಲ್ಲಿ ನಮ್ಮ ಕಕ್ಷಿದಾರರ ಬ್ರಾಂಡ್ ಮತ್ತು ಸ್ವತ್ತು ಆಗಿರುವ ಮೆ. ಹಂಟರ್ ಡೌಗ್ಲಸ್ ಇಂಡಿಯಾ ಪ್ರೈ. ಲಿ., ಎಂಬ ಬ್ರಾಂಡ್ ಹೆಸರನ್ನು ತಪ್ಪಾಗಿ, ಅನಧಿಕೃತವಾಗಿ ಮತ್ತು ಕಾನೂನುಬಾಹಿರವಾಗಿ ಬಳಸಿಕೊಳ್ಳುವುದನ್ನು ಮುಂದುವರಿಸಿದ್ದಾರೆ ಹಾಗೂ ಸಾರ್ವಜನಿಕರನ್ನು ದಿಕ್ಕು ತಪ್ಪಿಸುತ್ತಾದ್ದಾರೆ ಎಂಬುದು ಕೂಡ ನಮ್ಮ ಕಕ್ಷಿದಾರರಿಗೆ ತಿಳಿದುಬಂದಿರುತ್ತದೆ.
ಆದ್ದರಿಂದ, ಮೆ. ಡೌಗ್ಲಸ್ ಇಂಡಿಯಾ ಪ್ರೈ. ಲಿ., ರವರು ಸದರಿ ಮೆ. ಸನ್‌ರೈಸ್ ಬ್ರೈಂಡ್ಸ್ ಪ್ರೈವೇಟ್ ಲಿಮಿಟೆಡ್ ವಿರುದ್ಧ ಮತ್ತು "ಟರ್ನಿಲ್ ಮರ್ಮೆಟ್ ಮಟೀರಿಯಲ್ಸ್" ಎಂಬ ಬ್ರಾಂಡ್ ಹೆಸರನ್ನು ಅನಧಿಕೃತವಾಗಿ ಬಳಸಿಕೊಳ್ಳುವುದರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಿದ್ದಾರೆ. ಸದರಿ ಮೆ. ಸನ್‌ರೈಸ್ ಬ್ರೈಂಡ್ಸ್ ಪ್ರೈವೇಟ್ ಲಿಮಿಟೆಡ್ ಜೊತೆಗೆ ನೋಂದಣಿ ಮಾಡಿಕೊಂಡಿರುವ ಅಥವಾ ವ್ಯವಹಾರ ಮಾಡುತ್ತಿರುವ ಯಾರೇ ಆಗಲಿ, ಅಂತಹವರು ಅವರೊಂದಿಗಿನ ವಹಿವಾಟನ್ನು ಮುಂದುವರಿಸುವುದು ಅವರವರ ಸ್ವಂತ ಜವಾಬ್ದಾರಿಯಾಗಿರುತ್ತದೆ, ಇದಕ್ಕೆ ಉಂಟಾಗುವ ಯಾವುದೇ ಖರ್ಚು ವೆಚ್ಚಗಳಿಗೆ, ಆಗುಹೋಗುಗಳಿಗೆ ಮೆ. ಡೌಗ್ಲಸ್ ಇಂಡಿಯಾ ಪ್ರೈ. ಲಿ., ರವರು ಹೊಣೆಗಾರರಲ್ಲ.
ಮುಂದುವರಿದಂತೆ, "ಟರ್ನಿಲ್ ಮರ್ಮೆಟ್ ಮಟೀರಿಯಲ್ಸ್" ಬ್ರಾಂಡ್ ಹೆಸರಿಗೆ ಸಂಬಂಧಿಸಿದಂತೆ ಯಾವುದೇ ಮತ್ತು/ ಅಥವಾ ಎಲ್ಲಾ ನೋಂದಣಿಗಳು ಅಥವಾ ವ್ಯವಹಾರಗಳಲ್ಲಿ ಎದುರಾಗಬಹುದಾದ ಯಾವುದೇ ತಗಾದೆಗಳಿಗೆ/ತಾರತಮ್ಯಗಳಿಗೆ ನಮ್ಮ ಕಕ್ಷಿದಾರರ ಕಂಪನಿಯು ಹೊಣೆಯಾಗುವುದಿಲ್ಲ ಮತ್ತು/ಅಥವಾ ಅವುಗಳನ್ನು ಪರಿಗಣಿಸುವುದಿಲ್ಲ.
ಸತೀಶ್ ವಿ ಬೆಜಾಯ್, ವಕೀಲರು
ಮಾಲೀಕರು: ಮೆ. ಬೆಜಾಯ್ ಅಂಡ್ ಕೋ., ಬಾಂಬೆ ಹೈಕೋರ್ಟ್ ವಕೀಲರು ಮತ್ತು ನೋಟರಿ, ಕಚೇರಿ ನಂ. 102, 1ನೇ ಮಹಡಿ, ಬಿಲ್ಡಿಂಗ್ ನಂ. 28, ಹರ್ಷ ವಿಹಾರ, ಸೆಕ್ಟರ್ 1, ಶಾಂತಿನಗರ, ಮೀರಾ ರೋಡ್ ಈಸ್ಟ್, ಮುಂಬೈ-401107
sathishbejai@yahoo.co.in
ಮೊಬೈಲ್: 9820076213
ದಿನಾಂಕ: 09.05.2024

ರೆಂಟಲ್ ಪ್ರಾಪರ್ಟೀಸ್

Accommodation Wanted

Industrial And Factory

INDUSTRIAL SHED
Required on Lease. We are looking for an 8500sqft Shed for Factory setup having 25ft Height and Orange Category in Bangalore within 50-60 kms Radius from Malleshwaram. Contact: 9108934749.

ಪ್ರವಾಸ

Travel

12.07.2024 13/17ದಿನಗಳು ರೈಲು/ವಿಮಾನದಲ್ಲಿ ಅಮರನಾಥ ವೈಷ್ಣೋದೇವಿ ಕಾಶ್ಮೀರ ಕುರುಕ್ಷೇತ್ರ ಅಮೃತಸರ್ ಆಗ್ರ,ದೆಹಲಿ ಇತ್ಯಾದಿ 28000/ 40000/(ಕೆಲವೇ ಸೀಟುಗಳಿವೆ) ಆಗಸ್ಟ್/ ಸೆಪ್ಟಂಬರ್‌ನಲ್ಲಿ 6ದಿನಗಳು ಕಾಶಿ ಅಯೋಧ್ಯಯಾತ್ರೆಗೆ 32000/ 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9739847429/ 9845560219/ 9886968166

7/11 ದಿನಗಳ ಸಿಂಗಪುರ್ ಮಲೇಶಿಯಾ ಥೈಲ್ಯಾಂಡ್. 6 ದಿನಗಳ ಬಾಲಿ. 10 ದಿನಗಳ ಕಾಂಬೋಡಿಯಾ, ವಿಯೆಟ್ನಾಂ. 18 ದಿನಗಳ ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್. 7 ದಿನಗಳ ಶ್ರೀಲಂಕಾ ಭಟ್ ಟ್ರಾವೆಲ್ಸ್ 9844037295 9844166555

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪರೀಕ್ಷಾ ಪ್ರಕ್ರಿಯೆ ಸುಧಾರಣೆ: ಮೊದಲ ಸಭೆ ನಡೆಸಿದ ರಾಧಾಕೃಷ್ಣನ್ ನೇತೃತ್ವದ ಸಮಿತಿ

ಪೋಷಕರು, ವಿದ್ಯಾರ್ಥಿಗಳ ಜತೆ ಚರ್ಚೆ

ನವದೆಹಲಿ (ಪಿಟಿಐ): ಪರೀಕ್ಷಾ ವ್ಯವಸ್ಥೆಯ ಸುಧಾರಣೆಗಾಗಿ ಕೇಂದ್ರ ಶಿಕ್ಷಣ ಸಚಿವಾಲಯ ರಚಿಸಿರುವ, ಇಸ್ರೊ ಮಾಜಿ ಅಧ್ಯಕ್ಷ ಕೆ.ರಾಧಾಕೃಷ್ಣನ್ ನೇತೃತ್ವದ ಸಮಿತಿಯು ಪೋಷಕರು ಮತ್ತು ವಿದ್ಯಾರ್ಥಿಗಳೊಂದಿಗೆ ಮಾತುಕತೆ ನಡೆಸಿ ಪರೀಕ್ಷಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ಅವರ ಕಳವಳ ಮತ್ತು ಎದುರಿಸುತ್ತಿರುವ ಸವಾಲುಗಳನ್ನು ಅರ್ಥೈಸಿಕೊಳ್ಳಲು ನಿರ್ಧರಿಸಿದೆ.


ರಾಧಾಕೃಷ್ಣನ್

ಮುಖ್ಯಾಂಶಗಳು
- 15 ದಿನಗಳಲ್ಲಿ ಅಭಿಪ್ರಾಯ ಕ್ರೋಡೀಕರಣ
- ಸದೃಢ ಪರೀಕ್ಷಾ ವ್ಯವಸ್ಥೆ ಅಭಿವೃದ್ಧಿ ಗುರಿ
- ಮೊದಲ ಸಭೆಯಲ್ಲಿ ಸದಸ್ಯರಿಂದ ವಿಸ್ತೃತ ಚರ್ಚೆ

'ಪೋಷಕರು ಮತ್ತು ವಿದ್ಯಾರ್ಥಿಗಳಲ್ಲಿರುವ ಆತಂಕವನ್ನು ತಿಳಿಯುವುದಕ್ಕೆ ಮತ್ತು ಅವರ ಸಲಹೆಗಳನ್ನು ಪಡೆಯುವುದಕ್ಕೆ ನಾವು ಆದ್ಯತೆ ನೀಡುತ್ತೇವೆ. ಸಾಧ್ಯವಾದಷ್ಟೂ ನಾವು ಅವರೊಂದಿಗೆ ವ್ಯಕ್ತಿಗತವಾಗಿ ಅಥವಾ ಎಲೆಕ್ಟ್ರಾನಿಕ್ ಮಾಧ್ಯಮಗಳ ಮೂಲಕ ಚರ್ಚಿಸಲು ತೊಡಗಿಕೊಳ್ಳಲಿದ್ದೇವೆ. 15 ದಿನಗಳಲ್ಲಿ ಎಲ್ಲ ಅಭಿಪ್ರಾಯಗಳನ್ನು ಕ್ರೋಡೀಕರಿಸಲಿದ್ದೇವೆ' ಎಂದು ರಾಧಾಕೃಷ್ಣನ್ ಅವರು ಮಂಗಳವಾರ ಹೇಳಿದರು.

ಸದೃಢ ವ್ಯವಸ್ಥೆಯ ಗುರಿ: 'ದೇಶದಲ್ಲಿ ಪರೀಕ್ಷೆಗಳನ್ನು ಆರಂಭಿಸಲು ಸದೃಢವಾದ ವ್ಯವಸ್ಥೆಯನ್ನು ತ್ವರಿತವಾಗಿ ರೂಪಿಸುವುದು ನಮ್ಮ ಎರಡನೇ ಆದ್ಯತೆ. ಅತ್ಯಂತ ಪ್ರಬಲವಾದ, ದೋಷರಹಿತ, ಅಕ್ರಮ ಎಸಗಲು ಸಾಧ್ಯವಾಗದ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲೂ ನಾವು ಗಮನ ನೀಡಲಿದ್ದೇವೆ. ವಿದ್ಯಾರ್ಥಿಗಳಿಗೆ ಸುಲಭವಾಗಿರುವ ಮತ್ತು ಹೆಚ್ಚು ಒತ್ತಡ ನೀಡದ ವ್ಯವಸ್ಥೆಯನ್ನು ರೂಪಿಸಲೂ ಒತ್ತು ಹರಿಸಲಿದ್ದೇವೆ' ಎಂದು ಅವರು ವಿವರಿಸಿದರು.

ಮೊದಲ ಸಭೆ: ಈ ಮಧ್ಯೆ, ನೀಟ್–ಯುಜಿ, ಯುಜಿಸಿ–ನೆಟ್ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮ ನಡೆದಿರುವ ಆರೋಪಗಳ ನಡುವೆಯೇ, ಏಳು ಸದಸ್ಯರನ್ನೊಳಗೊಂಡ ರಾಧಾಕೃಷ್ಣನ್ ನೇತೃತ್ವದ ಸಮಿತಿಯು ಸೋಮವಾರ ಸಂಜೆ ತನ್ನ ಮೊದಲ ಸಭೆ ನಡೆಸಿತು. ಸಭೆಯಲ್ಲಿ ಪರೀಕ್ಷೆಗಳಿಗೆ ಸಂಬಂಧಿಸಿದ ಸದ್ಯದ ಸ್ಥಿತಿ ಹಾಗೂ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಎದುರಿಸುತ್ತಿರುವ ಸವಾಲುಗಳ ಬಗ್ಗೆ ಅವಲೋಕನ ನಡೆಸಲಾಗಿದೆ ಎಂದು ಸಭೆಯಲ್ಲಿ ಭಾಗವಹಿಸಿದ್ದ ಮೂಲಗಳು ತಿಳಿಸಿವೆ.

'ಪರೀಕ್ಷೆ ನಡೆಸುವಾಗ ಅನುಸರಿಸಲಾಗುವ ಪ್ರಕ್ರಿಯೆಗಳು ಮತ್ತು ಎನ್‌ಟಿಎ ಕಾರ್ಯವಿಧಾನದ ಬಗ್ಗೆ ಸಮಿತಿ ಮಾಹಿತಿ ಪಡೆಯಿತು. ಎನ್‌ಟಿಎ ನಡೆಸುವ ಹಲವು ಪರೀಕ್ಷೆಗಳ ಕುರಿತು ಮತ್ತು ಪ್ರತಿ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ಸಂಖ್ಯೆಗೆ ಸಂಬಂಧಿಸಿದ ಅಂಕಿ ಅಂಶಗಳನ್ನು ಪರಿಶೀಲಿಸಿತು' ಎಂದು ಮೂಲವೊಂದು ತಿಳಿಸಿದೆ.

'ಸಾಂಪ್ರದಾಯಿಕ ವಿಧಾನದಲ್ಲಿ (ಪೆನ್ನು ಮತ್ತು ಕಾಗದ ಬಳಸಿ) ಮಾಡುವ ಪರೀಕ್ಷೆಗಳು ಮತ್ತು ಕಂಪ್ಯೂಟರ್ ಆಧಾರಿತವಾಗಿ ನಡೆಸಲಾಗುವ ಪರೀಕ್ಷೆಗಳ ಬಗ್ಗೆ ಮಾಹಿತಿ ಪಡೆದ ಸಮಿತಿಯು, ಎರಡೂ ವಿಧಾನಗಳ ನಡುವಿನ ವ್ಯತ್ಯಾಸದ ಬಗ್ಗೆಯೂ ತಿಳಿದುಕೊಂಡಿತು' ಎಂದು ಮೂಲ ಹೇಳಿದೆ.

ಸೈಬರ್ ಭದ್ರತೆ ವಿಚಾರ, ಡಾರ್ಕ್‌ನೆಟ್‌ನಿಂದ ಎದುರಾಗಿರುವ ಸವಾಲುಗಳ ಬಗ್ಗೆಯೂ ಸಮಿತಿಯ ಸದಸ್ಯರು ಚರ್ಚಿಸಿದ್ದಾರೆ ಎಂದು ಹೇಳಲಾಗಿದೆ.

ರಾಧಾಕೃಷ್ಣನ್ ನೇತೃತ್ವದ ಸಮಿತಿಯು ಮಾಡಲಿರುವ ಸುಧಾರಣಾ ಶಿಫಾರಸುಗಳನ್ನು ಮುಂದಿನ ಸಾಲಿನ ಪರೀಕ್ಷೆಗಳಲ್ಲಿ ಅಳವಡಿಸಿಕೊಳ್ಳುವ ಸಾಧ್ಯತೆ ಇದೆ ಎಂದು ಶಿಕ್ಷಣ ಸಚಿವಾಲಯದ ಅಧಿಕಾರಿಗಳು ಹೇಳಿದ್ದಾರೆ.

ನೀಟ್ ಅಕ್ರಮ: ಶಿಕ್ಷಕ ಪೊಲೀಸ್ ಕಸ್ಟಡಿಗೆ

ಲಾತೂರ್ (ಮಹಾರಾಷ್ಟ್ರ, ಪಿಟಿಐ): ನೀಟ್–ಯುಜಿ ಅಕ್ರಮ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರದ ಭಯೋತ್ಪಾದನೆ ನಿಗ್ರಹ ಪಡೆ ಬಂಧಿಸಿದ್ದ ಜಿಲ್ಲಾ ಪರಿಷತ್ ಶಾಲೆಯ ಶಿಕ್ಷಕರೊಬ್ಬರನ್ನು ಇಲ್ಲಿನ ನ್ಯಾಯಾಲಯ ಜುಲೈ 2ರವರೆಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ.

ಪ್ರಕರಣದ ಬಗ್ಗೆ ವಿಚಾರಣೆ ನಡೆಸಲು ಶಿಕ್ಷಕ ಸಂಜಯ್ ಜಾಧವ್ ಅವರನ್ನು ಪೊಲೀಸರು ಸೋಮವಾರ ವಶಕ್ಕೆ ಪಡೆದಿದ್ದರು. ಮಂಗಳವಾರ ಅವರನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಯಿತು.

ಮೇ 5ರಂದು ನಡೆದಿದ್ದ 'ನೀಟ್'ನಲ್ಲಿ ಹಣ ನೀಡಲು ಸಿದ್ಧವಿದ್ದ ಅಭ್ಯರ್ಥಿಗಳಿಗೆ ನೆರವಾಗುವುದಕ್ಕಾಗಿ ಅಕ್ರಮ ಜಾಲವೊಂದನ್ನು ನಿರ್ವಹಿಸುತ್ತಿದ್ದ ಆರೋಪದಲ್ಲಿ ಎಟಿಎಸ್ ಪೊಲೀಸರು ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿದ್ದರು. ಈ ಪೈಕಿ ಜಿಲ್ಲಾ ಪರಿಷತ್ ಶಾಲೆಯ ಮುಖ್ಯ ಶಿಕ್ಷಕ ಜಲೀಲ್ ಖಾನ್ ಉಮರ್ ಖಾನ್ ಪಠಾಣ್ ಮತ್ತು ಜಾಧವ್ ಅವರನ್ನು ಪೊಲೀಸರು ಬಂಧಿಸಿದ್ದಾರೆ. ಇನ್ನಿಬ್ಬರು ತಲೆಮರೆಸಿಕೊಂಡಿದ್ದಾರೆ.

ಪಠಾಣ್ ಅವರನ್ನು ಸೋಮವಾರ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಅವರನ್ನೂ ಜುಲೈ 2ರವರೆಗೆ ಪೊಲೀಸ್ ಕಸ್ಟಡಿಗೆ ನ್ಯಾಯಾಲಯ ಒಪ್ಪಿಸಿತ್ತು.

ನೀಟ್ ರದ್ದತಿಗೆ ಎಸ್‌ಪಿ ಆಗ್ರಹ (ಲಖನೌ ವರದಿ): ನೀಟ್–ಯುಜಿ ಅಕ್ರಮದ ವಿರುದ್ಧ ಮಂಗಳವಾರ ಲಖನೌದಲ್ಲಿ ಪ್ರತಿಭಟನೆ ನಡೆಸಿರುವ ಸಮಾಜವಾದಿ ಪಕ್ಷದ ಯುವ ಘಟಕ, ನೀಟ್ ರದ್ದು ಮಾಡಬೇಕು ಮತ್ತು ಶಿಕ್ಷಣ ಸಚಿವ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದೆ.

ಪಕ್ಷದ ಪ್ರಧಾನ ಕಚೇರಿಯಿಂದ ಮೆರವಣಿಗೆ ಆರಂಭಿಸಿದ ಪ್ರತಿಭಟನಾಕಾರರು ಕೇಂದ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಮೆರವಣಿಗೆ ತಡೆಯಲು ವಿಕ್ರಮಾದಿತ್ಯ ಮಾರ್ಗದಲ್ಲಿ ಪೊಲೀಸರು ಹಾಕಿದ್ದ ಬ್ಯಾರಿಕೇಡ್‌ಗಳನ್ನು ಹತ್ತಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನಾಕಾರರನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರವನ್ನು ನಡೆಸಿದರಲ್ಲದೆ, ಎಲ್ಲರನ್ನೂ ವಶಕ್ಕೆ ಪಡೆದರು.

ಪರೀಕ್ಷೆ ಅಕ್ರಮ: ಜೀವಾವಧಿ ಶಿಕ್ಷೆ, ₹1 ಕೋಟಿ ದಂಡ

ಪ್ರಜಾವಾಣಿ ವಾರ್ತೆ

ಲಖನೌ: ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ತಡೆಯುವುದಕ್ಕಾಗಿ ಉತ್ತರ ಪ್ರದೇಶದಲ್ಲಿ ಕಠಿಣ ಕಾನೂನು ಜಾರಿಗೆ ತರಲು ರಾಜ್ಯ ಸರ್ಕಾರ ಮುಂದಾಗಿದೆ.

ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳಲ್ಲಿ ಅಪರಾಧ ಸಾಬೀತಾದರೆ ತಪ್ಪಿತಸ್ಥರಿಗೆ ಜೀವಾವಧಿ ಶಿಕ್ಷೆಯ ಜೊತೆಗೆ ₹1 ಕೋಟಿಯವರೆಗೆ ದಂಡ ವಿಧಿಸುವ ಕಾಯ್ದೆ ಜಾರಿಗೆ ಆದಿತ್ಯನಾಥ್ ಸರ್ಕಾರ ನಿರ್ಧರಿಸಿದ್ದು, ಮಂಗಳವಾರ ನಡೆದ ಸಚಿವ ಸಂಪುಟ ಸಭೆಯು 'ಉತ್ತರ ಪ್ರದೇಶ ಸಾರ್ವಜನಿಕ ಪರೀಕ್ಷೆಗಳು (ಅಕ್ರಮ ತಡೆ) ಸುಗ್ರೀವಾಜ್ಞೆ–2024'ಕ್ಕೆ ಅನುಮೋದನೆ ನೀಡಿದೆ.

ಪ್ರಸ್ತುತ ವಿಧಾನಸಭಾ ಅಧಿವೇಶನ ನಡೆಯದಿರುವುದರಿಂದ ಕಾಯ್ದೆ ಜಾರಿಗಾಗಿ ಸುಗ್ರೀವಾಜ್ಞೆ ಹೊರಡಿಸಲಾಗಿದೆ ಎಂದು ಸರ್ಕಾರದ ಮೂಲಗಳು ಹೇಳಿವೆ.

'ಸುಗ್ರೀವಾಜ್ಞೆಯ ನಿಯಮಗಳು, ನಾಗರಿಕ ಸೇವೆಗಳ ನೇಮಕಾತಿ ಪರೀಕ್ಷೆಗಳು, ಹುದ್ದೆ ಕಾಯಂ ಅಥವಾ ಬಡ್ತಿ ಪರೀಕ್ಷೆಗಳು, ಪದವಿ, ಡಿಪ್ಲೊಮಾ ಹಾಗೂ ಇತರ ಕೋರ್ಸ್‌ಗಳ ಪ್ರವೇಶ ಪರೀಕ್ಷೆಗಳಿಗೆ ಅನ್ವಯವಾಗುತ್ತವೆ' ಎಂದು ಸರ್ಕಾರದ ವಕ್ತಾರರೊಬ್ಬರು ಹೇಳಿದ್ದಾರೆ.

ಪೋಶೆ ಪ್ರಕರಣ: ಬಿಡುಗಡೆಯಾದ ಬಾಲಕ

ಮುಂಬೈ (ಪಿಟಿಐ): ಪೋಶೆ ಕಾರು ಅಪಘಾತದಲ್ಲಿ ಕಾನೂನು ಸಂಘರ್ಷಕ್ಕೆ ಒಳಗಾಗಿರುವ 17 ವರ್ಷ ವಯಸ್ಸಿನ ಬಾಲಕನನ್ನು ಕೂಡಲೇ ಬಾಲಮಂದಿರದಿಂದ ಬಿಡುಗಡೆ ಮಾಡುವಂತೆ ಬಾಂಬೆ ಹೈಕೋರ್ಟ್ ಮಂಗಳವಾರ ಆದೇಶ ಹೊರಡಿಸಿದ್ದು, ಬಾಲಕ ಮನೆಗೆ ಮರಳಿದ್ದಾನೆ.

ಬಾಲಕನನ್ನು ಬಾಲಮಂದಿರದಲ್ಲಿ ಇರಿಸಿದ್ದ ಬಾಲ ನ್ಯಾಯಮಂಡಳಿ (ಜೆಜೆಬಿ) ನೀಡಿದ್ದ ಆದೇಶವನ್ನು ನ್ಯಾಯಮೂರ್ತಿಗಳಾದ ಭಾರತಿ ಡಾಂಗ್ರೆ ಮತ್ತು ಮಂಜುಷಾ ದೇಶಪಾಂಡೆ ಅವರನ್ನೊಳಗೊಂಡ ವಿಭಾಗೀಯ ಪೀಠವು ರದ್ದುಗೊಳಿಸಿದೆ.

'ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ಪುರಸ್ಕರಿಸಿದ್ದೇವೆ. ಕಾನೂನು ಸಂಘರ್ಷಕ್ಕೊಳಗಾಗಿರುವ ಬಾಲಕನನ್ನು ಅರ್ಜಿದಾರರ (ಸೋದರ ಸಂಬಂಧಿ) ಪಾಲನೆಯಲ್ಲಿ ಇರಿಸಿದ್ದೇವೆ' ಎಂದು ಪೀಠ ಹೇಳಿದೆ.

'ರಾಮಮಂದಿರ ಸೋರುತ್ತಿಲ್ಲ'

ಅಯೋಧ್ಯೆ (ಪಿಟಿಐ): ರಾಮಮಂದಿರ ಸೋರುತ್ತಿದೆ ಎನ್ನುವ ದೇವಸ್ಥಾನದ ಪ್ರಧಾನ ಅರ್ಚಕರ ಆರೋಪವನ್ನು ರಾಮಮಂದಿರ ನಿರ್ಮಾಣ ಸಮಿತಿಯ ಅಧ್ಯಕ್ಷ ನೃಪೇಂದ್ರ ಮಿಶ್ರಾ ಮಂಗಳವಾರ ನಿರಾಕರಿಸಿದ್ದಾರೆ.

'ದೇವಸ್ಥಾನದಲ್ಲಿ ನೀರು ಸೋರುತ್ತಿಲ್ಲ. ಆದರೆ, ವಿದ್ಯುತ್ ತಂತಿಗಳನ್ನು ಅಳವಡಿಸಲು ಜೋಡಿಸಲಾಗಿರುವ ಪೈಪ್‌ಗಳಿಂದ ಮಳೆ ನೀರು ಹೊರಬರುತ್ತಿದೆ' ಎಂದು ಹೇಳಿದ್ದಾರೆ.

'ನಾನೇ ಖುದ್ದಾಗಿ ಕಟ್ಟಡವನ್ನು ಪರಿಶೀಲಿಸಿದ್ದೇನೆ. ಎರಡನೇ ಮಹಡಿಯ ನಿರ್ಮಾಣ ಕಾರ್ಯ ನಡೆಯುತ್ತಿದ್ದು, ಅದು ಪೂರ್ಣಗೊಂಡ ನಂತರ ಮಳೆ ನೀರು ದೇವಸ್ಥಾನದ ಒಳಗೆ ಬರುವುದು ನಿಲ್ಲುತ್ತದೆ' ಎಂದು ತಿಳಿಸಿದರು.

ಪ್ರಶ್ನೆಪತ್ರಿಕೆ ಸೋರಿಕೆ: ಆರೋಪಿ ಇ.ಡಿ ವಶಕ್ಕೆ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರ ಸೇವಾ ಆಯ್ಕೆ ಮಂಡಳಿಯ (ಜೆಕೆಎಸ್‌ಎಸ್‌ಬಿ) ಸಬ್ ಇನ್‌ಸ್ಪೆಕ್ಟರ್ ನೇಮಕಾತಿ ಪರೀಕ್ಷೆ– 2022 ಹಗರಣದ ಪ್ರಮುಖ ಆರೋಪಿ ಯತಿನ್ ಯಾದವ್ ಅವರನ್ನು ಏಳು ದಿನಗಳು ಜಾರಿ ನಿರ್ದೇಶನಾಲಯದ (ಇ.ಡಿ) ವಶಕ್ಕೆ ನೀಡಿ ಇಲ್ಲಿಯ ವಿಶೇಷ ನ್ಯಾಯಾಲಯವೊಂದು ಆದೇಶ ಹೊರಡಿಸಿದೆ.

ಹರಿಯಾಣದ ರೆವೇರಿ ಯತಿನ್ ಅವರನ್ನು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿ ಸೋಮವಾರ ಬಂಧಿಸಲಾಗಿತ್ತು. ಇದಕ್ಕೂ ಮುಂಚೆ ಯತಿನ್‌ರ ಬ್ಯಾಂಕ್ ಖಾತೆಗಳನ್ನು ಇ.ಡಿ ಮುಟ್ಟುಗೋಲು ಹಾಕಿಕೊಂಡಿತ್ತು.

ಕೇಜ್ರಿವಾಲ್ ಜಾಮೀನಿಗೆ ಹೈಕೋರ್ಟ್ ತಡೆ

ದೆಹಲಿ ಅಬಕಾರಿ ನೀತಿ ಹಗರಣ: ವಿಚಾರಣಾ ಕೋರ್ಟ್ ಆದೇಶ ಅನೂರ್ಜಿತ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದ ಜತೆ ನಂಟಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ವಿಚಾರಣಾ ನ್ಯಾಯಾಲಯ ನೀಡಿದ್ದ ಜಾಮೀನು ಆದೇಶಕ್ಕೆ ದೆಹಲಿ ಹೈಕೋರ್ಟ್ ಮಂಗಳವಾರ ತಡೆ ನೀಡಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ ಮುಂದಿಟ್ಟ ಸಾಕ್ಷ್ಯಾಧಾರಗಳನ್ನು ಪರಿಶೀಲಿಸುವಲ್ಲಿ ವಿಚಾರಣಾ ನ್ಯಾಯಾಲಯ ವಿಫಲವಾಗಿದೆ ಮತ್ತು ಎಎಪಿ ನಾಯಕನಿಗೆ ಜಾಮೀನು ಮಂಜೂರು ಮಾಡುವಾಗ ಈ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ ಎಂದು ನ್ಯಾಯಮೂರ್ತಿ ಸುಧೀರ್ ಕುಮಾರ್ ಜೈನ್ ಅವರ ರಜಾಕಾಲದ ಪೀಠದ ತಿಳಿಸಿದೆ.

ವಿಚಾರಣಾ ನ್ಯಾಯಾಲಯವು ಇ.ಡಿಗೆ ವಾದಿಸಲು ಸಾಕಷ್ಟು ಸಮಯಾವಕಾಶವನ್ನು ನೀಡಬೇಕಿತ್ತು ಎಂದ ನ್ಯಾಯಮೂರ್ತಿ, ಜಾಮೀನು ಆದೇಶಕ್ಕೆ ತಡೆ ನೀಡಿದರು.

ಕೇಜ್ರಿವಾಲ್ ಅವರಿಗೆ ವಿಚಾರಣಾ ನ್ಯಾಯಾಲಯವು ಜೂನ್ 20ರಂದು ಜಾಮೀನು ಮಂಜೂರು ಮಾಡಿತ್ತು. ₹1 ಲಕ್ಷ ವೈಯಕ್ತಿಕ ಬಾಂಡ್ ಮೇಲೆ ಅವರನ್ನು ಬಿಡುಗಡೆ ಮಾಲು ಆದೇಶಿಸಿತ್ತು.

ಈ ಆದೇಶವನ್ನು ಪ್ರಶ್ನಿಸಿ ಜಾರಿ ನಿರ್ದೇಶನಾಲಯ ಮರು ದಿನವೇ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತು. ವಿಚಾರಣಾ ನ್ಯಾಯಾಲಯದ ಆದೇಶವು ತರ್ಕಕ್ಕೆ ವಿರುದ್ಧವಾಗಿದ್ದು, ಏಕಪಕ್ಷೀಯ ಹಾಗೂ ತಪ್ಪಿನಿಂದ ಕೂಡಿದೆ. ಅಪ್ರಸ್ತುತ ಸಂಗತಿಗಳ ಆಧಾರದಲ್ಲಿ ಜಾಮೀನು ನೀಡಲಾಗಿದೆ ಎಂದು ವಾದಿಸಿತು. ಆಗ ಪೀಠವು ಜಾಮೀನು ಆದೇಶಕ್ಕೆ ಮಧ್ಯಂತರ ತಡೆ ನೀಡಿತ್ತು.

ದೆಹಲಿ ಹೈಕೋರ್ಟ್ ಆದೇಶವನ್ನು ಒಪ್ಪುವುದಿಲ್ಲ. ಅದನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸುವುದಾಗಿ ಎಎಪಿ ಹೇಳಿದೆ.

ನೀರಿಗಾಗಿ ನಿರಶನ: ದೆಹಲಿ ಸಚಿವೆ ಆತಿಶಿ ಆಸ್ಪತ್ರೆಗೆ ದಾಖಲು

ನವದೆಹಲಿ (ಪಿಟಿಐ): ದೆಹಲಿಗೆ ನ್ಯಾಯಬದ್ಧವಾಗಿ ದೊರಕಬೇಕಿರುವ ನೀರು ನೀಡಬೇಕು ಎಂದು ಆಗ್ರಹಿಸಿ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ನಡೆಸುತ್ತಿರುವ ದೆಹಲಿ ಜಲ ಸಚಿವೆ ಆತಿಶಿ ಅವರ ಆರೋಗ್ಯ ಹದಗೆಟ್ಟಿದ್ದು, ಅವರನ್ನು ಮಂಗಳವಾರ ಬೆಳಿಗ್ಗೆ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಎಎಪಿ ತಿಳಿಸಿದೆ. ಈ ಮೂಲಕ ಅವರ ಪ್ರತಿಭಟನೆಯೂ ಅಂತ್ಯಗೊಂಡಿತು.

ಸಚಿವರನ್ನು ಇಲ್ಲಿನ ಲೋಕನಾಯಕ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರು ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಎಎಪಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

'ಸಚಿವೆ ಆತಿಶಿ ಅವರ ರಕ್ತದಲ್ಲಿನ ಸಕ್ಕರೆ ಮಟ್ಟ ಮಧ್ಯರಾತ್ರಿ 43 ಎಂ.ಜಿ./ಡಿ.ಎಲ್‌ಗೆ ಇಳಿದಿತ್ತು. ಅದು ನಸುಕಿನ 3 ಗಂಟೆಗೆ 36 ಎಂ.ಜಿ./ಡಿ.ಎಲ್‌ಗೆ ಕುಸಿದಿತ್ತು. ಹೀಗಾಗಿ ವೈದ್ಯರ ಸಲಹೆ ಮೇರೆಗೆ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು' ಎಂದು ಪಕ್ಷ ತಿಳಿಸಿದೆ.

ಆರೋಗ್ಯ ಹದಗೆಟ್ಟ ಕಾರಣ ದೆಹಲಿ ಜಲಸಚಿವೆ ಆತಿಶಿ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು –ಪಿಟಿಐ

ಜಾಮೀನು ಅರ್ಜಿ ಅನಗತ್ಯ ಮುಂದೂಡಿಕೆ ಸಲ್ಲ: 'ಸುಪ್ರೀಂ'

ನವದೆಹಲಿ (ಪಿಟಿಐ): ಜಾಮೀನು ವಿಷಯಗಳನ್ನು ಅನಗತ್ಯವಾಗಿ ಮುಂದೂಡಬಾರದು ಎಂದು ತಿಳಿಸಿರುವ ಸುಪ್ರೀಂ ಕೋರ್ಟ್, ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜೈಲಿನಲ್ಲಿರುವ ಎಎಪಿ ನಾಯಕ ಸತ್ಯೇಂದ್ರ ಜೈನ್ ಅವರ ಜಾಮೀನು ಅರ್ಜಿಯನ್ನು ದೆಹಲಿ ಹೈಕೋರ್ಟ್ ಮುಂದಿನ ವಿಚಾರಣೆಯಲ್ಲಿ ನಿರ್ಧರಿಸುತ್ತದೆ ಎಂದು ಆಶಯ ವ್ಯಕ್ತಪಡಿಸಿತು.

ಜೈನ್ ಅವರ ಜಾಮೀನು ಅರ್ಜಿಯ ವಿಚಾರಣೆಯನ್ನು ಆರು ವಾರಗಳ ಕಾಲ ಮುಂದೂಡಿದ್ದ ಹೈಕೋರ್ಟ್ ತೀರ್ಪಿನ ವಿರುದ್ಧ ಸಲ್ಲಿಕೆಯಾಗಿರುವ ಅರ್ಜಿಯ ವಿಚಾರಣೆಯನ್ನು ಮಂಗಳವಾರ ನಡೆಸಿದ ನ್ಯಾಯಮೂರ್ತಿಗಳಾದ ಮನೋಜ್ ಮಿಶ್ರಾ ಮತ್ತು ಎಸ್.ವಿ.ಎನ್. ಭಟ್ಟಿ ಅವರ ಪೀಠವು ಈ ಕುರಿತು ಅಭಿಪ್ರಾಯ ವ್ಯಕ್ತಪಡಿಸಿತು.

ದೆಹಲಿ ಹೈಕೋರ್ಟ್, ಜೈನ್ ಅವರ ಜಾಮೀನು ಅರ್ಜಿಯನ್ನು ಜುಲೈ 9ರಂದು ವಿಚಾರಣೆಗೆ ಪಟ್ಟಿ ಮಾಡಿದೆ.

ಜೈನ್ ಅವರ ಪರ ವಾದಿಸಿದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಅವರು, 'ಆರೋಪಿಯ ಜಾಮೀನಿನ ಹಕ್ಕನ್ನು ಮಣಿಸಲು ತನಿಖಾ ಸಂಸ್ಥೆಯು ಅಪೂರ್ಣ ಚಾರ್ಜ್‌ಶೀಟ್ ಸಲ್ಲಿಸಬಹುದೇ ಎಂಬ ಗಂಭೀರ ಪ್ರಶ್ನೆ ಈ ಪ್ರಕರಣದಿಂದ ಉದ್ಭವಿಸಿದೆ' ಎಂದು ಹೇಳಿದರು.

ಕಾನೂನಿಗೆ ಸಂಬಂಧಿಸಿದ ಇಂತಹದ್ದೇ ವಿಷಯವು ಸುಪ್ರೀಂ ಕೋರ್ಟ್‌ನ ತ್ರಿಸದಸ್ಯ ಪೀಠದ ಪರಿಗಣನೆಯಲ್ಲಿದ್ದು, ಜೈನ್ ಅವರ ಜಾಮೀನು ಅರ್ಜಿಯನ್ನೂ ಅದರೊಂದಿಗೆ ಜೋಡಿಸುವಂತೆ ರಜಾಕಾಲದ ಪೀಠವನ್ನು ಸಿಂಘ್ವಿ ಕೋರಿದರು.

'ಸುಪ್ರೀಂ ಕೋರ್ಟ್‌ನ ತ್ರಿಸದಸ್ಯ ಪೀಠವು ಕಾನೂನಿನ ಅಂಶವನ್ನು ಪರಿಗಣಿಸುತ್ತಿದೆ. ಹೀಗಿರುವಾಗ ದ್ವಿಸದಸ್ಯ ಪೀಠ ಅದನ್ನು ನಿಭಾಯಿಸುವುದು ಸೂಕ್ತವಲ್ಲ' ಎಂದ ಪೀಠವು, ಜಾಮೀನಿನ ವಿಷಯವನ್ನು ಹೈಕೋರ್ಟ್ ಮೊದಲಿಗೆ ನಿರ್ಧರಿಸಲಿ. ಹೈಕೋರ್ಟ್‌ನ ತೀರ್ಪು ವ್ಯತಿರಿಕ್ತ ಆಗಿದ್ದರೆ ಅರ್ಜಿದಾರರು ಪ್ರಶ್ನಿಸಬಹುದು ಎಂದು ಹೇಳಿತು.

ಒವೈಸಿ ಪ್ರಮಾಣ: ಕೋಲಾಹಲ

ನವದೆಹಲಿ (ಪಿಟಿಐ): ಲೋಕಸಭೆ ಸದಸ್ಯರಾಗಿ ಮಂಗಳವಾರ ಪ್ರಮಾಣ ವಚನ ಸ್ವೀಕರಿಸಿದ ಎಐಎಂಐಎಂ ನಾಯಕ ಅಸಾದುದ್ದೀನ್ ಒವೈಸಿ, ಪ್ಯಾಲೆಸ್ಟೀನ್ ಹೆಸರು ಪ್ರಸ್ತಾಪಿಸಿದ್ದು ಸದನದಲ್ಲಿ ಕೋಲಾಹಲ ಎಬ್ಬಿಸಿತು.

ಪ್ರಮಾಣವಚನ ಹೊರತುಪಡಿಸಿ ಬೇರೆ ಯಾವುದೇ ಮಾತುಗಳು ಕಡತಕ್ಕೆ ಹೋಗುವುದಿಲ್ಲ ಎಂದು ಈ ವೇಳೆ ಸ್ಪೀಕರ್ ಪೀಠ ತಿಳಿಸಿತು.

ಹೈದರಾಬಾದ್ ಕ್ಷೇತ್ರದಿಂದ ಐದನೇ ಬಾರಿಗೆ ಆಯ್ಕೆ ಆಗಿರುವ ಒವೈಸಿ ಅವರು ಉರ್ದು ಭಾಷೆಯಲ್ಲಿ ಪ್ರಮಾಣವಚನ ಸ್ವೀಕರಿಸಿದರು. ಇದಕ್ಕೂ ಮುನ್ನ ಅವರು ಪ್ರಾರ್ಥನೆಯನ್ನೂ ಪಠಿಸಿದರು.

ಪ್ರಮಾಣವಚನದ ಬಳಿಕ ಅವರು, ತೆಲಂಗಾಣ, ಬಾಬಾಸಾಹೇಬ್ ಭೀಮ ರಾವ್ ಅಂಬೇಡ್ಕರ್, ಮುಸ್ಲಿಮರಿಗಾಗಿ ಘೋಷಣೆಯನ್ನು ಕೂಗಿದರು.

ಪ್ಯಾಲೆಸ್ಟೀನ್ ಹೆಸರನ್ನೂ ಒವೈಸಿ ಈ ವೇಳೆ ಪ್ರಸ್ತಾಪಿಸಿದರು. ಇದಕ್ಕೆ ಆಡಳಿತ ಪಕ್ಷದ ಕೆಲವು ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಇದು ಕೆಲ ಕಾಲ ಕೋಲಾಹಲಕ್ಕೆ ಕಾರಣವಾಯಿತು.

ಈ ವೇಳೆ ಸ್ಪೀಕರ್ ಪೀಠದಲ್ಲಿದ್ದ ರಾಧಾ ಮೋಹನ್ ಸಿಂಗ್ ಅವರು, 'ಪ್ರಮಾಣ ವಚನದ ಹೊರತಾಗಿ ಯಾವುದೇ ಮಾತುಗಳು ದಾಖಲೆ ಆಗುವುದಿಲ್ಲ ಎಂದು ಹೇಳಿದರು. ನಂತರವೂ ಕೆಲಕ್ಷಣ ಗೊಂದಲ ಮುಂದುವರಿಯಿತು.

ಸಂಕ್ಷಿಪ್ತ ಸುದ್ದಿ

ನಾಲ್ವರ ವಿರುದ್ಧ ಚಾರ್ಜ್‌ಶೀಟ್

ನವದೆಹಲಿ(ಪಿಟಿಐ): ಅಸ್ಸಾಂನಲ್ಲಿ ಕಳೆದ ಡಿ. 14ರಂದು ನಡೆದಿದ್ದ ಸೇನೆ ಶಿಬಿರದ ಮೇಲಿನ ದಾಳಿ ಪ್ರಕರಣಕ್ಕೆ ಸಂಬಂಧಿಸಿ ನಾಲ್ವರು ಆರೋಪಿಗಳ ವಿರುದ್ಧ ಎನ್‌ಐಎ ಮಂಗಳವಾರ ಆರೋಪ ಪಟ್ಟಿ ಸಲ್ಲಿಸಿದೆ.

ಭಾರತ ವಿರೋಧಿ ಕಾರ್ಯಸೂಚಿ ಭಾಗವಾಗಿ ನಡೆಸಲಾಗಿತ್ತು ಎನ್ನಲಾದ ಈ ದಾಳಿಗೆ ಸಂಬಂಧಿಸಿ ಸಲ್ಲಿಸಲಾಗಿರುವ ಆರೋಪಪಟ್ಟಿಯಲ್ಲಿ, ಮ್ಯಾನ್ಮಾರ್ ಮೂಲದ ನಿಷೇಧಿತ ಯುಎಲ್‌ಎಫ್‌ಎ–ಐ ಸಂಘಟನೆಯ ಒಬ್ಬ ಸದಸ್ಯನ ಹೆಸರನ್ನು ಸಹ ಉಲ್ಲೇಖಿಸಲಾಗಿದೆ. ದ್ವಿಚಕ್ರ ವಾಹನದ ಮೇಲೆ ಬಂದಿದ್ದ, ನಿಷೇಧಿತ ಸಂಘಟನೆಯ ಇಬ್ಬರು ಸದಸ್ಯರು, ಅಸ್ಸಾಂನ ಜೋರ್ಹಟ್ ಜಿಲ್ಲೆಯ ಲಿಚುಬಾರಿ ಎಂಬಲ್ಲಿ ಸೇನೆಯ ಶಿಬಿರದ ಮೇಲೆ ಗ್ರೆನೇಡ್‌ಗಳನ್ನು ಎಸೆದಿದ್ದರು.

ಮಸೀದಿ ಭಾಗಶಃ ನೆಲಸಮ

ನವದೆಹಲಿ (ಪಿಟಿಐ): ದೆಹಲಿಯ ವಾಯವ್ಯ ಭಾಗದ ಮಂಗೋಲ್‌ಪುರಿಯಲ್ಲಿ ಅನಧಿಕೃತ ನಿರ್ಮಾಣ ಆರೋಪದಡಿ ಮಸೀದಿ ಸಂಕೀರ್ಣವನ್ನು ಭಾಗಶಃ ನೆಲಸಮಗೊಳಿಸಲಾಯಿತು. ನೆಲಸಮದ ಕಾರ್ಯ ವಿರೋಧಿಸಿ ಸ್ಥಳೀಯರು ಪ್ರತಿಭಟಿಸಿದ್ದು, ಬಿಗಿ ಭದ್ರತೆ ಏರ್ಪಡಿಸಲಾಗಿತ್ತು. ನೆಲಸಮ ಕಾರ್ಯಾಚರಣೆಯನ್ನು ದೆಹಲಿ ಮಹಾನಗರಪಾಲಿಕೆ ಕೈಗೊಂಡಿತು.

ಆದರೆ, ಈ ತನ್ನ ಕಾರ್ಯಾಚರಣೆ ಕುರಿತು ಸದ್ಯಕ್ಕೆ ಅಧಿಕೃತವಾಗಿ ಹೇಳಿಕೆಯನ್ನು ಬಿಡುಗಡೆ ಮಾಡಿಲ್ಲ.

ವಯನಾಡ್: ಸ್ಫೋಟಕ ಪತ್ತೆ

ವಯನಾಡ್ (ಪಿಟಿಐ): ವಯನಾಡ್ ಜಿಲ್ಲೆಯಲ್ಲಿ ಸಶಸ್ತ್ರ ಮಾವೋವಾದಿಗಳು ಇದ್ದಾರೆ ಎಂಬ ವರದಿಗಳ ನಡುವೆಯೇ, ಜಿಲ್ಲೆಯ ಹಳ್ಳಿಯೊಂದರಲ್ಲಿ ಹುದುಗಿಸಿ ಇಟ್ಟಿದ್ದ ಸ್ಫೋಟಕ ಪತ್ತೆಯಾಗಿದೆ.

ತಳಪ್ಪುಳ ಪೊಲೀಸ್ ಠಾಣಾ ವ್ಯಾಪ್ತಿಯ ಮಕ್ಕಿಮಾಲಾ ಪ್ರದೇಶದಲ್ಲಿ ಸ್ಫೋಟಕ ಪತ್ತೆಯಾಗಿದೆ. ಕೇರಳ ಪೊಲೀಸ್ ಇಲಾಖೆಯ ಥಂಡರ್‌ಬೋಲ್ಟ್ ಪಡೆಯು ಕೂಂಬಿಂಗ್ ಕಾರ್ಯಾಚರಣೆ ನಡೆಸುತ್ತಿದ್ದಾಗ ಇದು ಪತ್ತೆಯಾಗಿದೆ. ಸ್ಫೋಟಕವನ್ನು ನಿಷ್ಕ್ರಿಯಗೊಳಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಅಸ್ಸಾಂಜೆ ಬಿಡುಗಡೆ

ಲಂಡನ್ (ಪಿಟಿಐ): ಬೇಹುಗಾರಿಕೆ ಆರೋಪದಲ್ಲಿ ಅಮೆರಿಕಕ್ಕೆ ಹಸ್ತಾಂತರಿಸುವುದರ ವಿರುದ್ಧ ದಶಕದಿಂದ ಹೋರಾಟ ನಡೆಸುತ್ತಿದ್ದ ವಿಕಿಲೀಕ್ಸ್ ಸಂಸ್ಥಾಪಕ ಜೂಲಿಯನ್ ಅಸ್ಸಾಂಜೆ ಅವರು ಅಮೆರಿಕ ನ್ಯಾಯಾಂಗ ಇಲಾಖೆಯೊಂದಿಗಿನ ಒಪ್ಪಂದದ ಅನುಸಾರ ಜೈಲಿನಿಂದ ಬಿಡುಗಡೆಯಾಗಿ, ಆಸ್ಟ್ರೇಲಿಯಾಕ್ಕೆ ಮರಳಲಿದ್ದಾರೆ.

ಕೆನ್ಯಾ: ಸಂಸತ್‌ನ ಕೆಲ ಭಾಗಕ್ಕೆ ಬೆಂಕಿ

ನೈರೋಬಿ(ಕೆನ್ಯಾ) (ಎಪಿ, ಎಎಫ್‌ಪಿ): ಹೊಸ ತೆರಿಗೆ ಹಾಗೂ ವಿವಾದಾತ್ಮಕ ಹಣಕಾಸು ಮಸೂದೆ ವಿರೋಧಿಸಿ ಕೆನ್ಯಾದಲ್ಲಿ ಪ್ರತಿಭಟನೆ ಮುಂದುವರಿದಿದ್ದು, ಸಂಸತ್ ಭವನದ ಕೆಲ ಭಾಗಕ್ಕೆ ಮಂಗಳವಾರ ಬೆಂಕಿ ಬಿದ್ದಿದೆ.

ಸಂಸತ್‌ನೊಳಗೆ ನುಗ್ಗುತ್ತಿದ್ದ ಪ್ರತಿಭಟನಕಾರರನ್ನು ಚದುರಿಸಲು ಪೊಲೀಸರು ಗಾಳಿಯಲ್ಲಿ ಗುಂಡು ಸಿಡಿಸಿದರು.

ಪೊಲೀಸರು ಸಿಡಿಸಿದ ಗುಂಡಿಗೆ ಒಬ್ಬ ವ್ಯಕ್ತಿ ಮೃತಪಟ್ಟಿದ್ದಾನೆ ಎಂದು ಮಾನವ ಹಕ್ಕುಗಳ ಸಂಘಟನೆ ಆರೋಪಿಸಿದೆ.

ಬಾಹ್ಯಾಕಾಶ ಕ್ಷೇತ್ರದಲ್ಲಿ ಹೊಸ ಇತಿಹಾಸ ಬರೆದ ಚೀನಾ

ಚಂದ್ರನ ಕಲ್ಲು, ದೂಳು ಹೊತ್ತು ತಂದ ನೌಕೆ

ಬೀಜಿಂಗ್ (ಪಿಟಿಐ): ಬಾಹ್ಯಾಕಾಶ ಅಧ್ಯಯನ ಕ್ಷೇತ್ರದಲ್ಲಿ ಚೀನಾ ಹೊಸ ಇತಿಹಾಸ ಸೃಷ್ಟಿಸಿದೆ.

ಚಂದ್ರನ ದಕ್ಷಿಣ ಧ್ರುವ ಪ್ರದೇಶದಲ್ಲಿರುವ, ಭೂಮಿಯಿಂದ ನೇರವಾಗಿ ಕಾಣದ ಜಾಗದ ಅಧ್ಯಯನಕ್ಕಾಗಿ ಚೀನಾ ಕಳುಹಿಸಿದ್ದ ಚಾಂಗ್‌'ಇ–6 ನೌಕೆಯ ಕೋಶವು (ಮಾಡ್ಯೂಲ್) ಚಂದ್ರನ ಅಂಗಳದಿಂದ ದೂಳು, ಕಲ್ಲಿನ ಮಾದರಿಗಳನ್ನು ಹೊತ್ತು ಮಂಗಳವಾರ ಯಶಸ್ವಿಯಾಗಿ ಭೂಮಿಗೆ ಮರಳಿದೆ.

ಇಲ್ಲಿಯವರೆಗೂ ಯಾರಿಗೂ ತಲುಪಲು ಸಾಧ್ಯವಾಗದ (ಭೂಮಿಯಿಂದ ನೇರವಾಗಿ ಕಾಣದ) ಚಂದ್ರನ ಮೇಲ್ಮೈನಲ್ಲಿ ನೌಕೆಯನ್ನು ಇಳಿಸಿ, ಅಲ್ಲಿಂದ ಮಾದರಿಗಳನ್ನು ಭೂಮಿಗೆ ತರುವುದು ಚೀನಾದ ಮಹತ್ವಾಕಾಂಕ್ಷೆಯ ಯೋಜನೆಯಾಗಿತ್ತು. ಇದರಲ್ಲಿ ಅದು ಯಶಸ್ವಿಯಾಗಿದೆ.

ಉತ್ತರ ಚೀನಾದ ಮಂಗೋಲಿಯಾ ಸ್ವಾಯತ್ತ ಪ್ರದೇಶದ ಸಿಜಿವಾಂಗ್ ಬನ್ನಾರ್‌ನ ಪೂರ್ವ ನಿಗದಿತ ಸ್ಥಳದಲ್ಲಿ, ಮಂಗಳವಾರ ಸ್ಥಳೀಯ ಕಾಲಮಾನ ಮಧ್ಯಾಹ್ನ 2.07ಕ್ಕೆ ಚಂದ್ರನ ಅಂಗಳದ ಮಾದರಿಗಳನ್ನು ಹೊಂದಿದ್ದ ನೌಕೆಯ ಕೋಶವು ಯಶಸ್ವಿಯಾಗಿ ಭೂಮಿ ಸ್ಪರ್ಶಿಸಿತು.

ಚಂದ್ರನ ಅಂಗಳದ ಮಾದರಿಗಳನ್ನು ಹೊತ್ತು ಮಂಗಳವಾರ ಯಶಸ್ವಿಯಾಗಿ ಭೂಮಿಗೆ ಇಳಿದ ಚಾಂಗ್–ಇ ನೌಕೆಯ ಕೋಶವನ್ನು ಚೀನಾದ ವಿಜ್ಞಾನಿಗಳು ಪರಿಶೀಲಿಸಿದರು –ಎಎಫ್‌ಪಿ ಚಿತ್ರ

'ನೌಕೆಯ ಕೋಶವು ಸಹಜವಾಗಿ ಕಾರ್ಯನಿರ್ವಹಿಸುತ್ತಿದ್ದು, ಯೋಜನೆ ಸಂಪೂರ್ಣವಾಗಿ ಯಶಸ್ವಿಯಾಗಿದೆ' ಎಂದು ಚೀನಾದ ಬಾಹ್ಯಾಕಾಶ ಅಧ್ಯಯನ ಸಂಸ್ಥೆ ಸಿಎಸ್‌ಎಸ್‌ಎ ಹೇಳಿದೆ.

ಕಳೆದ ವರ್ಷದ ಆಗಸ್ಟ್‌ನಲ್ಲಿ ಭಾರತವು ಚಂದ್ರನ ದಕ್ಷಿಣ ಧ್ರುವದಲ್ಲಿ ಪ್ರಜ್ಞಾನ್ ರೋವರ್ ಅನ್ನು ಹೊತ್ತೊಯ್ದು 'ಚಂದ್ರಯಾನ–3' ನೌಕೆಯನ್ನು ಯಶಸ್ವಿಯಾಗಿ ಇಳಿಸಿದ ನಂತರ ಚೀನಾವು ಈ ಯೋಜನೆಗೆ ಚಾಲನೆ ನೀಡಿತ್ತು.

ಭೂಮಿಗೆ ನೇರವಾಗಿ ಕಾಣದ ಚಂದ್ರನ ಮೇಲ್ಮೈನಲ್ಲಿ ನೌಕೆಯನ್ನು ಇಳಿಸಿದ ಮೊದಲ ರಾಷ್ಟ್ರ ಎಂಬ ಹೆಗ್ಗಳಿಕೆ ಚೀನಾಕ್ಕಿದೆ. 2019ರಲ್ಲೂ ಅದು ಅಲ್ಲಿ ನೌಕೆಯನ್ನು ಇಳಿಸಿತ್ತು. ಚಂದ್ರನ ಈ ಭಾಗ ತುಂಬಾ ದೂರದಲ್ಲಿರುವುದರಿಂದ ಮತ್ತು ದೊಡ್ಡ ದೊಡ್ಡ ಕುಳಿಗಳು ಹೆಚ್ಚಿದ್ದು, ಸಪಾಟಾದ ಪ್ರದೇಶ ಕಡಿಮೆ ಇರುವುದರಿಂದ ಅಲ್ಲಿಗೆ ತಲುಪುವುದು ತಾಂತ್ರಿಕವಾಗಿ ಹೆಚ್ಚು ಸವಾಲಿನಿಂದ ಕೂಡಿದೆ.

2 ಕೆ.ಜಿಯಷ್ಟು ಕಲ್ಲು, ದೂಳು

ಭೂಮಿಗೆ ಬಂದಿರುವ ನೌಕೆಯ ಘಟಕವು ಚಂದ್ರನ ನೆಲದಿಂದ 2 ಕೆಜಿಯಷ್ಟು ದೂಳು ಮತ್ತು ಕಲ್ಲುಗಳನ್ನು ತಂದಿರುವ ನಿರೀಕ್ಷೆ ಇದೆ.

'ನೌಕೆಯ ಘಟಕವನ್ನು ಏರ್‌ಲಿಫ್ಟ್ ಮಾಡಿ ಬೀಜಿಂಗ್‌ಗೆ ತೆಗೆದುಕೊಂಡು ಹೋಗಲಾಗುವುದು. ವಿಜ್ಞಾನಿಗಳು ಅದನ್ನು ತೆರೆದು ಚಂದ್ರನ ಮಾದರಿಗಳನ್ನು ಸಂಗ್ರಹಿಸಲಿದ್ದಾರೆ. ನಂತರ ಅದನ್ನು ವಿಶ್ಲೇಷಣೆಗೆ ಒಳಪಡಿಸಲಿದ್ದಾರೆ. ಆ ಬಳಿಕ, ಮಾದರಿಗಳನ್ನು ಅಂತರರಾಷ್ಟ್ರೀಯ ವಿಜ್ಞಾನಿಗಳ ಅಧ್ಯಯನಕ್ಕೂ ನೀಡಲಾಗುವುದು' ಎಂದು ಚೀನಾದ ಬಾಹ್ಯಾಕಾಶ ಸಂಸ್ಥೆ ಹೇಳಿದೆ.

ಮೇ 3ರಿಂದ ಜೂನ್ 25ರವರೆಗೆ...

ಆರ್ಬಿಟರ್, ರಿಟರ್ನರ್ (ಭೂಮಿಗೆ ಮರಳುವ ನೌಕೆ), ಲ್ಯಾಂಡರ್ ಮತ್ತು ಅಸೆಂಡರ್ (ಚಂದ್ರನ ಅಂಗಳದಿಂದ ಮಾದರಿಯನ್ನು ಮೇಲಕ್ಕೆ ತರುವ ಸಾಧನ) ಹೊಂದಿದ್ದ ಚಾಂಗ್‌'ಇ–6 ನೌಕೆಯನ್ನು ಮೇ 3ರಂದು ಉಡಾವಣೆ ಮಾಡಲಾಗಿತ್ತು.

ಚಂದ್ರನ ದಕ್ಷಿಣ ಧ್ರುವದ ಏಟ್‌ಕಿನ್ (ಎಸ್‌ಪಿಎ) ಕುಳಿಯಲ್ಲಿ ಜೂನ್ 2ರಂದು ಲ್ಯಾಂಡರ್–ಅಸೆಂಡರ್ ಸಂಯೋಜಿತ ಘಟಕ ಯಶಸ್ವಿಯಾಗಿ ಇಳಿದಿತ್ತು. 4ರಂದು ಚಂದ್ರನ ಮಾದರಿಗಳೊಂದಿಗೆ ಮೇಲಕ್ಕೆ ಚಿಮ್ಮಿದ್ದ ಅಸೆಂಡರ್, 6ರಂದು ಚಂದ್ರನ ಕಕ್ಷೆ ಪ್ರವೇಶಿಸಿತ್ತು. ಅಲ್ಲಿ ಆರ್ಬಿಟರ್ ಮತ್ತು ರಿಟರ್ನರ್ ಒಳಗೊಂಡಿದ್ದ ಘಟಕದೊಂದಿಗೆ ಕೂಡಿಕೊಂಡಿತ್ತು. ಬಳಿಕ ಚಂದ್ರನ ಮಾದರಿಗಳನ್ನು ರಿಟರ್ನರ್‌ಗೆ ವರ್ಗಾಯಿಸಿತ್ತು.

ಆರ್ಬಿಟರ್–ರಿಟರ್ನರ್ ಸಂಯೋಜಿತ ಘಟಕವು 13 ದಿನಗಳ ಕಾಲ ಚಂದ್ರನ ಕಕ್ಷೆಯಲ್ಲಿ ಸುತ್ತುತ್ತಾ ನಂತರ ಭೂಮಿಯತ್ತ ಹೊರಟಿತ್ತು.

ಉದ್ಯೋಗ ವಾಣಿ

NATIONAL ASSESSMENT AND ACCREDITATION COUNCIL(NAAC)
(An Autonomous Institution of the University Grants Commission)
PB. No. 1075, Nagarbhavi, Bengaluru- 560072.
Advertisement No. 02/NAAC/Admin/Rect/2024 Dt: 26/06/2024
VACANCY CIRCULAR
The National Assessment and Accreditation Council (NAAC) invites applications for Recruitment for the posts of Deputy Adviser (Deputation) and Assistant Adviser (Deputation) from Central/State Govt. Institutions. The details can be obtained from NAAC website www.naac.gov.in. The last date for submitting application is 16/08/2024.
Sd/- Administrative officer, NAAC, Bengaluru

ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್
ಬೆಂಗಳೂರು ಸಂಕೀರ್ಣ
ಏರೋಸ್ಪೇಸ್ ಡಿಫೆನ್ಸ್‌ನಲ್ಲಿ ಶ್ರೇಷ್ಠತೆ
(ಜಾಹೀರಾತು ಸಂಖ್ಯೆ: ENG/TBE/2024-02)
ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್), ನವರತ್ನ ಕೇಂದ್ರ ಸಾರ್ವಜನಿಕ ವಲಯದ ಉದ್ಯಮವಾಗಿದ್ದು, ಆಗ್ನೇಯ ಏಷ್ಯಾದ ಪ್ರಮುಖ ಏರೋನಾಟಿಕಲ್ ಉದ್ಯಮವಾಗಿದೆ. ಎಚ್‌ಎಎಲ್, ನಾನ್ ಎಕ್ಸಿಕ್ಯುಟಿವ್ ಕೇಡರ್‌ನಲ್ಲಿ ಅಧಿಕಾರಾವಧಿಯ ಆಧಾರದ ಮೇಲೆ ವಿವಿಧ ಗ್ರಾಹಕ ನೆಲೆಗಳು/ವಿಭಾಗಗಳಲ್ಲಿ ಹುದ್ದೆಗಳಿಗೆ ಸಿಬ್ಬಂದಿಯನ್ನು ಭರ್ತಿ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ:
• ಮಾಜಿ ಸೈನಿಕರು (ತಂತ್ರಜ್ಞರು), ಡಿಪ್ಲೊಮಾ ಇಂಜಿನಿಯರಿಂಗ್ (ತಾಂತ್ರಿಕತೆ)
• ಅಗ್ನಿಶಾಮಕ ಸಿಬ್ಬಂದಿ • ಭದ್ರತಾ ಸಿಬ್ಬಂದಿ
ವಯಸ್ಸು, ವಿದ್ಯಾರ್ಹತೆ, ಖಾಲಿ ಹುದ್ದೆಗಳ ಸಂಖ್ಯೆ, ಅನುಭವದ ಅವಶ್ಯಕತೆಗಳು, ಸಡಿಲಿಕೆಗಳು ಮತ್ತು ರಿಯಾಯಿತಿಗಳು, ಅರ್ಜಿ ಸಲ್ಲಿಸುವ ವಿಧಾನ, ಆಯ್ಕೆ ವಿಧಾನ, ಪಾವತಿ ಮತ್ತು ಭತ್ಯೆಗಳ, ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಇತ್ಯಾದಿ ವಿವರವಾದ ಜಾಹೀರಾತಿಗಾಗಿ ಎಚ್‌ಎಎಲ್ ವೆಬ್‌ಸೈಟ್ (www.hal-india.co.in) ಗೆ ಭೇಟಿ ನೀಡಿ. ಯಾವುದೇ ತಿದ್ದುಪಡಿ/ಅನುಬಂಧ ಏನಾದರೂ ಇದ್ದಲ್ಲಿ ಎಚ್‌ಎಎಲ್ ವೆಬ್‌ಸೈಟ್‌ನಲ್ಲಿ ಮಾತ್ರ ವಿವರ ನೀಡಲಾಗುತ್ತದೆ.

SECAB ASSOCIATION, BIJAPUR
MALIK SANDAL INSTITUTE OF ART AND ARCHITECTURE, VIJAYAPUR
Affiliated to Visheswarayya Technological University, Belaghavi
NAURASPUR, BAGALKOT ROAD, VIJAYAPUR
www.secab.org Mob: 91643 41969
RECRUITMENT
Invites applications for the following Posts

Sl. No.	Designation	Qualification	Experience
1	Asst. Prof.	M. Arch.	Min. of 2 years in teaching / industry
2	Asso. Professor	M. Arch and Ph.D	Min. of 5 years in teaching/research/ industry of which 2 years Post Ph.D
3	Professor	M. Arch and Ph.D (Post Ph.D Publications and guiding Ph.D students highly desirable)	Min. of 10 years teaching/ research / industry of which at least 5 years in the level of Asso. Prof.

Eligible candidates may apply to the E-mail address (secab.crc@secab.org) with the educational, experience certificates, latest resume and photograph. Pay scales as per the AICTE norms.
Sd/- A. S. Patil, Hon. Gen. Secretary — Sd/- S. A. Punekar, President

SBI
ಭಾರತೀಯ ಸ್ಟೇಟ್ ಬ್ಯಾಂಕ್
ಕೇಂದ್ರ ನೇಮಕಾತಿ ಮತ್ತು ಪದೋನ್ನತಿ ವಿಭಾಗ
ಕಾರ್ಪೊರೇಟ್ ಕೇಂದ್ರ, ಮುಂಬೈ
ದೂರವಾಣಿ: 022-22820427
ಅರ್ಜಿ ಸಲ್ಲಿಸಲು QR ಸ್ಕ್ಯಾನ್ ಮಾಡಿರಿ
ನಿಯಮಿತ /ಗುತ್ತಿಗೆ ಆಧಾರದ ಮೇಲೆ ಸ್ಪೆಷಲಿಸ್ಟ್ ವರ್ಗದ ಅಧಿಕಾರಿಗಳ ನೇಮಕಾತಿ
ನಿಯಮಿತ/ಗುತ್ತಿಗೆ ಆಧಾರದ ಮೇಲೆ ಈ ಕೆಳಗಿನ ಹುದ್ದೆಗಳಿಗೆ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:

ಕ್ರ. ಸಂ	ಹುದ್ದೆಯ ಹೆಸರು	ಖಾಲಿ ಹುದ್ದೆ	ಸಮಾನ/ ಹೋಲಿಸಬಹುದಾದ ದರ್ಜೆ	ವಿಧ
ಜಾಹೀರಾತು ನಂ. CRPD/SCO/2024-25/01				
1	ಡಿಫೆನ್ಸ್ ಬ್ಯಾಂಕಿಂಗ್ ಅಡ್ವೈಸರ್ (ಡಿಬಿಎ)–ಏರ್ ಫೋರ್ಸ್	1	ಅನ್ವಯಿಸುವುದಿಲ್ಲ	ಗುತ್ತಿಗೆ
2	ಸರ್ಕಲ್ ಡಿಫೆನ್ಸ್ ಬ್ಯಾಂಕಿಂಗ್ ಅಡ್ವೈಸರ್ (ಸಿಡಿಬಿಎ) –ಬೆಂಗಳೂರು	1	ಅನ್ವಯಿಸುವುದಿಲ್ಲ	ಗುತ್ತಿಗೆ
3	ಸರ್ಕಲ್ ಡಿಫೆನ್ಸ್ ಬ್ಯಾಂಕಿಂಗ್ ಅಡ್ವೈಸರ್ (ಸಿಡಿಬಿಎ) – ಚಂಡೀಗಢ	1	ಅನ್ವಯಿಸುವುದಿಲ್ಲ	ಗುತ್ತಿಗೆ
ಜಾಹೀರಾತು ನಂ. CRPD/SCO/2024-25/02				
4	ಚಾರ್ಟರ್ಡ್ ಅಕೌಂಟೆಂಟ್ (ಸ್ಪೆಷಲಿಸ್ಟ್)	9	ಎಮ್‌ಎಮ್‌ಜಿಎಸ್ II	ನಿಯಮಿತ
ಜಾಹೀರಾತು ನಂ. CRPD/SCO/2024-25/03				
5	ರಿಸರ್ಚ್ ಎನಲಿಸ್ಟ್ –ಫೋರೆಕ್ಸ್	1	ಎಮ್‌ಎಮ್‌ಜಿಎಸ್ III	ಗುತ್ತಿಗೆ
6	ರಿಸರ್ಚ್ ಎನಲಿಸ್ಟ್– ಇಕ್ವಿಟಿ	2	ಎಮ್‌ಎಮ್‌ಜಿಎಸ್ III	ಗುತ್ತಿಗೆ
7	ರಿಸರ್ಚ್ ಎನಲಿಸ್ಟ್– ಪ್ರೈವೆಟ್ ಪ್ರೈವೇಟ್	2	ಎಮ್‌ಎಮ್‌ಜಿಎಸ್ III	ಗುತ್ತಿಗೆ
ಜಾಹೀರಾತು ನಂ. CRPD/SCO/2024-25/04				
8	ಕ್ಲೈಮೆಟ್ ರಿಸ್ಕ್ ಸ್ಪೆಶಲಿಸ್ಟ್	2	ಎಮ್‌ಎಮ್‌ಜಿಎಸ್ III	ನಿಯಮಿತ
9	ಮಾರ್ಕೆಟ್ ರಿಸ್ಕ್ ಸ್ಪೆಶಲಿಸ್ಟ್	3	ಎಮ್‌ಎಮ್‌ಜಿಎಸ್ III	ನಿಯಮಿತ
ಜಾಹೀರಾತು ನಂ. CRPD/SCO/2024-25/05				
10	ಟ್ರೇಡ್ ಫೈನಾನ್ಸ್ ಆಫೀಸರ್ (ಎಮ್‌ಎಮ್‌ಜಿಎಸ್ II)	150	ಎಮ್‌ಎಮ್‌ಜಿಎಸ್ II	ನಿಯಮಿತ
ಜಾಹೀರಾತು ನಂ. CRPD/SCO/2024-25/06				
11	ಸೀನಿಯರ್ ವೈಸ್ ಪ್ರೆಸಿಡೆಂಟ್ (ಇನ್‌ಫ್ರಾಸ್ಟ್ರಕ್ಚರ್ ಸೆಕ್ಯೂರಿಟಿ ಆ್ಯಂಡ್ ಸ್ಪೆಷಲ್ ಪ್ರೊಜೆಕ್ಟ್ಸ್)	1	ಟಿಇಜಿಎಸ್–VI	ಗುತ್ತಿಗೆ
12	ಸೀನಿಯರ್ ವೈಸ್ ಪ್ರೆಸಿಡೆಂಟ್ (ಇನ್ ಫರ್ ಮೇಶನ್ ಸೆಕ್ಯುರಿಟಿ ಆಪರೇಶನ್ಸ್)	1	ಟಿಇಜಿಎಸ್–VI	ಗುತ್ತಿಗೆ

ಅರ್ಹತೆಯ ಮಾನದಂಡಗಳು (ವಯಸ್ಸು, ಅನುಭವ, ಕೆಲಸದ ವಿವರಣೆ ಇತ್ಯಾದಿ), ಖಾಲಿ ಹುದ್ದೆಯ ವಿವರಗಳು, ಅವಶ್ಯಕ ಶುಲ್ಕಗಳು ಮತ್ತು ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಲು ಲಿಂಕ್ ನೊಂದಿಗೆ ಇತರ ವಿವರಗಳಿಗಾಗಿ ಹಾಗೂ ಅರ್ಜಿ ಶುಲ್ಕದ ಆನ್‌ಲೈನ್ ಪಾವತಿಗಾಗಿ ಬ್ಯಾಂಕ್‌ನ ವೆಬ್ ಸೈಟ್ https://bank.sbi/web/careers/current-openingsಗೆ ಲಾಗಿನ್ ಮಾಡಿರಿ. ಅರ್ಜಿ ಸಲ್ಲಿಸುವ ಮತ್ತು ಶುಲ್ಕಗಳನ್ನು ಪಾವತಿಸುವ ಮೊದಲು ಅರ್ಹತೆಯನ್ನು ಖಾತ್ರಿಮಾಡಿಕೊಳ್ಳಲು ಮತ್ತು ಇತರ ವಿವರಗಳಿಗಾಗಿ ವಿವರವಾದ ಜಾಹೀರಾತನ್ನು ಉಲ್ಲೇಖಿಸಿರಿ. ಯಾವುದೇ ವಿಚಾರಣೆಗಳಿದ್ದಲ್ಲಿ ದಯವಿಟ್ಟು ಈ ಲಿಂಕ್ ಮೂಲಕ ಸಂಪರ್ಕಿಸಿ: "CONTACT US"—> "Post Your Query" (ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಲಭ್ಯವಿದೆ) (https://bank.sbi/web/careers/post-your-query).
• ಆನ್‌ಲೈನ್ ಅರ್ಜಿ ಸಲ್ಲಿಸುವ ಮತ್ತು ಶುಲ್ಕ ಪಾವತಿಸುವ ದಿನಾಂಕ: 07.06.2024 ರಿಂದ 27.06.2024
ಸ್ಥಳ: ಮುಂಬೈ
ದಿನಾಂಕ: 07.06.2024
ಪ್ರಧಾನ ವ್ಯವಸ್ಥಾಪಕರು (ಆರ್‌ಪಿ ಮತ್ತು ಪಿಎಂ)

ಭಾರತೀಯ ಆದಿಮಜಾತಿ ಸೇವಕ ಸಂಘ (ರಿ) ರಾಣೇಬೆನ್ನೂರು
(ಅನುದಾನಿತ ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಜು)
ಜಾಹೀರಾತು ತಿದ್ದುಪಡಿ
ಭಾರತೀಯ ಆದಿಮಜಾತಿ ಸೇವಕ ಸಂಘ (ರಿ) ರಾಣೇಬೆನ್ನೂರು ... 19–06–2024 ರಂದು ಪ್ರಜಾವಾಣಿಯಲ್ಲಿ ಪ್ರಕಟವಾಗಿರುವ ಜಾಹೀರಾತಿನಲ್ಲಿ ... ಯನ್ನು ಸ್ವೀಕರಿಸಲಾಗುತ್ತದೆ. ತಿದ್ದುಪಡಿ ಹೊರತುಪಡಿಸಿ ಉಳಿದಂತೆ ... ಮೀಸಲಾತಿ ಹಾಗೂ ವೇತನ ಶ್ರೇಣಿ ಚಾಲ್ತಿಯಲ್ಲಿರುವ ಸರಕಾರದ ನಿಯಮಗಳಂತೆ ...

ಅ.ನಂ	ವಿಷಯ	ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ	ಮೀಸಲಾತಿ	ಶಾಲಾ–ಕಾಲೇಜು ಹೆಸರು ಮತ್ತು ಸ್ಥಳ
ಪದವಿಪೂರ್ವ ಕಾಲೇಜು ವಿಭಾಗ – NON TEACHING CADRE					
1	ಗ್ರಂಥಪಾಲಕರು	01	M.LIB	ಸಾಮಾನ್ಯ ಮಹಿಳೆ (GM) ಬದಲಾಗಿ ಸಾಮಾನ್ಯ (GM) ಆಗಿದೆ.	ಪದವಿ ಪೂರ್ವ ಕಾಲೇಜು ಇಂದಿರಾ ನಗರ, ರಾಣೇಬೆನ್ನೂರು
ಪ್ರೌಢಶಾಲಾ – ವಿಭಾಗ ಬೋಧಕ / ಬೋಧಕೇತರ ಹುದ್ದೆ					
1	ವೃತ್ತಿ ಶಿಕ್ಷಣ/ಡ್ರಾಯಿಂಗ್	01	B.A. & Training	II A	ಬಿ.ಎ.ಜೆ.ಎಸ್.ಎಸ್. ಪ್ರೌಢಶಾಲೆ ಅಂತರವಳ್ಳಿ
2	ಸಿಪಾಯಿ	01	S.S.L.C	ಪ. ಜಾತಿ (SC)	ಬಿ.ಎ.ಜೆ.ಎಸ್.ಎಸ್. ಪ್ರೌಢಶಾಲೆ
3	ಸಹಾಯಕ	01	PUC	ಸಾಮಾನ್ಯ (GM)	ಬಿ.ಎ.ಜೆ.ಎಸ್.ಎಸ್. ಪ್ರೌಢಶಾಲೆ ಅಂತರವಳ್ಳಿ

ಬೋಧಕ ಹುದ್ದೆಗೆ ರೂ. 1000/– ಹಾಗೂ ಬೋಧಕೇತರ ಹುದ್ದೆಗೆ ರೂ. 500/– ರ ಡಿ.ಡಿ. ಗಳೊಂದಿಗೆ ಅರ್ಜಿ ಸಲ್ಲಿಸುವವರು 09–07–2024 ರ ಒಳಗಾಗಿ ಸಲ್ಲಿಸಬೇಕು.
ಸಹಿ/– ಅಧ್ಯಕ್ಷರು, ಭಾರತೀಯ ಆದಿಮಜಾತಿ ಸೇವಕ ಸಂಘ (ರಿ), ರಾಣೇಬೆನ್ನೂರು.

ವಿಶ್ವಕಪ್ ಇತಿಹಾಸದಲ್ಲಿ ಮೊದಲ ಬಾರಿಗೆ ಸೆಮಿಫೈನಲ್ ಪ್ರವೇಶಿಸಿದ ಅಫ್ಗಾನಿಸ್ತಾನ • ಬಾಂಗ್ಲಾದೇಶ, ಆಸ್ಟ್ರೇಲಿಯಾ ಔಟ್

ರಶೀದ್ ಖಾನ್ ಬಳಗದ ಚಾರಿತ್ರಿಕ ಸಾಧನೆ

ಕಿಂಗ್ಸ್‌ಟೌನ್ (ಪಿಟಿಐ): ರಶೀದ್ ಖಾನ್ ಅವರ ದಿಟ್ಟ ನಾಯಕತ್ವದಲ್ಲಿ ಅಫ್ಗಾನಿಸ್ತಾನ ತಂಡವು ಮೊಟ್ಟಮೊದಲ ಬಾರಿಗೆ ಟ್ವೆಂಟಿ-20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ನಾಲ್ಕರ ಘಟ್ಟಕ್ಕೆ ಲಗ್ಗೆ ಹಾಕಿತು.

ಯುದ್ಧ, ಭಯೋತ್ಪಾದನೆ ಮತ್ತು ರಾಜಕೀಯ ಅಸ್ಥಿರತೆ ಯ ದಳ್ಳುರಿಯಲ್ಲಿ ಬೆಂದು ಬಸವಳಿದ ದೇಶದಲ್ಲಿ ಸಂತಸದ ಹೊನಲು ಹರಿಸಿದ ರಶೀದ್ ಬಳಗವು ಚಾರಿತ್ರಿಕ ಸಾಧನೆ ಮಾಡಿತು. ಈ ಹಾದಿಯಲ್ಲಿ ತಂಡವು ಸೂಪರ್ 8ರ ಹಂತದ ಎರಡನೇ ಪಂದ್ಯದಲ್ಲಿ ಬಲಿಷ್ಠ ಆಸ್ಟ್ರೇಲಿಯಾವನ್ನು ಸೋಲಿಸಿತ್ತು. ಮಂಗಳವಾರ ಬೆಳಿಗ್ಗೆ (ಭಾರತೀಯ ಕಾಲಮಾನ) ನಡೆದ 8ರ ಘಟ್ಟದ ಕೊನೆ ಪಂದ್ಯದಲ್ಲಿ ಬಾಂಗ್ಲಾದೇಶವನ್ನು 8 ರನ್‌ಗಳಿಂದ ಸೋಲಿಸಿತು. ಇದರೊಂದಿಗೆ 2021ರ ಚಾಂಪಿಯನ್ ಆಸ್ಟ್ರೇಲಿಯಾ ತಂಡದ ಸೆಮಿಫೈನಲ್ ಆಸೆಯು ಭಗ್ನವಾಯಿತು. ಜೂನ್ 27ರಂದು ನಡೆಯುವ ಸೆಮಿಫೈನಲ್‌ನಲ್ಲಿ ಅಫ್ಗಾನಿಸ್ತಾನವು ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ.

‘ಇದೊಂದು ಬೃಹತ್ ಸಾಧನೆ. ಈ ಕುರಿತು ಮಾತನಾಡಲು ನನಗೆ ಪದಗಳೇ ಸಿಗುತ್ತಿಲ್ಲ. ತವರು ದೇಶದಲ್ಲಿ ಸಂಭ್ರಮ ಹೊನಲಾಗಿದೆ’ ಎಂದು ಪಂದ್ಯದ ನಂತರ ರಶೀದ್ ಹೇಳಿದರು.

ಬಾಂಗ್ಲಾ ಎದುರಿನ ಪಂದ್ಯದಲ್ಲಿ ಟಾಸ್ ಗೆದ್ದ ಅಫ್ಗಾನಿಸ್ತಾನ ಬ್ಯಾಟಿಂಗ್ ಮಾಡಿತು. ಪಿಚ್‌ನಲ್ಲಿದ್ದ ಸತ್ವವನ್ನು ಬಳಸಿಕೊಂಡ ಬಾಂಗ್ಲಾ ಬೌಲರ್‌ಗಳ ಪರಿಣಾಮಕಾರಿ ದಾಳಿಯ ಎದುರು ರಶೀದ್ ಬಳಗವು 5 ವಿಕೆಟ್‌ಗಳಿಗೆ 115 ರನ್ ಗಳಿಸಿತು. ಬಾಂಗ್ಲಾ ಬೌಲರ್‌ಗಳು ಒಟ್ಟು 66 ಡಾಟ್ ಬಾಲ್ ಪ್ರಯೋಗಿಸಿದರು. ಲೆಗ್‌ಸ್ಪಿನ್ನರ್ ರಿಷದ್ ಹುಸೇನ್ (26ಕ್ಕೆ3) ಪರಿಣಾಮಕಾರಿ ದಾಳಿ ನಡೆಸಿದರು. ಅಫ್ಗಾನಿಸ್ತಾನ ತಂಡದ ಆರಂಭಿಕ ಬ್ಯಾಟರ್ ರೆಹಮಾನುಲ್ಲಾ ಗುರ್ಬಾಜ್ (43; 55ಎ) ಬಲ ತುಂಬಿದರು. ಆದರೆ ಆಗಾಗ ಮಳೆ ಸುರಿದ ಕಾರಣ ಡಕ್ವರ್ಥ್ ಲೂಯಿಸ್ ನಿಯಮ ಅನ್ವಯಿಸಲಾಯಿತು. 19 ಓವರ್‌ಗಳಲ್ಲಿ 114 ರನ್‌ಗಳನ್ನು ಗಳಿಸುವ ಗುರಿಯನ್ನು ಬಾಂಗ್ಲಾ ತಂಡಕ್ಕೆ ನಿಗದಿ ಪಡಿಸಲಾಯಿತು. ತಂಡವು 3 ವಿಕೆಟ್‌ಗಳಿಗೆ 31 ರನ್ ಗಳಿಸಿದ್ದಾಗ ಮಳೆ ಸುರಿಯಿತು.

2017ರಲ್ಲಿ ಐಸಿಸಿ (ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್) ಸದಸ್ಯತ್ವ ಪಡೆದ ಅಫ್ಗನ್ ತಂಡದ ಪ್ರತಿಭೆ ಹಾಗೂ ಸಾಮರ್ಥ್ಯವನ್ನು ಸಂಪೂರ್ಣವಾಗಿ ಪಣಕ್ಕಿಟ್ಟಿತು. ಸ್ಪಿನ್ನರ್ ರಶೀದ್ (23ಕ್ಕೆ4) ಮತ್ತು ವೇಗಿ ನವೀನ್ ಉಲ್ ಹಕ್ (26ಕ್ಕೆ4) ಅವರು ತಂಡದ ಗೆಲುವಿಗೆ ಕಾರಣರಾದರು. ಬಾಂಗ್ಲಾ 17.5 ಓವರ್‌ಗಳಲ್ಲಿ 105 ರನ್ ಗಳಿಸಿ ಪರಾಭವಗೊಂಡಿತು. ಲಿಟನ್ ದಾಸ್ (ಔಟಾಗದೆ 54) ಅವರ ಛಲದ ಆಟಕ್ಕೆ ತಕ್ಕ ಫಲಿತಾಂಶ ದಕ್ಕಲಿಲ್ಲ.

ಸೋಮವಾರದ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು 24 ರನ್‌ಗಳಿಂದ ಭಾರತವು ಸೋಲಿಸಿತ್ತು. ಇದರಿಂದಾಗಿ ಅಫ್ಗನ್ ತಂಡದ ಸೆಮಿಫೈನಲ್ ಪ್ರವೇಶದ ಅವಕಾಶ ಉಳಿದಿತ್ತು. ಅದನ್ನು ಸಮರ್ಥವಾಗಿ ಬಳಸಿಕೊಂಡಿತು. ಯುದ್ಧಪೀಡಿತ ಅಫ್ಗಾನಿಸ್ತಾನದ ಕ್ರಿಕೆಟ್ ಪುನರುತ್ಥಾನಕ್ಕೆ ಭಾರತದ ಕೊಡುಗೆಯೂ ಪ್ರಮುಖವಾಗಿದೆ. ಅಫ್ಗನ್ ತಂಡಕ್ಕೆ ಭಾರತವೇ ‘ತವರು ತಾಣ’ ಆಗಿದೆ.

ಸಂಕ್ಷಿಪ್ತ ಸ್ಕೋರು: ಅಫ್ಗಾನಿಸ್ತಾನ: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 115 (ರೆಹಮಾನುಲ್ಲಾ ಗುರ್ಬಾಜ್ 43, ಇಬ್ರಾಹಿಂ ಝದ್ರಾನ್ 18, ರಶೀದ್ ಖಾನ್ ಔಟಾಗದೆ 19, ರಿಷದ್ ಹುಸೇನ್ 26ಕ್ಕೆ3, ತಸ್ಕಿನ್ ಅಹಮದ್ 12ಕ್ಕೆ1) ಬಾಂಗ್ಲಾದೇಶ: 17.5 ಓವರ್‌ಗಳಲ್ಲಿ 105 (ಲಿಟನ್ ದಾಸ್ ಔಟಾಗದೆ 54, ತೌಹಿದ್ ಹೃದಯ್ 14, ನವೀನ್ ಉಲ್ ಹಕ್ 26ಕ್ಕೆ4, ರಶೀದ್ ಖಾನ್ 23ಕ್ಕೆ4) **ಫಲಿತಾಂಶ:** ಅಫ್ಗಾನಿಸ್ತಾನ ತಂಡಕ್ಕೆ 8 ರನ್ ಜಯ (ಮಳೆಯಿಂದಾಗಿ ಡಿಎಲ್‌ಎಸ್ ನಿಯಮ ಅನ್ವಯ. 19 ಓವರ್‌ಗಳಲ್ಲಿ 114 ರನ್‌ಗಳ ಗುರಿ). **ಪಂದ್ಯಶ್ರೇಷ್ಠ:** ನವೀನ್ ಉಲ್ ಹಕ್.

ಟಿ20 ಐಸಿಸಿ

ಬಾಂಗ್ಲಾದೇಶ ವಿರುದ್ಧ ಗೆಲುವು ಸಾಧಿಸಿದ ಅಫ್ಗಾನಿಸ್ತಾನ ತಂಡದ ಆಟಗಾರರ ವಿಜಯೋತ್ಸವ —ಎಎಫ್‌ಪಿ ಚಿತ್ರ

ಮುಖ್ಯಾಂಶಗಳು

- ಸೂಪರ್ 8ರಲ್ಲಿ ಆಸ್ಟ್ರೇಲಿಯಾ, ಬಾಂಗ್ಲಾ ವಿರುದ್ಧ ಜಯಿಸಿದ ಅಫ್ಗಾನಿಸ್ತಾನ
- ಮಳೆ ಅಡ್ಡಿ, ಡಿಎಲ್‌ಎಸ್ ನಿಯಮ ಅನ್ವಯ
- ಅಫ್ಗಾನಿಸ್ತಾನದಲ್ಲಿ ಬೀದಿಗಿಳಿದು ಸಂಭ್ರಮಿಸಿದ ಜನರು

ಅಫ್ಗಾನಿಸ್ತಾನದಲ್ಲಿ ಕ್ರಿಕೆಟ್ ಅಭಿಮಾನಿಗಳು ಬೀದಿಗೆ ಇಳಿದು ಸಂಭ್ರಮಿಸಿದರು —ಎಎಫ್‌ಪಿ ಚಿತ್ರ

‘ಬಹುದೊಡ್ಡ ಸಾಧನೆ’

ಕಿಂಗ್ಸ್‌ಟೌನ್ (ಪಿಟಿಐ): ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ತಮ್ಮ ತಂಡದ ಸಾಧನೆಯು ದೇಶದ ಯುವಜನತೆಗೆ ಪ್ರೇರಣೆಯಾಗಲಿದೆ ಎಂದು ಅಫ್ಗನ್ ತಂಡದ ನಾಯಕ ರಶೀದ್ ಖಾನ್ ಹೇಳಿದ್ದಾರೆ.

ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸೆಮಿಫೈನಲ್ ಪಂದ್ಯವು ಬಹಳ ದೊಡ್ಡ ಪ್ರೇರಣಾದಾಯಿಯಾಗಲಿದೆ. 19 ವರ್ಷದೊಳಗಿನವರ ಟೂರ್ನಿಯಲ್ಲಿ ಈ ಸಾಧನೆಯನ್ನು ನಮ್ಮ ತಂಡದವರು ಮಾಡಿದ್ದರು. ಈ ಟೂರ್ನಿಯಲ್ಲಿ ನಾವು ಸೂಪರ್ 8 ಹಂತ ಪ್ರವೇಶಿಸಿದ್ದೇ ಚೊಚ್ಚಲ ಸಲ. ಇದೀಗ ಸೆಮಿಗೆ ಲಗ್ಗೆ ಇಟ್ಟಿದ್ದು, ಬಹುದೊಡ್ಡ ಸಾಧನೆಯಾಗಿದೆ’ ಎಂದು ಹರ್ಷ ವ್ಯಕ್ತಪಡಿಸಿದರು.

ಲಾರಾ ಮಾತುಗಳಿಂದ ಸ್ಫೂರ್ತಿ: ಖಾನ್

ಅರ್ನಾಸ್ ವೇಲ್ (ಸೇಂಟ್ ವಿನ್ಸೆಂಟ್), (ಎಎಫ್‌ಪಿ): ಟಿ20 ವಿಶ್ವಕಪ್ ಕ್ರಿಕೆಟ್‌ನಲ್ಲಿ ಅಫ್ಗಾನಿಸ್ತಾನ ತಂಡ ಮೊದಲ ಬಾರಿ ಸೆಮಿಫೈನಲ್ ತಲುಪುವಲ್ಲಿ ಕ್ರಿಕೆಟ್ ದಂತಕಥೆ ಬ್ರಯಾನ್ ಲಾರಾ ಅವರೇ ಸ್ಫೂರ್ತಿ ಎಂದು ಆ ತಂಡದ ನಾಯಕ ರಶೀದ್ ಖಾನ್ ಹೇಳಿದ್ದಾರೆ.

ಒಂದನೇ ಗುಂಪಿನ ರೋಚಕ ಹಣಾಹಣಿಯಲ್ಲಿ ಬಾಂಗ್ಲಾದೇಶದ ಮೇಲೆ ಜಯ ಪಡೆದ ಅಫ್ಗಾನಿಸ್ತಾನ ನಾಲ್ಕರ ಘಟ್ಟ ತಲುಪಿದೆ. ರಶೀದ್ ಖಾನ್ ಬಳಗದ ಗೆಲುವಿನಿಂದಾಗಿ ಆಸ್ಟ್ರೇಲಿಯಾ ಹೊರಬಿದ್ದಿದೆ.

‘ಅಫ್ಗಾನಿಸ್ತಾನ ಸೆಮಿಫೈನಲ್ ತಲುಪಲಿದೆ ಎಂದು ಲಾರಾ ಅವರು ಹಿಂದೆಯೇ ಹೇಳಿದ್ದರು’ ಎಂದು ರಶೀದ್ ನೆನಪಿಸಿದರು.

ವಿವಾದಕ್ಕೆಡೆಯಾದ ಗುಲ್ಬದೀನ್ ನೈಬ್ ಪ್ರಹಸನ

ಕಿಂಗ್ಸ್‌ಟೌನ್ (ಪಿಟಿಐ): ಬಾಂಗ್ಲಾದೇಶ ಎದುರಿನ ಪಂದ್ಯದಲ್ಲಿ ಅಫ್ಗಾನಿಸ್ತಾನದ ಕೋಚ್ ಜೊನಾಥನ್ ಟ್ರಾಟ್ ಅವರು ‘ಸ್ವಲ್ಪ ನಿಧಾನವಾಗಿ ಆಡಿ ಅವಸರ ಬೇಡ’ ಎಂದು ಸಂಜ್ಞೆ ಮಾಡಿದರು. ಆ ಸಂದರ್ಭದಲ್ಲಿ ಫೀಲ್ಡರ್ ಗುಲ್ಬದೀನ್ ನೈಬ್ ಅವರು ಸ್ನಾಯುಸೆಳೆತವಾಗಿದೆ ಎಂದು ಕಾಲು ಹಿಡಿದು ನೆಲಕ್ಕೊರಗಿದರು.

ಈ ಪ್ರಹಸನವು ಈಗ ವಿವಾದದ ಕಿಡಿ ಹೊತ್ತಿಸಿದೆ. ಸ್ಲಿಪ್ ಸ್ಥಾನದಲ್ಲಿ ಚೆನ್ನಾಗಿಯೇ ಫೀಲ್ಡಿಂಗ್ ಮಾಡುತ್ತಿದ್ದ ನೈಬ್‌ಗೆ ಇದ್ದಕ್ಕಿದ್ದಂತೆ ಸ್ನಾಯುಸೆಳೆತವಾಗಿದ್ದು ಹೇಗೆ, ಇದು ನಾಟಕವೇ ಎಂದು ಹಲವು ಮಾಜಿ ಆಟಗಾರರು ಪ್ರಶ್ನಿಸಿದ್ದಾರೆ. ಇದು ಕ್ರೀಡಾ ಸ್ಫೂರ್ತಿಗೆ ವಿರುದ್ಧ ಎಂದೂ ಕೆಲವರು ಟೀಕಿಸಿದ್ದಾರೆ. ಗುರಿ ಬೆನ್ನಟ್ಟಿದ್ದ ಬಾಂಗ್ಲಾದೇಶ ಇನಿಂಗ್ಸ್‌ನಲ್ಲಿ ಸ್ಪಿನ್ನರ್ ನೂರ್ ಅಹಮದ್ ಅವರು ಹಾಕಿದ 12ನೇ ಓವರ್‌ನಲ್ಲಿ ಈ ಘಟನೆ ನಡೆಯಿತು.

ಮಳೆ ಬಂದಿದ್ದರಿಂದ ಡಿಎಲ್‌ಎಸ್ ನಿಯಮ ಅನ್ವಯಿಸಲಾಗಿತ್ತು. ಪರಿಷ್ಕೃತ ಗುರಿಯನ್ನು ಬೆನ್ನಟ್ಟಿದ್ದ ಬಾಂಗ್ಲಾ ಈ ಸಂದರ್ಭದಲ್ಲಿ 81 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿತ್ತು. ತಂಡವು ಡಿಎಲ್‌ಎಸ್ ಪಾರ್ ಸ್ಕೋರ್‌ಗೆ ಎರಡು ರನ್‌ಗಳ ಹಿನ್ನಡೆಯಲ್ಲಿತ್ತು.

ಅಫ್ಗಾನಿಸ್ತಾನ ತಂಡದ ನಾಯಕ ರಶೀದ್ ಖಾನ್ ಮತ್ತು ಗುಲ್ಬದೀನ್ ನೈಬ್ —ಎಪಿ/ಪಿಟಿಐ ಚಿತ್ರ

‘ನಿಧಾನವಾಗಿ ಆಡಿ ಎಂದು ಕೋಚ್ ಕಳಿಸಿದ ಸಂದೇಶವನ್ನು ಈ ರೀತಿ ಅರ್ಥ ಮಾಡಿಕೊಂಡು ಮೊದಲ ಸ್ಲಿಪ್‌ನಲ್ಲಿದ್ದವರು ನೆಲಕ್ಕೊರಗುವುದು ಅನವಶ್ಯಕವಾಗಿತ್ತು. ಇದು ಸ್ವೀಕಾರಾರ್ಹವೂ ಅಲ್ಲ’ ಎಂದು ಸೈಮನ್ ಡೂಲ್ ವೀಕ್ಷಕ ವಿವರಣೆಯಲ್ಲಿ ಹೇಳಿದರು.

‘ಆಸ್ಕರ್, ಎಮಿ?’ ಎಂದು ಜಿಂಬಾಬ್ವೆಯ ವೀಕ್ಷಕ ವಿವರಣೆಗಾರ ಪಾಮಿ ಎಂಬಾಗ್ವಾ (ನೈಬ್ ಅವರದ್ದು ನಟನೆಗೆ ಪ್ರಶಸ್ತಿ ಎಂಬ ವ್ಯಂಗ್ಯ) ಉದ್ಗರಿಸಿದರು.

ಈ ಸಂದರ್ಭದಲ್ಲಿ ನೈಬ್ ಅವರಿಗೆ ಚಿಕಿತ್ಸೆ ನೀಡಲಾಯಿತು. ತಂಡದ ನೆರವು ಸಿಬ್ಬಂದಿಯು ಸಹ ಆಟಗಾರ ನವೀನ್ ಉಲ್ ಹಕ್ ಅವರೊಂದಿಗೆ ನೈಬ್ ಅವರನ್ನು ಮೈದಾನದಿಂದ ಹೊರಗೆ ಕರೆದೊಯ್ದರು. ಮತ್ತೆ ಮಳೆ ಸುರಿಯಿತು. ಆಟಗಾರರೆಲ್ಲರೂ ಓಡಿಹೋಗಿ ಡಗ್ ಔಟ್ ಸೇರಿಕೊಂಡರು.

ಎಕ್ಸ್‌ನಲ್ಲಿ ಸಂದೇಶ ಹಾಕಿರುವ ನೈಬ್ ‘ಕೆಲವೊಮ್ಮೆ ಖುಷಿ ಅಥವಾ ದುಃಖ ಆದಾಗ ಈ ರೀತಿಯಾಗುತ್ತದೆ. ಸ್ನಾಯುಸೆಳೆತ’ ಎಂದು ಬರೆದಿದ್ದಾರೆ.

ವಾರ್ನರ್‌ಗೆ ನಿರಾಶೆಯ ವಿದಾಯ

ಕಿಂಗ್ಸ್‌ಟೌನ್ (ಪಿಟಿಐ): ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಆರಂಭಿಕ ಬ್ಯಾಟರ್ ಡೇವಿಡ್ ವಾರ್ನರ್ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ.

ಟಿ20 ವಿಶ್ವಕಪ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸುವಲ್ಲಿ ವಿಫಲವಾದ ಆಸ್ಟ್ರೇಲಿಯಾ ತಂಡದಲ್ಲಿ 37 ವರ್ಷದ ವಾರ್ನರ್ ಆಡಿದ್ದರು. 15 ವರ್ಷಗಳಷ್ಟು ದೀರ್ಘ ಕಾಲ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಆಡಿದ್ದರು.

2009ರ ಜನವರಿಯಲ್ಲಿ ಟಿ20 ಪಂದ್ಯದ ಮೂಲಕ ಅವರು ಅಂತರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. ಸೋಮವಾರ ಗ್ರಾಸ್ ಐಲೆಟ್‌ನಲ್ಲಿ ನಡೆದಿದ್ದ ಭಾರತದ ಎದುರಿನ ಪಂದ್ಯವು ಅವರಿಗೆ ಕೊನೆಯದಾಯಿತು. ಆ ಪಂದ್ಯದಲ್ಲಿ ಆಸ್ಟ್ರೇಲಿಯಾ ಸೋತಿತು. 2021ರಲ್ಲಿ ಆಸ್ಟ್ರೇಲಿಯಾ ಟಿ20 ವಿಶ್ವಕಪ್ ಗೆದ್ದಿತ್ತು. ಹೋದ ವರ್ಷ ಏಕದಿನ ಕ್ರಿಕೆಟ್ ವಿಶ್ವಕಪ್ ಕೂಡ ಜಯಿಸಿತ್ತು.

ಆದರೆ ಈ ಬಾರಿಯ ಟೂರ್ನಿಯಲ್ಲಿ ನಾಲ್ಕರ ಘಟ್ಟ ಪ್ರವೇಶಿಸುವಲ್ಲಿ ವಿಫಲವಾಯಿತು. ಈ ಹಾದಿಯಲ್ಲಿ ಅಫ್ಗಾನಿಸ್ತಾನ ಮತ್ತು ಭಾರತ ತಂಡದ ಎದುರು ಸೂಪರ್ 8ರ ಹಂತದಲ್ಲಿ ಸೋತಿತ್ತು.

ಹಲವು ಸ್ಮರಣೀಯ ಇನಿಂಗ್ಸ್‌ಗಳನ್ನು ಆಡಿದ್ದ ವಾರ್ನರ್ ಅವರಿಗೆ ಗೌರವಯುತ ವಿದಾಯ ದೊರೆಯಲಿಲ್ಲ. ಗೌರವ ರಕ್ಷೆ ಅಥವಾ ಸ್ಟ್ಯಾಂಡಿಂಗ್ ಒವೇಷನ್ ಲಭಿಸಲಿಲ್ಲ. ಅದಕ್ಕೆ ತಂಡದ ನಿರಾಶಾದಾಯಕ ಪ್ರದರ್ಶನ ಕಾರಣವಾಯಿತು. ಕೊನೆಯ ಪಂದ್ಯದಲ್ಲಿ ಅವರು 6 ಎಸೆತಗಳಲ್ಲಿ 6 ರನ್ ಗಳಿಸಿದರು. ಅರ್ಷದೀಪ್ ಸಿಂಗ್ ಎಸೆತದಲ್ಲಿ ಸೂರ್ಯಕುಮಾರ್ ಪಡೆದ ಕ್ಯಾಚ್‌ಗೆ ಅವರು ನಿರ್ಗಮಿಸಿದ್ದರು.

2023ರಲ್ಲಿ ಆಸ್ಟ್ರೇಲಿಯಾ ತಂಡವು ಏಕದಿನ ಕ್ರಿಕೆಟ್ ವಿಶ್ವಕಪ್ ಫೈನಲ್‌ನಲ್ಲಿ ಭಾರತದ ವಿರುದ್ಧ ಜಯಿಸಿತ್ತು. ಅದು ವಾರ್ನರ್ ಅವರು ಆಡಿದ್ದ ಕೊನೆಯ ಏಕದಿನ ಪಂದ್ಯವಾಗಿತ್ತು.

ಎಲ್ಲ ಮಾದರಿಗಳೂ ಸೇರಿ 49 ಶತಕಗಳು ಅವರು ಖಾತೆಯಲ್ಲಿವೆ. ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅವರು 19 ಸಾವಿರ ರನ್ ಪೇರಿಸಿದ್ದಾರೆ.

2018ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದಿದ್ದ ಟೆಸ್ಟ್ ಪಂದ್ಯದ ಸಂದರ್ಭದಲ್ಲಿ ವರದಿಯಾಗಿದ್ದ ಚೆಂಡು ವಿರೂಪ ಪ್ರಕರಣದಲ್ಲಿ ಅವರು ಒಂದು ವರ್ಷ ಅಮಾನತು ಶಿಕ್ಷೆಗೊಳಗಾಗಿದ್ದರು. ಆ ಪ್ರಕರಣದಲ್ಲಿ ಸ್ಟೀವ್ ಸ್ಮಿತ್ ಮತ್ತು ಕ್ಯಾಮೆರಾನ್ ಬೆನ್‌ಕ್ರಾಫ್ಟ್ ಕೂಡ ಶಿಕ್ಷೆ ಅನುಭವಿಸಿದ್ದರು. ಆಸ್ಟ್ರೇಲಿಯಾ ಕ್ರಿಕೆಟ್‌ನಲ್ಲಿ ಯಾವುದೇ ರೀತಿಯ ನಾಯಕತ್ವ ನೀಡದಂತೆ ವಾರ್ನರ್ ಅವರ ಮೇಲೆ ನಿಷೇಧ ಹೇರಲಾಗಿತ್ತು.

ಐಪಿಎಲ್ ಕ್ರಿಕೆಟ್ ಟೂರ್ನಿಯಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವು ವಾರ್ನರ್ ನಾಯಕತ್ವದಲ್ಲಿ 2016ರಲ್ಲಿ ಚಾಂಪಿಯನ್ ಆಗಿತ್ತು.

ಅಂತರರಾಷ್ಟ್ರೀಯ ಕ್ರಿಕೆಟ್: ಡೇವಿಡ್ ವಾರ್ನರ್ ಸಾಧನೆ

ಮಾದರಿ	ಪಂದ್ಯ	ರನ್	ಶ್ರೇಷ್ಠ	ಶತಕ	ಅರ್ಧಶತಕ	ಬೌಂಡರಿ	ಸಿಕ್ಸರ್
ಟೆಸ್ಟ್	112	8786	335*	26	37	1036	69
ಏಕದಿನ	161	6932	179	22	33	733	130
ಟಿ20	110	3277	100*	1	28	337	122

‘ಶತಕ, ಅರ್ಧಶತಕ ಬಗ್ಗೆ ಚಿಂತಿಸಲ್ಲ’

ಗ್ರಾಸ್ ಐಲೆಟ್(ಪಿಟಿಐ): ಅರ್ಧಶತಕ ಮತ್ತು ಶತಕಗಳ ಬಗ್ಗೆ ಹೆಚ್ಚು ಯೋಚಿಸುವುದಿಲ್ಲ. ಆದರೆ ಒಂದೇ ಲಯದಲ್ಲಿ ಬ್ಯಾಟಿಂಗ್ ಮಾಡುವ ಉದ್ದೇಶದಲ್ಲಿ ಸಫಲನಾದ ತೃಪ್ತಿ ಇದೆ ಎಂದು ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಹೇಳಿದರು.

ಸೋಮವಾರ ಟಿ20 ವಿಶ್ವಕಪ್ ಟೂರ್ನಿಯ ಸೂಪರ್ 8 ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ಭಾರತ ತಂಡವು 24 ರನ್‌ಗಳಿಂದ ಜಯಿಸಿತು. ಅದರೊಂದಿಗೆ ಸೆಮಿಫೈನಲ್ ಪ್ರವೇಶಿಸಿತು. ಈ ಪಂದ್ಯದಲ್ಲಿ ರೋಹಿತ್ 41 ಎಸೆತಗಳಲ್ಲಿ 92 ರನ್ ಹೊಡೆದರು. ಆದರೆ ಎಂಟು ರನ್‌ಗಳ ಅಂತರದಿಂದ ಶತಕ ಕೈತಪ್ಪಿಸಿಕೊಂಡರು. ಟಿ20 ವಿಶ್ವಕಪ್ ಇತಿಹಾಸದಲ್ಲಿ ಅತಿ ವೇಗದ ಶತಕದ ದಾಖಲೆಯು ಕ್ರಿಸ್ ಗೇಲ್ (47 ಎಸೆತ) ಅವರ ಹೆಸರಿನಲ್ಲಿದೆ. ಈ ದಾಖಲೆಯನ್ನು ಮುರಿಯುವ ಅವಕಾಶ ರೋಹಿತ್ ಅವರಿಗೆ ಇತ್ತು.

ಸಿಕ್ಸರ್ ದಾಖಲೆ: ರೋಹಿತ್ ಶರ್ಮಾ ಅವರು ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ 203 ಸಿಕ್ಸರ್‌ಗಳನ್ನು ದಾಖಲಿಸಿದರು. ಸಿಕ್ಸರ್‌ಗಳ ದ್ವಿಶತಕ ಗಳಿಸಿದ ಮೊದಲ ಬ್ಯಾಟರ್ ಆದರು. ನ್ಯೂಜಿಲೆಂಡ್‌ನ ಮಾರ್ಟಿನ್ ಗಪ್ಟಿಲ್ (173) ಎರಡನೇ ಸ್ಥಾನದಲ್ಲಿದ್ದಾರೆ.

ಜುಲೈ 19ರಿಂದ ಏಷ್ಯಾ ಮಹಿಳಾ ಟಿ20

ನವದೆಹಲಿ (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡವು ಏಷ್ಯಾ ಕಪ್ ಮಹಿಳಾ ಟಿ20 ಕ್ರಿಕೆಟ್ ಟೂರ್ನಿಯ ಮೊದಲ ಪಂದ್ಯವನ್ನು ಜುಲೈ 19ರಂದು ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನ ವಿರುದ್ಧ ಆಡುವ ಮೂಲಕ ಅಭಿಯಾನ ಆರಂಭಿಸಲಿದೆ. ಈ ಟೂರ್ನಿ ಶ್ರೀಲಂಕಾದ ದಂಬುಲಾದಲ್ಲಿ ನಡೆಯಲಿದೆ.

ಏಷ್ಯಾ ಖಂಡದ ಅಗ್ರ ಎಂಟು ತಂಡಗಳು ಜುಲೈ 19 ರಿಂದ 28ರವರೆಗೆ ನಡೆಯುವ ಈ ಟೂರ್ನಿಯಲ್ಲಿ ಕಣಕ್ಕಿಳಿಯಲಿವೆ.

ಈ ಬಾರಿ ಎಂಟು ತಂಡಗಳನ್ನು ಎರಡು ಗುಂಪುಗಳಲ್ಲಿ ವಿಂಗಡಿಸಲಾಗಿದೆ. ಭಾರತ, ಪಾಕಿಸ್ತಾನ, ಯುಎಇ ಮತ್ತು ನೇಪಾಳ ‘ಎ’ ಗುಂಪಿನಲ್ಲಿವೆ. ಶ್ರೀಲಂಕಾ, ಬಾಂಗ್ಲಾದೇಶ, ಥಾಯ್ಲೆಂಡ್ ಮತ್ತು ಮಲೇಷ್ಯಾ ‘ಬಿ’ ಗುಂಪಿನಲ್ಲಿವೆ. ಹಿಂದಿನ ಟೂರ್ನಿ ಈ ರೀತಿ ನಡೆದಿರಲಿಲ್ಲ.

ಏಷ್ಯಾ ಕ್ರಿಕೆಟ್ ಕೌನ್ಸಿಲ್ ಬಿಡುಗಡೆ ಮಾಡಿರುವ ಪರಿಷ್ಕೃತ ವೇಳಾಪಟ್ಟಿಯ ಪ್ರಕಾರ, ಭಾರತ ತನ್ನ ಉಳಿದ ಪಂದ್ಯಗಳಲ್ಲಿ ಜುಲೈ 21ರಂದು ಯುಎಇ ವಿರುದ್ಧ, ಜುಲೈ 23ರಂದು ನೇಪಾಳ ವಿರುದ್ಧ ಆಡಲಿದೆ.

ಎರಡೂ ಗುಂಪಿನಲ್ಲಿ ಮೊದಲ ಎರಡು ಸ್ಥಾನ ಪಡೆಯುವ ತಂಡಗಳು ಸೆಮಿಫೈನಲ್ ತಲುಪಲಿವೆ. ಈ ಪಂದ್ಯಗಳು ಕ್ರಮವಾಗಿ ಜುಲೈ 26 ಮತ್ತು 28ರಂದು ನಿಗದಿಯಾಗಿವೆ.

ವಿಶ್ವ ಪ್ಯಾರಾ ಬ್ಯಾಡ್ಮಿಂಟನ್: ಸುಹಾಸ್‌ಗೆ ಅಗ್ರಸ್ಥಾನ

ನವದೆಹಲಿ (ಪಿಟಿಐ): ಭಾರತದ ಪ್ಯಾರಾ ಬ್ಯಾಡ್ಮಿಂಟನ್ ಆಟಗಾರ, ಕನ್ನಡಿಗ ಸುಹಾಸ್ ಯತಿರಾಜ್ ಅವರು ಮಂಗಳವಾರ ಪ್ರಕಟಗೊಂಡಿರುವ ಬಿಡಬ್ಲ್ಯುಎಫ್ ಪ್ಯಾರಾ ವಿಶ್ವ ರ್‍ಯಾಂಕಿಂಗ್‌ನಲ್ಲಿ ಅಗ್ರಸ್ಥಾನಕ್ಕೆ ಏರಿದ್ದಾರೆ. ಇದುವರೆಗೆ ಫ್ರಾನ್ಸ್‌ನ ಲುಕಾಸ್ ಮಝುರ್ ಆ ಸ್ಥಾನದಲ್ಲಿದ್ದರು.

ಅರ್ಜುನ ಪ್ರಶಸ್ತಿ ಪುರಸ್ಕೃತರಾಗಿರುವ ಐಎಎಸ್ ಅಧಿಕಾರಿ ಸುಹಾಸ್, ಈ ಕುರಿತು ಎಕ್ಸ್‌ನಲ್ಲಿ ಸಂತಸ ಹಂಚಿಕೊಂಡಿದ್ದಾರೆ.

‘ಕೊನೆಗೂ ವಿಶ್ವ ನಂಬರ್ 1. ಈ ವಿಷಯ ಹಂಚಿಕೊಳ್ಳಲು ಸಂಭ್ರಮನಿಸುತ್ತಿದೆ. ಇಂದು ಪ್ರಕಟವಾಗಿರುವ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್‌ನ ಪ್ಯಾರಾ ರ್‍ಯಾಂಕಿಂಗ್‌ನ ಪುರುಷರ ಸಿಂಗಲ್ಸ್‌ನಲ್ಲಿ ನನಗೆ ಅಗ್ರ ಕ್ರಮಾಂಕ ದೊರಕಿದೆ. ನನ್ನ ಜೀವನದಲ್ಲಿ ಮೊದಲ ಬಾರಿ. ಎಲ್ಲರ ಆಶೀರ್ವಾದ ಮತ್ತು ಹಾರೈಕೆಗೆ ಧನ್ಯವಾದಗಳು’ ಎಂದು ಬರೆದಿದ್ದಾರೆ.

ಅವರು 60,527 ಪಾಯಿಂಟ್ಸ್ ಪಡೆದಿದ್ದಾರೆ. ಫ್ರಾನ್ಸ್‌ನ ಪ್ರತಿಸ್ಪರ್ಧಿ 58,953 ಪಾಯಿಂಟ್ಸ್ ಗಳಿಸಿದ್ದಾರೆ.

ಪಾದದ ಕೀಲಿನಲ್ಲಿ ನ್ಯೂನತೆ ಹೊಂದಿರುವ ಅವರು ಎಸ್‌ಎಲ್-4 ಕೆಟಗರಿಯಲ್ಲಿ ಆಡುತ್ತಾರೆ.

ಹಾಸನದ ಅರಸೀಕೆರೆ ಮೂಲದವರಾದ ಅವರು ಶಿವಮೊಗ್ಗದಲ್ಲಿ ಪದವಿ ಓದಿ, ಸುರತ್ಕಲ್‌ನ ಎನ್‌ಐಟಿಕೆಯಿಂದ ಕಂಪ್ಯೂಟರ್ ಎಂಜಿನಿಯರಿಂಗ್ ಪದವಿ ಪಡೆದಿದ್ದರು. ಪ್ರಸ್ತುತ ಉತ್ತರ ಪ್ರದೇಶ ಕ್ರೀಡಾ ಇಲಾಖೆ ಕಾರ್ಯದರ್ಶಿ ಮತ್ತು ಯುವಜನ ಕಲ್ಯಾಣ ಇಲಾಖೆ ಮಹಾನಿರ್ದೇಶಕರಾಗಿದ್ದಾರೆ.

ಫ್ರ್ಯಾಂಕ್ ಡಕ್ವರ್ಥ್ ನಿಧನ

ನವದೆಹಲಿ (ಪಿಟಿಐ): ಕ್ರಿಕೆಟ್ ಪಂದ್ಯದ ವೇಳೆ ಮಳೆ ಬಂದಾಗ ಅನ್ವಯಿಸಲಾಗುವ ಡಕ್ವರ್ಥ್-ಲೂಯಿಸ್ ನಿಯಮದ ರಚನೆಕಾರರಲ್ಲಿ ಒಬ್ಬರಾದ ಫ್ರ್ಯಾಂಕ್ ಡಕ್ವರ್ಥ್ (84) ನಿಧನರಾಗಿದ್ದಾರೆ.

ಡಕ್ವರ್ಥ್ ಅವರು ಜೂನ್ 21ರಂದು ನಿಧನರಾಗಿರುವುದಾಗಿ ಇಎಸ್‌ಪಿಎನ್ ಕ್ರಿಕ್‌ಇನ್ಫೋ ಡಾಟ್ ಕಾಮ್ ವೆಬ್‌ಸೈಟ್ ವರದಿ ಮಾಡಿದೆ.

ಇಂಗ್ಲೆಂಡ್‌ನ ಸಂಖ್ಯಾಶಾಸ್ತ್ರಜ್ಞರಾದ ಡಕ್ವರ್ಥ್ ಮತ್ತು ಅವರ ಸಹೋದ್ಯೋಗಿ ಟೋನಿ ಲೂಯಿಸ್ ಅವರು ಸೇರಿ ಡಿಎಲ್‌ಎಸ್ ಪದ್ಧತಿ ರೂಪಿಸಿದ್ದರು. 1997ರಿಂದ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಮಳೆಯಿಂದಾಗಿ ಸಮಯನಷ್ಟವಾದ ಪಂದ್ಯಗಳಿಗೆ ಈ ಪದ್ಧತಿ ಅನ್ವಯಿಸಲಾಗುತ್ತಿದೆ. ಗೆಲುವಿನ ಪರಿಷ್ಕೃತ ಗುರಿ ನಿಗದಿ ಮಾಡಲು ಇದು ಬಳಕೆಯಾಗುತ್ತಿದೆ. 2001ರಿಂದ ಐಸಿಸಿಯು (ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್) ಈ ಪದ್ಧತಿಗೆ ಮಾನ್ಯತೆ ನೀಡಿತ್ತು.

ಡಕ್ವರ್ಥ್ ಮತ್ತು ಲೂಯಿಸ್ ಅವರು ನಿವೃತ್ತರಾದ ನಂತರ ಈ ಪದ್ಧತಿಯನ್ನು ಡಕ್ವರ್ಥ್-ಲೂಯಿಸ್-ಸ್ಟರ್ನ್ (ಡಿಎಲ್‌ಎಸ್) ಎಂದು ಮರುನಾಮಕರಣ ಮಾಡಲಾಗಿತ್ತು. ಸ್ಟೀವನ್ ಸ್ಟರ್ನ್ ಅವರು ಆಸ್ಟ್ರೇಲಿಯಾದ ಸಂಖ್ಯಾಶಾಸ್ತ್ರಜ್ಞರು.

ಆಸ್ಟ್ರಿಯಾಕ್ಕೆ ಮಣಿದ ನೆದರ್ಲೆಂಡ್ಸ್: ಫ್ರಾನ್ಸ್‌ನೊಂದಿಗೆ ಡ್ರಾ ಸಾಧಿಸಿದ ಪೋಲೆಂಡ್

ನಾಕೌಟ್ ಘಟ್ಟಕ್ಕೆ ಸ್ಪೇನ್, ಇಟಲಿ

ಡಸೆಲ್‌ಡಾರ್ಫ್, ಜರ್ಮನಿ (ಎಪಿ): ಫೆರಾನ್ ಟೊರೆಸ್ ಗಳಿಸಿದ ಗೋಲಿನ ನೆರವಿನಿಂದ ಸ್ಪೇನ್ ತಂಡವು ಯುರೋ ಕಪ್ ಫುಟ್‌ಬಾಲ್ ಟೂರ್ನಿಯ ‘ಬಿ’ ಗುಂಪಿನ ಪಂದ್ಯದಲ್ಲಿ 1-0ಯಿಂದ ಅಲ್ಬೇನಿಯಾವನ್ನು ಮಣಿಸಿ, ಅಜೇಯವಾಗಿ ನಾಕೌಟ್ ಹಂತಕ್ಕೆ ಮುನ್ನಡೆಯಿತು.

ಮೂರು ಬಾರಿ (1964, 2008, 2012) ಚಾಂಪಿಯನ್ ಆಗಿರುವ ಸ್ಪೇನ್ 2008ರ ಬಳಿಕ ಗುಂಪು ಹಂತದಲ್ಲಿ ಎಲ್ಲಾ ಮೂರು ಪಂದ್ಯಗಳನ್ನು ಗೆದ್ದ ಸಾಧನೆ ಮಾಡಿತು.

ಕ್ರೊವೇಷಿಯಾ ತಂಡವನ್ನು 3-0ಯಿಂದ ಮತ್ತು ಇಟಲಿಯನ್ನು 1-0ಯಿಂದ ಮಣಿಸಿದ್ದ ಸ್ಪೇನ್ 9 ಅಂಕಗಳನ್ನು ಪಡೆದು ಗುಂಪಿನಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿತು. ಅಲ್ಬೇನಿಯಾ ಆಡಿರುವ ಮೂರು ಪಂದ್ಯಗಳ ಪೈಕಿ ಒಂದರಲ್ಲಿ ಡ್ರಾ ಸಾಧಿಸಿದರೆ, ಮತ್ತೆರಡರಲ್ಲಿ ಸೋತು 1 ಅಂಕ ಪಡೆದು, ಟೂರ್ನಿಯಿಂದ ಹೊರಬಿತ್ತು. ಸೋಮವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಸ್ಪೇನ್ ತಂಡಕ್ಕೆ ಫೆರಾನ್ ಅವರು 11ನೇ ನಿಮಿಷದಲ್ಲಿ ನಿರ್ಣಾಯಕ ಗೋಲು ಗಳಿಸಿದರು.

ಅಲ್ಬೇನಿಯಾ ಸೋತಿದ್ದರಿಂದ ಇಂಗ್ಲೆಂಡ್, ಫ್ರಾನ್ಸ್ ಮತ್ತು ನೆದರ್ಲೆಂಡ್ಸ್ ತಂಡಗಳು ತಮ್ಮ ಗುಂಪಿನ ಕೊನೆಯ ಪಂದ್ಯದ ಫಲಿತಾಂಶಕ್ಕೂ ಮುನ್ನವೇ ನಾಕೌಟ್‌ಗೆ ಅರ್ಹತೆಯನ್ನು ಖಚಿತ ಪಡಿಸಿಕೊಂಡವು.

ನಾಕೌಟ್‌ಗೆ ಇಟಲಿ: ಕ್ರೊವೇಷಿಯಾದೊಂದಿಗೆ 1-1ರಿಂದ ಡ್ರಾ ಸಾಧಿಸಿದ ಹಾಲಿ ಚಾಂಪಿಯನ್ ಇಟಲಿ, ‘ಬಿ’ ಗುಂಪಿನಿಂದ ನಾಕೌಟ್‌ಗೆ ಅರ್ಹತೆ ಪಡೆಯಿತು.

ಅಲ್ಬೇನಿಯಾ ವಿರುದ್ಧ 2-1ರಿಂದ ಗೆದ್ದಿದ್ದ ಇಟಲಿ, ಸ್ಪೇನ್ ಎದುರು ಸೋಲು ಅನುಭವಿಸಿತ್ತು. ಒಟ್ಟಾರೆ 4 ಅಂಕಗಳನ್ನು ಸಂಪಾದಿಸಿರುವ ಇಟಲಿ, ಗುಂಪಿನಲ್ಲಿ ಎರಡನೇ ಸ್ಥಾನ ಪಡೆಯಿತು. 2 ಅಂಕಗಳನ್ನು ಪಡೆದ ಕ್ರೊವೇಷಿಯಾ ಟೂರ್ನಿಯಿಂದ ಹೊರನಡೆಯಿತು.

ಲುಕಾ ಮಾಡ್ರಿಕ್ 55ನೇ ನಿಮಿಷದಲ್ಲಿ ಕ್ರೊವೇಷಿಯಾ ಪರ ಗೋಲು ಗಳಿಸಿದರು. ಆದರೆ, ಪಂದ್ಯದ ಅಂತಿಮ ಹಂತದಲ್ಲಿ (90+8ನೇ ನಿ) ಇಟಲಿಯ ಮಟ್ಟಿಯಾ ಜಕಾಗ್ನಿ ಗೋಲು ಗಳಿಸಿ ಸ್ಕೋರ್ ಸಮಬಲಗೊಳಿಸಿದರು.

ಕ್ರೊವೇಷಿಯಾ ಮಾಡ್ರಿಕ್ (38 ವರ್ಷ 289 ದಿನ) ಇದೇ ವೇಳೆ ಯುರೋ ಕಪ್‌ನಲ್ಲಿ ಗೋಲು ದಾಖಲಿಸಿದ ಅತಿ ಹಿರಿಯ ವಯಸ್ಸಿನ ಆಟಗಾರ ಎಂಬ ದಾಖಲೆಗೆ ಪಾತ್ರವಾದರು. 2008ರಲ್ಲಿ ಆಸ್ಟ್ರಿಯಾದ ಇವಿಕಾ ವಾಸ್ಟಿಕ್ (38 ವರ್ಷ 257 ದಿನ) ನಿರ್ಮಿಸಿದ್ದ ದಾಖಲೆ ಮುರಿದರು.

ರೊನಾಲ್ಡೊ ಮೇಲೆ ಕಣ್ಣು: ಪೋರ್ಚುಗಲ್ ತಂಡವು ‘ಎಫ್’ ಗುಂಪಿನ ಕೊನೆಯ ಪಂದ್ಯದಲ್ಲಿ ಗುರುವಾರ ಜಾರ್ಜಿಯಾ ತಂಡವನ್ನು ಎದುರಿಸಲಿದೆ. ಪೋರ್ಚುಗಲ್‌ನ ಸ್ಟಾರ್ ಆಟಗಾರ 39 ವರ್ಷದ ಕ್ರಿಸ್ಟಿಯಾನೊ ರೊನಾಲ್ಡೊ ತಂಡದಲ್ಲಿದ್ದಾರೆ. ತಂಡವು ಆಡಿರುವ ಎರಡೂ ಪಂದ್ಯಗಳನ್ನು ಗೆದ್ದು ಈಗಾಗಲೇ ನಾಕೌಟ್‌ಗೆ ಅರ್ಹತೆಯನ್ನು ಪಡೆದಿದೆ. ಟೂರ್ನಿಯಲ್ಲಿ ರೊನಾಲ್ಡೊ ಗೋಲು ಗಳಿಸಿದರೆ ಅತಿ ಹಿರಿಯ ವಯಸ್ಸಿನ ಸ್ಕೋರರ್ ಎಂಬ ದಾಖಲೆ ಅವರ ಪಾಲಾಗಲಿದೆ.

ಆಸ್ಟ್ರಿಯಾಗೆ ಗೆಲುವು: ಆಸ್ಟ್ರಿಯಾ ತಂಡವು ಮಂಗಳವಾರ ನಡೆದ ‘ಡಿ’ ಗುಂಪಿನ ಪಂದ್ಯದಲ್ಲಿ 3-2ರಿಂದ ನೆದರ್ಲೆಂಡ್ಸ್ ತಂಡವನ್ನು ಮಣಿಸಿ, ಮುಂದಿನ ಘಟ್ಟ ಪ್ರವೇಶಿಸಿತು. ಇದೇ ಗುಂಪಿನ ಮತ್ತೊಂದು ಪಂದ್ಯದಲ್ಲಿ ಫ್ರಾನ್ಸ್ ತಂಡವು 1-1ರಿಂದ ಪೋಲೆಂಡ್ ಜೊತೆ ಡ್ರಾ ಸಾಧಿಸಿತು. ಮೂಗಿಗೆ ಪೆಟ್ಟಾದ ನಂತರ ಕಣಕ್ಕೆ ಇಳಿದ ನಾಯಕ ಕಿಲಿಯನ್ ಎಂಬಾಪೆ ಫ್ರಾನ್ಸ್ ತಂಡದ ಪರ ಗೋಲು ಗಳಿಸಿದರು.

ಯುರೋ ಕಪ್ 2024 ಜರ್ಮನಿ

ಮೂಗಿಗೆ ಕವಚ ಧರಿಸಿ ಆಡಿದ ಫ್ರಾನ್ಸ್ ತಂಡದ ಕಿಲಿಯನ್ ಎಂಬಾಪೆ —ಎಎಫ್‌ಪಿ ಚಿತ್ರ